57 ಭಾಷಗಳಲ್ಲಿ 3 ಮಿಲಿಯಕ್ಕಿಂತಲೂ ಹಚ್ಚ ಪುತಿಗಳು ಅಚ್ಚಾಗಿವೆ



## ದೇವರಿಗಾಗಿ ನಿನ್ನ ಅನ್ವೇಷಣೆ

ಡಾ. ರಿಚರ್ಡ ಬೆನ್ನೆಟ್ ಅವರ ಸೇವೆಯು ಒಬ್ಬ ಸಿಟಿ ಯೋಜಕರಂತೆ ಪ್ರಾರಂಭವಾಯಿತು, ಜೀವನ ಮಾರ್ಪಾಟವಾಗುವ ರೀತಿಯಲ್ಲಿ ರಿಚರ್ಡ ತಮ್ಮ ತರಬೇತಿಯ ಅವಧಿಯಲ್ಲಿ ದೇವರ ಬಲವನ್ನು ಎದುರಿಸಿದರು ಪರಿಣಾಮವಾಗಿ, ಇಂಗ್ಲೀಷ ಕೌನ್ಸಿಲಿ ನೊಂದಿಗಿನ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಯು.ಎಸ್.ಎ. ದಲ್ಲಿ ಬೈಬಲಿನ ಅಧ್ಯಯನ ಮುಂದರಿಸಿದರು.

ಆಸಕ್ತಿಯುಳ್ಳ ಅನಭಷಿಕ್ತನಾಗಿ ಮುಂದುವರಿದು 1946 ರಿಂದ, ಅವರು ಆಸಕ್ತಿಯುಳ್ಳ ಶ್ರೋತೃಗಳೊಂದಿಗೆ ಬೈಬಲಿನ ತತ್ವಗಳನ್ನು ಹಂಚಿಕೊಳ್ಳುತ್ತಿರುವರು. ಇಪ್ಪತ್ತು ವರ್ಷಗಳಲ್ಲಿ ಯೂರೋಪ, ಆಫ್ರಿಕಾ, ಸೆಂಟ್ರಲ್ ಮತ್ತು ಸೌತ ಅಮೇರಿಕಾಗಳಲ್ಲಿ Trans World Radio ಮತ್ತು Far East Broadcasting Corporation ಮೂಲಕ ಕ್ರಮವಾಗಿ ಅವರ ಸ್ವರವು ಕೇಳಿಸಲ್ಪಟ್ಟಿದೆ.

1958 ರಲ್ಲಿ ರಿಚರ್ಡ ಮತ್ತು ಡೊರೊತಿ ವಿವಾಹವಾದರು. ಅಂದಿನಿಂದ ಅವರು ಒಂದಾಗಿ ದೇವರ ಸೇವೆ ಮಾಡುತ್ತಿರುವರು. ಡೊರೊತಿಯವರು ಮಹಿಳೆಯರ ಮಧ್ಯದಲ್ಲಿ ಪರಿಣಾಮಕಾರಿ ಸೇವೆ ಮಾಡಿರುವರು.

ಇತ್ತೀಚೆಗಿನ ವರ್ಷಗಳಲ್ಲಿ, ರಿಚರ್ಡ ಮತ್ತು ಡೊರೊತಿಯ ಕಾನ್ಫರನ್ಸ ಸೇವೆಯು ಮೊದಲು ಸಂದರ್ಶಿಸದೇ ಇದ್ದ ಜನರಿಗೂ ದೇಶಗಳಿಗೂ ವಿಸ್ತರಿಸಲ್ಪಟ್ಟಿದೆ. ಬೆಳೆಯುತ್ತಿರುವ ದೇಶಗಳಿಗೆ ತಮ್ಮ ಸಂದರ್ಶನದ ಸಮಯದಲ್ಲಿ ಬಹಳ ಆತ್ಮಿಕ ಹಸಿವೆ ಯೊಂದಿಗಿರುವ ಅನೇಕ ದೇಶಗಳ ಜನರನ್ನು ಭೇಟಿಯಾಗುವದರಲ್ಲಿ ಸಂತೋಷಪಟ್ಟಿದ್ದಾರೆ. ಬಡತನ, ಹಸಿವೆ, ಕೊರತೆಯಿಂದ ಜೀವನದಲ್ಲಿ ಜಜ್ಜಲ್ಪಟ್ಟ ತಮ್ಮ ಅನೇಕ ಜೊತೆಮಾನವರನ್ನು ನೋಡಿದಾಗ ಅವರ ಆನಂದವು ದುಃಖದಿಂದ ತುಂಬಿಕೊಂಡಿರುತ್ತದೆ. ಇಂಥ ಜನರಿಗಾಗಿ ದೇವರ ಪ್ರೀತಿಯಿಂದ, ಅವರಿಗೆ ಸಹಾಯ ಮಾಡಲು ಆತ್ಮಿಕ ಮತ್ತು ಪ್ರಾಪಂಚಿಕ ಸಾಧನವಾಗಿದ್ದಾರೆ. ಪ್ರಗತಿಯಲ್ಲಿರುವ ದೇಶಗಳಲ್ಲಿ ಅಷ್ಟೇ ಅಲ್ಲ, ಔದ್ಯೋಗಿಕರಣ ಹೊಂದಿದ ದೇಶಗಳಲ್ಲಿಯೂ ಅವರು ದೇವರೊಂದಿಗೆ ನಿಕಟ ಸಂಬಂಧದಲ್ಲಿ ಬರಲು ಆಂತರಿಕವಾಗಿ ಬಯಸುತ್ತಿರುವ ಜನರನ್ನು ಸಂದರ್ಶಿಸಲು ಇಷ್ಟವುಳ್ಳವರಾಗಿರುವರು.

ಜೀವನದ ಅತೀ ಮಹತ್ವದ ಪ್ರಶ್ನೆಗಳಿಗೆ ನಂಬಲರ್ಹ ಉತ್ತರಗಳಿವೆಯೋ ? ದೇವರು ತಾನೇ ಈ ಉತ್ತರಗಳನ್ನು ಒದಗಿಸಿದ್ದಾನೆಂದು ಅವರು ಭರವಸೆಯುಳ್ಳವರಾಗಿದ್ದಾರೆ. ಹೀಗೆ ಅವರು ''**ದೇವರಿಗಾಗಿ ನಿನ್ನ ಅನ್ವೇಷಣೆ**'' ಯನ್ನು ಬರೆದಿದ್ದಾರೆ.

''ಈ ಪುಸ್ತಕಕ್ಕಾಗಿಯೇ ನಾನು ಇಪ್ಪತ್ತು ವರ್ಷಗಳಿಂದ ಪ್ರಾರ್ಥಿಸಿದ್ದೇನೆ''

**ಜಾರ್ಜ ವೆರ್ವರ,**

ಸ್ಥಾಪಕರು, ನಿರ್ದೇಶಕರು ಆಪರೇಶನ್ ಮೊಬೈಲ್‌ಜೇಶನ್

ISBN-13: 978-81-7362-000-0
ISBN-10: 81-7362-000-0

Authentic

Your Quest for God *(Kannada)*

ದೇವರಿಗಾಗಿ ನಿನ್ನ ಅನ್ವೇಷಣೆ

ರಿಚರ್ಡ ಎ. ಬೆನ್ನೆಟ್ಟ

# ದೇವರಿಗಾಗಿ ನಿನ್ನ ಅನ್ವೇಷಣೆ



## ರಿಚರ್ಡ ಎ.ಬೆನ್ನೆಟ್ಟ

# ದೇವರಿಗಾಗಿ
# ನಿನ್ನ
# ಅನ್ವೇಷಣೆ

ನನ್ನ ಪತ್ನಿ, ಡೊರೊತಿಯ
ಪ್ರೋತ್ಸಾಹ, ಪ್ರೀತಿ,
ತ್ಯಾಗ ಮತ್ತು ಪ್ರಾರ್ಥನೆಗಳು
ಇಲ್ಲದಿದ್ದರೆ. ಈ ಪುಸ್ತಕವು ಬರೆಯಲ್ಪಡುತ್ತಿರಲಿಲ್ಲ.

ಫೋಯಿಬೆಯ ಬಗ್ಗೆ ಪೌಲನು ಹೇಳಿದಂತೆ, ನಾನು
ಆಕೆಯ ಬಗ್ಗೆ ಹೇಳುವೆನು :
ಆಕೆಯು ತಾನೇ ಅನೇಕರಿಗೆ ಸಹ ಸಹಾಯಕಳಾಗಿರುವಳು
...... ಮತ್ತು ಹಾಗೆಯೇ ನನಗೂ
ಸಹಾಯಕಳಾಗಿರುವಳು.

# ದೇವರಿಗಾಗಿ ನಿನ್ನ ಅನ್ವೇಷಣೆ

**ರಿಚರ್ಡ್ ಎ. ಬೆನ್ನೆಟ್ಟ**

ಅನುವಾದಕರು : **ಜಯವಂತ ಎಮ್. ಜೋಗುಳ**

Authentic

HYDERABAD • COLORADO SPRINGS • LONDON

***Devarigagi Ninna Anveshaney***
(Kannada)

Your Quest for God
by Richard A.Bennett

Copyright © 1985, 1988, 1997, 1998, 2003
Cross Currents International Ministries, Dallas, Texas, U.S.A.

First Kannada edition 2007
ISBN-13: 978-81-7362-803-0
ISBN-10: 81-7362-803-3

Published by Authentic India

| | |
|---|---|
| India | P. O. Box 2190, Secunderabad 500 003, Andhra Pradesh.<br>www.authenticindia.in |
| UK | 9 Holdom Avenue, Bletchley, Milton Keynes, MK1 1QR, UK<br>www.authenticmedia.co.uk |
| USA | 1820 Jet Stream Drive, Colorado Springs, CO 80921.<br>www.authenticbooks.com |

All rights reserved.
No part of this publication may be reproduced in any form or by any means, electronic, or mechanical, including photocopying, recording, or any information storage and retrieval system, without permission in writing from the publisher.

Authentic Books is an imprint of Authentic Media, the publishing division of STL OM Books India.

Food for Faith
by Richard A. Bennett

www.CCIM-Media.com

# ಅನುಕ್ರಮಣಿಕೆ


**ಮುನ್ನುಡಿ ........................................ 7**

**ಪ್ರಸ್ತಾವನೆ ........................................ 9**

**ಅಧ್ಯಾಯ 1.**
ದೇವರು ನಿಜವಾಗಿ ಇರುವನೋ ? .............................. 15

**ಅಧ್ಯಾಯ 2.**
ನಿನ್ನ ಆತ್ಮಿಕ ಮಾರ್ಗದರ್ಶಿಯು ನಂಬಲರ್ಹವಾದದ್ದೋ ? ..... 25

**ಅಧ್ಯಾಯ 3.**
ದೇವರು ಹೇಗಿರುವನು ? ........................................ 43

**ಅಧ್ಯಾಯ 4.**
ಜನರನ್ನು ನಿಜವಾಗಿಯೂ ಯಾವುದು ವಿಭಾಗಿಸುತ್ತದೆ ? ........ 55

**ಅಧ್ಯಾಯ 5.**
ನಿಜವಾದ ಸಮಸ್ಯೆಯು ಯಾವುದು ? ............................ 71

**ಅಧ್ಯಾಯ 6.**
ಜನರು ಯಾಕೆ ಅಷ್ಟು ತಪ್ಪಾಗಿ ನಡಿಸಲ್ಪಡುತ್ತಿದ್ದಾರೆ ? .......... 83

**ಅಧ್ಯಾಯ 7.**
ದೇವರು ನಿಜವಾಗಿಯೂ ನನ್ನನ್ನು ಪ್ರೀತಿಸುವನೋ ? ......... 97

**ಅಧ್ಯಾಯ 8.**
ಜೀವವನ್ನು ನಾನು ಎಲ್ಲಿ ಕಂಡುಕೊಳ್ಳಬಹುದು ? ............... 127

**ಅಧ್ಯಾಯ 9.**
ಹೇಗೆ ನಾನು ದೇವರ ಕುಟುಂಬದ ಭಾಗವಾಗಬಹುದು ? ...... 143

**ಅಧ್ಯಾಯ 10.**
ಮುಂದೇನು ? ........................................ 155

**ವಿಶ್ವಾಸದ ನನ್ನ ಒಪ್ಪಿಸಿಕೊಡುವಿಕೆ. ................................ 167**

# ಮುನ್ನುಡಿ

ಎರಡು ಕಾರಣಗಳಿಗಾಗಿ, **ದೇವರಿಗಾಗಿ ನಿನ್ನ ಅನ್ವೇಷಣೆ** ಎಂಬ ಈ ಪುಸ್ತಕವನ್ನು ಹೃದಯಪೂರ್ವಕವಾಗಿ ಶಿಫಾರಸು ಮಾಡುತ್ತೇನೆ. ಮೊದಲನೆಯದು ಗ್ರಂಥಕರ್ತನನ್ನು ನಾನು ಬಲ್ಲೆನು ! ವಿಶ್ವಾಸದಲ್ಲಿ ಅವನು ಒಬ್ಬ ಮಗನು ಮತ್ತು ನನ್ನ ಮಕ್ಕಳು ಸತ್ಯದಲ್ಲಿ ನಡೆಯುವದನ್ನು ಕೇಳುವದಕ್ಕಿಂತ ಹೆಚ್ಚು ದೊಡ್ಡ ಸಂತೋಷ ನನಗಿಲ್ಲ (3 ಯೋಹಾನ 4).

ಎರಡನೆಯ ಕಾರಣವು ಹೆಚ್ಚು ವಾಸ್ತವವಾದದ್ದು, ಡಾ ॥ ರಿಚರ್ಡ ಬೆನ್ನೆಟ್ಟ ಅವರು, ದೇವರೊಂದಿಗೆ ಮನುಷ್ಯನ ಅವಶ್ಯಕತೆಗಳನ್ನು ಸ್ಪಷ್ಟವಾಗಿ, ಸಂಕ್ಷಿಪ್ತವಾಗಿ ಹಾಗೂ ಮನಗಾಣುವಂತೆ ಹೇಳಿರುವದರಲ್ಲಿ ಉತ್ತಮವಾದ ಕಾರ್ಯ ಮಾಡಿದ್ದಾರೆ.

ದೇವರು ಮನುಷ್ಯರ ಹೃದಯದಲ್ಲಿ ಅನಂತ ಕಾಲದ ಯೋಚನೆಯನ್ನು ಇಟ್ಟಿದ್ದಾನೆ..... (ಪ್ರಸಂಗಿ 3:11) ಎಂದು ಬೈಬಲ್ ತಿಳಿಸುತ್ತದೆ. ಆದುದರಿಂದ, ಮನುಷ್ಯರು ನಿತ್ಯತ್ವಕ್ಕಾಗಿ ಮಾಡಲ್ಪಟ್ಟಿರುವದರಿಂದ ಸಮಯದ ಸಂಗತಿಗಳು ಎಂದೂ ಪೂರ್ಣವಾಗಿ ಮತ್ತು ಶಾಶ್ವತವಾಗಿ ತೃಪ್ತಿಗೊಳಿಸಲಾರವು ಎಂದಾಗುತ್ತದೆ. ದೇವರು ಮಾತ್ರವೇ ತುಂಬಬಲ್ಲ ಅಂತ್ಯವಿಲ್ಲದ ಶೂನ್ಯತೆಯಿದೆ. ''ದೇವರೇ, ನಮ್ಮನ್ನು ನಿನಗಾಗಿ ಉಂಟುಮಾಡಿದ್ದೀ, ಮತ್ತು ನಮ್ಮ ಪ್ರಾಣಗಳು ನಿನ್ನಲ್ಲಿ ವಿಶ್ರಾಂತಿ ಹೊಂದುವವರೆಗೆ ವಿಶ್ರಾಂತಿಯಿಲ್ಲದವುಗಳಾಗಿವೆ'' ಎಂದು ಸಂತ ಔಗುಸ್ತೀನನು ಪ್ರಕಟಿಸಿದಾಗ ಅದನ್ನು ಸಂಪೂರ್ಣವಾಗಿ ಹೇಳಿದ್ದಾನೆ. ನಿತ್ಯನಾದ ದೇವರೊಂದಿಗೆ ಜೀವಿಸುವ ಹಾಗೂ ವೈಯಕ್ತಿಕ ಸಂಬಂಧದಲ್ಲಿ ನಾವು

ವಿಶ್ರಾಂತಿಯನ್ನು ಕಂಡುಕೊಳ್ಳುವ ವರೆಗೆ ಈ ಪುಸ್ತಕವು ಆ ಅನ್ವೇಷಣೆಯನ್ನು ಅನುಸರಿಸಲು ನಮಗೆ ಸಹಾಯ ಮಾಡುವುದು.

ಜನ ಸಮೂಹಗಳು ಮುಂದಿನ ಪುಟಗಳನ್ನು ಓದಬೇಕು ಮತ್ತು ದೇವರ ಮಹಿಮೆಯನ್ನು ಹಾಗೂ ಅವರ ನಿತ್ಯವಾದ ಒಳ್ಳೆಯದನ್ನು ಪ್ರಕಟಿಸುವ ಸಂದೇಶಕ್ಕೆ ಕಿವಿಗೊಡಬೇಕು ಎಂಬುದರ ನನ್ನ ಯತಾರ್ಥವಾದ ಪ್ರಾರ್ಥನೆಯಾಗಿದೆ.

ಡಾ ॥ ಸ್ಟೀಫನ್ ಎಫ್. ಓಲ್‌ಫೋರ್ಡ್

# ಪ್ರಸ್ತಾವನೆ

ನಮ್ಮ ವ್ಯಾಪಕವಾದ ಪ್ರಯಾಣಗಳಲ್ಲಿ, ನನ್ನ ಪತ್ನಿ, ಡೊರೊತಿ ಹಾಗೂ ನಾನು ಜೀವನದ ರಾಜ ಮಾರ್ಗಗಳಲ್ಲಿ ಹಾಗೂ ಕಿರುಮಾರ್ಗಗಳಲ್ಲಿ ಅನೇಕ ಸ್ನೇಹಿತರುಗಳನ್ನು ಸಂದರ್ಶಿಸಿದ್ದೇವೆ. ಅವರು ಅನೇಕ ಭಿನ್ನವಾದ ಸಂಸ್ಕೃತಿಗಳಿಂದಲೂ ಆರ್ಥಿಕ ಹಿನ್ನೆಲೆಗಳಿಂದಲೂ ಶೈಕ್ಷಣಿಕ ಮಟ್ಟಗಳಿಂದಲೂ ಬಂದವರಾಗಿದ್ದಾರೆ.

ಈ ವ್ಯಕ್ತಿಗಳನ್ನು ನಾವು ಆಕಸ್ಮಿಕವಾಗಿ ಸಂದರ್ಶಿಸಿದೆವೆಂದು ನಾವು ನಂಬುವದಿಲ್ಲ. ಈ ಚಿಕ್ಕ ಪುಸ್ತಕವು ನಿಮ್ಮ ಕೈಗಳಲ್ಲಿರುವುದು ಆಕಸ್ಮಿಕವೆಂದೂ ನಾವು ನಂಬುವದಿಲ್ಲ.

ಕಳೆದ ವರ್ಷಗಳಲ್ಲಿ, ನಮ್ಮ ಅನೇಕ ಸ್ನೇಹಿತರೊಂದಿಗೆ ಇದ್ದ ಅತೀ ಮಹತ್ವದ ಸಂವಾದಗಳು ದೇವರಿಗಾಗಿ ನಮ್ಮ ಅನ್ವೇಷಣೆಯ ಸುತ್ತ ಕೇಂದ್ರೀಕರಿಸಿದ್ದವು. ಒಂದಾಗಿ ನಾವು ಹಂಚಿಕೊಂಡ ವಿಚಾರಗಳಲ್ಲಿ ಕೆಲವು ಈ ಪುಸ್ತಕದಲ್ಲಿ ಒಳಗೊಂಡಿರುತ್ತವೆ.

**ದೇವರಿಗಾಗಿ ನಿನ್ನ ಅನ್ವೇಷಣೆ** ಇದರ ಪ್ರಥಮ ಆ ವೃತ್ತಿಯಿಂದ ಅನಂತರದ ಪರಿಷ್ಕರಣಗಳು ಮಾಡಲ್ಪಟ್ಟದ್ದು ಕೃತಜ್ಞತೆ ಅರ್ಪಿಸುವ ವೈಯಕ್ತಿಕ ಯೋಜನೆಯಾಗಿತ್ತು. ಡೊರೊತಿ ಮತ್ತು ನಾನು ನಮ್ಮ 25ನೆಯ ವಿವಾಹ ವಾರ್ಷಿಕೋತ್ಸವವನ್ನು ಸಮೀಪಿಸಿದಾಗ, ದೇವರು ನಮಗೆ ಒಳ್ಳೆಯದನ್ನು ಮಾಡಿದ್ದಕ್ಕಾಗಿ ಆತನಿಗೆ ನಮ್ಮ ಕೃತಜ್ಞತೆಗಳನ್ನು ವ್ಯಕ್ತಪಡಿಸಲು ಯಾವುದು ಅತ್ಯುತ್ತಮವಾದದ್ದಾಗುವದು ಎಂದು ಯೋಚಿಸಿದೆವು.

ನಿರೀಕ್ಷೆಯನ್ನೂ ಶಾಂತಿಯನ್ನು ತರುವ ಒಂದು ಸಂದೇಶವನ್ನು ಬರೆದು, ಅಚ್ಚು ಹಾಕಿಸಿ, 25,000 ಜನರಿಗೆ ಕೊಡುವದಕ್ಕಿಂತ ಹೆಚ್ಚು ಉತ್ತಮವಾದ ಮಾರ್ಗ ಯಾವುದೆಂದು ನಾವು ಯೋಚಿಸಿದೆವು. ಅದು ನಮ್ಮ ವೈವಾಹಿಕ ಜೀವನದ ಪ್ರತಿಯೊಂದು ವರ್ಷಕ್ಕೆ ಒಂದು ಸಾವಿರ ಪ್ರತಿಗಳನ್ನು ಕೊಟ್ಟಂತಾಗುವುದು.

ಚಿಕ್ಕ ಪುಸ್ತಕವು ಜಗತ್ತಿನೊಳಗೆಲ್ಲಾ ಅಕ್ಷರಶಃವಾಗಿ ತನ್ನ ಮಾರ್ಗ ಕಂಡಂತೆ ನಮ್ಮ ಪ್ರೀತಿಯ ಅಲ್ಪಕಾರ್ಯವನ್ನು ದೇವರು ಆಶೀರ್ವದಿಸಿದನು. ಎಲ್ಲಾ 25,000 ಪ್ರತಿಗಳು ನೇರವಾಗಿ ಭಿನ್ನ ದೇಶಗಳಲ್ಲಿಯ ಅನೇಕ ಜನರ ಕೈಗಳಲ್ಲಿ ಇಡಲ್ಪಟ್ಟವು. ''ದೇವರಿಗಾಗಿ ನಿನ್ನ ಅನ್ವೇಷಣೆ'' ಪುಸ್ತಕ ಓದುವದರ ಪರಿಣಾಮವಾಗಿ, ಜೀವನದಲ್ಲಿ ಹೊಸ ಉದ್ದೇಶ ವನ್ನು ಕಂಡುಕೊಂಡವರಿಂದ ಪತ್ರಗಳನ್ನು ಸ್ವೀಕರಿಸುವುದು ನಮ್ಮ ಮಹಾ ಆನಂದವಾಗಿತ್ತು.

ಬೇರೆ ಭಾಷೆಗಳಲ್ಲಿ ಈ ಪುಸ್ತಕವನ್ನು ಭಾಷಾಂತರಿಸಬೇಕೆಂದು ಹಲವಾರು ಬೇಡಿಕೆಗಳು ಬಂದವು. ಆದುದರಿಂದ, ಈ ಜಗತ್ತಿನ ಎಲ್ಲಾ ಭಾಗಗಳಲ್ಲಿಯ ಅನೇಕ ಹೆಚ್ಚು ಜನರಿಗೆ ಅವರ ''ದೇವರಿಗಾಗಿ ಅನ್ವೇಷಣೆ'' ಯಲ್ಲಿ ಹೆಚ್ಚು ಸಹಾಯವಾಗುವ ಉದ್ದೇಶದೊಂದಿಗೆ ಪುಸ್ತಕದ ಪ್ರಥಮ ತಿದ್ದುಪಡಿ ಮಾಡಬೇಕೆಂದು ನಾವು ತೀರ್ಮಾನಿಸಿದೆವು. ಆದರ ಪರಿಣಾಮವಾಗಿ, ಐವತ್ತು ಭಾಷೆಗಳಲ್ಲಿ, ಮುನ್ನೂರು ಮಿಲಿಯಕ್ಕಿಂತಲೂ ಹೆಚ್ಚು ಪ್ರತಿಗಳು ಮುದ್ರಿಸಲ್ಪಟ್ಟು ಎಲ್ಲಾ ಕಡೆಗಳಲ್ಲಿ ಹಂಚಲ್ಪಟ್ಟವು. ಮತ್ತು ಈಗ ಈ ಇಂಗ್ಲೀಷಿನ ಐದನೆಯ ಆವೃತ್ತಿಯು ಇನ್ನೂ ಹೆಚ್ಚು ವಾಚಕರಿಗೆ ಸಹಾಯವನ್ನು ತರುವುದು.

ಮೊದಲಿನ ಎರಡು ಅಧ್ಯಾಯಗಳು ಪ್ರತಿಯೊಬ್ಬ ವಾಚಕನಿಗೆ ಸಮನಾಗಿ ಸಮಂಜಸವಾಗಲಿಕ್ಕಿಲ್ಲ. ಮೊದಲನೆಯ ಅಧ್ಯಾಯವು ದೇವರ ಅಸ್ತಿತ್ವವನ್ನು ಪ್ರಶ್ನಿಸ ಬಹುದಾದವರಿಗಾಗಿ ಬರೆಯಲ್ಪಟ್ಟಿತು. ಎರಡನೆಯ ಅಧ್ಯಾಯವು ಪ್ರತಿಯೊಂದನ್ನು ಪ್ರಶ್ನಿಸಲು ಕಲಿತುಕೊಂಡವರಿಗೆ ಪ್ರತ್ಯೇಕವಾಗಿ ಆಸಕ್ತಿಯುಳ್ಳದ್ದಾಗಿದ್ದರೂ, ಅದು ನಿಜವಾಗಿಯೂ ಎಲ್ಲ ವಾಚಕರಿಗೂ ಮಹತ್ವದ್ದಾಗಿದೆ, ಯಾಕಂದರೆ ನಿಮ್ಮಲ್ಲಿ ಪ್ರತಿಯೊಬ್ಬರೂ ನಿಮ್ಮ ಸ್ವಂತ ನಂಬಿಕೆಗಳನ್ನು ಮನೋಭಾವನೆಗಳನ್ನೂ ಪರೀಕ್ಷಿಸಿ ಕೊಳ್ಳಲು ನಿಮ್ಮನ್ನು ಪ್ರೋತ್ಸಾಹಿಸುವುದು.

ಹೀಗಿದ್ದರೂ, ಈ ಸಿದ್ಧತೆಯ ಅಧ್ಯಾಯಗಳು, ಇಡೀ ಮುಖ್ಯ ಪ್ರಸ್ತಾಪಕ್ಕೆ ಅತ್ಯವಶ್ಯವಾಗಿರುತ್ತವೆ, ಯಾಕಂದರೆ ಅವು ಉಳಿದ ಮಾಹಿತಿಯ ನಂಬಲರ್ಹತೆಯನ್ನು ಸ್ಥಾಪಿಸಲು ಅವು ಸಹಾಯ ಮಾಡುವವು. ಮೂರರಿಂದ ಹತ್ತನೆಯ ಅಧ್ಯಾಯದವರೆಗಿನ ಅಧ್ಯಾಯಗಳು ದೇವರಿಗಾಗಿ ನಿಮ್ಮ ಅನ್ವೇಷಣೆಯಲ್ಲಿ ಸಹಾಯ ಮಾಡುವ ಮೂಲ ಸತ್ಯಗಳನ್ನು ಒಳಗೊಂಡಿರುವುದು. ಆದುದರಿಂದ ತನಗೆ ಉತ್ತಮವಾಗಿ ಕಂಡಂತೆ ಆಶೀರ್ವದಿಸುವದಕ್ಕಾಗಿ ಈ ಹೊಸ ಆವೃತ್ತಿಯನ್ನು ದೇವರ ಕೈಗಳಲ್ಲಿ ಸಂತೋಷದಿಂದ ಇಡುವೆವು.

ನಮ್ಮೊಂದಿಗೆ ದೇವರ ಬಗೆಗಿನ ತಮ್ಮ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಂಡು ಅನೇಕ ವಿಶೇಷ ಜನರ ಪ್ರೀತಿ, ಪ್ರಾರ್ಥನೆಗಳು ಮತ್ತು ಒಳನೋಟಗಳಿಗಾಗಿ ದೇವರಿಗೆ ಡೊರೊತಿಯ ಮತ್ತು ನನ್ನ ಕೃತಜ್ಞತೆಗಳನ್ನು ಅರ್ಪಿಸಲು ಬಯಸುತ್ತೇವೆ. ಹೆಸರಾಗಿ ಹೇಳಲು ಸಾಧ್ಯವಾಗದಷ್ಟು ಅವರು ಅನೇಕರಾಗಿದ್ದಾರೆ. ಈ ಸ್ನೇಹಿತರಿಗೆ ನಾವು ''ನಿಮಗೆ ಉಪಕಾರ'' ಎಂದು ಹೇಳುತ್ತೇವೆ.

# ದೇವರಿಗಾಗಿ
# ನಿನ್ನ
# ಅನ್ವೇಷಣೆ

ಭೂಗರ್ಭ ಶಾಸ್ತ್ರವು ಭೂಮಿಯ
ಆತ್ಮ ಚರಿತ್ರೆಯಾಗಿದೆ, ಆದರೆ
ಎಲ್ಲಾ ಆತ್ಮ ಚರಿತ್ರೆಗಳಂತೆ,
ಅದು ಪ್ರಾರಂಭಕ್ಕೆ ಹಿಂದಿರುಗಿ
ಹೋಗುವದಿಲ್ಲ.

**ಸರ್ ಚಾರ್ಲ್ಸ್ ಲಿಯೆಲ್**

## ಅಧ್ಯಾಯ 1

# ದೇವರು ನಿಜವಾಗಿ ಇರುವನೋ ?

ದೇವರ ಪ್ರೀತಿಯ ಬಗ್ಗೆ ಸಂಶಯ ಪಟ್ಟದ್ದು ಅಷ್ಟೇ ಅಲ್ಲ, ಆತನ ಅಸ್ತಿತ್ವವನ್ನೇ ನೀನು ಪ್ರಶ್ನಿಸುವಷ್ಟು ಕರಾಳವಾಗಿ ತೋರಿದ ಸಂಗತಿಗಳು ನಿನ್ನ ಜೀವನದಲ್ಲಿ ಇದ್ದಿರಬಹುದು.

ಬೈಬಲಿನಲ್ಲಿ, ದೇವರ ಅಸ್ತಿತ್ವವು ವಿವರಿಸಲ್ಪಟ್ಟಿರುವದಿಲ್ಲ ; ಅದು ರುಜುವಾತು ಪಡಿಸಲ್ಪಟ್ಟಿರುವುದೂ ಇಲ್ಲ. ಅದು ಇದ್ದಂತೆಯೇ ತೆಗೆದುಕೊಳ್ಳಲ್ಪಟ್ಟಿದೆ. ''**ಆದಿಯಲ್ಲಿ ದೇವರು ಆಕಾಶವನ್ನು ಭೂಮಿಯನ್ನು ಉಂಟು ಮಾಡಿದನು**'' (ಆದಿಕಾಂಡ 1:1) ಎಂಬ ಬೈಬಲಿನ ಮೊಟ್ಟ ಮೊದಲಿನ ವಾಕ್ಯವು ಗಂಭೀರವಾದ ಹೇಳಿಕೆಯಾಗಿದ್ದು, ಸರಳವಾದದ್ದೂ ಆಳವಾದ ವಿಚಾರವುಳ್ಳದ್ದೂ ಆಗಿದೆ. ದೇವರಿದ್ದಾನೆ ಹಾಗೂ ಆತನು ವಿಶ್ವದ ಸೃಷ್ಟಿಕರ್ತನಾಗಿದ್ದಾನೆ ಎಂದು ಪ್ರಕಟಿಸುತ್ತದೆ.

ಅನೇಕ ವರ್ಷಗಳ ಹಿಂದೆ ನನ್ನ ಪತ್ನಿಯು ಯುರೋಪಿನಲ್ಲಿ ಬಹಳ ಪ್ರಸಿದ್ಧವಾದ ಮನೋರೋಗ ಚಿಕಿತ್ಸಾ ಆಸ್ಪತ್ರೆಯಲ್ಲಿ ಸೀನಿಯರ ನರ್ಸಿಂಗ ಸ್ಥಾನದಲ್ಲಿ ಇದ್ದಳು. ಒಂದು ದಿನ ಮುಖ್ಯ ಮನೋರೋಗ ಚಿಕಿತ್ಸಾ ವೈದ್ಯನು, ತಾನು ನಾಸ್ತಿಕನೆಂದು ಹೇಳಿಕೊಂಡವನು ಆಕೆಯ ನಂಬಿಕೆಯ ಬಗ್ಗೆ ಡೊರೊತಿಯನ್ನು ಪ್ರಶ್ನಿಸಿದನು. ''ಡೊಕ್ಟರ, ನಿಮ್ಮ ಕ್ಷೇತ್ರದಲ್ಲಿ ನೀವು ಪರಿಣಿತರು ಎಂದು ನಾನು ನಿಮ್ಮನ್ನು ಗೌರವಿಸುತ್ತೇನೆ. ನೀವು ಗೌರವಾನ್ವಿತ ಯುನಿವರ್ಸಿಟಿ

ಲೆಕ್ಚರರಾಗಿದ್ದೀರಿ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ನೀವು ಬಹಳವಾಗಿ ಗೌರವಿಸಲ್ಪಟ್ಟಿದ್ದೀರಿ. ಹಾಗಿದ್ದರೂ, ನೀವು ಪುನಃ ನಾಸ್ತಿಕರೆಂದು ಹೇಳಿಕೊಳ್ಳುವದಕ್ಕಿಂತ ಮೊದಲು ನಿಮ್ಮ ಮನೋವಿಜ್ಞಾನ ಸಂಶೋಧನೆಯನ್ನು ತೋರಿಸಿದ ಅಷ್ಟೇ ಆಸಕ್ತಿಯಿಂದ ನೀವು ಬೈಬಲನ್ನು ಓದಿರಿ ಎಂದು ನಾನು ಸೂಚಿಸಲೇ'' ಎಂದು ಆಕೆ ಉತ್ತರಿಸಿದಳು.

ಆಗ ಆಕೆ ಅವನ ಹಲವಾರು ರೋಗಿಗಳು ವಾರ್ಡಗಳಿಂದ ಗುಣವಾಗಿ ಕಳುಹಿಸಲ್ಪಟ್ಟವರು ತಮ್ಮ ಸ್ವಂತ ಜೀವಿತಗಳಲ್ಲಿ ದೇವರ ಶಕ್ತಿಯಿಂದ ಅದ್ಭುತವಾಗಿ ಬದಲಾವಣೆ ಹೊಂದಿದ್ದರ ಬಗ್ಗೆ ಜ್ಞಾಪಕಕ್ಕೆ ತಂದಳು. ಈಗಾಗಲೇ ಫಲಭರಿತ ಜೀವಿತ ನಡಿಸುತ್ತಿದ್ದ ನಾಟಕಿಯವಾದ ರೀತಿಯಲ್ಲಿ ಬದಲಾವಣೆ ಹೊಂದಿದ್ದ ಒಂದಿಬ್ಬರ ಹೆಸರುಗಳನ್ನು ಆಕೆ ಹೇಳಿದಳು. ಈ ರೋಗಿಗಳಲ್ಲಿ ಪ್ರತಿಯೊಬ್ಬರೂ ವೈಯಕ್ತಿಕವಾದ ಮತ್ತು ಅದ್ಭುತವಾದ ರೀತಿಯಲ್ಲಿ ದೇವರನ್ನು ತಿಳಿಯಲು ಹೇಗೆ ಬಂದರು ಎಂಬುದನ್ನು ಡೊರೊತಿ ಆ ವೈದ್ಯನಿಗೆ ಹೇಳಿದಳು. ಈ ರೋಗಿಗಳು ಮೊದಲು ಆಧುನಿಕ ಮನೋ ರೋಗ ಚಿಕಿತ್ಸಾ ವಿಧಾನಗಳಿಂದ ಪರಿಣಾಮ ಹೊಂದಿರಲಿಲ್ಲ ಎಂಬುದನ್ನು ವೈದ್ಯನು ತಾನೇ ಸ್ಪಷ್ಟವಾಗಿ ತಿಳಿದವನಾಗಿದ್ದನು. ನಾಸ್ತಿಕನಾಗಿಯಾಗಲೀ, ವೈದ್ಯನಾಗಿಯಾಗಲೀ, ಅವನು ಅವರ ಬದಲಾದ ಜೀವಿತಗಳ ಅದ್ಭುತದ ಬಗ್ಗೆ ಉತ್ತರ ಹೇಳದವನಾಗಿದ್ದನು.

ಈ ವೈದ್ಯನು, ತಾನು ದೇವರಲ್ಲಿ ನಂಬಿರುವದಿಲ್ಲ ಎಂದು ಡೊರೊತಿಗೆ ಹೇಳಿದವನು, ತನಗಾಗಿ ಪ್ರಾರ್ಥಿಸಬೇಕೆಂದು ಆಕೆಗೆ ಹೇಳುವದರಿಂದ ಸಂವಾದವನ್ನು ಮುಗಿಸಿದನು. ತನ್ನ ಜೀವನದಲ್ಲಿ ಮೊದಲನೆಯ ಸಲ, ತೆರೆದ ಮನಸ್ಸಿನಿಂದ ಬೈಬಲನ್ನು ಓದುತ್ತೇನೆಂದು ವಾಗ್ದಾನ ಮಾಡಿದನು.

ಜಾಗರೂಕತೆಯಿಂದ ಓದಿದ ಏಳು ವಾರಗಳ ನಂತರ, ಆ ಮನೋರೋಗ ಚಿಕಿತ್ಸಾ ವೈದ್ಯನು, ಇನ್ನು ಮುಂದೆ ನಾಸ್ತಿಕನಾಗಿರುವದಿಲ್ಲ ಎಂದು ಡೊರೊತಿಗೆ ಹೇಳಿದನು. ಹೀಗಿದ್ದರೂ ಅವನಿಗೆ ಇನ್ನೂ ಒಂದು ಪ್ರಶ್ನೆಯಿತ್ತು. ಯಾಕಂದರೆ ದೇವರಿಗೆ ಯತಾರ್ಥವಾದ ಸಮರ್ಪಣೆಯು ತನ್ನ ಜೀವಿತ ಶೈಲಿಯಲ್ಲಿ ಬದಲಾವಣೆ ಮಾಡುವ ಅಗತ್ಯತೆಯನ್ನು ಅವನು ಗುರುತಿಸಿದನು.

''ನನ್ನ ಸಮಸ್ಯೆಯು ಬೌದ್ಧಿಕವಾದ ಸಮಸ್ಯೆಯಾಗಿರುವದಿಲ್ಲ, ಆದರೆ ನಾನು ಸಮರ್ಪಿತ ವಿಶ್ವಾಸಿಯಾದರೆ ಸಂಭವಿಸಬಹುದಾದ ಬದಲಾವಣೆಗಳನ್ನು ಸ್ವೀಕರಿಸಲು ನಾನು ಸಿದ್ಧನಿರುವದಿಲ್ಲ'' ಎಂದು ಅವನು ಒಪ್ಪಿಕೊಂಡನು.

ನಮ್ಮ ವೈದ್ಯ ಸ್ನೇಹಿತನಿಗಾಗಿ ನಾವು ಹತ್ತು ವರ್ಷ ಪ್ರಾರ್ಥಿಸಿದ ನಂತರ, ಅಂತಿಮವಾಗಿ ನಾವು ಅವನಿಂದ ಒಂದು ಪತ್ರವನ್ನು ಸ್ವೀಕರಿಸಿದೆವು. ಅದರಲ್ಲಿ ಅವನು ತಾನು ಹೊಸದಾಗಿ ಕಂಡು ಕೊಂಡ ವಿಶ್ವಾಸದ ಬಗ್ಗೆ ಮತ್ತು ದೇವರಿಗೆ ತನ್ನ ವೈಯಕ್ತಿಕ ಸಮರ್ಪಣೆಯ ಬಗ್ಗೆ ಬರೆದಿದ್ದನು. ನಾವು ಅತ್ಯಾನಂದ ಪಟ್ಟೆವು. ಆದರೆ ಅತಿಶಯವಾಗಿ ಆಶ್ಚರ್ಯ ಚಕಿತರಾಗಲಿಲ್ಲ, ಯಾಕಂದರೆ ''ನಂಬಿಕೆಯು ಕೇಳುವದರಿಂದ ಬರುತ್ತದೆ ಮತ್ತು ಕೇಳುವಿಕೆಯು ದೇವರ ವಾಕ್ಯದಿಂದ ಬರುತ್ತದೆ'' (ರೋಮಾಪುರ 10:17) ಎಂಬುದನ್ನು ನಾವು ತಿಳಿದುಕೊಂಡಿದ್ದೆವು.

ತನ್ನನ್ನು ತಿಳಿದುಕೊಳ್ಳಲು ನಮ್ಮಲ್ಲಿ ಪ್ರತಿಯೊಬ್ಬರಿಗೆ ಸಹಾಯ ಮಾಡುವದಕ್ಕಾಗಿ, ದೇವರು ನಮ್ಮ ಜೀವಿತಗಳಲ್ಲಿ ಆತನ ಅಸ್ತಿತ್ವದ ಆಳವಾದ ಆಂತರಿಕ ಅರುಹನ್ನು ಇಟ್ಟಿದ್ದಾನೆ.

ಕೆಲವು ಜನರು ದೇವರಲ್ಲಿ ನಂಬಿಕೆ ಇಡದೇ ಇರುವದನ್ನು ಆಯ್ದುಕೊಳ್ಳ ಬಹುದು ; ಆದರೆ ದೇವರಲ್ಲಿ ನಂಬಿಕೆಯಿಡಲಾರದಂಥ ವ್ಯಕ್ತಿಯು ಭೂಗ್ರಹದ ಮೇಲೆ ಎಂದೂ ಯಾರೂ ಇರುವದಿಲ್ಲ.

ಪ್ರಾಕೃತಿಕ ವಿಶ್ವದಲ್ಲಿಯೇ ದೇವರು ತನ್ನ ಸ್ವಂತ ಅಸ್ತಿತ್ವದ ಬಗ್ಗೆ ಅನೇಕ ಪುರಾವೆ ಗಳನ್ನು ಕೊಟ್ಟಿದ್ದಾನೆ. ವಿಶ್ವದ ರಹಸ್ಯದೊಳಗೆ ವಿಜ್ಞಾನವು ನಮ್ಮ ಇಪ್ಪತ್ತೊಂದನೆಯ ಶತಮಾನದಲ್ಲಿ ಹೆಚ್ಚು ಆಳವಾಗಿ ತಲುಪುವಾಗ, ಇದೆಲ್ಲವೂ ರೂಪಿಸಿದಾತನು ಇಲ್ಲದೇ, ಅಸ್ತಿತ್ವಕ್ಕೆ ಬಂದಿತು ಎಂದು ಸೂಚಿಸಲು ಹೆಚ್ಚು ಕಾರಣಗಳಿಲ್ಲದ್ದಾಗುವುದು. ರೂಪಿಸಿದವರ, ತಂತ್ರಜ್ಞರ ಮತ್ತು ಗಣಿತಶಾಸ್ತ್ರಜ್ಞರ ಸೃಜನಾತ್ಮಕ ಸಂಯುಕ್ತ ಬುದ್ಧಿಶಕ್ತಿಯಿಲ್ಲದೇ ಗಗನ ಕ್ಷಿಪಣೆಯು ಆಕಾಶದಲ್ಲಿ ಏರಿಹೋಗಿ, ಭೂಮಿಯ ಕಕ್ಷೆಯೊಳಗೆ ಬಂದು ನಿರೀಕ್ಷಿತ ಸಮಯದಲ್ಲಿ, ನಿರೀಕ್ಷಿತ ಸ್ಥಳದ ಮೇಲೆ ಇಳಿಯುವುದು ಎಂದು ಯಾರೂ ಸೂಚಿಸುವುದಿಲ್ಲ ; ಹಾಗೆಯೇ, ಸೂರ್ಯಾಸ್ತಮಾನಗಳು,

ಕಾಲಮಾನಗಳೂ, ಆಕಾಶಗಂಗೆಗಳು ಮತ್ತು ಅಣುಗಳು, ಗುರುತ್ವಾಕರ್ಷಣ ಒತ್ತಡ ಮತ್ತು ಪ್ರೀತಿಯ ಬಲ ಇವುಗಳು ಸೃಷ್ಟಿಕರ್ತ ದೇವರ ಯೋಜನೆ ಮತ್ತು ರಚನೆಯಿಲ್ಲದೆ ಎಂದೂ ಅಸ್ತಿತ್ವದಲ್ಲಿ ಇರಲಾರವು.

ನಿಶ್ಚಯವಾಗಿಯೂ, ಕ್ರಮಬದ್ಧವಾದ, ಪರಿಪೂರ್ಣವಾದ ಸೃಷ್ಟಿಯು ಸೃಷ್ಟಿಕರ್ತನಾದ ದೇವರಿಂದ ಬಂದಿತು ಎಂದು ನಂಬುವದಕ್ಕಿಂತ, ''ದೊಡ್ಡ ಅಪ್ಪಳಿಸುವಿಕೆಯಿಂದ'' ಬಂದಿತೆಂದು ನಂಬುವದಕ್ಕೆ ಮಿಲಿಯಕ್ಕಿಂತ ಹೆಚ್ಚು ಪಟ್ಟು ನಂಬಿಕೆ ಬೇಕಾಗುತ್ತದೆ. ಯಾಕಂದರೆ ಮೊದಲು ಚಿತ್ರಗಾರನಿಲ್ಲದೇ ಚಿತ್ರವಿರಲಾರದು.

ದೇವರ ಅಸ್ತಿತ್ವವನ್ನು ಅಲ್ಲಗಳೆದ ಸರಕಾರವೂ ಸಹ ತಾನು ಅಂತರಿಕ್ಷಕ್ಕೆ ಗಗನಯಾತ್ರಿಯನ್ನು ಕಳುಹಿಸಿದ ಪ್ರತಿಯೊಂದು ಸಲವೂ ವಿಶ್ವದ ಕ್ರಮ ನಿಯಮಗಳಲ್ಲಿ ತನ್ನ ಭರವಸೆಯನ್ನು ನಿಜವಾಗಿಯೂ ವ್ಯಕ್ತಪಡಿಸಿದೆ. ಈ ನಿಯಮಗಳೊಂದಿಗೆ ಸಹಕರಿಸಿದ್ದರಿಂದ ಮಾತ್ರವೇ ಗಗನ ಯಾತ್ರಿಗಳು ಸುರಕ್ಷಿತವಾಗಿ ಭೂಮಿಗೆ ಹಿಂದಿರುಗಿ ಬಂದಿದ್ದಾರೆ. ನಿಸರ್ಗದ ನಿಯಮಗಳ ಮೇಲೆ ಅವಲಂಭಿಸುವ ಈ ಜನರೇ ನಿಯಮ ಮಾಡಿದಾತನ ಅಸ್ತಿತ್ವವನ್ನು, ಅದ್ವಿತೀಯ ಯೋಜಕನ ಅಸ್ತಿತ್ವವನ್ನು ತಿರಸ್ಕರಿಸುವುದು ವಿಚಿತ್ರವಾಗಿ ಕಾಣುತ್ತದಲ್ಲವೇ ?

ಅಣುಬಾಂಬ ಸ್ಫೋಟಗೊಳ್ಳುವಾಗ ಅತಿಯಾದ ನಾಶನ ಮಾಡುವ ಬಲವು ನಾಶ ಮಾಡುವುದೆಂಬುದನ್ನು ನಾವೆಲ್ಲರೂ ತಿಳಿದವರಾಗಿದ್ದೇವೆ. ಹಾಗಿದ್ದರೂ, ಪ್ರತಿಯೊಂದು ಸೆಕೆಂಡಿಗೆ ಪ್ರತೀ ಸಲ 5,000 ಬಿಲಿಯನ್ ಅಣು ಬಾಂಬುಗಳಿಗೆ ಸಮಾನವಾದ ಶಕ್ತಿಯನ್ನು ಸೂರ್ಯನು ಹೊರಗೆ ಬಿಡುವನೆಂದು ಲೆಕ್ಕ ಮಾಡಲಾಗಿದೆ. ಇತರ ಶಕ್ತಿ ಹೊರಚೆಲ್ಲುವ ನಕ್ಷತ್ರಗಳ ಹೋಲಿಕೆಯಲ್ಲಿ ನಮ್ಮ ಸೂರ್ಯನು ಬಹಳ ದೊಡ್ಡದಾಗಿರುವದಿಲ್ಲ ; ವಿಶ್ವದಲ್ಲಿ ಇನ್ನೂ ಎಷ್ಟು ನಕ್ಷತ್ರಗಳು ನಿಜವಾಗಿಯೂ ಇರುವವೋ ಎಂಬುದನ್ನು ನಾವು ತಿಳಿದಿರುವದಿಲ್ಲ. ಮನುಷ್ಯನ ದೃಷ್ಟಿಯೊಳಗೆ ಬಿಲಿಯ ಸಂಖ್ಯೆಯಷ್ಟು ಕೂಡಿಸಲ್ಪಟ್ಟಿರೂ ಅವು ತಿಳಿಯದೇ ಇದ್ದುದರ ಒಂದು ಭಾಗ ಮಾತ್ರ ಆಗಿರಬಹುದು. ನಮ್ಮ ಸೂರ್ಯನು

ಹೊರ ಚಲ್ಲುವ ಶಕ್ತಿಗಿಂತಲೂ ಇತರ ಗ್ರಹಗಳಿಂದ ಎಷ್ಟೋ ಹೆಚ್ಚು ಪಟ್ಟು ಶಕ್ತಿಯು ಹೊರಚೆಲ್ಲಲ್ಪಡುವುದು ಎಂಬುದನ್ನು ಇಂದು ಗಗನಯಾತ್ರಿಗಳು ಗುರುತಿಸಿದ್ದಾರೆ. ಮಿತಿಯಿಲ್ಲದ ಬಲವುಳ್ಳ ಸೃಷ್ಟಿಕರ್ತನು ಇಲ್ಲವೇ ಅಂಥ ಶಕ್ತಿಯು ಹೇಗೆ ಅಸ್ತಿತ್ವ ದಲ್ಲಿರುವುದು ?

ಸೃಷ್ಟಿಯು ನಮ್ಮನ್ನು ರೂಪಿಸಿದ ದೇವರ, ಧರ್ಮಶಾಸ್ತ್ರದ ದೇವರ, ಮತ್ತು ಅಪರಿಮಿತ ಬಲದ ದೇವರ ಕಡೆಗೆ ನಮ್ಮನ್ನು ಪರಿಚಯಿಸುತ್ತದೆ. ಬೈಬಲ್ ಹೀಗೆ ಹೇಳುತ್ತದೆ :

> ''ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ ; ಗಗನವು ಆತನ ಕೈಕೆಲಸವನ್ನು ತಿಳಿಸುತ್ತದೆ. ದಿನವು ದಿನಕ್ಕೆ ಪ್ರಕಟಿಸುತ್ತಿರುವುದು; ರಾತ್ರಿಯು ರಾತ್ರಿಗೆ ಅರುಹುತ್ತಿರುವುದು, ಶಬ್ದವಿಲ್ಲ, ಮಾತಿಲ್ಲ, ಅವುಗಳ ಸ್ವರ ಕೇಳಿಸುವದಿಲ್ಲ. ಆದರೂ ಅವುಗಳ ಪ್ರಭುತ್ವವು ಭೂಮಿಯಲ್ಲೆಲ್ಲಾ ಪ್ರಸರಿಸಿದೆ ; ಅವುಗಳ ನುಡಿಗಳು ಲೋಕದ ಕಟ್ಟಕಡೆಯ ವರೆಗೂ ವ್ಯಾಪಿಸಿರುತ್ತವೆ''
>
> (ಕೀರ್ತನೆ 19:1-4)
>
> ''ಹೇಗೆಂದರೆ ಕಣ್ಣಿಗೆ ಕಾಣದಿರುವ ಆತನ (ದೇವರ) ಗುಣಲಕ್ಷಣಗಳು ಅಂದರೆ ಆತನ ನಿತ್ಯ ಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ ; ಹೀಗಿರುವದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ''.
>
> (ರೋಮಾಪುರ 1:20).

ಆದುದರಿಂದ ದೇವರ ಅಸ್ತಿತ್ವವನ್ನು ಅಲ್ಲಗಳೆಯುವದಕ್ಕೆ ಯಾರಿಗೂ, ಎಲ್ಲಿಯೂ ಯಾವುದೇ ನೆವವಿರುವದಿಲ್ಲ.

**ದೇವರು ಸೃಷ್ಟಿಸಿದ ವಿಶಾಲತೆ, ಕ್ರಮ ಮತ್ತು ಬಲದ ಮೇಲೆ ಪ್ರತಿಬಿಂಬಿಸುವಾಗ, ಅನೇಕರು ಬಹಳ ಅಲ್ಪರೂ ಗಣನೆಗೆ ಬಾರದವರೂ ಆಗಿದ್ದೇವೆಂದು ಭಾವಿಸುವಂತೆ ಮಾಡುತ್ತದೆ.**

ಇಸ್ರೆಯೇಲಿನ ಅರಸ ದಾವೀದನಿಗೆ ಆ ಪ್ರತಿಕ್ರಿಯೆ ಇತ್ತು ಮತ್ತು ಅದನ್ನು ಹೀಗೆ ವ್ಯಕ್ತಪಡಿಸಿದನು :

> ''ನಿನ್ನ ಕೈಕೆಲಸವಾಗಿರುವ ಆಕಾಶಮಂಡಲವನ್ನು
> ನೀನು ಉಂಟು ಮಾಡಿದ ಚಂದ್ರನಕ್ಷತ್ರಗಳನ್ನು ನಾನು
> ನೋಡುವಾಗ - ಮನುಷ್ಯನು ಎಷ್ಟು ಮಾತ್ರದವನು,
> ಅವನನ್ನು ನೀನು ಯಾಕೆ ನೆನಸಬೇಕು ? ಮಾನವನು
> ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು ?''
> (ಕೀರ್ತನೆ 8:3,4).

ಇಂದು, ನಕ್ಷತ್ರ ತುಂಬಿದ ಆಕಾಶಗಳ ಬಗ್ಗೆ ನಮ್ಮ ಜ್ಞಾನವು ವಿಶಾಲವಾಗಿ ವಿಸ್ತರಿಸಿರುತ್ತದೆ. ಯಾಕಂದರೆ ದೈತ್ಯ ಟೆಲೆಸ್ಕೋಪುಗಳು ಅರ್ಧ ಮಿಲಿಯಕ್ಕಿಂತ ಹೆಚ್ಚಾಗಿ ವಿಶ್ವದ ನಮ್ಮ ದರ್ಶನವನ್ನು ದೊಡ್ಡದಾಗಿ ಮಾಡಿತೋರಿಸುತ್ತವೆ ಮತ್ತು ಸ್ಯಾಟೆಲೈಟುಗಳು ಬಾಹ್ಯ ಅಂತರಿಕ್ಷದ ಮೂಲಕ ಪ್ರಯಾಣ ಮಾಡುವಂತೆ ಭೂಗ್ರಹಕ್ಕೆ ಚಿತ್ರಗಳನ್ನು ಹಿಂದಿರುಗಿ ಕಳುಹಿಸುತ್ತವೆ. ಅದರ ಪರಿಣಾಮವಾಗಿ, ದಾವೀದನು ಮಾಡಿದಂತೆ, ಅದೇ ಪ್ರಶ್ನೆಯನ್ನು ನಾವೂ ಕೇಳುವದಕ್ಕೆ ಶೋಧಿಸಲ್ಪಡಬಹುದು: ''ಇದೆಲ್ಲವನ್ನೂ ಸೃಷ್ಟಿಸಿದ ದೇವರು ಹೇಗೆ ಅಲ್ಪನಾದ ನನ್ನಲ್ಲಿ ಆಸಕ್ತನಾಗಿರುವನು ?''

ಹೀಗಿದ್ದರೂ, ಸುದೈವದಿಂದ, ಟೆಲೆಸ್ಕೋಪಗಳ ಯುಗವು, ಮೈಕ್ರೊಸ್ಕೋಪುಗಳ ಯುಗವು ಸಹ ಆಗಿರುತ್ತದೆ. ಇಂದು, ಸೂಕ್ಷ್ಮಾಕಾರದಲ್ಲಿ ಜಗತ್ತು ಇರುವದನ್ನು ನಾವು ಬಲ್ಲವರಾಗಿದ್ದೇವೆ, ಅದನ್ನು ಮೈಕ್ರೊಸ್ಕೋಪದ ಮೂಲಕ ಮಾತ್ರವೇ ನೋಡಬಹುದು, ಹಾಗೂ ಬಾಹ್ಯ ಅಂತರಿಕ್ಷದ ವಿಶಾಲತೆಯಷ್ಟೇ ಅಗ್ರಾಹ್ಯವಾದದ್ದಾಗಿದೆ. ಈ ಉಪ-ಮೈಕ್ರೊಸ್ಕೋಪಿಕ್ ಕ್ಷೇತ್ರದ ರಹಸ್ಯಗಳನ್ನು ಪ್ರಕಟಿಸುವದಕ್ಕೆ ಸಾಧ್ಯವಾಗದಷ್ಟು ಬೆಳಕೂ ಸಹ

ಸ್ಥೂಲವಾದದ್ದಾಗಿದೆ. ವಿಜ್ಞಾನಿಯ ಸಾಂಪ್ರದಾಯಿಕ ಲ್ಯಾಬ್ ಮೈಕ್ರೊಸ್ಕೊಪದ ಕಣ್ಣಿಗೆ ತಪ್ಪಿಸಿಕೊಳ್ಳುವಂತದ್ದನ್ನು ಎಲೆಕ್ಟ್ರೊನ ಮೈಕ್ರೊಸ್ಕೋಪ ಹಿಡಿದು ಕೊಳ್ಳುವುದು ಮತ್ತು ನಮ್ಮ ಅತ್ಯಂತ ಸೂಕ್ಷ್ಮವಾದ ಜಗತ್ತಿನಲ್ಲಿ ಒಳಗೊಂಡಿರುವ ಸೌಂದರ್ಯ, ನಕ್ಷೆ, ನಿಯಮ ಮತ್ತು ಬಲವನ್ನು ಪ್ರಕಟಿಸುವುದು.

ದೇವರ ಮನಸ್ಸಿನಲ್ಲಿ ನಿಮ್ಮಷ್ಟು ಸಣ್ಣವರಾದವರು ಇರುವುದರ ಬಗ್ಗೆ ನೀವು ಆಶ್ಚರ್ಯ ಪಟ್ಟರೂ, ಪಡದಿದ್ದರೂ ನ್ಯುಕ್ಲಿಯರ ಫಿಜಿಸಿಸ್ಟರಿಗೆ ಕಿವಿಗೊಡಿರಿ. ಇಡೀ ವಿಶ್ವದ ಸುರಕ್ಷಿತೆಗೆ ನಿಜವಾಗಿ ಸಣ್ಣದಾಗಿರುವಂಥದ್ದು ಹೇಗೆ ಮಹತ್ವದ್ದಾಗಿರುವದೆಂಬುದನ್ನು ಅವರು ಹೇಳುತ್ತಾರೆ. ಒಂದು ಅಣುವಿನ ನ್ಯೂಟ್ರೊನ ಮತ್ತು ಪ್ರೋಟೊನುಗಳನ್ನು ಒಂದು ಇಂಚಿನ $^1/_{12}$ ಟ್ರಿಲಿಯನ್ನಿನಷ್ಟು ಬೇರೆ ಮಾಡಿರಿ, ಭೌತದ್ರವ್ಯವು ಗಟ್ಟಿಯಾದ ಭಾಗವಾಗುವದರ ಬದಲು ವಿಶ್ವ ನ್ಯೂಕ್ಲಿಯರ ಸ್ಫೋಟದಲ್ಲಿ ಜಗತ್ತು ಎರಡು ಭಾಗವಾಗಿ ಹೋಗುವುದು. ಹೌದು , ಸಣ್ಣತನವು ಸೃಷ್ಟಿಯ ದೇವರಿಗೆ ದೊಡ್ಡದಾಗಿರುವಂತೆ ಮಹತ್ವದ್ದಾಗಿದೆ.

''ಮನುಷ್ಯನು ಎಷ್ಟು ಮಾತ್ರದವನು, ಅವನನ್ನು ನೀನು ಯಾಕೆ ನೆನಸಬೇಕು?'' ಎಂಬ ಪ್ರಶ್ನೆಯನ್ನು ಮನುಷ್ಯನ ಗಾತ್ರವು ಅವನ ಮೌಲ್ಯವನ್ನು ತೀರ್ಮಾನಿಸುವದಿಲ್ಲ ಎಂಬ ಭರವಸೆ ಕೊಡಲ್ಪಡುತ್ತದೆ. ಅದಕ್ಕೆ ವ್ಯತಿರಿಕ್ತವಾಗಿ, ದೇವರಿಗೆ ನಮ್ಮ ವೈಯಕ್ತಿಕ ಮೌಲ್ಯವು ಯಾವುದೋ ಬಹಳ ಭಿನ್ನವಾದ ಸಂಗತಿಗಳ ಮೇಲೆ ಅವಲಂಭಿಸಿರುತ್ತದೆ. ಮತ್ತು ದೇವರಿಗೆ ನಾವು ಯಾಕೆ ಬೆಲೆಯುಳ್ಳವರಾಗಿದ್ದೇವೆ ಮತ್ತು ಆತನ ದೃಷ್ಟಿಯಲ್ಲಿ ಹೇಗೆ ಅಮೂಲ್ಯರಾಗಿದ್ದೇವೆ ಎಂಬುದನ್ನು ಆತನು ನಮಗೆ ಪ್ರಕಟಿಸಿದ್ದಾನೆ.

ಕ್ರಮದ, ಬಲದ, ನಕ್ಷೆಯ ದೇವರ ಬಗ್ಗೆ ಸೃಷ್ಟಿಯು ತಾನೇ ಮಾತಾಡಿದರೂ, ದೇವರು ತನ್ನನ್ನು ಅಪರಿಮಿತ ಪ್ರೀತಿಯ ಮತ್ತು ದಯೆಯ ದೇವರು, ನಮ್ಮ ಅತೀ ದೊಡ್ಡ ಒಳ್ಳೆಯದನ್ನು ಬಿಟ್ಟು ಬೇರೇನನ್ನೂ ಅಪೇಕ್ಷಿಸದವನು ಎಂಬಂತೆ ಪ್ರಕಟಿಸಲು ಇನ್ನೊಂದು ಮಾರ್ಗವನ್ನು ಆಯ್ದುಕೊಂಡನು. ಆದರೆ ನೀವು ಅಂಥ ದೇವರನ್ನು ಕಂಡು ಕೊಳ್ಳುವದಾದರೆ, ನಿಮ್ಮ ಆತ್ಮಿಕ ಮಾರ್ಗದರ್ಶಿಯು ಸಂಪೂರ್ಣವಾಗಿ ಅವಲಂಭನೆಗೆ ಯೋಗ್ಯವಾದದ್ದಾಗಿರಬೇಕಾಗುತ್ತದೆ.

## ಆಲೋಚಿಸಲು ವಿರಾಮ

1. ಒಂದು ಹಿಡಿ ಕಬ್ಬಿಣದ ಚೂರುಗಳನ್ನು ಗಾಳಿಯಲ್ಲಿ ತೂರಿದರೆ, ಅದು ಕೆಳಗೆ ಬರುವಾಗ ಒಂದು ಸ್ವಿಸ್ ವಾಚನ್ನು ಹಿಡಿಯಲು ನಿರೀಕ್ಷಿಸುವಿರೋ ?
2. ತನ್ನ ಆಶ್ಚರ್ಯಕರವಾದ ಮತ್ತು ಗಹನವಾದ ರಚನೆಯೊಂದಿಗೆ ವಿಶ್ವವು ಸೃಷ್ಟಿಕರ್ತ ದೇವರು ಇಲ್ಲದೇ ತಾನೇ ಸಂಭವಿಸಿರುವುದೋ?
3. ನಕ್ಷೆಯ, ನಿಯಮದ ಮತ್ತು ಬಲದ ದೇವರಂತೆ ತನ್ನನ್ನು ಪ್ರಕಟಿಸಿಕೊಂಡ ಸೃಷ್ಟಿಕರ್ತ ದೇವರ ಕಡೆಗೆ ಸೃಷ್ಟಿಯು ತೋರಿಸಬಹುದಾಗಿದ್ದಾಗ್ಯೂ, ದೇವರ ಪ್ರೀತಿ ಮತ್ತು ದಯೆಯನ್ನು ಅರ್ಥಮಾಡಿಕೊಳ್ಳುವದಕ್ಕೆ ನಿಮ್ಮನ್ನು ತರಲು ಸೃಷ್ಟಿಯು ತಾನೇ ಸಾಕಾಷ್ಟಾಗಿದೆಯೋ ?

ಒಂದು ಕತ್ತಲೆಯ ಗವಿಯೊಳಗೆ ದೀವಟಿಗೆಯೊಂದಿಗೆ
ಪ್ರವೇಶಿಸಿದವನು ಸುಲಭವಾಗಿ ಅಲೆದಾಡಬಹುದು

**ಪ್ಲ್ಯಾಟೋ**

ನಿಸರ್ಗವು ಗವಿಯ ಬಾಯೊಳಗಿಂದ ಮಸುಕಾದ ಬೆಳಗಾಗಿದೆ ;
ಪರಿಶುದ್ಧ ಬರಹವು ದೀವಟಿಗೆಯಾಗಿದೆ

**ಎ.ಎಚ್. ಸ್ಟ್ರೊಂಗ.**

# ಅಧ್ಯಾಯ 2

# ನಿನ್ನ ಆತ್ಮಿಕ ಮಾರ್ಗದರ್ಶಿಯು ನಂಬಲರ್ಹವಾದದ್ದೋ ?

ಕೆಲ ಸಮಯದ ಹಿಂದೆ ವೃತ್ತ ಪತ್ರಿಕೆಗಳು ವಿಮಾನ ದುರಂತದಲ್ಲಿ ಮಾನವ ಜೀವಿಗಳು ಪ್ರಾಣ ಕಳೆದುಕೊಂಡ ದುಃಖಕರವಾದ ಭಯಾನಕ ಸಂಗತಿಯು ತಪ್ಪಾದ ರಾಡಾರ ಸಂಕೇತಗಳಿಂದ ಆಯಿತೆಂದು ಪುನಃ ವರದಿಮಾಡಿದವು. ಜನರು ಆತ್ಮಿಕ ಅವಘಡಕ್ಕೆ ತಮ್ಮನ್ನು ನಡಿಸುವ ''ಆತ್ಮಿಕ ರಾಡಾರ ಪದ್ಧತಿಯಲ್ಲಿ'' ತಮ್ಮ ಭರವಸೆ ಯನ್ನು ಇಟ್ಟರೆ ಏನು ಸಂಭವಿಸುತ್ತದೆ ಎಂಬುದಕ್ಕೆ ಹೋಲಿಸುವಾಗ ಆ ದುಃಖಕರವಾದ ಅಪಘಾತವು ಅರ್ಥವಿಲ್ಲದ್ದಾಗಿ ಮರೆಯಾಗಿ ಹೋಗುತ್ತದೆ.

ಇಂದು ಜಗತ್ತಿನಲ್ಲಿ ಘರ್ಷಣೆಯ ಮತ್ತು ಗಲಿಬಲಿಗೊಳಿಸುವ ಅನೇಕ ಧ್ವನಿಗಳು ಇರುತ್ತವೆ, ಪ್ರತಿಯೊಂದೂ ದೇವರ ಕಡೆಗೆ ಮಾರ್ಗದರ್ಶಿಯಾಗಿದೆ ಎಂದು ಹೇಳಿ ಕೊಳ್ಳುತ್ತದೆ, ಯಾವುದನ್ನು ನಂಬಬೇಕು ಎಂಬುದನ್ನು ನೀವು ಹೇಗೆ ತಿಳಿಯಬಹುದು ? ದೇವರಿಗಾಗಿ ನಿನ್ನ ಅನ್ವೇಷಣೆಯಲ್ಲಿ ತಪ್ಪಾದ ಧ್ವನಿಯಿಂದ ನೀನು ಮಾರ್ಗ ಹೊಂದಲಿಕ್ಕಾಗುವದಿಲ್ಲ ಯಾಕಂದರೆ ತೆಗೆದುಕೊಳ್ಳುವ ಪ್ರತಿಯೊಂದು ಗಂಡಾಂತರಗಳೂ ನಿತ್ಯವಾದವುಗಳಾಗಿವೆ.

ಬ್ರಿಟೀಶ ಪ್ರಧಾನ ಮಂತ್ರಿ ಡಬ್ಲ್ಯೂ. ಈ. ಗ್ಲ್ಯಾಡ್‌ಸ್ಟನ್ ಅವರು ಹೀಗೆ ಬರೆದರು: ''ಬೈಬಲು ಮೂಲದ ವಿಶೇಷತೆಯೊಂದಿಗೆ ಮುದ್ರೆ ಹೊಂದಿದೆ ಮತ್ತು ಅಳತೆ ಮಾಡಲಾಗದ ಅಂತರವು ಅದರ ಎಲ್ಲಾ ಸ್ಪರ್ಧಿಗಳಿಂದ ಬೇರೆಯಾಗಿಡುತ್ತದೆ''

ಅಮೇರಿಕದ ಪ್ರೆಸಿಡೆಂಟ ಅಬ್ರಹಾಮ ಲಿಂಕನ್ ಅವರು ಒಮ್ಮೆ ಹೀಗೆ ಹೇಳಿದ್ದಾರೆ: ''ಬೈಬಲು ಮನುಷ್ಯನಿಗೆ ಕೊಟ್ಟ ಅತ್ಯುತ್ತಮ ಕಾಣಿಕೆಯಾಗಿದೆ ಎಂದು ನಾನು ನಂಬುತ್ತೇನೆ''.

ಚರಿತ್ರೆಯ ಅನೇಕ ಮಹಾ ಪುರುಷರು ಅದರ ಅದ್ವಿತೀಯತೆಗೆ ಸಾಕ್ಷಿ ಕೊಟ್ಟಿದ್ದರೂ, ಬೈಬಲು ನಿಜವಾಗಿಯೂ ತನ್ನ ಸ್ವಂತ ದಾಖಲೆಯ ಮೇಲೆ ನಿಂತುಕೊಳ್ಳುತ್ತದೆ.

ಅರಸ ದಾವೀದನು ತನ್ನ ಆತ್ಮಿಕ ಮಾರ್ಗದರ್ಶಿಯ ನಂಬಲರ್ಹತೆಯ ಬಗ್ಗೆ ಸ್ಪಷ್ಟವಾಗಿದ್ದನು,

> ''ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ ನನ್ನ ದಾರಿಗೆ ಬೆಳಕೂ ಆಗಿದೆ'' (ಕೀರ್ತನೆ 119:105) ಎಂದು ಅವನು ಹೇಳಿದನು.

ಈ ದಿನ ವರೆಗೂ ಜನರು ತಮ್ಮನ್ನು ದೇವರ ಬಳಿಗೆ ನಡಿಸುವದಕ್ಕೆ ಬೈಬಲು ನಂಬಲರ್ಹವಾದದ್ದಾಗಿದೆಯೆಂದು ಕಂಡುಕೊಳ್ಳುತ್ತಿದ್ದಾರೆ. ಅದರ ವಿಶ್ವಾಸಾರ್ಹತೆಯನ್ನು ನಾಶಪಡಿಸಲಿಕ್ಕೆ ಪ್ರಯತ್ನಿಸಿದವರು ಇದ್ದರೂ, ಬೈಬಲು ದಾಟಿ ಹೋದ ದಿನಗಳಲ್ಲಿಯಂತೆಯೇ ಇಂದೂ ಸಹ ದೃಢವಾಗಿಯೂ ನಂಬಿಗಸ್ಥವಾದದ್ದಾಗಿಯೂ ನಿಂತುಕೊಂಡಿದೆ; ಜಗತ್ತಿನ ಬರಹಗಳ ಮಧ್ಯದಲ್ಲಿ ಅದು ನಿಜವಾಗಿಯೂ ಅದ್ವಿತೀಯವಾದದ್ದಾಗಿದೆ.

ಬೈಬಲು ಅದ್ವಿತೀಯವಾದದ್ದೂ ಅಧಿಕೃತವಾದದ್ದೂ ಆಗಿದೆ ಎಂಬುದರ ಭರವಸೆ ಜನರಿಗೆ ಅಗತ್ಯವಾದದ್ದರಿಂದ, ದೇವರು ಅದನ್ನು, ''ದೇವರ ವಾಕ್ಯ'' ವಾಗಿದೆಯೆಂದು ಪ್ರತಿಪಾದಿಸಿ ಅದಕ್ಕೆ ಅನೇಕ ಮುದ್ರೆಗಳಿಂದ ಮುದ್ರಿಸಿದ್ದಾನೆ. ಪರಿಶುದ್ಧ ಬರಹಗಳ ಪುಟಗಳಲ್ಲಿ ಮತ್ತು ಲೌಕಿಕ ಚರಿತ್ರೆಯ ದಾಖಲೆಗಳಿಂದಲೂ ಸಹ, ಯತಾರ್ಥವಾದ ಸಂಶೋಧಕನು, ''ಎಲ್ಲಾ ಪರಿಶುದ್ಧ ಬರಹವು ದೇವರಿಂದ ಪ್ರೇರೇಪಿಸಲ್ಪಟ್ಟಿದೆ'' (2 ತಿಮೊಥೆ 3:16) ಎಂಬ ಸಂಗತಿಯನ್ನು ಪ್ರತಿಪಾದಿಸಲು ವಿಪುಲವಾದ ಪುರಾವೆಯನ್ನು ಕಂಡುಕೊಳ್ಳುವನು.

ಬೈಬಲು ಒಬ್ಬನೇ ಬರಹಗಾರನಿಂದ ಬರೆಯಲ್ಪಟ್ಟದ್ದರೆ, ಅದರ ಮುಖ್ಯ ಪ್ರಸಾಪವು ಕ್ರಮವಾಗಿಯೂ ಪ್ರಗತಿಪರ ರೀತಿಯಲ್ಲಿಯೂ ಬೆಳೆಯುವದನ್ನು ಕಂಡುಕೊಳ್ಳುವದರಲ್ಲಿ ನಾವು ಆಶ್ಚರ್ಯಪಡುತ್ತಿರಲಿಲ್ಲ. ಆದರೆ ಪುಸ್ತಕಗಳ ಪುಸ್ತಕವು ಒಬ್ಬನೇ ವ್ಯಕ್ತಿಯಿಂದ ಬರೆಯಲ್ಪಟ್ಟಿರುವದಿಲ್ಲ, ಆದರೆ ಅನೇಕ ಭಿನ್ನವಾದ ಗ್ರಂಥಕರ್ತ ರಿಂದ, ಭಿನ್ನವಾದ ಸಂಸ್ಕೃತಿಗಳಿಂದ ಹಲವಾರು ಶತಮಾನಗಳ ಅವಧಿಯಲ್ಲಿ ಬರೆಯಲ್ಪಟ್ಟಿದೆ; ಅದಾಗ್ಯೂ ಅದು ದೇವರ ಬಗೆಗಿನ ಸತ್ಯದ ಏಕರೂಪದ, ಕ್ರಮವಾದ ಮತ್ತು ಅದ್ವಿತೀಯ ಬೆಳವಣಿಗೆಯನ್ನು ಒಳಗೊಂಡಿರುತ್ತದೆ. ಅದು ತನ್ನಲ್ಲಿಯೇ ಅತೀ ಹೆಚ್ಚು ಗಮನಾರ್ಹವಾದದ್ದು, ಹೆಚ್ಚು ಗಮನಾರ್ಹವಾದದ್ದೂ - ಅದ್ಭುತಕರವಾದದ್ದೂ ಆಗಿರುತ್ತದೆ.

ಅದಲ್ಲದೇ, ಭೂಗರ್ಭಶಾಸ್ತ್ರ ಸಂಶೋಧಕರು ಸತತವಾಗಿ ಹೊಸ ಪುರಾವೆಯನ್ನು ಆಗಿದು ತೆಗೆಯುತ್ತಿರುವರು. ಅದು ಬೈಬಲ್ ದಾಖಲೆಯ ಐತಿಹಾಸಿಕ ಸ್ಪಷ್ಟತೆಯನ್ನು ದೃಢಪಡಿಸುತ್ತಿರುವುದು. ಕಲ್ಪನೆಗಳೆಂದು ಒಮ್ಮೆ ಅಪಹಾಸ್ಯಕ್ಕೊಳಗಾದ ಘಟನೆಗಳು ಈಗ ಆಧುನಿಕ ಭೂಗರ್ಭ ಶಾಸ್ತ್ರ ಸಂಶೋಧಕರ ಸಲಿಕೆಗಳಿಂದ ನಿಜವಾದವುಗಳೆಂದು ಸಿದ್ಧಪಡಿಸಲ್ಪಟ್ಟಿವೆ.★

---

★ ಉದಾಹರಣೆಯಾಗಿ, 1868ರಲ್ಲಿ ಕ್ಲೈನ ಎಂಬ ಹೆಸರಿನ ಜರ್ಮನ್ ಯಾತ್ರಿಕನು ಮೋವಾಬ್ ಪುರಾತನ ನಾಡನ್ನು ಸಂದರ್ಶಿಸಿದನು. ಅದು ಇಂದು ''ಜೋರ್ಡನ್'' ಎಂದು ಕರೆಯಲ್ಪಡುತ್ತದೆ. ಅಲ್ಲಿ ಅವನು ಒಂದು ಕಲ್ಲಿನ ಸ್ಮಾರಕವನ್ನು ಸಂಶೋಧನೆ ಮಾಡಿದನು. ಅದರ ಮೇಲೆ ಮೋವಾಬಿನ ಅರಸ ಮೇಶಾನಿಂದ ಬರೆಯಲ್ಪಟ್ಟ ಮೂವತ್ನಾಲ್ಕು ಸಾಲುಗಳಿದ್ದವು. ಈ ಬರಹವು ಅವನು ಇಸ್ರೇಯೇಲಿಗೆ ವಿರುದ್ಧವಾಗಿ ಮಾಡಿದ ದಾಳಿಯ ಸ್ಮರಣೆಗಾಗಿ ದಾಖಲೆ ಮಾಡಲ್ಪಟ್ಟಿತ್ತು. 2 ಅರಸು 1ರಲ್ಲಿ ಮತ್ತು ಈ ಸ್ಮಾರಕದ ಮೇಲೆ ಒಮ್ರಿ ಮತ್ತು ಆಹಾಬ ಇಬ್ಬರ ಹೆಸರುಗಳೂ ನಮೂದಿಸಲ್ಪಟ್ಟಿವೆ. ಈ ಇಬ್ಬರ ವಿಷಯದಲ್ಲಿಯೂ ಈ ಇಸ್ರೆಯೇಲ್ಯ ಅರಸರು ಮೋವಾಬಿನ ಮೇಲೆ ದಬ್ಬಾಳಿಕೆ ಮಾಡಿದವರು ಆಗಿದ್ದರೆಂದು ನಮಗೆ ಹೇಳಲ್ಪಟ್ಟಿದೆ. ಅನೇಕ ಅಂಥ ಆಧುನಿಕ ಸಂಶೋಧನೆಗಳು ಬೈಬಲ ದಾಖಲೆಯ ಐತಿಹಾಸಿಕ ಸ್ಪಷ್ಟತೆಯನ್ನು ದೃಢೀಕರಿಸುತ್ತವೆ.

## ಹೌದು, ಬೈಬಲು ನಿಜವಾಗಿಯೂ ಎಲ್ಲಾ ಜನರಿಗೆ ದೇವರ ಸಂದೇಶವನ್ನು ಒಳಗೊಂಡಿರುವ ದೇವರ ಪುಸ್ತಕವಾಗಿದೆ.

ಬೈಬಲು ದೇವರ ಪುಸ್ತಕವಾಗಿದೆ ಎಂಬ ಸಂಗತಿಯಿದ್ದರೂ, ಕೆಲವು ಜನರು ಅದನ್ನು ಓದುವದನ್ನು ಬಿಟ್ಟು ಬಿಟ್ಟಿದ್ದಾರೆ. ಜಗತ್ತು ಎರಡು ಗುಂಪುಗಳಲ್ಲಿ ವಿಭಾಗವಾಗಿದೆಯೆಂದು ಭ್ರಮೆಯಿಂದ ಹಾಗೆ ಮಾಡುತ್ತಿದ್ದಾರೆ ಘಟನೆಗಳನ್ನು ಎದುರಿಸುವ ವಿಜ್ಞಾನಿಗಳ ಮತ್ತು ಅವುಗಳ ಕಡೆಗೆ ತಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳುವ ನಿಜವಾದ ವಿಶ್ವಾಸಿಗಳು. ಒಬ್ಬ ನಿಜವಾದ ವಿಜ್ಞಾನಿಯು ನಿಜವಾದ ವಿಶ್ವಾಸಿ ಯಾಗಿರಲಾರನು ಎಂದು ಅನ್ವಯಿಸಿದ್ದಾರೆ. ಹಾಗಿದ್ದರೂ ಇಂದು ಅನೇಕ ಮಹಾವಿಜ್ಞಾನಿಗಳು ಈ ಕಲ್ಪನೆಯನ್ನು ಅಲ್ಲಗಳೆಯುತ್ತಾರೆ. ಬೈಬಲು ವೈಜ್ಞಾನಿಕ ಪಠ್ಯ ಪುಸ್ತಕವಾಗಿರದಿದ್ದರೂ ಅದು ಈ ಕ್ಷೇತ್ರಗಳನ್ನು ಸಂಧಿಸುವಾಗ, ಸ್ಥಾಪಿಸಲ್ಪಟ್ಟ ವೈಜ್ಞಾನಿಕ ಸತ್ಯಾಂಶಗಳಿಂದ ಎಂದೂ ತಿರಸ್ಕರಿಸಲ್ಪಟ್ಟಿರುವದಿಲ್ಲ. ಅದರ ಬದಲು, ತನ್ನ ಉದ್ದೇಶ ಮತ್ತು ರಚನೆಯಲ್ಲಿ ಬೈಬಲು ವಿಜ್ಞಾನದ ಮಿತಿಗಳನ್ನು ದಾಟಿ ಎಷ್ಟೋ ಹಿಂದೆ ಹೋಗುತ್ತದೆ.

ಉದಾಹರಣೆಯಾಗಿ, ವಿಜ್ಞಾನವು ನಾವು ಯಾಕೆ ಈ ಭೂಗ್ರಹದಲ್ಲಿ ಇದ್ದೇವೆ ಎಂಬುದನ್ನಾಗಲೀ, ಇಲ್ಲವೇ ಈ ಭೂಲೋಕದಲ್ಲಿ ನಮ್ಮ ಜೀವನ ತೀರಿದ ನಂತರ ನಾವು ಎಲ್ಲಿಗೆ ಹೋಗುತ್ತೇವೆ ಎಂಬುದನ್ನಾಗಲೀ ವಿವರಿಸಲಾರದು. ಜೀವನವು ಏನಾಗಿದೆ ಎಂಬುದರ ಬಗೆಗಾಗಲೀ ಇಲ್ಲವೆ ಒಬ್ಬ ವ್ಯಕ್ತಿಯ ನಿಜವಾದ ಮೌಲ್ಯವನ್ನಾಗಲೀ ವಿಜ್ಞಾನವು ಹೇಳಲಾರದು. ಒಬ್ಬ ಮನುಷ್ಯನು ಎಷ್ಟೇ ಜಾಣನಾಗಿರಲೀ (ಇಲ್ಲವೇ ಸರಳ ವ್ಯಕ್ತಿಯಾಗಿರಲಿ) ದೇವರ ಬಗ್ಗೆ ಸತ್ಯವನ್ನು ತಿಳಿದುಕೊಳ್ಳುವದಕ್ಕಾಗಿ ಪ್ರತಿಯೊಬ್ಬನಿಗೆ ದೈವೀಯ ಸಹಾಯದ ಅಗತ್ಯತೆಯಿರುವುದು. ಆ ಕಾರಣದಿಂದಲೇ ನಿಶ್ಚಯವಾಗಿ, ಫ್ರೆಂಚ ತತ್ವಜ್ಞಾನಿ ಮತ್ತು ಗಣಿತ ಶಾಸ್ತ್ರ ಪಂಡಿತನಾದ ಬ್ಲೇಜ ಪಾಸ್ಕಲ್‌ನು ಹೀಗೆ ಹೇಳಿದ್ದಾನೆ : ''ವಿವೇಚನಾ ಶಕ್ತಿಯ ಅತೀ ಮಹತ್ವದ ಸಾಧನೆಯು ವಿವೇಚನಾ ಶಕ್ತಿಗೆ ಒಂದು ಮಿತಿಯಿದೆ ಎಂದು ನಮಗೆ ತೋರಿಸುವುದು ಆಗಿದೆ'' ದೇವರ

ಪುಸ್ತಕವಲ್ಲದಿದ್ದರೆ, ನಾವೆಂದೂ ಜೀವನದ ಅತೀ ಮಹತ್ವದ ಪ್ರಶ್ನೆಗಳಿಗೆ ನಂಬಲರ್ಹವಾದ ಉತ್ತರಗಳನ್ನು ಹೊಂದಿಕೊಳ್ಳುತ್ತಿರಲಿಲ್ಲ.

## ಬೈಬಲ ದೇವರ ಪುಸ್ತಕವಾಗಿದೆ ಎಂಬುದಕ್ಕೆ ಈಗ ಎರಡು ಬಲವಾದ ಗುರುತುಗಳನ್ನು ಆಲೋಚಿಸೋಣ

ಮೊದಲನೆಯದು ಅದರ ಪ್ರವಾದಿಕ ಮುಂತಿಳಿಸುವಿಕೆಗಳ ಅಗ್ರಾಹ್ಯವಾದ ಖಚಿತತೆ ಯಾಗಿದೆ. ಎರಡನೆಯದು, ಅದರ ಸಂದೇಶವನ್ನು ಗಂಭೀರವಾಗಿ ತೆಗೆದುಕೊಂಡ ಜನರ ಜೀವಿತಗಳಲ್ಲಿ ಅದರ ಬಲವಾದ ಮತ್ತು ಸಕಾರಾತ್ಮಕವಾದ ಪ್ರಭಾವವನ್ನು ಪ್ರಯೋಗಿಸಿದ್ದು.

## ಬೈಬಲಿನ ಪ್ರವಾದಿಕ ಖಚಿತತೆ

ನಮ್ಮಲ್ಲಿ ಹೆಚ್ಚಾದವರಿಗೆ ಭವಿಷ್ಯದಲ್ಲಿ ಏನು ಇದೆ ಎಂಬುದನ್ನು ತಿಳಿದುಕೊಳ್ಳುವ ಅತ್ಯಾಶೆ ಇರುತ್ತದೆ. ಭವಿಷ್ಯದ ಅತೀ ಮಹತ್ವದ ಕೆಲವು ಘಟನೆಗಳನ್ನು ಆಶ್ಚರ್ಯ ಕರವಾದ ರೀತಿಯಲ್ಲಿ ಬೈಬಲು ಪ್ರಕಟಿಸುತ್ತದೆ. ''ಅಷ್ಟು ನಿಶ್ಚಿತತೆಯುಳ್ಳವರಾಗಿ ನೀವು ಹೇಗೆ ಇರಬಹುದು ?'' ಎಂದು ನೀವು ಕೇಳಬಹುದು.

ಈ ಪ್ರಶ್ನೆಗೆ ಉತ್ತರ ಕೊಡಲು, ನೀವು ಮೊದಲೆಂದೂ ಹೋಗಿರದ ಒಂದು ಪ್ರದೇಶದಲ್ಲಿ ರಜಾ ಕಾಲದ ಒಂದು ನಡಿಗೆಯ ಕಾರ್ಯಕ್ರಮ ಇಟ್ಟುಕೊಂಡಿದ್ದೀರೆಂದು ಕಲ್ಪಿಸಿಕೊಳ್ಳಿರಿ. ನಿಮಗೆ ಕೇವಲ ಒಂದೇ ಮಾರ್ಗದರ್ಶಿಯಾಗಿ ನಿಮ್ಮ ಕೈಯಲ್ಲಿ ಒಂದು ನಕಾಶೆಯು ಇರುವುದು. ಈ ನಕಾಶೆಯು ಸಂಪೂರ್ಣವಾಗಿ ನಂಬಲರ್ಹವಾದದ್ದೆಂದು ನಿನ್ನೆ ಕಂಡುಕೊಂಡಿರುವಿರಿ. ಅದರಲ್ಲಿ ತೋರಿಸಲ್ಪಟ್ಟಂತೆ ಒಂದು ನದಿಯನ್ನು ಮತ್ತು ನಿನ್ನೆ ರಾತ್ರಿ ನೀವು ಮಲಗಿದ ಗ್ರಾಮವನ್ನು ಕಂಡುಕೊಂಡಿರಿ. ಇಂದು ನೀವು ಹೊಸ ಮಾರ್ಗವನ್ನು ತೆಗೆದುಕೊಳ್ಳಲು ನಿರ್ಣಯಿಸಿಕೊಳ್ಳಬೇಕು. ನಿಮ್ಮ ಮುಂದೆ ಅಪರಿಚಿತವಾದ ಕ್ಷೇತ್ರವಿರುತ್ತದೆ, ಆದರೆ ನಿಮ್ಮ ನಕಾಶೆಯು ನೀವು ಎಡಗಡೆಗೆ ತಿರುಗಿಕೊಂಡರೆ ನೀವು ವಿಶಾಲವಾದ ಸರೋವರವನ್ನು ಕಂಡುಕೊಳ್ಳುವ ಕಾಡಿನ

ಮುಖಾಂತರ ಹೋಗುವಿರಿ ಎಂಬುದನ್ನು ತೋರಿಸುತ್ತದೆ. ನೀವು ಈಗ ಆ ಸರೋವರವನ್ನು ನೋಡಲು ಬಯಸುತ್ತೀರಿ, ಹಾಗಾದರೆ ನೀವೇನು ಮಾಡುವಿರಿ? ನಕಾಶೆಯ ನಿರ್ದೇಶನಗಳನ್ನು ಅನುಸರಿಸಿ ಎಡಗಡೆಗೆ ತಿರುಗಿಕೊಳ್ಳುವಿರಿ ಎಂದು ನಾನು ಯೋಚಿಸುತ್ತೇನೆ. ಇದನ್ನು ಮಾಡುವದರಲ್ಲಿ ನಿಮ್ಮ ಭರವಸೆಗಾಗಿ ಕಾರಣವು ನಿನ್ನೆಯ ದಿನ ನಿಮ್ಮ ನಕಾಶೆಯು ಅರಿಯದೇ ಇದ್ದ ಸ್ಥಳದಲ್ಲಿ ನಿಮಗೆ ಸರಿಯಾದ ಮಾರ್ಗದರ್ಶಿಯಾಗಿ. ರುಜುವಾತು ಪಡಿಸಲ್ಪಟ್ಟಿದ್ದು. ನೀವು ಅಲ್ಲಿಗೆ ತಲುಪುವ ಮೊದಲೇ ನೀವು ಏನನ್ನು ಕಂಡುಕೊಳ್ಳುವಿರಿ ಎಂದು ಅದು ನಿಮಗೆ ಹೇಳಿತು ಮತ್ತು ಅದು ಸರಿಯಾಗಿತ್ತು.

ಬೈಬಲು ದೇವರ ವಾಕ್ಯವಾಗಿದೆ ಎಂಬುದಕ್ಕೆ ಅತೀ ಮಹತ್ವದ ರುಜುವಾತುಗಳಲ್ಲಿ ಇನ್ನೊಂದು ಅದು ಭವಿಷ್ಯದ ಘಟನೆಗಳ ಪ್ರವಾದನೆಗಳನ್ನು ಹೇಳುವಲ್ಲಿ ಖಚಿತತೆಯಿದ್ದದ್ದು. ಅದರ ಪುಟಗಳಲ್ಲಿ ಅನೇಕ ಪ್ರವಾದನೆಗಳು, ಇಂದಿನ ದೃಷ್ಟಿಕೋನದಿಂದ, ನೂರಾರು ವರ್ಷಗಳ ಹಿಂದೆ ಮುಂತಿಳಿಸಲ್ಪಟ್ಟಂತೆಯೇ ಸರಿಯಾಗಿ ನೆರವೇರಿವೆರಿತು ಎಂದು ನಾವು ಸ್ಪಷ್ಟವಾಗಿ ತಿಳಿದುಕೊಂಡಿರುತ್ತೇವೆ.

ಈ ಪ್ರವಾದನೆಗಳು ಭೂಲೋಕದ ಎಲ್ಲಾ ಜನಾಂಗಗಳನ್ನು ಹಾಗೆಯೇ ಇಸ್ರೆಯೇಲ ಮತ್ತು ಮಧ್ಯ ಪ್ರಾಚ್ಯದ ಬಗ್ಗೆ ಬಹಳ ಸ್ಪಷ್ಟವಾದವಿವರಣೆಗಳನ್ನು ಒಳಗೊಂಡು ಅಪೂರ್ವವಾದ ವ್ಯಾಪ್ತಿಯನ್ನು ಒಳಗೊಂಡಿರುತ್ತವೆ. ಇನ್ನೂ ಹೆಚ್ಚು ಮಹತ್ವದ್ದು ಮೆಸ್ಸೀಯನ ಬರೋಣಕ್ಕೆ ಸಂಬಂಧಿಸಿದೆ. ನೂರಾರು ಮುಂತಿಳಿಸುವಿಕೆಗಳು ಇರುವುದು. ಈ ಮೆಸ್ಸೀಯನ ಪ್ರವಾದನೆಗಳಲ್ಲಿ ಅನೇಕವುಗಳು ಈಗ ಚರಿತ್ರೆ ಯಾಗಿರುವದರಿಂದ, ಮೆಸ್ಸೀಯನ ಜನನ, ಜೀವನ ಮತ್ತು ಮರಣದ ಬಗ್ಗೆ ಅವು ವಿವರಣೆಗಳಲ್ಲಿ ಎಷ್ಟು ಖಚಿತವಾದವುಗಳಾಗಿರುವವು ಎಂಬುದನ್ನು ನಾವು ಗುರುತಿಸುತ್ತೇವೆ.

ಅಂಥ ಸ್ಪಷ್ಟವಾದ ದಾಖಲೆಯ ಆಧಾರದ ಮೇಲೆ, ಭವಿಷ್ಯವು ಬೈಬಲ್ ಮುಂತಿಳಿಸಿದಂತೆಯೇ ಖಚಿತವಾಗಿ ತೆರೆದುಕೊಳ್ಳುತ್ತದೆ ಎಂದು ಕಲ್ಪಿಸುವುದು ಯೋಗ್ಯವಾದದ್ದು (ಮತ್ತು ಸರಿಯಾದದ್ದು ಆಗಿರುತ್ತದೆ) ಮತ್ತು ಪ್ರತಿ ವರ್ಷ,

ಬೈಬಲಿನ ಪ್ರವಾದಿಕ ಖಚಿತತೆಯ ಪುರಾವೆಯು ನಮ್ಮ ಕಣ್ಣುಗಳ ಮುಂದೆಯೇ ನೆರವೇರುತ್ತಲಿದೆ. ಬೈಬಲನ್ನು ಓದುವುದು, ನಾಳೆಯ ವೃತ್ತ ಪ್ರತಿಕೆಯನ್ನು ಓದುವಂತಿರುತ್ತದೆ.

ಡಾ॥ ವಿಲ್ಬರ ಸ್ಮಿತ್ ಅವರು ಬೈಬಲಿನ ಆಜೀವ ವಿದ್ಯಾರ್ಥಿಯಾಗಿದ್ದರು. ಬೈಬಲ ಪ್ರವಾದನೆಯ ವಿವರವಾದ ಖಚಿತತೆಯನ್ನು ತೋರಿಸುವದರಲ್ಲಿ ಪ್ರತ್ಯೇಕವಾದ ಆಸಕ್ತಿ ವಹಿಸಿದ್ದರು. ತಮ್ಮಲ್ಲಿ ಸತ್ಯವಿದೆಯೆಂದು ಹೇಳಿಕೊಳ್ಳುವ ಇತರರ ಬೋಧನೆಗೆ ವಿರುದ್ಧವಾಗಿ ಮೆಸ್ಸೀಯನನ್ನು ಕುರಿತು ಮಾತಾಡುವ ಹಳೇ ಒಡಂಬಡಿಕೆಯ ಪ್ರವಾದನೆಗಳನ್ನು ವ್ಯತ್ಯಾಸಮಾಡಿ ತೋರಿಸುತ್ತ, ವಿಲ್ಬರ ಸ್ಮಿತ್ ಅವರು ಹೀಗೆ ಗಮನಿಸಿದರು: ''ಮೊಹಮ್ಮದನು ಜನಿಸುವ ನೂರಾರು ವರ್ಷಗಳ ಮೊದಲು ಬರಲಿಕ್ಕಿದ್ದ ಮೊಹಮ್ಮದನ ಬಗ್ಗೆ ಮೊಹಮ್ಮದಾನಿಸಮ್ ಯಾವುದೇ ಪ್ರವಾದನೆಗಳನ್ನು ತೋರಿಸಲಾರದು. ಯಾವುದೇ ಧರ್ಮಪಂಥದ ಸ್ಥಾಪಕರು ಅದರ ಕಾಣುವಿಕೆಯ ಬಗ್ಗೆ ಸ್ಪಷ್ಟವಾಗಿ ಮುಂತಿಳಿಸುವ ಯಾವುದೇ ಪುರಾತನ ಪತ್ರವನ್ನು ಸರಿಯಾಗಿ ಗುರುತಿಸಲಾರರು''.

''ಪ್ರವಾದನೆಗಳು'' ಎಂದು ಕರೆಯಲ್ಪಡುವಂಥ ಕೆಲವೊಂದು ಪ್ರವಾದನೆಗಳಿದ್ದು ಅವು ಸ್ಪಷವಾಗಿರುವದಕ್ಕಾಗಿ ಹೆಚ್ಚು ಪ್ರೇರೇಪಣೆ ಅಗತ್ಯವಿಲ್ಲವೆಂಬುದನ್ನು ನಾವು ಸ್ವೀಕರಿಸತಕ್ಕದ್ದು.

ಕಂಪ್ಯೂಟರುಗಳ ಸಹಾಯದಿಂದ, ಚುನಾವಣೆಯ ದಿನದ ಸಂದರ್ಶನಗಳ ಮತ್ತು ಐತಿಹಾಸಿಕ ಮಾಹಿತಿಯಿಂದ, ಮತ ಚಲಾವಣೆ ಮುಗಿಯುವದಕ್ಕಿಂತ ಮೊದಲೇ ಚುನಾವಣೆಯಲ್ಲಿ ಜಯ ಹೊಂದುವವನ ಬಗ್ಗೆ ಕೆಲವು ಸಲ ಮುಂತಿಳಿಸಬಹುದು, ಎಲ್ಲಾ ಅಂಕಿ ಸಂಖ್ಯೆಗಳು ಅವರಿಗೆ ಲಭ್ಯವಾಗಿದ್ದು, ಸಮಯಕ್ಕಿಂತ ಮೊದಲೇ ಜಯಶಾಲಿ ಯಾಗುವವನ ಬಗ್ಗೆ ಹೇಳುವುದರಲ್ಲಿ ಯಾವ ವಿಶೇಷತೆಯೂ ಇರುವದಿಲ್ಲ. ಹೀಗಿದ್ದರೂ ಕೆಲವು ಸಲ ಅವರು ತಪ್ಪುತ್ತಾರೆ.

ಹೀಗಿದ್ದರೂ, ವರ್ತಮಾನ ವರದಿಗಾರನಿಗೆ ಇಂದಿಗೆ ಇಪ್ಪತ್ತು ಇಲ್ಲವೇ ಐವತ್ತು ವರ್ಷಗಳ ನಂತರ ಚುನಾವಣೆಗೆ ನಿಲ್ಲುವ ಅಭ್ಯರ್ಥಿಗಳನ್ನು

ಗುರುತಿಸುವಂತೆ ಪ್ರಯತ್ನಿಸಲು ಕೇಳಿರಿ. ಯಾರು ಗೆಲ್ಲುವರು, ಜಯಶಾಲಿಯಾಗುವವರು ಎಲ್ಲಿ ಯಾವ ಸ್ಥಳದಲ್ಲಿ ಹುಟ್ಟುವರು, ಅವರ ಭವಿಷ್ಯದ ಶೈಲಿಯಾವುದಿರುವುದು, ಅವರ ಮರಣದ ಸುತ್ತ ಇರುವ ಪರಿಸ್ಥಿತಿಗಳ ಬಗ್ಗೆ ಅವನನ್ನು ಪ್ರಶ್ನಿಸಿರಿ. ಸಾವಿರ ವರ್ಷಗಳ ನಂತರ ಮಧ್ಯ ಪ್ರಾಚ್ಯದಲ್ಲಿ ಏನು ಸಂಭವಿಸುತ್ತದೆ ಎಂಬುದರ ಬಗ್ಗೆ ನಂಬಲರ್ಹ ಮಾಹಿತಿಯನ್ನು ಅವನಿಂದ ಕೇಳಿರಿ. ದೀರ್ಘಸಮಯದ ಅವಧಿಯಲ್ಲಿ ನಾಶವಾಗಿ ಹೋಗುವ ಪಟ್ಟಣಗಳ ಬಗ್ಗೆ ಅವನನ್ನು ಕೇಳಿರಿ.

ನಿಶ್ಚಯವಾಗಿ, ಪ್ರತಿಯೊಂದು ಸಲ ಒಂದು ಹೆಚ್ಚಿನ ಮುಂತಿಳಿಸುವಿಕೆಯ ವರದಿಗಾರನಿಂದ ಕೇಳಲ್ಪಟ್ಟಾಗ ಅವನ ಪ್ರವಾದನೆಯಲ್ಲಿ ನಿಶ್ಚಿತತೆ ಇರುವದರ ಬಗ್ಗೆ ಅಗ್ರಾಹ್ಯವಾದ ವ್ಯತ್ಯಾಸಗಳು ಬಹಳ ಹೆಚ್ಚಾಗುತ್ತವೆ. ನಿತ್ಯತ್ವದ ದೇವರು ಭವಿಷ್ಯದ ಬಗ್ಗೆ ಅವನಿಗೆ ಹೇಳದಿದ್ದರೆ ಹಾಗಾಗುತ್ತದೆ ; ಅಂಥ ವಿಷಯದಲ್ಲಿ ವರದಿಗಾರನು ಅಂತ್ಯವನ್ನು ಪ್ರಾರಂಭದಿಂದ ತಿಳಿದಿರಬೇಕೆಂದು ನಾವು ನಿರೀಕ್ಷಿಸುತ್ತೇವೆ. ಮತ್ತು ಅನೇಕ ಹೆಚ್ಚು ಜಟಿಲವಾದ ವಿವರಣೆ ಮತ್ತು ಹೆಚ್ಚು ದೀರ್ಘ ಸಮಯವನ್ನೊಳಗೊಂಡವುಗಳೊಂದಿಗೆ ನಾವು ನಮ್ಮ ವರದಿಗಾರನಿಗೆ ಸೂಚಿಸಿದಂಥ ಸಂಭವಿಸುವಿಕೆಗಳು ಬೈಬಲಿನಲ್ಲಿ ಪ್ರವಾದಿಸಲ್ಪಟ್ಟಿವೆ.

ಉದಾಹರಣೆಗಾಗಿ ಪುರಾತನ ತೂರ್ ಪಟ್ಟಣದ ಇತಿಹಾಸವು ಆ ಪಟ್ಟಣಕ್ಕೆ ಏನು ಸಂಭವಿಸುತ್ತದೆಂದು ದೇವರು ಮುಂತಿಳಿಸಿದ್ದರ ಅಗ್ರಾಹ್ಯವಾದ ನೆರವೇರುವಿಕೆಯಾಗಿದೆ.

ನೀವು ಅಷ್ಟು ಆಸಕ್ತರಾಗಿದ್ದರೆ ಮೊದಲು ಯೆಹೆಜ್ಕೆಲ 26:3-21ರಲ್ಲಿ ದಾಖಲೆಯಾದ ಪ್ರವಾದನೆಗಳನ್ನು ಓದಿರಿ ಮತ್ತು ಆಮೇಲೆ ಎನ್‌ಸೈಕ್ಲೋಪಿಡಿಯಾ ಬ್ರಿಟಿನ್ನಿಕಾ ಮತ್ತು ಇತಿಹಾಸದ ಇತರ ದಾಖಲೆಗಳ ಕಡೆಗೆ ತಿರುಗಿರಿ. ಅವೆರಡರಲ್ಲಿ ಅದೇ ಕತೆಯನ್ನು, ಮೊದಲನೆಯದನ್ನು ಪ್ರವಾದನೆಯಂತೆ ಮತ್ತು ಎರಡನೆಯದನ್ನು ಇತಿಹಾಸದಂತೆ ನೀವು ಓದುವಿರಿ.

**ಪ್ರವಾದನೆ :** ಘಟನೆಗಳು ಸಂಭವಿಸುವದಕ್ಕಿಂತ ಬಹಳ ಸಮಯದ

ಮೊದಲು, ದೇವರು ತೂರ ಪಟ್ಟಣಕ್ಕಾಗಿ ಅಲ್ಲಕಲ್ಲೋಲವಾದ ಭವಿಷ್ಯವಿರುವ ದೇವರು ಪ್ರವಾದನೆ ಹೇಳಿದನು.

ಆತನು ಹೀಗೆ ಹೇಳಿದನು :

> ''ಇಗೋ - ನಾನು ಬಹುಜನಾಂಗಗಳನ್ನು ನಿನ್ನ ಮೇಲೆ ಎಬ್ಬಿಸುವೆನು. ಅವು ತೂರಿನಪೌಳಿಗೋಡೆಯನ್ನು ಉರುಳಿಸಿ ಅದರ ಕೊತ್ತಲುಗಳನ್ನು ಕೆಡವಿ ಹಾಕುವವು ; ನಾನು ಅದರ ಮಣ್ಣನ್ನು ಕೆರೆದು ಅದನ್ನು ಗುಡಿಸಿ ಗಂಡಾಂತರ ಮಾಡುವೆನು : ಅದು ಸಮುದ್ರದ ನಡುವೆ ಬಲೆಗಳಿಗೆ ಹಾಸು ಬಂಡೆಯಾಗುವುದು.......... ನಿನ್ನ ವಿನೋದ ಭವನಗಳನ್ನು ಕಿತ್ತು ಹಾಕಿ ನಿನ್ನ ಕಲ್ಲು ಮರಮಣ್ಣುಗಳನ್ನು ಸಮುದ್ರದ ಪಾಲು ಮಾಡುವರು..... ನಾನು ನಿನ್ನನ್ನು ಬೋಳು ಬಂಡೆ ಮಾಡುವೆನು; ನೀನು ಬಲೆಗಳಿಗೆ ಹಾಸು ಬಂಡೆಯಾಗುವಿ...... ಯೆಹೋವನಾದ ನಾನೇ ಅಪ್ಪಣೆ ಕೊಟ್ಟಿದ್ದೇನೆ.....'' (ಯೆಹೆಜ್ಕೇಲ 26 :3, 4, 12, 14).

**ಇತಿಹಾಸ :** ಐತಿಹಾಸಿಕ ದಾಖಲೆಗಳನ್ನು ನೀವು ಓದುವಾಗ, ನೆಬುಕದ್ನೆಚ್ಚರನು ತೂರಿನ ಹಳೇ (ಮುಖ್ಯ ಪ್ರದೇಶ) ಪಟ್ಟಣವನ್ನು ನಾಶಪಡಿಸಿದಾಗ, ಮುಂತಿಳಿಸಲ್ಪಟ್ಟಂತೆಯೇ ಗೋಡೆಗಳನ್ನು ಕೊತ್ತಲಗಳನ್ನೂ ಕೆಡವಿಹಾಕಿದನೆಂಬುದನ್ನು ಕಂಡು ಕೊಳ್ಳುವಿರಿ ಮತ್ತು ಅನಂತರದಲ್ಲಿ ದೊಡ್ಡ ಅಲೆಕ್ಸಾಂಡರನ ಎಂಜಿನಿಯರುಗಳು ತೂರಿನ ಪುರಾತನ ಪಟ್ಟಣದ ಎಲ್ಲಾ ಪಾಳು ಬಿದ್ದವುಗಳನ್ನು ತೆಗೆದು ಹಾಕಿ ಅದನ್ನು ಬೋಳು ಬಂಡೆಯಾಗಿರುವಂತೆ ಬಿಟ್ಟರು.

ನಡುಗಡ್ಡೆ ಹೋಗುಲು ಮಾರ್ಗ ಮಾಡುವಾಗ ಪಾಳು ಬಿಟ್ಟವುಗಳನ್ನು ಸಮುದ್ರದಲ್ಲಿ ಎಸೆದಾಗ, ಅದು ಮುಂತಿಳಿಸಲ್ಪಟ್ಟಂತೆಯೇ ಆಯಿತು ; ಕಲ್ಲುಗಳು, ಕಟ್ಟಿಗೆಗಳು ಮತ್ತು ಮಣ್ಣು ಎಲ್ಲವೂ ನೀರಿನೊಳಗೆ ಎಸೆಯಲ್ಪಟ್ಟವು. ಹೌದು, ಇಂದಿನ ದಿನದ ವರೆಗೂ ಪುರಾತನ ತೂರಿನ ಬೀಳುಗಳು ಸಮುದ್ರದ

ನೀರಿನಲ್ಲಿ ಹೂಳಲ್ಪಟ್ಟಿವೆ. ಹಾಗೆ ಸಂಭವಿಸುತ್ತದೆಂದು ದೇವರು ಹೇಳಿದನು ಮತ್ತು ಅದು ಹಾಗೆಯೇ ಆಯಿತು.

ಮಧ್ಯ ಪ್ರಾಚ್ಯದಲ್ಲಿ ಇಂದು ತೂರ (Tyre) ಎಂದು ಕರೆಯಲ್ಪಡುವ ಪ್ರಸಿದ್ಧ ಪಟ್ಟಣವು ಇದ್ದರೂ, ಇದು 1291 ರಲ್ಲಿ ಅಂತಿಮವಾಗಿ ನಾಶಗೊಳಿಸಲ್ಪಟ್ಟ ಪುರಾತನ ಪಟ್ಟಣವಾಗಿರುವದಿಲ್ಲ.

ಪುರಾತನ ತೂರಿನ ಸ್ಥಳವನ್ನು ನೀವು ಸಂದರ್ಶಿಸಲು ಶಕ್ತರಾಗಿದ್ದರೆ, ಈ ಪ್ರವಾದನೆಗಳು ಇನ್ನೂ ಹೆಚ್ಚು ಅಗ್ರಾಹ್ಯವಾಗಿ ನೆರವೇರಿದ್ದನ್ನು ನೀವು ಕಂಡುಕೊಳ್ಳುವಿರಿ. ಅಲ್ಲಿ ಒಂದು ಚಿಕ್ಕ ಗ್ರಾಮದಲ್ಲಿ ಕೆಲವು ಬೆಸ್ತರ ಗುಡಿಸಲುಗಳು ಒಂದು ಕಡೆ ಇರುವದನ್ನು ನೋಡುವಿರಿ, ಮೀನು ಹಿಡಿಯಲು ದೋಣಿಗಳು ಸಮುದ್ರದೊಳಗೆ ಹೋಗುವದನ್ನು ಮತ್ತು ಮೀನು ಹಿಡಿಯುವ ಬಲೆಗಳು ಬೋಳು ಬಂಡೆಗಳ ಮೇಲೆ ಒಣಗಲಿಕ್ಕೆ ಹಾಕಲ್ಪಡುವದನ್ನೂ ಕಾಣುವಿರಿ. ಪುರಾತನ ತೂರ್ ಪಟ್ಟಣದಂಥ ಅಭಿವೃದ್ಧಿಗೊಂಡ ವ್ಯಾಪಾರದ ಪಟ್ಟಣದಂತೆ ಇದ್ದಂಥದ್ದಕ್ಕಾಗಿ ಮಾನವ ಬುದ್ಧಿವಂತಿಕೆಯು ಅಸಾಧ್ಯವಾದ ಭವಿಷ್ಯವನ್ನು ಹೇಗೆ ಮುಂತಿಳಿಸಿದ್ದಿರಬೇಕು ?

ಪೀಟರ ಸ್ಟೋನರ ಎಂಬವರು ಪುರಾತನ ತೂರ್‌ದ ಬಗ್ಗೆ ಐತಿಹಾಸಿಕ ದಾಖಲೆಗಳೊಂದಿಗೆ ಏಳು ಪ್ರವಾದನೆಗಳನ್ನು ಹೋಲಿಸಿದ್ದಾರೆ. ಯೆಹೆಜ್ಕೇಲನ ಪ್ರವಾದನೆಗಳನ್ನು ನೆರವೇರಲ್ಪಡುವ ಸಾಧ್ಯತೆಯಲ್ಲಿ ಲೆಕ್ಕ ಹಾಕಿದ ನಂತರ ಅವರು ಹೀಗೆ ಹೇಳಿದ್ದಾರೆ :

‘‘ಯೆಹೆಜ್ಕೇಲನು ತನ್ನ ದಿನದಲ್ಲಿ ತೂರಿನ ಕಡೆಗೆ ನೋಡಿದ್ದರೆ ಮತ್ತು ಮಾನವ ಜ್ಞಾನದಿಂದ ಈ ಏಳು ಮುಂತಿಳಿಸುವಿಕೆಗಳನ್ನು ಹೇಳಿದ್ದರೆ, ಈ ಲೆಕ್ಕಾಚಾರಗಳಂತೆ ಅದೆಲ್ಲವೂ ಸತ್ಯವಾಗುವ ಅವಕಾಶವು 75,000,000 ದಲ್ಲಿ ಒಂದಾಗಿರುತ್ತಿತ್ತು. ಅತ್ಯಲ್ಪ ವಿವರಗಳೊಂದಿಗೆ ಅವೆಲ್ಲವು ನಿಜವಾದವು’’.

ಈಗ ಶಿಶುವಿನ ಜನನವನ್ನು ಕುರಿತು ಮುಂತಿಳಿಸುವಿಕೆಗಳಲ್ಲಿ ಒಂದನ್ನು ಮಾತ್ರ ಈಗ ನೋಡೋಣ.

ಸರಕಾರಿ ನಿವೃತ್ತ ಸುಂಕದ ಅಧಿಕಾರಿ, ಮತ್ತಾಯನು, ಯೇಸುವು ಜನಿಸಿದಾಗ ನೆರವೇರಿದ ನಾಲ್ಕು ಮಹತ್ವದ ಪ್ರವಾದನೆಗಳನ್ನು ಜ್ಞಾಪಿಸಿದನು. ಅವುಗಳಲ್ಲಿ ಒಂದರಲ್ಲಿ, ಮತ್ತಾಯನು ಪ್ರವಾದಿ ಮೀಕನನ್ನು ಉಲ್ಲೇಖಿಸಿದನು. ಅವನು ತನ್ನ ದಿನದಲ್ಲಿಯ ದುಷ್ಟ ಆಡಳಿತಗಾರರ ವಿರುದ್ಧವಾಗಿ ಬಹಿರಂಗವಾಗಿ ಗದರಿಸಿದ್ದನು. ಮೀಕನು ಜೀವಿಸಿದ್ದಾಗ ಅವನ ದೇಶಕ್ಕೆ ಯತಾರ್ಥವಾದ ನಾಯಕತ್ವದ ಅಧಿಕಾರದ ಕೊರತೆಯಿದ್ದುದ್ದರಿಂದ ಅವನ ಹೃದಯವು ಕುಗ್ಗಿ ಹೋಗಿತ್ತು. ಹಾಗಿದ್ದರೂ, ಒಂದು ದಿನ ಆಳುವಾತನು ಜನಿಸುವನು ಎಂದು ದೇವರು ತೋರಿಸಿದಾಗ ಮೀಕನು ಹೆಚ್ಚು ಪ್ರಕಾಶಮಾನವಾದ ಭವಿಷ್ಯವನ್ನು ನೋಡಿದನು. ಬರಲಿಕ್ಕಿದ್ದ ನಾಯಕನ ನಿಶ್ಚಿತವಾದ ಜನನದ ಸ್ಥಳವನ್ನು ಮುಂತಿಳಿಸಿದನು.

> ''ಎಫ್ರಾತದ ಬೇತ್ಲಹೇಮೇ, ನೀನು ಯೆಹೂದದ ಗ್ರಾಮಗಳಲ್ಲಿ ಚಿಕ್ಕದಾಗಿದ್ದರೂ ಇಸ್ರೇಯೇಲನು ಆಳತಕ್ಕವನು ನಿನ್ನೊಳಗಿಂದ ನನಗಾಗಿ ಹೊರಡುವನು; ಆತನ ಹೊರಡೋಣದ ಮೂಲವು ಪುರಾತನವೂ ಅನಾದಿಯೂ ಆದದ್ದು'' (ಮೀಕ 5:2)

ಇಸ್ರೆಯೇಲಿನಲ್ಲಿ ಅಗತ್ಯವಾಗಿದ್ದ ಆಳುವಾತನು ಎಫ್ರಾತದ ಬೇತ್ಲೆಹೇಮಿನಲ್ಲಿ ಜನಿಸುವನು ಎಂಬುದನ್ನು ದೇವರು ಪ್ರಕಟಿಸಿದನು.

ಮೀಕನು ಪ್ರವಾದಿಸಿದಂತೆಯೇ, ಯೇಸುವು ತನ್ನ ಕುಟುಂಬದ ಮನೆಯ ನಜರೇತ ಪಟ್ಟಣದಲ್ಲಿ ಅಲ್ಲ, ಆದರೆ ಎಫ್ರಾತದ ಬೇತ್ಲೆಹೇಮಿನಲ್ಲಿ ಜನಿಸಿದನು ; ರೋಮನ್ ಚಕ್ರವರ್ತಿಯ ಆಜ್ಞೆಯ ಕಾರಣದಿಂದ ಅಲ್ಲಿ ಜನಿಸಿದನು. ಅದು ಖಾನೇಷುಮಾರಿಯ ಸಮಯವಾಗಿತ್ತು ಮತ್ತು ಆತನ ತಂದೆ ತಾಯಿಗಳು ಸಾಮ್ರಾಟನ ಆಜ್ಞೆಗೆ ವಿಧೇಯರಾಗುತ್ತಿದ್ದರು. ಅದಕ್ಕನುಗುಣವಾಗಿ, ಅವರು ಬೇತ್ಲೆಹೆಮಿಗೆ ಹೋಗಲು ಮನೆಯನ್ನು ಬಿಟ್ಟರು. ಯೂದಾಯದ ಅನೇಕ ಪಟ್ಟಣಗಳಲ್ಲಿ ಒಂದಾದ ಚಿಕ್ಕ ಬೇತ್ಲೆಹೆಮಿನಿಂದ ಆಳುವಾತನಿಗಾಗಿ ನಿಶ್ಚಯವಾಗಿ ಯಾರೂ ನೋಡಲಾರರು. ಆತನು ಅಲ್ಲಿ ಜನಿಸುವದಕ್ಕೆ ಹೆಚ್ಚಿನ ಅವಕಾಶಗಳಿಗೆ

ವಿರುದ್ಧವಾದವುಗಳು ಅಗ್ರಾಹ್ಯವಾದ ವುಗಳಾಗಿದ್ದವು. ಅದಾಗ್ಯೂ ಮೀಕನು ಮುಂತಿಳಿಸಿದಂತೆಯೇ ಸಂಭವಿಸಿತು ಮತ್ತು ಇದು ಯೇಸುವಿನ ಜೀವನದ ಬಗ್ಗೆ ಅಂಥ ಆಶ್ಚರ್ಯಕರವಾದ ನೂರಾರು ಪ್ರವಾದನೆಗಳಲ್ಲಿ ಒಂದಾಗಿದೆ.

ದೇವರು ಘೋಷಿಸುವದನ್ನು ನಾವು ಓದುತ್ತೇವೆ :

> ''ಆರಂಭದಲ್ಲಿಯೇ ಅಂತ್ಯವನ್ನು ತಿಳಿಸಿದ್ದೇನೆ; ನನ್ನ ಸಂಕಲ್ಪವು ನಿಲ್ಲುವುದು, ನನ್ನ ಇಷ್ಟಾರ್ಥವನ್ನೆಲ್ಲಾ ನೆರವೇರಿಸುವೆನು ಎಂದು ಹೇಳಿ ಇನ್ನೂ ನಡೆಯದಿರುವ ಕಾರ್ಯಗಳನ್ನು ಪುರಾತನ ಕಾಲದಲ್ಲಿಯೇ ಅರುಹಿದ್ದೇನೆ'' (ಯೆಶಾಯ 46:10)

> ''ಈ ವರೆಗೂ ನಡೆದ ಸಂಗತಿಗಳನ್ನು ಪುರಾತನ ಕಾಲದಲ್ಲಿಯೇ ತಿಳಿಸಿದೆನು, ಹೌದು, ನನ್ನ ಬಾಯಿಯಿಂದ ಹೊರಟವು, ಪ್ರಕಟಿಸಿದೆನು; ನಾನು ತಟ್ಟನೆ ನಡಿಸಲು ನೆರವೇರಿದವು. ............ ಆದುದರಿಂದ ನಾನು ಪುರಾತನ ಕಾಲದಲ್ಲಿಯೇ ತಿಳಿಸಿದೆನು, ನಡೆಯುವದಕ್ಕೆ ಮುಂಚೆಯೇ ಪ್ರಕಟಿಸಿದೆನು.'' (ಯೆಶಾಯ 48:3,5).

ದೇವರಿಂದ ಕೊಡಲ್ಪಟ್ಟ ಮತ್ತು ಬೈಬಲಿನಲ್ಲಿ ದಾಖಲೆ ಮಾಡಲ್ಪಟ್ಟ ಪ್ರವಾದನೆಗಳು ನೂರಕ್ಕೆ ನೂರರಷ್ಟು ಸ್ಪಷ್ಟವಾಗಿವೆಯೆಂದು ಚರಿತ್ರೆಯು ರುಜುವಾತು ಪಡಿಸಿದೆ.

## ಬೈಬಲಿನ ಬಲವಾದ ಪ್ರಭಾವ

ಬೈಬಲು ದೇವರ ವಾಕ್ಯವಾಗಿದೆ ಎಂಬುದಕ್ಕೆ ಎರಡನೆಯ ಬಲವಾದ ರುಜುವಾತು ಅದು ಪ್ರಯೋಗಿಸಿದ ಪ್ರಭಾವವಾಗಿದೆ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ವೈಯಕ್ತಿಕವಾಗಿ ಬೈಬಲಿನ ಸಂದೇಶವು, ಅದು ಬೋಧಿಸಲ್ಪಟ್ಟಲ್ಲೆಲ್ಲಾ ಮತ್ತು ನಂಬಲ್ಪಟ್ಟಲ್ಲೆಲ್ಲಾ ಮತ್ತು ಹಾಗೆ ಮಾಡಲ್ಪಟ್ಟಾಗಲೆಲ್ಲಾ ಮಾನವ ಕುಲವನ್ನು ಗೌರವಿಸಿರುವುದು.

ಈ ಪುಸ್ತಕದ ಪ್ರಥಮ ಪರಿಷ್ಕರಣೆಯು ಅಚ್ಚಿಗೆ ಹೋಗುವ ಸ್ವಲ್ಪ ಮೊದಲು, ಒಬ್ಬ ಹೊಸ ಸ್ನೇಹಿತರು ನಮ್ಮ ಮನೆಯನ್ನು ಸಂದರ್ಶಿಸಿದರು. ನಾವು ಒಟ್ಟಾಗಿ ಕೈಬರಹದ ಪ್ರತಿಯನ್ನು ಪರಿಶೀಲಿಸಿದೆವು. ಮಾನಸಿಕ ಉದ್ವೇಗಕ್ಕೆ ಒಳಗಾಗುವಂಥದ್ದು ಇಲ್ಲದಿದ್ದರೂ, ನಾವು ಏಳನೆಯ ಅಧ್ಯಾಯವನ್ನು ಓದುತ್ತಿದ್ದಂತೆ ಅವರ ಕಣ್ಣೀರು ತುಂಬಿಬಂತು. ಎರಡು ಸಲ ಪ್ರಾರ್ಥನೆಯಲ್ಲಿ ತಲೆಬಾಗಲು ಮತ್ತು ನಾವು ಓದುತ್ತಿದ್ದ ದೇವರ ಪ್ರೀತಿಗಾಗಿ ಆತನಿಗೆ ಸ್ತೋತ್ರ ಸಲ್ಲಿಸಲು ನಿಂತುಕೊಂಡೆವು. ದೇವರ ತಾಳ್ಮೆ, ಆತನ ಕರುಣೆ ಮತ್ತು ನಮ್ಮ ಆಯೋಗ್ಯ ಜೀವಿತಗಳಲ್ಲಿ ಆತನ ಪ್ರೀತಿಯ ಪ್ರತಿಯೊಂದು ಗುರುತಿಗಾಗಿ ನಾವು ಒಂದಾಗಿ ಆತನಿಗೆ ಉಪಕಾರ ಸಲ್ಲಿಸಿದೆವು. ಜೀವಿಸುವ ದೇವರ ಬಲವಾದ, ಮಹತ್ವವುಳ್ಳ ಸಾನಿಧ್ಯವನ್ನು ನಾವು ಅನುಭವಿಸಿದಾಗ, ನಾವು ಆನಂದದಿಂದ ತುಂಬಿಕೊಂಡೆವು.

ಆ ದಿನವು ನಮ್ಮ ಸ್ನೇಹಿತನಿಗೆ ಬಹಳ ಮಹತ್ವದ ದಿನವಾಗಿತ್ತು. ಸರಿಯಾಗಿ ಒಂದು ವರ್ಷದ ಹಿಂದೆ, ಅವನು, ನಾವು ಈಗ ಸಂದರ್ಶಿಸಿದ ಸಾಮಾನ್ಯ ವಾಸಸ್ಥಳಕ್ಕೆ ವಿರುದ್ಧವಾದ ಐಶಾರಾಮುಗಳಿಂದ ತುಂಬಿದ ಅಪಾರ್ಟಮೆಂಟಿನಲ್ಲಿ ಒಬ್ಬನೇಯಾಗಿ ಕುಳಿತುಕೊಂಡಿದ್ದನು.

ಆದರೆ ಆ ಸಮಯದಲ್ಲಿ ಅವನನ್ನು ಸುತ್ತುವರಿದ ಸೌಂದರ್ಯವು ಅವನಿಗೆ ಆನಂದವನ್ನು ಕೊಟ್ಟಿರಲಿಲ್ಲ. ಜೀವಿಸಲು ನಿಜವಾದ ಅಪೇಕ್ಷೆಯಿಲ್ಲದ ರೀತಿಯಲ್ಲಿ ಅವನಿಗೆ ಆಂತರಿಕವಾಗಿ ನಿರಾಶೆಯಿತ್ತು. ವೈಯಕ್ತಿಕ ಸಂತೋಷಕ್ಕಾಗಿದ್ದ ಅವನ ಅನ್ವೇಷಣೆಯಲ್ಲಿ ತನ್ನ ಮನುಷ್ಯತ್ವದ ಎಲ್ಲಾ ಪಶು ಪ್ರವೃತ್ತಿಗಳಲ್ಲಿ ತೊಡಗಿಸಿ ಕೊಂಡಿದ್ದನು. ಅನುದಿನವು ಎಲ್ಲಾ ತರಗತಿಯ ಮಧ್ಯಪಾನದಿಂದ ಮತ್ತನಾಗಿರುತ್ತಿದ್ದನು. ವರ್ಷಗಳವರೆಗೆ ಯುರೋಪಿನಲ್ಲಿ ಮತ್ತು ಜಗತ್ತಿನಲ್ಲಿ ಅನೇಕ ಕಡೆಗಳಲ್ಲಿ ಐಶ್ವರ್ಯ ವಂತರಲ್ಲಿ ಅತೀ ಐಶ್ವರ್ಯವಂತರಾಗಿದ್ದವರೊಂದಿಗೆ ಪಾರ್ಟಿಗಳಲ್ಲಿ ಭಾಗವಹಿಸಿದ್ದನು. ಆದರೆ ಆ ರಾತ್ರಿ ಅವನು ಏಕಾಂಗಿಯಾಗಿದ್ದನು. ತನ್ನ ಏಕಾಂಗಿತೆಯಲ್ಲಿ, ಅವನ ನೆನಪು ನಿರಾಶೆಯಿಂದ ತುಂಬಿಸಿತು. ಅದು ಭಯಪಡಿಸುವ ಮತ್ತು ಭಯಾನಕವಾದ ಜಗತ್ತಿನ ಪರಿಸ್ಥಿತಿಯಾಗಿದೆಯೆಂದು ಅವನು ಯೋಚಿಸುವಂತೆ ಮಾಡಿತು.

ಆದರಿಂದ ಹೊರಗೆ ಬರಲು ಯಾವ ಮಾರ್ಗವೂ ಇಲ್ಲವೇನೊ ಎಂಬಂತೆ ಅವನಿಗೆ ತೋರಿತು.

ಕಠಿಣವಾದ ನಿರ್ಧಾರದೊಂದಿಗೆ ಅವನು ತನ್ನ ಟ್ವಿನ್ - ಬ್ಯಾರಲ್ ಕೈಕೋವಿ ಯನ್ನು ತುಂಬಿಸಿ, ತನ್ನ ಹಣೆಗೆ ಹಿಡಿದುಕೊಂಡು ಗುಂಡು ಹಾರಿಸಲು ಸಿದ್ಧನಾಗಿದ್ದನು. ''ಕೇವಲ $^{1}/_{8}$ ಇಂಚು ದೂರ, ಆಮೇಲೆ ನನ್ನ ನೋವು ಎಂದೆಂದಿಗೂ ತೀರಿ ಹೋಗುವುದು'' ಎಂದು ಅವನು ಯೋಚಿಸಿದನು. ಆಗ ಒಂದೇ ಕ್ಷಣದೊಳಗೆ (ಅದು ಹೇಗೆ ಸಂಭವಿಸಿತೆಂದು ನನ್ನ ಸ್ನೇಹಿತನಿಗೆ ತಿಳಿದಿರುವದಿಲ್ಲ) ಟೆಲಿವಿಜನ್ ಕಾರ್ಯಕ್ರಮವು ಬದಲಾಯಿತು. ಭವಿಷ್ಯದ ನಿರೀಕ್ಷೆಯನ್ನು ಕೊಡುವ ಬೈಬಲಿನಿಂದ ಒಂದು ಸಂದೇಶಕ್ಕೆ ಅವನು ಕಿವಿಗೊಟ್ಟನು. ಮಧ್ಯರಾತ್ರಿಯ ತಾಸು ಸಮೀಪಿಸಿದಾಗ, ಒಬ್ಬನೇ ಅಲ್ಲಿದ್ದಾಗ, ಕ್ಷಮಾಪಣೆಯನ್ನು ದಯೆಯನ್ನು ಬೇಡಿಕೊಳ್ಳುವದಕ್ಕಾಗಿ ಜೀವಿಸುವ ದೇವರ ಮುಂದೆ ನೆಲದ ಮೇಲೆ ಅಡ್ಡಬಿದ್ದನು.

ದೇವರ ಬಲವು ನನ್ನ ಸ್ನೇಹಿತನ ಜೀವಿತವನ್ನು ಅಷ್ಟು ಆಮೂಲಾಗ್ರವಾಗಿ ಬದಲಾಯಿಸಿದ್ದರಿಂದ, ನನ್ನ ಮುಂದಿದ್ದ ಮನುಷ್ಯನಿಗೆ ನಾನು ಸಂಕ್ಷೇಪವಾಗಿ ವಿವರಿಸಿದವನೊಂದಿಗೆ ಯಾವ ಹೋಲಿಕೆಯು ಇರಲಿಲ್ಲ. ಅವನ ಜನನದ ಮೊದಲು, ಅವನ ತಂದೆ ತಾಯಿಗಳು ಅವನಿಗಾಗಿ ಪ್ರಾರ್ಥಿಸಿದ್ದರು ; ಅವನು ಯುವಕನಂತೆ ಬೈಬಲನ್ನು ಅಧ್ಯಯನ ಮಾಡಿದ್ದರೂ ಅವನು ಅದರ ಸಂದೇಶವನ್ನು ಗಂಭೀರವಾಗಿ ತೆಗೆದುಕೊಳ್ಳುವದನ್ನು ನಿರಾಕರಿಸಿದ್ದನು. ತನ್ನ ಸಮೃದ್ಧಿಯ ಮತ್ತು ಅವಕಾಶಗಳ ಜಗತ್ತಿನಲ್ಲಿ ಅವನು ದೇವರಿಗೆ ವಿರುದ್ಧವಾಗಿ ದಂಗೆಯೆದ್ದಿದ್ದನು ಮತ್ತು ಅಗ್ರಾಹ್ಯವಾದ ನೈತಿಕ ದುರ್ನಡತೆಗಳಲ್ಲಿ ತೊಡಗಿಸಿಕೊಂಡಿದ್ದನು.

ಅಂತಿಮವಾಗಿ ದೇವರನ್ನು ಕಂಡುಕೊಂಡ ಹದಿನೇಳು ವರ್ಷಗಳ ಹಿಂದಿನ ಆ ಸ್ಮರಣೀಯ ರಾತ್ರಿಯ ಮೊದಲು ನನ್ನ ಸ್ನೇಹಿತನು ಸುಂದರವಾಗಿ ಲೆದರ ಬೌಂಡ ಪುಸ್ತಕವನ್ನು ಕೊಂಡು ಕೊಂಡಿದ್ದನು. ಅದು ಖಾಲಿಯಾದ ಬಿಳಿಪುಟಗಳನ್ನು ಒಳಗೊಂಡಿತ್ತು. ಆ ದಿನದಿಂದ ತನ್ನ ಜೀವಿತದ ಪ್ರತಿಯೊಂದು

ಮಹತ್ವದ ಘಟನೆಯನ್ನು ದಾಖಲೆ ಮಾಡುವುದು ಅವನ ಉದ್ದೇಶವಾಗಿತ್ತು. ಆ ಹದಿನೇಳು ವರ್ಷಗಳ ದುಂದು ವೆಚ್ಚದ ಮತ್ತು ಹಾಳು ಮಾಡುವಿಕೆಯ ಜೀವಿತದಲ್ಲಿ ಅರ್ಹವಾದ ಒಂದೇ ಒಂದು ದಾಖಲೆಯು ಮಾಡಲ್ಪಡಲಿಲ್ಲ.

ಆ ಎಲ್ಲಾ ವರ್ಷಗಳಲ್ಲಿ ನನ್ನ ಸ್ನೇಹಿತನು ಜೀವಿಸುವ ದೇವರ ಕಡೆಗೆ ಬೆನ್ನು ಹಾಕಿ, ತೃಪ್ತಿಕೊಡದ ಸುಳ್ಳು ಆತ್ಮಿಕ ಜೀವನ ಪ್ರಯಾಣ ಮಾಡಿದ್ದನು. ಅದು ದೈನಂದಿನ ಭವಿಷ್ಯ ಓದುವದರಿಂದ ಪ್ರಾರಂಭವಾಗಿತ್ತು. ರೊಕ್ ಮ್ಯೂಜಿಕ ಮತ್ತು ರೊಕ್ ಕಾನ್ಸರ್ಟಗಳಲ್ಲಿ ಅತಿಯಾದ ಆಸಕ್ತಿವಹಿಸಿದನು. ಸ್ವಲ್ಪ ಸಮಯದಲ್ಲಿಯೇ, ರಹಸ್ಯವಾದದ್ದರಲ್ಲಿ (Occult) ತೊಡಗಿಕೊಂಡನು, ಆನಂತರದಲ್ಲಿ ಯೋಗದಲ್ಲಿ ಆಕರ್ಷಣೆ ಹೊಂದಿ ಹಿಂದೂ ತತ್ವಜ್ಞಾನವನ್ನು ಗಂಭೀರವಾಗಿ ಅಧ್ಯಯನ ಮಾಡಿದನು. ಅದರಿಂದ ಕೊನೆಗೆ ಮೂಡಣದ ಅಧ್ಯಾತ್ಮ ಯೋಗದಲ್ಲಿ ತೊಡಗಿಸಿಕೊಂಡನು. ಆ ವರ್ಷಗಳಲ್ಲಿ ಅವನು ಅನುಭವಿಸಿದ್ದರಲ್ಲಿ ಯಾವುದೂ ಅವನ ಕಂದು ಬಣ್ಣದ ಲೆದರಬೌಂಡ ಪುಸ್ತಕದಲ್ಲಿ ದಾಖಲಿಸಲ್ಪಡಲು ಅರ್ಹತೆಯುಳ್ಳದ್ದಾಗಿರಲಿಲ್ಲ. ಅವನು ದೇವರನ್ನು ಸಂದರ್ಶಿಸಿದ ಆ ಸ್ಮರಣಿಯವಾದ ರಾತ್ರಿಯ ವರೆಗೆ ಬರಿದಾದ ನೋವಿನೊಂದಿಗೆ ಅದರ ಪುಟಗಳು ಬಿಳಿಯವಾಗಿಯೇ ಉಳಿದುಕೊಂಡಿದ್ದವು.

ಆ ರಾತ್ರಿ ನನ್ನ ಸ್ನೇಹಿತ ತನ್ನ ಪ್ರಥಮ ವಿಷಯವನ್ನು ದಾಖಲೆ ಮಾಡಿದ. ಅವನು ಬರೆದದ್ದನ್ನು ಓದುವಾಗ, ನನಗೆ ಬಹಳ ಆನಂದವಾಯಿತು. ಅದು ಪ್ರೀತಿಸುವ ದೇವರಿಂದ ರಕ್ಷಿಸಲ್ಪಟ್ಟ ಅಗತ್ಯತೆಯುಳ್ಳ ಮನುಷ್ಯನ ಪವಿತ್ರವಾದ ಮತ್ತು ಆತ್ಮೀಕವಾದ ವರದಿಯಾಗಿತ್ತು. ಅದು ಸುಂದರವಾಗಿಯೇ ಇತ್ತು. ಮಹಾದಯೆಯಲ್ಲಿ, ದೇವರು ಅವನ ಆತ್ಮಿಕ ಕುರುಡುತನದ ಮುಖಾಂತರ ಮುರಿದು, ತನ್ನ ಬದಲಾಗದ ಸತ್ಯದ ಹಾಗೂ ಆಶ್ಚರ್ಯಕರವಾದ ಪ್ರೀತಿಯ ಬೆಳಕಿನಿಂದ ಅವನನ್ನು ನಿರಾಶೆ ಮತ್ತು ಮರಣದಿಂದ ವಿಮೋಚಿಸಿದ್ದನು.

ನನ್ನ ಸ್ನೇಹಿತನ ಕುರುಡುತನದಂಥ ಮನುಷ್ಯನ ಆತ್ಮೀಕ ಗಲಿಬಿಲಿಯ ಕಾರಣ ದೇವರು ಬೈಬಲ ಎಂದು ಕರೆಯಲ್ಪಡುವ ಪುಸ್ತಕದಲ್ಲಿ ತನ್ನನ್ನು ಪ್ರಕಟಿಸಿಕೊಂಡಿರುವನು. ಕೇವಲ ಅವಲಂಭನೆಗೆ ಯೋಗ್ಯವಾದ ಆತ್ಮಿಕ

ಮಾರ್ಗದರ್ಶಿಯಾದ ಬೈಬಲಿಗೆ ಬೆನ್ನು ಹಾಕಿದರೆ, ನೀನು ಭ್ರಮೆಯಲ್ಲಿಯೂ ತಪ್ಪಿನಲ್ಲಿಯೂ ನಿನ್ನನ್ನು ಮುಚ್ಚಿಕೊಳ್ಳುವಿ, ಆದರೆ, ದೇವರಿಗಾಗಿರುವ ನಿನ್ನ ಅನ್ವೇಷಣೆಯಲ್ಲಿ, ನೀನು ಬೋಧಿಸಲ್ಪಡುವ ಮನಸ್ಸಿನೊಂದಿಗೆ ಬೈಬಲಿನ ಕಡೆಗೆ ತಿರುಗಿಕೊಂಡರೆ, ಅದು ಎಲ್ಲಾ ಆತ್ಮೀಕ ಬೆಳಕನ್ನು ಮತ್ತು ನಿನಗೆ ಅಗತ್ಯವಾದ ಮಾರ್ಗದರ್ಶನನ್ನು ಒಳಗೊಂಡಿರುವದನ್ನು ಕಂಡುಕೊಳ್ಳುವಿ.

ದೇವರ ವಾಕ್ಯದ ಮುಖಾಂತರ ಮಾತ್ರವೇ ದೇವರು ತನ್ನನ್ನು ಪ್ರಕಟಿಸಿಕೊಂಡಂತೆಯೇ ಆತನ ಸ್ಪಷ್ಟವಾದ ತಿಳುವಳಿಕೆಯನ್ನು ನಾವು ಹೊಂದಿಕೊಳ್ಳುವೆವು. ಈ ಪುಸ್ತಕದಲ್ಲಿ, ಸತ್ಯಕ್ಕೆ, ದೇವರ ವಾಕ್ಯಕ್ಕೆ, ಲೋಕಕ್ಕೆ ಬೆಳಕಾದಾತನಿಗೆ ನಾವು ಪರಿಚಯಿಸಿಲ್ಪಟ್ಟಿದ್ದೇವೆ.

ಕರ್ತನೇ, ನಿನ್ನ ವಾಕ್ಯವು ನೆಲೆಸುವುದು,
ಮತ್ತು ನಮ್ಮ ಹೆಜ್ಜೆಗಳನ್ನು ನಡಿಸುವದು ;
ಅದರ ಸತ್ಯವನ್ನು ನಂಬುವವನು
ಬೆಳಕನ್ನು ಆನಂದವನ್ನು ಹೊಂದುವನು.

## ಆಲೋಚಿಸಲು ವಿರಾಮ

1. ಭವಿಷ್ಯದ ಘಟನೆಗಳನ್ನು ಮುಂತಿಳಿಸುವಲ್ಲಿ ಖಚಿತತೆಯಲ್ಲಿ ಬೈಬಲಿನೊಂದಿಗೆ ಹೋಲಿಸಲ್ಪಡಬಹುದಾದ ಯಾವುದೇ ಇತರ ಕೈಬರಹದ ಪ್ರತಿಗಳು ಇಲ್ಲವೇ, ''ಪವಿತ್ರ ಬರಹಗಳು'' ಇರುವವೋ?
2. ಬೈಬಲಿನ ಸಂದೇಶಕ್ಕೆ ಕಿವಿಗೊಟ್ಟದ್ದರಿಂದ ಜೀವಿತಗಳು ಮಾರ್ಪಾಟವಾದ ಜನರನ್ನು ವೈಯಕ್ತಿಕವಾಗಿ ತಿಳಿದಿರುವಿಯೋ ?
3. ನೀನು ಎಂದಾದರೂ ಬೈಬಲಿನ ಅದ್ವಿತೀಯ ಬೋಧನೆಗಳನ್ನು ಎಂದಾದರೂ ಕಡೆಗಣಿಸುವಿಯೋ ಮತ್ತು ಅದೇ ಸಮಯದಲ್ಲಿ ತೆರೆದ ಮನಸ್ಸಿನಿಂದ ಅದನ್ನು ಓದುವದನ್ನು ಅಲಕ್ಷಿಸಿರುವಿಯೋ ?

ಪರಲೋಕ ಮತ್ತು ಭೂಲೋಕದ ಸಮಸ್ಯೆಗಳು, ಒಂದಾಗಿ ಮತ್ತು
ಒಮ್ಮೆಲೇ ನಮ್ಮನ್ನು ಸಂಧಿಸುವವುಗಳಾದರೂ, ದೇವರ
ಮಿತಿಮೀರಿದ ಸಮಸ್ಯೆಯೊಂದಿಗೆ ಹೋಲಿಸಿದರೆ ಏನೂ
ಅಲ್ಲದವುಗಳಾಗಿರುತ್ತವೆ : ಅದೇ ಆತನಾಗಿರುತ್ತಾನೆ : ಆತನು
ಯಾವ ರೀತಿಯಲ್ಲಿರುತ್ತಾನೆ ; ನೈತಿಕ ಜೀವಿಗಳಾಗಿ ನಾವು ಆತನ
ಬಗ್ಗೆ ಏನು ಮಾಡತಕ್ಕದ್ದು.

**ಎ.ಡಬ್ಲೂ. ಟೋಜರ.**

# ಅಧ್ಯಾಯ 3

# ದೇವರು ಹೇಗಿರುವನು ?

ಹೆಚ್ಚಾದ ಜನರು ಜೀವನದಲ್ಲಿ ಕೆಲವು ಸಲ ''ದೇವರು ಹೇಗಿರುವನು?'' ಎಂದು ಪ್ರಶ್ನಿಸಿರುವರು. ಈ ಪ್ರಶ್ನೆಗೆ ದೇವರು ಉತ್ತರವನ್ನು ಕೊಟ್ಟಿದ್ದರೂ, ತನ್ನ ಬಗ್ಗೆ ದೇವರು ಏನು ಹೇಳುತ್ತಾನೆ ಎಂಬುದರ ಬಗ್ಗೆ ಬೈಬಲಿನಲ್ಲಿ ಓದುವದಕ್ಕಿಂತ ಹೆಚ್ಚಾಗಿ ತಮ್ಮ ಕಲ್ಪನೆಗಳ ಮತ್ತು ಊಹನೆಗಳ ಮೇಲೆ ಅವಲಂಭಿಸುತ್ತಿರುವವರು ಇದ್ದಾರೆ.

ಈ ಜನರು ಬೈಬಲಿನ ಮಹತ್ವದ ಹೇಳಿಕೆಯನ್ನು ತಿರುವು ಮುರುವು ಮಾಡುತ್ತಾರೆ. ''ನಮ್ಮ ಸ್ವರೂಪದಲ್ಲಿ ಮನುಷ್ಯರನ್ನು ಉಂಟು ಮಾಡೋಣ'' (ಆದಿಕಾಂಡ 1:26) ಎಂದು ದೇವರು ಹೇಳಿದ್ದರೆ, ಅವರು ''ದೇವರನ್ನು ನಮ್ಮ ಸ್ವರೂಪ ದಲ್ಲಿ ಉಂಟು ಮಾಡೋಣ'' ಎಂದು ಹೇಳುತ್ತಾರೆ. ಹೀಗೆ ಅವರು, ''ಲಯವಿಲ್ಲದ ದೇವರ ಮಹಿಮೆಯನ್ನು ಬಿಟ್ಟು ಅದಕ್ಕೆ ಬದಲಾಗಿ ಲಯವಾಗುವ ಮನುಷ್ಯನ ಮೂರ್ತಿಯನ್ನು ಮಾಡಿಕೊಂಡರು'' (ರೋಮಾಪುರ 1:23). ಮನುಷ್ಯನಿಂದ ಕಲ್ಪಿಸಲ್ಪಟ್ಟ ಪ್ರತಿಯೊಂದು ''ದೇವರು'' ಸಂಪೂರ್ಣವಾಗಿ ಬಲವಿಲ್ಲದವನೂ ಮತ್ತು ಕೆಲವು ಸಲ ವಿರೂಪನೂ ಆಗಿದ್ದನು.

ಒಬ್ಬ ವ್ಯಕ್ತಿಯು ಎಷ್ಟೇ ಜಾಣನಾಗಿದ್ದರೂ ಲೋಕದ ಜ್ಞಾನದಿಂದ ಜೀವಿಸುವ ದೇವರನ್ನು ಎಂದೂ ಕಂಡುಹಿಡಿಯಲಾರನು.... ''ಲೋಕವು ಜ್ಞಾನವೆನಿಸುವ ಮಾರ್ಗದಿಂದ ದೇವರನ್ನು ತಿಳಿದುಕೊಳ್ಳದೆ ಹೋಯಿತು. (1 ಕೊರಿಂಥ 1:21) ಮಾನವ ಬುದ್ಧಿವಂತಿಕೆಯಿಂದ ದೇವರು ಕಂಡುಹಿಡಿಯಲ್ಪಟ್ಟರೆ, ಆತನು ದೇವರಾಗಿರಲು ಬಹಳ ಚಿಕ್ಕವನಾಗಿರುತ್ತಾನೆ.

ಅದಷ್ಟೇ ಅಲ್ಲ, ದೇವರನ್ನು ಕಂಡು ಹಿಡಿಯಲು ಮಾನವ ಬುದ್ಧಿವಂತಿಕೆಯು ಅಗತ್ಯವಾಗಿದ್ದರೆ, ಆಗ ಅಷ್ಟು ಬುದ್ಧಿವಂತರಾಗಿರದ ಜನರು ಆತನಿಗಾಗಿ ಅನ್ವೇಷಣೆಯಲ್ಲಿ ಪ್ರತಿಕೂಲತೆಯುಳ್ಳವರಾಗಿರುವರು. ಆದರೆ ಇದು ಹಾಗಿರುವದಿಲ್ಲ.

ಇದಕ್ಕೆ ವಿರುದ್ಧವಾಗಿ, ಆತ್ಮೀಕ ಬುದ್ಧಿವಂತಿಕೆಯು ಪ್ರತಿಯೊಬ್ಬರಿಗೂ ಲಭ್ಯವಿರುವುದು. ಅದು ಯುನಿವರ್ಸಿಟಿಯ ಪ್ರೊಫೆಸರನಿಗೆ ಲಭ್ಯವಿದ್ದಂತೆ ಆಫ್ರಿಕನ್ ''ಸ್ಟಿಕ್-ಲೇಡಿ''ಗೂ ಸಮಾನವಾಗಿ ಲಭ್ಯವಿರುವುದು, ಯಾಕಂದರೆ ಆತ್ಮೀಕ ಬುದ್ಧಿವಂತಿಕೆಯು ಅಧ್ಯಯನ ವಿಧಾನದಿಂದ ಪಡೆದುಕೊಳ್ಳಲ್ಪಡುವದಿಲ್ಲ. ಆತನಿಗಾಗಿ ತಮ್ಮ ಅನ್ವೇಷಣೆಯಲ್ಲಿ ತಮಗೆ ದೇವರ ಸಹಾಯದ ಅಗತ್ಯತೆಯನ್ನು ಗುರುತಿಸುವಷ್ಟು ದೀನತೆಯುಳ್ಳವರಾಗುವ ಎಲ್ಲಾ ಜನರಿಗೆ ಅದು ಲಭ್ಯವಿರುವುದು.

> **''ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ ಅದು ಅವನಿಗೆ ದೊರಕುವುದು'' (ಯಾಕೋಬ 1:5)**
>
> ಈ ರೀತಿಯ ಜ್ಞಾನವು ಈ ಲೋಕದ್ದಲ್ಲ ಆದರೆ ಪರಲೋಕದ್ದಾಗಿರುವುದು. ಅದನ್ನು ಈ ಯುಗದ ಅಧಿಕಾರಿಗಳಲ್ಲಿ (ಅಂದರೆ, ಈ ಲೋಕದ ಪದ್ಧತಿಯಿಂದ ಕಾರ್ಯ ಮಾಡುವ ಅಧಿಕಾರಿಗಳಲ್ಲಿ) ಯಾರೂ ಅರಿತುಕೊಳ್ಳಲಿಲ್ಲ.
>
> **''ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳಿದುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು'' (1 ಕೊರಿಂಥ 2:8,12).**

ಬೈಬಲು ಕೇವಲ ಒಂದು ಧಾರ್ಮಿಕ ಪ್ರಬಂಧವಾಗಿರುವದಿಲ್ಲ ; ಅದು ಪ್ರಥಮ ವಾಗಿ ಮನುಷ್ಯನಿಗೆ ದೇವರು ತನ್ನನ್ನು ಹೇಗೆ ಪ್ರಕಟಿಸಿಕೊಂಡನು

ಎಂಬುದರ ದಾಖಲೆಯಾಗಿದೆ. ಆತನು ಯಾರಾಗಿದ್ದಾನೆ ಮತ್ತು ನಿನ್ನ ಜೀವಿತದಲ್ಲಿ ಆತನು ಏನನ್ನು ಮಾಡಲು ಬಯಸುತ್ತಾನೆ ಎಂಬುದನ್ನು ನೀನು ಅರಿತುಕೊಳ್ಳಲು ನಿನಗೆ ಅಗತ್ಯವಾಗಿರುವ ಆತ್ಮಿಕ ಜ್ಞಾನವನ್ನು ದೇವರು ಮಾತ್ರವೇ ಕೊಡಬಲ್ಲನು.

**ನೀನು ಆತನನ್ನು ಕೇಳಿದರೆ ಮಾತ್ರವೇ, ದೇವರು ತನ್ನ ಪವಿತ್ರ ವಾಕ್ಯದ ಮುಖಾಂತರ ನಿನಗೆ ತನ್ನನ್ನು ತೋರ್ಪಡಿಸಿಕೊಳ್ಳುವನು.**

ಅಸಾಮಾನ್ಯವಾದ ಸ್ಥಳಗಳು ಮತ್ತು ಅಸಂಭವನೀಯ ಜನರು ಎಂದು ನಾವು ಯೋಚಿಸುವಂಥದ್ದರಲ್ಲಿ, ನಮ್ಮ ಪ್ರಯಾಣಗಳಲ್ಲಿ ಆಳವಾದ ಆತ್ಮಿಕ ಆಸಕ್ತಿಯನ್ನು ಮತ್ತು ಒಳನೋಟಗಳನ್ನು ಕಂಡುಕೊಂಡಿದ್ದೇವೆ. ಉದಾಹರಣೆಗಾಗಿ, ಒಂದು ದಿನ ಕೇನ್ಯಾದಲ್ಲಿ ಯುವ ಆಫ್ರಿಕನ್ ಬಾಲಕರ ಒಂದು ಗುಂಪನ್ನು ಸಂಧಿಸಿದೆವು. ತಮ್ಮ ವಿಶ್ವಾಸವನ್ನು ಹಂಚಿಕೊಳ್ಳುವದರಲ್ಲಿ ಮತ್ತು ದೇವರ ವಿಷಯಗಳ ಬಗ್ಗೆ ಹೆಚ್ಚು ಕಲಿತುಕೊಳ್ಳುವದರಲ್ಲಿ ಮಾತ್ರವೇ ಆಸಕ್ತರಾಗಿದ್ದಂತೆ ತೋರಿತು.

ಭೂಮಧ್ಯ ರೇಖೆಯ ಸೂರ್ಯನು ಬೇಗನೇ ಕ್ಷಿತಿಜದ ಕೆಳಗೆ ಇಳಿದು ಹೋದನು, ದೀರ್ಘವಾದ ಕೆಲಸ ತುಂಬಿದ ದಿನದ ಅಂತ್ಯವಾಯಿತು. ಕೇನ್ಯಾದ ಧೂಳು ತುಂಬಿದ ದಾರಿಯ ಪಕ್ಕದಲ್ಲಿಯ ಬಂಡೆಯ ಮೇಲೆ ಸ್ವಲ್ಪ ಹೊತ್ತು ವಿಶ್ರಾಂತಿಗಾಗಿ ಕುಳಿತು ಕೊಂಡೆನು. ಗುಡಿಸಿಲಿನಲ್ಲಿ ಚಲನೆಯನ್ನು ಗಮನಿಸಿದೆನು. ಆಫ್ರಿಕನ್ ಬಾಲಕನ ದೊಡ್ಡ ಕಪ್ಪು ಕಣ್ಣುಗಳಲ್ಲಿ ಪೂರ್ಣ ಚಂದ್ರನ ಮಸುಕಾದ ಕಿರಣಗಳ ಪ್ರತಿಬಿಂಬ ನೋಡಲು ತಿರುಗಿ ಕೊಂಡೆನು. ಬೇಗನೇ ಈ 10 ವರ್ಷದ ಬಾಲಕನು ಬಂದು ಬಂಡೆಯ ಮೇಲೆ ನನ್ನ ಪಕ್ಕದಲ್ಲಿ ಕುಳಿತುಕೊಂಡನು ; ನಾವು ಬೇಗನೇ ಒಳ್ಳೆ ಸ್ನೇಹಿತರಾದೆವು. ಬೇರೆ ಬಾಲಕರು ನಮ್ಮ ಧ್ವನಿಯನ್ನು ಕೇಳಿ ನಾವು ಏನು ಮಾತಾಡುತ್ತಿದ್ದೇವೆಂಬುದನ್ನು ಕೇಳಿಸಿ ಕೊಳ್ಳಲು ಬಂದರು. ಬೈಬಲಿನ ಅವರ ಜ್ಞಾನವು ನನ್ನನ್ನು ಬಹಳವಾಗಿ ಅಚ್ಚರಿಗೊಳಿಸಿತು.

''ದೇವರು ಯಾಕೆ ತನ್ನ ಮುಖವನ್ನು ಮೋಶೆಗೆ ನೋಡಲು ಬಿಡಲಿಲ್ಲ?'' ಎಂದು ನನ್ನ ಚಿಕ್ಕ ಸ್ನೇಹಿತ ಪ್ರಶ್ನಿಸಿದ.

ಅಂಥ ಪ್ರಶ್ನೆಯಿಂದ ಆಶ್ಚರ್ಯಗೊಂಡು, ಆ ಬಾಲಕ ಜೊಯೆಲನಿಗೆ ಪ್ರಶ್ನಿಸಿದೆನು. ''ನೀನು ನನ್ನ ಬೆನ್ನನು ನೋಡುವಿ ಆದರೆ ನನ್ನ ಮುಖವನ್ನು ನೋಡುವದಿಲ್ಲ'' (ವಿ.ಕಾಂ. 33:23) ಎಂದು ದೇವರು ಮೋಶೆಗೆ ಹೇಳಿದ್ದು ಜ್ಞಾಪಕವಿದೆಯೇ ಎಂದು ಪ್ರಶ್ನಿಸಿದೆನು.

ದೇವರ ಮಹಿಮೆಯನ್ನು ನೋಡುವುದು ಎಷ್ಟು ಅಗಾಧವಾದದ್ದಾಗಿದೆ ಎಂಬುದನ್ನು ಮೋಶೆಯು ತಿಳಿದಿರಲಿಲ್ಲ. ಹಾಗಿದ್ದರೂ, ದೇವರು ತನ್ನನ್ನು ಸ್ವತಃ ಪ್ರಕಟಿಸಿಕೊಳ್ಳುವ ದೇವರು, ಮನುಷ್ಯನನ್ನು ತನ್ನ ಕಡೆಗೆ ಎಳೆದುಕೊಳ್ಳಲು ಬಯಸುವ ದೇವರು ಆಗಿದ್ದುದರಿಂದ, ಪ್ರವಾದಿಗೆ ಸಹಿಸಲು ಸಾಕಾಗುವಷ್ಟನ್ನು ಆತನು ತನ್ನನ್ನು ಮೋಶೆಗೆ ತೋರಿಸಿಕೊಂಡನು. ದೇವರು ತನ್ನನ್ನು ಇನ್ನೂ ಹೆಚ್ಚಾಗಿ ತೋರಿಸಿ ಕೊಂಡಿದ್ದರೆ, ಆತನ ಪ್ರಸನ್ನತೆಯ ಬೆಳಕಿನಿಂದ ಮೋಶೆಯು ಸುಟ್ಟು ಹೋಗ ಬಹುದಿತ್ತು. ದೇವರು ಮೋಶೆಯಿಂದ ತನ್ನ ಪ್ರಭಾವದ ಪೂರ್ಣತೆಯನ್ನು ಮರೆಯಾಗಿಟ್ಟರೂ ಮೋಶೆಯು ಇದ್ದಲ್ಲಿಂದ ದೇವರು ದಾಟಿ ಹೋದಾಗ, ಮೋಶೆಯನ್ನು ಬಂಡೆಯ ಸಂದಿನಲ್ಲಿ ಆಶ್ರಯ ದಲ್ಲಿಡಬೇಕಾಗಿತ್ತು. (ವಿ.ಕಾಂ. 33:22)

ಭೂಮಧ್ಯ ರೇಖೆಯ ಮೇಲೆ ವಾಸಿಸುತ್ತಿದ್ದ ನನ್ನ ಯುವ ಸ್ನೇಹಿತರು ತಮ್ಮ ಕಣ್ಣುಗಳಿಗೆ ಮರೆಮಾಡಿಕೊಳ್ಳದೇ ಮಧ್ಯಾಹ್ನದ ಸೂರ್ಯನ ಕಿರಣಗಳ ಕಡೆಗೆ ನೋಡಲಾರರೆಂಬುದನ್ನು ತಿಳಿದುಕೊಂಡಿದ್ದರು, ಕತ್ತಲೆಯ ರಾತ್ರಿಯಲ್ಲಿ ಬೆಳಕಿಗೆ ಹುಳುಗಳು ಆಕರ್ಷಿಸಲ್ಪಡುತ್ತಿವೆಯೆಂದೂ ತಿಳಿದಿದ್ದರು. ಹುಳಗಳು ದೀಪದ ಸಮೀಪಕ್ಕೆ ಹೋದರೆ ಏನಾಗುತ್ತದೆ ಎಂದು ನಾನು ಪ್ರಶ್ನಿಸಿದಾಗ ಅವರು ಕೂಡಲೇ, ''ಅವು ಕೊಲ್ಲಲ್ಪಡುತ್ತವೆ'' ಎಂದು ಉತ್ತರ ಕೊಟ್ಟರು. ಅತಿಶಯವಾದ ಬೆಳಕಿಗೆ ಬರುವದರ ಗಂಡಾಂತರವು ಅವರಿಗೆ ಸ್ಪಷ್ಟವಾಗಿ ತಿಳಿದಿತ್ತು.

ಅವರ ಪ್ರಶ್ನೆಗೆ ಉತ್ತರವನ್ನು ಅರ್ಥಮಾಡಿಕೊಳ್ಳುವದಕ್ಕಾಗಿ ಸಹಾಯ ಮಾಡ ಬಹುದಾದ ಇನ್ನೊಂದು ದೃಷ್ಟಾಂತದ ಬಗ್ಗೆ ನಾನು ಯೋಚಿಸಿದೆನು. ನನ್ನ ಈ ಎಲ್ಲಾ ನೂತನ ಯುವ ಸ್ನೇಹಿತರು ತಮ್ಮ ಚಿಕ್ಕ ತಮ್ಮನನ್ನು ಇಲ್ಲವೇ ತಂಗಿಯನ್ನು ಬಟ್ಟೆಯಿಂದ ಸುತ್ತಿ ತಾಯಿಯು ಪ್ರೀತಿಯ ಮತ್ತು ಜೋಪಾಸನೆಯ

ತನ್ನ ಎದೆಗೆ ಕಟ್ಟಿಕೊಳ್ಳುವದನ್ನು ತಿಳಿದಿದ್ದರು. ಸುತ್ತ ಕಟ್ಟುವ ಪಟ್ಟಿಯ ಬಗ್ಗೆ (ಯೋಬ 38:9), ದೇವರು ಭೂಮಿಯನ್ನು ಸುತ್ತಿ ಕಟ್ಟಿದ್ದರ ಬಗ್ಗೆ ಅವರಿಗೆ ಹೇಳಿದೆನು.

(ವಿಜ್ಞಾನಿಗಳು ಅದನ್ನು ಓಝೋನ ಲೆಯರ ಎಂದು ಕರೆಯುತ್ತಾರೆ. This delicate blanket of allotropic oxygen filters out the harmful ultraviolet rays from the Sun. ಸೂರ್ಯ ನಿಲ್ಲದೆ ಭೂಗ್ರಹದ ಮೇಲೆ ಜೀವವು ಇರಲಾರದು, ಆದರೆ ದೇವರ ಜೋಪಾಸನೆಯು ಸೂರ್ಯನ ಅತಿಶಯತೆಯಿಂದಲೂ ಅದರ ದುಷ್ಪರಿಣಾಮಗಳಿಂದಲೂ ನಮ್ಮನ್ನು ಕಾಪಾಡುತ್ತದೆ).

ದೇವರು ಬಟ್ಟೆಯಿಂದ ಸುತ್ತಿಕಟ್ಟುವದರ ಬಗ್ಗೆ ನನ್ನ ಚಿಕ್ಕ ಸ್ನೇಹಿತರು ಪ್ರತ್ಯೇಕವಾಗಿ ಆಸಕ್ತಿ ತೋರಿಸಿದಂತೆ ಕಂಡು ಬಂದಿತು, ದೇವರು ನಮ್ಮ ಎಲ್ಲಾ ಕೇಡುಗಳಿಂದ ತಪ್ಪಿಸಿ ಕಾಪಾಡುವನೆಂದು ಅವರಿಗೆ ಸರಳವಾಗಿ ವಿವರಿಸಿದೆನು. ದೇವರ ಪ್ರೀತಿ ಮತ್ತು ಮಹಿಮೆಗೆ ಆ ಚಿಕ್ಕ ಮಕ್ಕಳ ಹೃದಯಗಳು ಪ್ರತಿಕ್ರಿಯೆ ತೋರಿಸಿದವು. ನಾವು ಒಂದಾಗಿ ಅಮೂಲ್ಯವಾದ ಪ್ರಾರ್ಥನಾ ಸಮಯವನ್ನು ಕಳೆದೆವು. ಮೋಶೆಗೆ ಅವನು ದೇವರಿಗಾಗಿ ಮಾಡಿದ ಅನ್ವೇಷಣೆಯಲ್ಲಿ ದೇವರು ಕೊಟ್ಟ ಸಂರಕ್ಷಣೆಯು ತಮಗೂ ಸಿಗುವುದೆಂದು ವೈಯಕ್ತಿಕವಾದ ರೀತಿಯಲ್ಲಿ ತಿಳಿದುಕೊಂಡರು. ದೇವರು ಹೇಗಿರುವನೆಂಬ ನಮ್ಮ ಸ್ವಂತ ತಿಳುವಳಿಕೆಗೆ ಮೂಲವಾಗಿ ಬೈಬಲು ನಮಗೆ ಹೀಗೆ ಹೇಳುತ್ತದೆ: ''ನಮ್ಮ ದೇವರಾದ ಕರ್ತನು ಒಬ್ಬನೆ ಕರ್ತನು'' (ಧ.ಕಾಂ. 6:47.) ಆತನ ವ್ಯಕ್ತಿತ್ವದ ಏಕತೆಯು ಮೂಲ ಸತ್ಯವಾಗಿದೆ.

**ಆದರೆ ಆತನು ಯಾವುದರಂತಿದ್ದಾನೆ ಎಂಬುದರ ಪೂರ್ಣ ತಿಳುವಳಿಕೆಯನ್ನು ನಮಗೆ ಕೊಡಲು, ದೇವರು ನಮಗೆ ತನ್ನ ಹೆಸರುಗಳನ್ನು ಹೇಳಿದ್ದಾನೆ.**

ಬೈಬಲಿನಲ್ಲಿ ಹೆಸರುಗಳು ಯಾವಾಗಲೂ ಮಹತ್ವವಾದವುಗಳೆಂದು ಯೋಚಿಸಲ್ಪಟ್ಟಿವೆ ಯಾಕಂದರೆ ಅವುಗಳ ಅರ್ಥಗಳು ಹೆಸರು ಧರಿಸಿರುವವನ

ಗುಣಲಕ್ಷಣಗಳಲ್ಲಿ ಕೆಲವೊಂದನ್ನು ಪ್ರತಿಬಿಂಬಸುತ್ತವೆ. ದೇವರನ್ನು ಉಲ್ಲೇಖಿಸಲು ಉಪಯೋಗಿಸಿದ ಪ್ರತಿಯೊಂದು ಹೆಸರಿಗೆ ಬಹಳ ವಿಶೇಷವಾದ ಅರ್ಥವಿದೆ ಮತ್ತು ಆತನ ದೈವೀಯ ವ್ಯಕ್ತಿತ್ವದ ಅದ್ವಿತೀಯ ಸಂಗತಿಯನ್ನು ಪ್ರಕಟಿಸುತ್ತದೆ.

ಹಳೇ ಒಡಂಬಡಿಕೆಯಲ್ಲಿ ದೇವರಿಗಾಗಿ ಉಪಯೋಗಿಸಿದ ಮೂರು ಪ್ರಾಥಮಿಕ ಹೆಸರುಗಳು : ಯಾಹ್ವೆ, ಎಲೋಹಿಮ್ ಮತ್ತು ಅದೊನಾಯ್. ಪ್ರತಿಯೊಂದಕ್ಕೂ ವಿಶೇಷವಾದ ಅರ್ಥವಿದೆ. ಎಲೋಹಿಮ್ ಎಂಬುದು ಮೊದಲು ಉಪಯೋಗಿಸಿದ ಶಬ್ದ ಮತ್ತು ಅದು ಎರಡು ಸಾವಿರಕ್ಕಿಂತಲೂ ಹೆಚ್ಚು ಸಲ ಉಪಯೋಗಿಸಲ್ಪಟ್ಟಿದೆ. ಯಾಹ್ವೆ ಎಂಬುದು ಪ್ರಮುಖವಾದದ್ದಾಗಿದ್ದರೂ. ಆತನ ಹೆಸರು ಎಲೋಹಿಮ್ ಎಂಬುದಕ್ಕೆ ಮಹತ್ವವೂ ಪ್ರಾಮುಖ್ಯತೆಯೂ ಇದ್ದು ನಾವು ಅದನ್ನು ತಪ್ಪಿಸಿಕೊಳ್ಳಬೇಕೆಂದು ದೇವರು ಬಯಸುವದಿಲ್ಲ. ಇದು ಏನಾಗಿರಬಹುದು ?

ಇಂಗ್ಲೀಷ ಭಾಷೆಯಲ್ಲಿ, ನಾವು ಏಕವಚನದಲ್ಲಿ ಮಾತಾಡಿದರೆ, ನಾವು ಒಂದರ ವಿಷಯದಲ್ಲಿ ಮಾತಾಡುತ್ತೇವೆ ಮತ್ತು ಬಹುವಚನದಲ್ಲಿ ಮಾತಾಡಿದರೆ ಒಂದಕ್ಕಿಂತ ಹೆಚ್ಚಿನವುಗಳನ್ನು ಉಲ್ಲೇಖಿಸುತ್ತೇವೆ. ಹಾಗಿದ್ದರೂ, ''ಒಂದಕ್ಕಿಂತ'' ಹೆಚ್ಚಾದವುಗಳ ಬಗ್ಗೆ ಬಹುವಚನದಲ್ಲಿ ನಾವು ಮಾತಾಡಿದರೂ ಮೂಲ ಹಿಬ್ರುವಿನಲ್ಲಿ ಹೆಚ್ಚು ಸ್ಪಷ್ಟವಾಗಿರುತ್ತದೆ. ಅದು ನಾವು ''ಎರಡನ್ನು'' ಉಲ್ಲೇಖಿಸುವಾಗ ''ದ್ವಂದ್ವ''ವನ್ನು ಉಪಯೋಗಿಸುತ್ತೇವೆ. ಎರಡಕ್ಕಿಂತ ಹೆಚ್ಚನ್ನು ಉಪಯೋಗಿಸುವಾಗ ಬಹುವಚನವನ್ನು ಉಪಯೋಗಿಸುತ್ತೇವೆ. ದ್ವಂದ್ವ ಮತ್ತು ಬಹುವಚನಗಳ ಮಧ್ಯದಲ್ಲಿ (''ಎರಡು'' ಮತ್ತು ''ಮೂರು ಇಲ್ಲವೇ ಹೆಚ್ಚು''ಗಳ ಮಧ್ಯದಲ್ಲಿ) ಭಿನ್ನತೆಯು ಬಹಳ ಮಹತ್ವದ್ದಾಗಿದೆ. ಎಲೋಹಿಮ್ ಎಂಬುದು ಬೈಬಲಿನಲ್ಲಿ ದೇವರಿಗಾಗಿ ಉಪಯೋಗಿಸಿದ ಮೊದಲನೆಯ ಹೆಸರಾಗಿದೆ. ಹಿಬ್ರುವಿನಲ್ಲಿ ಸೃಷ್ಟಿಕರ್ತ-ದೇವರಿಗೆ ಉಲ್ಲೇಖಿಸಿದ ಎಲೋಹಿಮ್ ಎಂಬುದು ಏಕವಚನವಾಗಲೀ ದ್ವಿವಚನವಾಗಲಿ ಆಗಿರದೇ ಅದು ಬಹು ವಚನವಾಗಿದೆ.

''ಆದಿಯಲ್ಲಿ ದೇವರು (ಎಲೋಹಿಮ್) ಭೂಮಿ-ಆಕಾಶಗಳನ್ನು ಉಂಟು ಮಾಡಿದನು'' (ಆದಿಕಾಂಡ 1:1) ಆದುದರಿಂದ ಬೈಬಲಿನ

ಮೊದಲನೆಯ ವಚನದಲ್ಲಿಯೇ - ಮನುಷ್ಯನಿಗೆ ತನ್ನನ್ನು ಪ್ರಕಟಿಸಿಕೊಂಡದ್ದರಲ್ಲಿ - ದೇವರು ಯಾರಾಗಿದ್ದಾನೆ ಎಂಬುದರ ಮೂರರಲ್ಲಿ ಒಬ್ಬನು ಮತ್ತು ಒಬ್ಬನಲ್ಲಿ ಮೂವರು ಎಂಬ ತತ್ವವಿದೆ. ಈ ಮೂರು - ಐಕ್ಯತೆಯು ತ್ರೈಯೇಕತ್ವ ಎಂದು ಕರೆಯಲ್ಪಟ್ಟಿದೆ.

ದೇವರ ತ್ರಿ-ಏಕತ್ವದ ಮೊದಲ ಉಲ್ಲೇಖದ ನಂತರ ಮನುಷ್ಯನನ್ನು ದೇವರು ಸೃಷ್ಟಿಸಿದ್ದರ ದಾಖಲೆಗೆ ಬರುತ್ತೇವೆ. ''ಆ ಮೇಲೆ ದೇವರು - **ನಮ್ಮ** ಸ್ವರೂಪದಲ್ಲಿ **ನಾವು** ಮನುಷ್ಯನನ್ನು ಉಂಟುಮಾಡೋಣ ಎಂದು ಹೇಳಿದನು'' (ಆದಿಕಾಂಡ 1:26). ★ ''ನಾವು'' ಮತ್ತು ''ನಮ್ಮ'' ಎಂಬವುಗಳೆರಡೂ ಇಂಗ್ಲೀಷ ಭಾಷೆಯಲ್ಲಿ ಬಹುವಚನ ನಾಮಪದಗಳು ಎಂಬುದರ ಬಗ್ಗೆ ಯಾರೂ ತಪ್ಪಾಗಿ ತಿಳಿಯುವದಿಲ್ಲ. ಆದರೆ, ಆಶ್ಚರ್ಯಕರವಾಗಿ ಅದರ ಮುಂದಿನ ವಾಕ್ಯದಲ್ಲಿ ''ಅವರನ್ನು ಗಂಡು ಹೆಣ್ಣಾಗಿ ಆತನು ನಿರ್ಮಿಸಿದನು'' (ಆದಿಕಾಂಡ 1:27) ಎಂದು ಓದುತ್ತೇವೆ. ಇಲ್ಲಿ **''ಆತನು''** ಎನ್ನುವಂಥದ್ದು ಕೇವಲ ಒಂದು ವ್ಯಕ್ತಿಗೆ ಸಂಬಂಧಿಸಿದೆ ಎಂಬುದು ಸ್ಪಷ್ಟವಾಗಿದೆ. ಆದುದರಿಂದ ದೇವರಿಗೆ ''ಒಬ್ಬನು'' ಮತ್ತು ''ಒಬ್ಬನಿಗಿಂತ ಹೆಚ್ಚು ಸಂಖ್ಯೆಯಲ್ಲಿ ರುವವನು'' ಎಂಬಂತೆ ಹೇಳಿರುವುದು ದೇವರು ಈಗಾಗಲೇ ತನ್ನನ್ನು ಎಲೋಹಿಮ್ ಎಂದು ಪರಿಚಯಿಸಿಕೊಂಡದಕ್ಕೆ ಉಲ್ಲೇಖವಾಗಿದೆ.

ಹೀಗಿರುವಂಥ ದೇವರು ಗ್ರಹಿಸಿಕೊಳ್ಳಲಿಕ್ಕೆ ಲೌಕಿಕ ಜ್ಞಾನದ ಸಾಮರ್ಥ್ಯವನ್ನು ದಾಟಿದವನಾಗಿದ್ದಾನೆ. ಆದುದರಿಂದ ನಮ್ಮ ತಿಳುವಳಿಕೆಯಲ್ಲಿ

---

★ *ಪುರುಷರ ಮತ್ತು ಸ್ತ್ರೀಯರ ಸೃಷ್ಟಿಯು ಎಂದಿಗೂ ಸಸ್ಯಗಳ ರಾಜ್ಯದ ಸೃಷ್ಟಿಯೊಂದಿಗೆ ಸಮಾನವಾಗಿಡಲ್ಪಡಲಾರದು; ಹಾಗೆಯೇ ಉತ್ಕ್ರಾಂತಿಯ ಬೆಳವಣಿಗೆಯ ಅತ್ಯುನ್ನತ ರೂಪವನ್ನು ಪ್ರಾಣಿ ರಾಜ್ಯದಲ್ಲಿ ಇಡಲ್ಪಡಲಾಗುವದಿಲ್ಲ. ಅದು ಹಾಗೆ ಇರುವದಿಲ್ಲ. ಪುರುಷರು ಮತ್ತು ಸ್ತ್ರೀಯರು ''ದೇವರ ಸ್ವರೂಪದಲ್ಲಿ'' ಸೃಷ್ಟಿಸಲ್ಪಟ್ಟರು. ಆದುದರಿಂದ ದೇವರು ಅದ್ಭುತಕರವಾದ ಸೃಜನಾತ್ಮಕ ಕೃತ್ಯಗಳಲ್ಲಿ ಅತ್ಯುನ್ನತ ಶಿಖರದಲ್ಲಿ ಅದ್ವಿತೀಯವಾದ ಸೃಷ್ಟಿಯಾಗಿದೆ. ಅನಂತರದಲ್ಲಿ ಈ ಪುಸ್ತಕದಲ್ಲಿ ಈ ಅದ್ವಿತೀಯತೆಯು ನೀನು ನಿಜವಾಗಿಯೂ ಯಾರು ಆಗಿರುವಿ ಎಂಬುದರ ಭರವಸೆ ಕೊಡುವುದು.*

ಸಹಾಯ ಮಾಡುವದಕ್ಕಾಗಿ ದೇವರು ''ನಾವು ದೇವರಿಂದ ನಮಗೆ, ಉಚಿತವಾಗಿ ಕೊಡಲ್ಪಟ್ಟ ಸಂಗತಿಗಳನ್ನು ನಾವು ತಿಳಿಯುವದಕ್ಕಾಗಿ ದೇವರಿಂದ ಬಂದ ಆತ್ಮನನ್ನು'' ಕೊಟ್ಟಿದ್ದಾನೆ. (1 ಕೊರಿಂಥ 2:12). ದೇವರು ಯಾವ ರೀತಿಯಲ್ಲಿರುವನು ಎಂಬ ಆರಂಭಿಕ ಈ ಅನುಕರಣೆಗಳಿಂದ ಪ್ರಾರಂಭಿಸಿ ಬೈಬಲು ಕ್ರಮೇಣವಾಗಿ ಆತನ ರಹಸ್ಯಕರವಾದ ತ್ರಿ-ಏಕತ್ವವನ್ನು ಪ್ರಕಟಿಸುತ್ತದೆ, ಒಬ್ಬನಲ್ಲಿ ಮೂವರು ಮತ್ತು ಒಬ್ಬನಲ್ಲಿ ಮೂರು ವ್ಯಕ್ತಿತ್ವಗಳು ಆಗಿರುವ ದೇವರನ್ನು ಅರ್ಥಮಾಡಿಕೊಳ್ಳುವುದು, ನೀವು ಏಳನೆಯ ಅಧ್ಯಾಯವನ್ನು ಓದುವಂತೆ ನಿಮಗಾಗಿ ಆತನ ವಿಸ್ಮಯಕರವಾದ ಪ್ರೀತಿಯನ್ನು ಹೆಚ್ಚು ಪೂರ್ಣವಾಗಿ ಮೆಚ್ಚಿಕೊಳ್ಳಲು ಸಹಾಯ ಮಾಡುವುದು.

ಆತನ ಪ್ರೀತಿಯ ಘನತೆಯನ್ನು ಗ್ರಹಿಸಿಕೊಳ್ಳಲು ನಮಗೆ ಸಹಾಯಮಾಡಲು, ದೇವರು ಪ್ರಗತಿಪರವಾಗಿ ಬೈಬಲಿನ ಉಳಿದ ಭಾಗದಲ್ಲೆಲ್ಲಾ ತನ್ನನ್ನು ಪ್ರಕಟಿಸಿ ಕೊಳ್ಳುವನು, ಅಲ್ಲಿ ನಾವು ತಂದೆಯಾದ ದೇವರಿಗೆ, ಕುಮಾರನಾದ ದೇವರಿಗೆ ಮತ್ತು ಪವಿತ್ರಾತ್ಮನಾದ ದೇವರಿಗೆ ಪರಿಚಯಿಸಲ್ಪಟ್ಟಿದ್ದೇವೆ. ಆದಾಗ್ಯೂ ಆತನು ತನ್ನನ್ನು ಒಬ್ಬನೇ ಮತ್ತು ಯಾವಾಗಲೂ ಒಬ್ಬನೇ ದೇವರಾಗಿ ಪ್ರಕಟಿಸಿಕೊಳ್ಳುತ್ತಾನೆ. ಅಂಥ ತತ್ವದ ಚುಂಗನ್ನು ಮಾತ್ರವೇ ನಮ್ಮ ಮಾನವ ಮನಸ್ಸು ಗ್ರಹಿಸಿಕೊಳ್ಳಬಲ್ಲದು. ಮನುಷ್ಯನಿಗೆ ನಿಜವಾದ ಮತ್ತು ಜೀವಿಸುವ ದೇವರನ್ನು ತಲುಪಿ, ಕಂಡುಹಿಡಿಯುವದು ಅಸಾಧ್ಯವಾದದ್ದರಿಂದ, ಆತನು ತಾನೇ ತನ್ನನ್ನು ಮನುಷ್ಯನಿಗೆ ಪರಿಚಯಿಸಿಕೊಂಡನು.

ದೇವರ ಮಹಿಮೆಯ ಮತ್ತು ಪವಿತ್ರತೆಯ ಪೂರ್ಣಪ್ರಕಟಣೆಯು ಮೋಶೆಯ ಕಣ್ಣುಗಳಿಂದ ಮರೆಯಾಗಿ ಇಡಲ್ಪಟ್ಟಿತ್ತು. ಹಾಗಿದ್ದರೂ, ಕುಮಾರನಾದ ದೇವರ ವ್ಯಕ್ತಿತ್ವ ದಲ್ಲಿ ಎಲೋಹಿಮ್, ಮನುಷ್ಯನು ಮನುಷ್ಯನಂತೆ ಸಹಿಸಿಕೊಳ್ಳುವಷ್ಟು ತನ್ನನ್ನು ಪ್ರಕಟಿಸಿಕೊಂಡನು.

ಅದರಂತೆ ನಾವು ಹೊಸ ಒಡಂಬಡಿಕೆಯಲ್ಲಿ ಓದುತ್ತೇವೆ :

''ಕತ್ತಲೆಯೊಳಗಿಂದ ಬೆಳಕು ಹೊಳೆಯಲಿ ಎಂದು ಹೇಳಿದ

ದೇವರು ತಾನೇ ಯೇಸು ಕ್ರಿಸ್ತನ ಮುಖದಲ್ಲಿ ತೋರುವ ದೇವಪ್ರಭಾವ ಜ್ಞಾನವೆಂಬ ಪ್ರಕಾಶವು ಅನೇಕರಿಗೆ ಉಂಟಾಗುವದಕ್ಕಾಗಿ ನಮ್ಮ ಹೃದಯಗಳಲ್ಲಿ ಹೊಳೆದನು''

(2 ಕೊರಿಂಥ 4:6)

ಅದನ್ನು ಯೋಚಿಸಿರಿ : ಯೋಹಾನನು ಯೇಸು ಕ್ರಿಸ್ತನ ಮುಖದಲ್ಲಿ ದಿಟ್ಟಿಸಿ ನೋಡಿದಾಗ, **''ನಾವು ಆತನ ಮಹಿಮೆಯನ್ನು ನೋಡಿದೆವು ; ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ''** (ಯೋಹಾನ 1:14) ಎಂದು ಹೇಳಿದನು.

ಅನಂತರದಲ್ಲಿ ಯೋಹಾನನು, ಇದನ್ನು, ದೇವರೊಂದಿಗಿನ ತನ್ನ ವೈಯಕ್ತಿಕ ಸಂದರ್ಶನವನ್ನು ಕುರಿತು ಬರೆದನು. ಯೇಸುವಿನಲ್ಲಿ ಅವನು ಎಲೋಹಿಮ್‌ನನ್ನು ಸಂದರ್ಶಿಸಿದ್ದರಿಂದ, ಕಥೆಯನ್ನು ಹೇಳಲು ಅವನು ಜೀವಿಸಿದನು. ಹಾಗಿದ್ದರೂ, ಅವನ ಸಂದರ್ಶನವು ನಿತ್ಯತ್ವದ ದೇವರೊಂದಿಗೆ, ಸೃಷ್ಟಿಯ ದೇವರೊಂದಿಗೆ, ಮೋಶೆಯ ದೇವರೊಂದಿಗೆ ಆಗಿತ್ತೆಂಬುದನ್ನು ಸ್ಪಷ್ಟಪಡಿಸಿದನು.

ಅದು ಆಶ್ಚರ್ಯಕರವಾದದ್ದಾಗಿದ್ದಂತೆ, ಈ ಯೋಹಾನ ಮತ್ತು ಅವನ ಸೃಷ್ಟಿಕರ್ತ ದೇವರ ಮಧ್ಯದಲ್ಲಿಯ ವೈಯಕ್ತಿಕ ಸಂದರ್ಶನವು ಕೇಳಿಸಿಕೊಳ್ಳುವಂಥದ್ದು ಕಾಣುವಂಥದ್ದೂ ಮತ್ತು ಸ್ಪಷ್ಟವಾಗಿರುವಂಥದ್ದೂ ಆಗಿತ್ತು.

''ನಾವು ನಿಮಗೆ ಪ್ರಸಿದ್ಧಪಡಿಸುವ ಜೀವ ವಾಕ್ಯವು ಆದಿಯಿಂದ ಇದ್ದದ್ದು. ನಾವು ಅದನ್ನು ಕಿವಿಯಾರೆ ಕೇಳಿ ( ಅವನು ಕೇಳಿಸಿಕೊಂಡ ಸಂದರ್ಶನ) ಕಣ್ಣಾರೆ ಕಂಡು (ಅವನು ನೋಡಿದಂಥ ಸಂದರ್ಶನ)..... ಮತ್ತು ಮನಸ್ಸಿಟ್ಟು ನೋಡಿ ಕೈಯಿಂದ ಮುಟ್ಟಿದ್ದೇವೆ'' (ಅವನು ಸ್ಪಷ್ಟವಾಗಿ ನೋಡಿದ ಸಂದರ್ಶನ). (1 ಯೋಹಾನ 1:1).

ಯೋಹಾನನ ಪತ್ರಿಕೆಯಲ್ಲಿ ನಾವು ಓದುವ ದಾಖಲೆಯು ತಪ್ಪಾಗಿ

ಸಂಬಂಧಿಸಿದ, ವ್ಯಕ್ತಿಸಂಬಂಧವಿಲ್ಲದ ದೈವಜ್ಞಾನ ಶಾಸ್ತ್ರದಲ್ಲಿ ಒಂದಾದದ್ದಾಗಿರುವ ದಿಲ್ಲ. ಜೀವಿಸುವ ದೇವರೊಂದಿಗೆ ಅವನ ಸ್ವಂತ ಸಂದರ್ಶನದಿಂದ ಹೊರಟು ಬರುವಂಥದ್ದಾಗಿದೆ.

''ಇಂದು ಇದೆಲ್ಲವೂ ಹೇಗೆ ನನಗೆ ಸಹಾಯ ಮಾಡುತ್ತದೆ?'' ಎಂದು ನೀನು ಕೇಳಬಹುದು. ಆ ಪ್ರಶ್ನೆಗೆ ಯೋಹಾನನು ತಕ್ಷಣವೇ ಉತ್ತರ ಕೊಡುತ್ತಾನೆ. ''ನಮ್ಮ ಭಯತರ ಸಂತೋಷವು ಪರಿಪೂರ್ಣವಾಗಬೇಕೆಂದು ನಾವು ಈ ಮಾತುಗಳನ್ನು ಬರೆಯುತ್ತೇವೆ'' (1 ಯೋಹಾನ 1:4) ಮತ್ತು ಹಾಗೆಯೇ, ಜೀವಿಸುವ ದೇವರನ್ನು ನೀನು ಸಂದರ್ಶಿಸುವಂತೆ ನಿನಗೆ ಸಂತೋಷದ ಪರಿಪೂರ್ಣತೆ ಇರುವಂತೆ, ಒಬ್ಬ ಸ್ನೇಹಿತನು ನಿನಗಾಗಿ ಅಪೇಕ್ಷಿಸುವದರಿಂದ, ನೀನು ಈಗ ಓದುತ್ತಿರುವ ಈ ಪುಸ್ತಕವು ನಿನ್ನ ಕೈಯಲ್ಲಿ ಇರುತ್ತದೆ.

ಯೋಹಾನನು ವಿವರಿಸುತ್ತಾನೆ :

> ''ನಾವು ಕಂಡು ಕೇಳಿದ್ದು ನಿಮಗೂ ಗೊತ್ತಾಗಿ ನಮಗಿರುವ ಅನ್ಯೋನ್ಯತೆಯಲ್ಲಿ ನೀವೂ ಸೇರಬೇಕೆಂದು ಅದನ್ನು ನಿಮಗೆ ಪ್ರಸಿದ್ಧಿ ಪಡಿಸುತ್ತೇವೆ. ನಮಗಿರುವ ಅನ್ಯೋನ್ಯತೆಯು ತಂದೆಯ ಸಂಗಡಲೂ ಆತನ ಮಗನಾದ ಯೇಸು ಕ್ರಿಸ್ತನ ಸಂಗಡದಲೂ ಇರುವಂಥದು. ನಮ್ಮ ಭಯತರ ಸಂತೋಷವು ಪರಿಪೂರ್ಣವಾಗಬೇಕೆಂದು ನಾವು ಈ ಮಾತುಗಳನ್ನು ಬರೆಯುತ್ತೇವೆ'' (1 ಯೋಹಾನ 1:3,4).

ಹೌದು, ಕತ್ತಲೆಯ ರಾತ್ರಿಯಲ್ಲಿ ಬೆಳಕು ಆಕರ್ಷಣೀಯವಾದದ್ದಾಗಿರುವಂತೆ, ದೇವರ ಮಹಿಮೆಯ ಬೆಳಕು ಜನರನ್ನು ಆತನ ಬಳಿಗೆ ಇನ್ನೂ ಎಳೆಯುತ್ತಲಿದೆ. ದೇವರು ಹೇಗಿರುವನು ಎಂಬುದನ್ನು ತಿಳಿಯುವ ನಿನ್ನ ಅಪೇಕ್ಷೆಯಲ್ಲಿ ನೀನೂ ಸಹ ಮೋಶೆಯೊಂದಿಗೆ : ''ನಿನ್ನ ಮಹಿಮೆಯನ್ನು ನನಗೆ ತೋರಿಸು'' ಎಂದು ಪ್ರಾರ್ಥಿಸ ಬಹುದು.

### ಆಲೋಚಿಸಲು ವಿರಾಮ

1. ದೇವರಿಗಾಗಿ ನಿನ್ನ ಅನ್ವೇಷಣೆಯಲ್ಲಿ ನೀನು ವಿಚಾರ ಪೂರ್ವಕವಾಗಿ ಬೈಬಲನ್ನು ಓದಿರುವಿಯೋ ?

2. ನೀನು ಬೈಬಲನ್ನು ಓದುವಂತೆ ದೇವರು ತನ್ನನ್ನು ನಿನಗೆ ಪ್ರಕಟಿಸುವಂತೆ ಕೇಳಿಕೊಳ್ಳುವಿಯೋ ?

   ಒಂದು ಸೂಚಿತ ಪ್ರಾರ್ಥನೆ: ''ದೇವರೇ, ಈ ವಿಶ್ವವನ್ನು ಸೃಷ್ಟಿಸಿದ ಮತ್ತು ನನ್ನನ್ನು ಪ್ರೀತಿಸುವ ದೇವರು ನೀನಾಗಿದ್ದರೆ, ದಯವಿಟ್ಟು ನಿನ್ನನ್ನು ನನಗೆ ಪ್ರಕಟಿಸು ಮತ್ತು ಯೇಸು ಕ್ರಿಸ್ತನು ನಿನ್ನ ಕುಮಾರನು, ವಾಗ್ದತ್ತ ಮೆಸ್ಸೀಯನು ಆಗಿದ್ದರೆ, ನನಗೆ ತೋರಿಸು''.

3. ನೀನು ನಿಜವಾಗಿಯೂ ದೇವರನ್ನು ಆರಾಧಿಸಬೇಕಾಗಿದ್ದರೆ ಆತನು ಹೀಗಿರ ಬೇಕೆಂದು ನೀನು ಗುರುತಿಸುವಿಯೋ :

   ಮಾನವ ಸಂಶೋಧನೆಯಿಂದ ಆತನನ್ನು ಕಂಡುಕೊಳ್ಳಲು ನಿನ್ನ ಸಾಮರ್ಥ್ಯಕ್ಕಿಂತ ಹೆಚ್ಚು ದೊಡ್ಡವನು; ನಿನ್ನ ಮಾನವ ಮನಸ್ಸಿನಲ್ಲಿ ಆತನನ್ನು ಪೂರ್ಣವಾಗಿ ಗ್ರಹಿಸಿಕೊಳ್ಳುವ ನಿನ್ನ ಸಾಮರ್ಥ್ಯಕ್ಕಿಂತ ಹೆಚ್ಚು ದೊಡ್ಡವನು.

ಮಾನವ ಸ್ವಭಾವದ ಕೆಲವೊಂದನ್ನು ನಾನು ಅರ್ಥ
ಮಾಡಿಕೊಳ್ಳಬಹು ದೆಂದು ನಾನು ಯೋಚಿಸುತ್ತೇನೆ ಮತ್ತು
ಪುರಾತನ ಕಾಲದ ಎಲ್ಲಾ ನಾಯಕರು ಪುರುಷರಾಗಿದ್ದರೆಂದು
ನಿಮಗೆ ಹೇಳುತ್ತೇನೆ, ಮತ್ತು ನಾನು ಒಬ್ಬ
ಪುರುಷನಾಗಿದ್ದೇನೆ ; ಆದರೆ ಆತನಂತೆ ಯಾರೂ
ಇರುವದಿಲ್ಲ : ಯೇಸು ಕ್ರಿಸ್ತನು ಒಬ್ಬ ಮನುಷ್ಯನಿಗಿಂತ
ಹೆಚ್ಚಾಗಿದ್ದನು.

**ನೆಪೋಲಿಯನ್ನ**

## ಅಧ್ಯಾಯ 4

# ಜನರನ್ನು ನಿಜವಾಗಿಯೂ ಯಾವುದು ವಿಭಾಗಿಸುತ್ತದೆ?

ಇಂದು ಜಗತ್ತು ಜಾಗತಿಕ ಗ್ರಾಮದಂತೆ ವಿವರಿಸಲ್ಪಟ್ಟಿದೆ. ಹಾಗಿದ್ದರೂ ಅದು ಹಗೆತನವುಳ್ಳ ಜನರಿಂದ ತುಂಬಿಕೊಂಡಿದ್ದರಿಂದ, ಈ ಜಾಗತಿಕ ಗ್ರಾಮವು ವಾಸಿಸುವದಕ್ಕೆ ಗಂಡಾಂತರಕಾರಿಯಾದ ಸ್ಥಳವಾಗಿದೆ.

ಮೇಲ್ನೋಟಕ್ಕೆ ಮಾನವ ಕುಲವನ್ನು ವಿಭಾಗಿಸುವ ಸಮಸ್ಯೆಗಳು ರಾಜಕೀಯ, ಆರ್ಥಿಕ, ಗೃಹಕೃತ್ಯದ ಮತ್ತು ಔದ್ಯೋಗಿಕ ವಿಷಯನ್ನೊಳಗೊಂಡಿವೆ ಎಂಬಂತೆ ತೋರುತ್ತದೆ. ಈ ಸಮಸ್ಯೆಗಳ ಕ್ಷೇತ್ರಗಳು ಜನರು ಹೆಚ್ಚೆಚ್ಚಾಗಿ ಒಡೆದು ಹೋಗಲಿಕ್ಕೆ ಕಾರಣಗಳಾಗುತ್ತವೆ. ನಮ್ಮ ಜಗತ್ತಿನಲ್ಲಿ ಒಡೆದು ಹೋಗುವಿಕೆಯು ಅಸ್ತಿತ್ವ ದಲ್ಲಿರುವದಕ್ಕೆ ಇದಕ್ಕಿಂತಲೂ ಹೆಚ್ಚಿನ ಆದರೆ ಕಡಿಮೆ ಗುರುತಿಸಲಿಕ್ಕಾಗುವ ವಿಷಯಗಳು ಇರುತ್ತವೆ.

ಮೊದಲು, ಜನರಲ್ಲಿರುವ ವಿಭಜನೆಯ ಸ್ಪಷ್ಟವಾದ ಕಾರಣಗಳನ್ನು ಸಂಕ್ಷೇಪವಾಗಿ ವಿಚಾರಿಸೋಣ, ಆಮೇಲೆ ಮುಖ್ಯ ಕಾರಣದ ಮೇಲೆ ಕೇಂದ್ರಿಕರಿಸೋಣ.

### ಸ್ಪಷ್ಟವಾದ ಭಾಗಗಳು

**ರಾಜಕೀಯವಾಗಿ :** ರಾಜಕಾರಣಿಗಳು ಒಬ್ಬರಿಗೊಬ್ಬರು ಭಯದಿಂದಲೂ ಅವಿಶ್ವಾಸದಿಂದಲೂ ಎದುರಿಸುತ್ತಾರೆ. ಸಂಧಾನವಾದ

ದೃಷ್ಟಿಕೋನಗಳನ್ನು ಎದುರಿಸುವಾಗ, ಮಿಲಿಟರಿಯು ತಮ್ಮ ದೇಶದ ಭವಿಷ್ಯದ ಭದ್ರತೆಗೆ ಭರವಸೆ ಕೊಡುವುದೆಂದು ಅವರು ನಿರೀಕ್ಷಿಸುತ್ತಾರೆ.

ಈ ಮಧ್ಯ ಸಂಬಂಧ ಪಟ್ಟ ನಾಗರಿಕರು ಸಮಾಧಾನವನ್ನು ಮತ್ತು ಅಣು ಯುದ್ಧ ಸಾಮಗ್ರಿಗಳನ್ನು ಕಡಿಮೆ ಮಾಡುವದನ್ನು ಬೆಂಬಲಿಸಿ ತಮ್ಮ ಧ್ವನಿಯನ್ನು ಎತ್ತುತ್ತಾರೆ. ದೂರದರ್ಶನದಲ್ಲಿ ಈ ''ಸಮಾಧಾನ''ದ ಪ್ರದರ್ಶನಗಳನ್ನು ನೋಡಿದ ನಮ್ಮಲ್ಲಿ ಅನೇಕರು, ಅಂಥವುಗಳಲ್ಲಿ ಭಾಗವಹಿಸಿದವರು ಯುದ್ಧ ಮಾಡಲು ಕೆಲವು ಸಲ ಆಸಕ್ತರಾಗಿರುವರೋ ಎನ್ನುವ ರೀತಿಯಲ್ಲಿ ವರ್ತಿಸುವದನ್ನು ಕಂಡುಕೊಂಡಿರುವರು.

**ಆರ್ಥಿಕವಾಗಿ :** ಕ್ಷಾಮ, ಬರಗಾಲ, ಆಹಾರದ ಕೊರತೆ ಭೂಕಂಪ ಇವುಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಸಮಸ್ಯೆಗಳಾಗಿವೆ. ಇವು ಪ್ರತ್ಯೇಕವಾಗಿ ತೃತೀಯ ಜಗತ್ತಿನಲ್ಲಿ ಹೆಚ್ಚುತ್ತಲಿವೆ. ಐಶ್ವರ್ಯವಂತ ಮತ್ತು ಬಡರಾಷ್ಟ್ರಗಳ ಮಧ್ಯದಲ್ಲಿ ಅತೀ ದೊಡ್ಡ ಆರ್ಥಿಕ ವ್ಯತ್ಯಾಸವು ಕಾರಣವಾಗಿರುವ ನೋವಿಗೆ ಈ ನಾಶನಗಳು ಹೆಚ್ಚಾಗಿ ಕೂಡಿಸುತ್ತವೆ. ಸಹಾಯ ಮಾಡಲು ಪ್ರಯತ್ನಿಸುವ ಅನೇಕ ಜನರ ಒಳ್ಳೇ ಚಿತ್ತ ಮತ್ತು ತ್ಯಾಗವು ಇದ್ದರೂ, ಐಶ್ವರ್ಯವಂತರು ಹೆಚ್ಚು ಐಶ್ವರ್ಯವಂತರಾಗುತ್ತಿರುವದು ಮತ್ತು ಬಡವರು ಹೆಚ್ಚು ಬಡವರಾಗುತ್ತಾ ಹೋಗುತ್ತಿರುವದು ದುಃಖಕರವಾದ ಗಮನಿಸುವಿಕೆ ಯಾಗಿದೆ.

**ಗೃಹಕೃತ್ಯದ ವಿಷಯಗಳಲ್ಲಿ :** ಇಂದು ಮದುವೆಯ ಮತ್ತು ಕುಟುಂಬ ಜೀವನದ ಮುರಿಯಲ್ಪಡುವಿಕೆಯು ಸಾಂಕ್ರಾಮಿಕವಾದ ರೋಗದಂತೆ ಬೆಳೆದಿರುವದು ರಹಸ್ಯವಾಗಿ ಉಳಿದಿರುವದಿಲ್ಲ, ತನ್ನ ಕಣ್ಣೀರುಗಳೊಂದಿಗೆ, Letsoale ''ನನ್ನ ಮನೆಯು ಮುರಿದು ಹೋಗಿರುವುದು'' ಎಂದು ಹೇಳಿದನು, ''ನಾಲ್ಕು ಗೋಡೆಗಳ ಅವನ ಆಫ್ರಿಕನ್ ಗುಡಿಸಲವು ನಾಶವಾಗಿ ಹೋಗಿದೆಯೆಂದು ಯೋಚಿಸಿದೆನು ಆದರೆ Letsoale ತನ್ನ ಪ್ರೀತಿಯ ಹೆಂಡತಿಯು ತನ್ನನ್ನು ಬಿಟ್ಟು ಹೋಗಿದ್ದಾಳೆ ಎಂದು ಸೂಕ್ಷ್ಮವಾಗಿ ಹೇಳಿದ ವಿಧಾನ ಅದಾಗಿತ್ತು. ಇಂದು ಅನೇಕ ''ಮನೆಗಳು'' ಮುರಿದು ಹೋಗುತ್ತಿರುವವು, ಸ್ವಾರ್ಥಪರ ಜೀವನ ಶೈಲಿಗಳು ಪ್ರೀತಿಯ ಸಂಬಂಧಗಳನ್ನು

ನಾಶ ಮಾಡುತ್ತಲಿರುವವು. (ಹಾಗಿದ್ದರೂ ನಾವು ಅನಂತರದ ಪುಟದಲ್ಲಿ ನೋಡುವಂತೆ, ದೇವರ ಪ್ರೀತಿಯು ತಮ್ಮ ಮದುವೆಯನ್ನು ಸ್ಥಿರವಾದ ಐಕ್ಯತೆಯಲ್ಲಿ ಒಂದು ಗೂಡಿಸಲು ಬಯಸುವ ಯಾವುದೇ ದಂಪತಿಗಳಿಗೆ ಲಭ್ಯವಿರುವದೆಂಬದನ್ನು ನೋಡುವೆವು).

**ಔದ್ಯೋಗಿಕವಾಗಿ :** ಕೆಲಸದ ಸ್ಥಳದಲ್ಲಿ ಅತೃಪ್ತಿಯ ಬಗ್ಗೆ ಮಾನಸಿಕ ಉದ್ವೇಗಗಳ ಬಗ್ಗೆ ಕೇಳುವದು ವಾಡಿಕೆಯಾಗಿಬಿಟ್ಟಿದೆ. 1985ರ ಪ್ರಾರಂಭದಲ್ಲಿ ಬ್ರಿಟನ್ನಿನಲ್ಲಿ ಇಪ್ಪತ್ತನೆಯ ಶತಮಾನದ ಕಹಿಯಾದ ಔದ್ಯೋಗಿಕ ಪ್ರತಿಭಟನೆಯು ಮುಕ್ತಾಯಕ್ಕೆ ತರಲ್ಪಟ್ಟಿತು, ಮುಷ್ಕರಗಳೂ ಹಿಂಸೆಯ ಬೀದಿಯ ಎದುರಿಸುವಿಕೆಗಳೂ ಅಂತ್ಯಗೊಂಡರೂ, ಅವ್ಯಾಹತ ವಿರೋಧಗಳೂ ಕಹಿಯಾದ ಮನೋಭಾವನೆಗಳೂ ಕಾರ್ಮಿಕರ ಮತ್ತು ಆಡಳಿತಾಧಿಕಾರಿಗಳ ಸಂಬಂಧದಲ್ಲಿ ಮತ್ತು ಔದ್ಯೋಗಿಕ ಸಮಾಜದಲ್ಲಿಯೂ ಮುಂದರಿದವು. ಈ ಪರಿಸ್ಥಿತಿಯು ಕಾರ್ಮಿಕ - ಆಡಳಿತೆಯ ಹೋರಾಟಗಳ ಪರಿಣಾಮವಾಗಿ ಬಂದದ್ದು, 1904 ರಲ್ಲಿ ವೆಲ್ಸಿನ ಕಲ್ಲಿದ್ದಲು ಗಣಿಗಳಲ್ಲಿಯ ಅದೇ ರೀತಿಯ ಔದ್ಯೋಗಿಕ ಅಶಾಂತಿಯು ಹೇಗೆ ಭಿನ್ನವಾಗಿರುತ್ತದೆ. ಜಾನ್ ಪ್ಯಾರ್ರಿ ತನ್ನ ಪ್ರಥಮ ಅನುಭವದಿಂದ ಕತೆಯನ್ನು ಹೇಳಿದನು.

ನಾನು ಜಾನ್‌ನನ್ನು ಮೊದಲನೆಯ ಸಲ ಭೇಟಿಯಾದಾಗ, ಅವನು 91 ವರ್ಷ ಪ್ರಾಯದ ನಿವೃತ್ತ ಗಣಿ ಕೆಲಸದವನಾಗಿದ್ದ, ಸಂಪೂರ್ಣ ಕುರುಡನೂ, ಗಣಿಕೆಲಸದವರ ರೋಗವೆಂದು ಕರೆಯಲ್ಪಡುತ್ತಿದ್ದ ಪುಪ್ಪುಸದ ತೊಂದರೆಯಿಂದ ಕಷ್ಟಪಡುತ್ತಿದ್ದ. ಸಾಧ್ಯವಾದಾಗಲೆಲ್ಲಾ ನನ್ನ ಹೆಂಡತಿ ಮತ್ತು ನಾನು ನಾರ್ಥ ವೇಲ್ಸದಲ್ಲಿಯ ಅವನ ಬಡ ಗಣಿಗಾರನ ಮನೆಯನ್ನು ಸಂದರ್ಶಿಸುತ್ತಿದ್ದೆವು. 1904 ಮತ್ತು 1905ರ ಭಕ್ತಿ ಸಂಜೀವನದಲ್ಲಿ ದೇವರು ವೇಲ್ಸನಲ್ಲಿ ಪಾಪದ ಅರುಹು ಹುಟ್ಟಿಸುವದರಿಂದಲೂ ಬಲದಿಂದಲೂ ಮಾಡಿದ್ದನ್ನು ಜಾನ್‌ನು ಹೃದಯ ಪೂರ್ವಕ ನಗೆಯಿಂದಲೂ ಬಹಳ ಆನಂದದಿಂದಲೂ ಜ್ಞಾಪಿಸಿಕೊಂಡು ಪುನಃ ಹೇಳುತ್ತಿದ್ದನು. ಆ ಸಮಯದಲ್ಲಿ ಗಣಿಗಳಲ್ಲಿ ಕೆಲಸ ಮಾಡುವವರೂ ಅವರನ್ನು ಕೆಲಸಕ್ಕೆ ನೇಮಿಸಿಕೊಂಡವರೂ ಜೀವಿಸುವ ದೇವರ

ಸಂದರ್ಶನ ಹೊಂದಿದರು. ನೇರವಾದ ಪರಿಣಾಮವಾಗಿ ನಿಜವಾದ ಅನ್ಯೋನ್ಯತೆಯನ್ನು ನಂಬಿಕೆಯನ್ನು ಗೌರವವನ್ನು ಕಂಡುಕೊಂಡರು. 1905 ಮತ್ತು 1985ಕ್ಕೂ ಮಧ್ಯದಲ್ಲಿ ಎಂಥಾ ವ್ಯತ್ಯಾಸವಿದೆ.

ಜಾನ್‌ನು ಹರ್ಷದೊಂದಿಗೆ ಮಾತನಾಡಿದನು, ಆ ದಿನಗಳ ಬಗ್ಗೆ ಪ್ರತಿಬಿಂಬಿಸಿದನು. ಮಧ್ಯಪಾನಗಳಿಗೆ ಬೇಡಿಕೆ ಇಲ್ಲದ್ದರಿಂದ ಅನೇಕ ಮದ್ಯ ಮಾರಾಟದ ಮಳಿಗೆಗಳು ಮುಚ್ಚಲ್ಪಟ್ಟವು, ತನ್ನ ಜೊತೆ ಕೆಲಸದವರ ಗುಂಪಿನೊಂದಿಗೆ ದೇವರನ್ನು ಸ್ತುತಿಸುವ ಹಾಡುಗಳನ್ನು ಹಾಡಲು ಕೂಡಿ ಬಂದದ್ದನ್ನು ಜ್ಞಾಪಿಸಿಕೊಂಡನು. ''ಭಕ್ತಿ ಸಂಜೀವನ ಎಲ್ಲಿ ಎಂದು ನನ್ನ ಬಳಿಗೆ ಒಂದು ಜನರು ಕೇಳುವರು. ಎದೆಗೆ ಬಡಿದುಕೊಂಡು ''ಅದು ಇಲ್ಲಿ ಇದೆ ಮತ್ತು ಅದು ಇಲ್ಲಿಯೇ ಇದೆ'' ಎಂದು ಹೇಳುವನು.

## ನಿಜವಾದ ವಿಭಜನೆ

ಈ ವಿಭಜನೆಗಳು ಆಳವಾಗಿದ್ದರೂ, ಮಾನವ ಕುಲವನ್ನು ಆಶ್ಚರ್ಯಕರವಾಗಿ ಮತ್ತು ಸ್ಥಿರವಾಗಿ ವಿಭಾಗಿಸುವಂಥದ್ದು ಇರುತ್ತದೆ. ಈಗ ಅದು ಅನೇಕ ದೇಶಗಳ ಸಮಾಧಾನವನ್ನು ನಾಶಪಡಿಸಲು ಭಯಪಡಿಸುವ ಗಂಡಾಂತರವಾಗಿದೆ. ಜನರು ದೇವರ ಬಗೆಗಿನ ತಿಳುವಳಿಕೆಯಲ್ಲಿ ತಮ್ಮ ಗಲಿಬಿಲಿಯಿಂದ ಅಂತಿಮವಾಗಿ ವಿಭಾಗವಾಗಿ ಹೋಗಿದ್ದಾರೆ.

ಮಾನವ ಕುಲಕ್ಕೆ ತನ್ನ ಪ್ರಕಟನೆಯಲ್ಲಿ, ದೇವರು ಎಂದೂ ತನ್ನ ದೈವೀಯ ಅಸ್ತಿತ್ವದ ಬಗ್ಗೆ ಇರುವ ಸತ್ಯವನ್ನು ಸಂಧಾನ ಮಾಡಿಕೊಂಡಿಲ್ಲ. ಯೇಸುಕ್ರಿಸ್ತನು ಜನಿಸುವದಕ್ಕಿಂತ ಮೊದಲು, ದೇವರು ತಾನು ನಿಜವಾಗಿ ಇರುವಂತೆ ಜನರು ತಿಳಿದುಕೊಳ್ಳಲು ಸಹಾಯ ಮಾಡುವದಕ್ಕಾಗಿ ತಾನು ದೊಡ್ಡ ಬೆಳಕನ್ನು ಕಳುಹಿಸುವೆ ನೆಂದು ವಾಗ್ದಾನ ಮಾಡಿದನು. ''ಕತ್ತಲಲ್ಲಿ ಸಂಚರಿಸಿದ ಜನರಿಗೆ ದೊಡ್ಡ ಬೆಳಕು ಕಾಣಿಸಿತು'' (ಯೆಶಾಯ 9:2) ಎಂದು ಆತನು ಹೇಳಿದನು. ಈ ದೊಡ್ಡ ಬೆಳಕು ಹೇಗೆ ಗುರುತಿಸಲ್ಪಡುವುದು ಎಂಬ ವಿವರಗಳನ್ನೂ ದೇವರು ಕೊಟ್ಟನು: ''ಒಂದು ಮಗುವು ನಮಗಾಗಿ ಹುಟ್ಟಿದೆಯಷ್ಟೇ.... ವರದ ಮಗನು ನಮಗೆ ದೊರೆತನು.'' (ಯೆಶಾಯ 9:6).

ಒಂದು ಕೂಸು ಹುಟ್ಟುವುದು ಎಂದು ದೇವರು ಹೇಳಿದ್ದರೆ ಆ ಹೇಳಿಕೆಯ ಬಗ್ಗೆ ಯಾವ ಪ್ರತ್ಯೇಕವಾದ ಮಹತ್ವವೂ ಇರುತ್ತಿರಲಿಲ್ಲ. ಯಾವಾಗಲೂ ಕೂಸುಗಳು ಹುಟ್ಟುತ್ತಲೇ ಇರುತ್ತವೆಯಲ್ಲವೇ! ಆ ಸಂಗತಿಯು ಒಬ್ಬ ಮಗನು ಕೊಡಲ್ಪಡುವುದು ಎಂಬ ಸಂಗತಿಯೊಂದಿಗೆ ಕೂಡಿಸಲ್ಪಡದಿದ್ದರೆ ಒಂದು ಕೂಸು ಹುಟ್ಟುವುದು ಎಂಬುದನ್ನು ದಾಖಲೆ ಮಾಡಿದ್ದು ಮಹತ್ವದ್ದಾಗಿರುತ್ತಿರಲಿಲ್ಲ ಮತ್ತು ಈಗ ಒಮ್ಮೆ ಪ್ರವಾದನೆಯಾದದ್ದು ಇತಿಹಾಸವಾಗಿತ್ತು, ಯಾಕಂದರೆ ದೇವರು ಸಂಭವಿಸುತ್ತದೆಂದು ಹೇಳಿದ್ದು ಸಂಭವಿಸಿಯಾಗಿತ್ತು. ಭೂಲೋಕದ ಮೇಲೆ ಒಂದು ಕೂಸು ಜನಿಸಿತು : ಪರಲೋಕದಿಂದ ಒಬ್ಬ ಕುಮಾರನು ಕೊಡಲ್ಪಟ್ಟನು. ಒಬ್ಬ ಕುಮಾರನು ವರವಾಗಿದ್ದು ಒಂದು ಕೂಸಿನ ಜನನದ ಮುಖಾಂತರ ಕತ್ತಲೆಯಲ್ಲಿ ಅಲೆದಾಡುತ್ತಿದ್ದ ಜನರಿಗೆ ದೇವರು ಬೆಳಕನ್ನು ಕಳುಹಿಸಿಕೊಟ್ಟನು. ಈ ದಿನದ ವರೆಗೂ ಆ ಬೆಳಕು ಕತ್ತಲೆಯನ್ನು ನಮ್ಮ ಕಣ್ಣುಗಳಿಂದ ದೇವರನ್ನು ಅಡಗಿಸಿಡುವ ಸಂಶಯವನ್ನು ತೊಡೆದು ಹಾಕುತ್ತಲಿದೆ.

ದೇವರ ಅದ್ವಿತೀಯ ಮಗುವಿನ ಜನನವನ್ನು ಭಿನ್ನವಾಗಿರಿಸಲು ಮತ್ತು ಎಲ್ಲಾ ಇತರರಿಂದ ಆತನನ್ನು ಬೇರೆಯಾಗಿ ಇಡಲು ದೇವರು ತನ್ನ ಕುಮಾರನ ಜನನವು ಒಂದು ಅದ್ಭುತಕರವಾದ ''ಸಂಕೇತದಿಂದ'' ಅಧಿಕೃತ ಪಡಿಸುವೆನೆಂದು ವಾಗ್ದಾನ ಮಾಡಿದನು: ''ಇಗೋ, ಒಬ್ಬ ಕನ್ಯಕೆಯು ಗರ್ಭಿಣಿಯಾಗಿ ಮಗನನ್ನು ಹಡೆದು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು'' (ಯೆಶಾಯ 7:14).

ಆತನ ಹೆಸರು ಇಮ್ಮಾನುವೇಲ ಎಂಬುದಕ್ಕೆ ''ದೇವರು ನಮ್ಮ ಕೂಡ ಇದ್ದಾನೆ'' ಎಂದರ್ಥ ಎಷ್ಟು ಅದ್ಭುತಕರವಾದದ್ದಾಗಿದೆ. ಈ ಹೆಸರಿನಿಂದ ತಿಳಿಸಲ್ಪಟ್ಟಿದ್ದರ ಮುಖಾಂತರ, ಬೈಬಲಿನಲ್ಲಿ ದಾಖಲೆಯಾದಂತೆ, ಶುಭ ವಾರ್ತೆಯು ಇತರ ಎಲ್ಲಾ ಧರ್ಮಗಳ ಬೋಧನೆಗಳಿಂದ ಭಿನ್ನವಾಗಿರುವದನ್ನು ಮೆಚ್ಚಿಕೊಳ್ಳಲು ಪ್ರಾರಂಭಿಸ ಬೇಕು. ಸುಳ್ಳು ಧರ್ಮಗಳು ಮನುಷ್ಯನು ಹೇಗೆ ದೇವರಿಗೆ ತಲುಪಬೇಕು ಎಂಬುದನ್ನು ತೋರಿಸಲು ಪ್ರಯತ್ನಿಸುವಾಗ, ಬೈಬಲು ದೇವರು ಮನುಷ್ಯನನ್ನು ಹೇಗೆ ತಲುಪಿದ ನೆಂಬುದರ ದಾಖಲೆಯಾಗಿದೆ.

ಬೈಬಲಿನಲ್ಲಿ ದಾಖಲೆಯಾದಂತೆ, ದೇವರು ತನ್ನ ತೀರವನ್ನು

ಭೂಲೋಕದ ಮೇಲೆ ಸ್ಥಾಪಿಸಿದಾಗ, ಒಬ್ಬ ಕನ್ಯಕೆಯು ಗರ್ಭ ಧರಿಸಿದಳು. ಸಮಯ ಮತ್ತು ಸ್ಥಳದ ಭಾಗವಾಗಲು ವಿಶ್ವದ ಸೃಷ್ಟಿಕರ್ತನು ತನ್ನನ್ನು ತಗ್ಗಿಸಿಕೊಂಡ ಆ ದಿನವು ಈಗ ಚರಿತ್ರೆಯ ಸಂಗತಿಯಾಗಿದೆ: ''ಕರ್ತನ ದೂತನು ಅವನಿಗೆ ಕಾಣಿಸಿಕೊಂಡು - ಎಲೈ ಯೋಸೇಫನೇ, ದಾವೀದನ ವಂಶದವನೇ, ನಿನ್ನ ಹೆಂಡತಿಯಾದ ಮರಿಯಳನ್ನು ಸೇರಿಸಿಕೊಳ್ಳುವದಕ್ಕೆ ಅಂಜಬೇಡ. ಆಕೆಯ ಗರ್ಭವು ಪವಿತ್ರಾತ್ಮದಿಂದಲೇ ಆದದ್ದು''. (ಮತ್ತಾಯ 1:20) ಆನಂತರ, ಯೇಸುವು ಜನಿಸಿದ ನಂತರ ಅವನು ಪ್ರೌಢಾವಸ್ಥೆಗೇರಿದನು. ''ನಾನು ಮತ್ತು ನನ್ನ ತಂದೆಯೂ ಒಂದೇ ಆಗಿದ್ದೇವೆ'' (ಯೋಹಾನ 10:30) ಎಂದು ತನ್ನ ವಿರೋಧಿ ನಾಸ್ತಿಕರ ಎದುರಿನಲ್ಲಿ ತನ್ನ ದೈವತ್ವವನ್ನು ಒಪ್ಪಿಕೊಂಡನು.

ಅಪೊಲ್ಲೊ XV ರ ಗಗನಯಾತ್ರಿ ಜೇಮ್ ಐರ್ವಿನ್ ಹೀಗೆ ಬರೆದಿದ್ದಾನೆ : ''ಮನುಷ್ಯನು ಚಂದ್ರನ ಮೇಲೆ ನಡೆಯುವದಕ್ಕಿಂತ ದೇವರು ಭೂಮಿಯ ಮೇಲೆ ನಡೆಯುವುದು ಹೆಚ್ಚು ಮಹತ್ವದ್ದಾಗಿದೆ'' ನಿಶ್ಚಯವಾಗಿಯೂ, ಅಂತರಿಕ್ಷದಲ್ಲಿ ಮನುಷ್ಯನು ಸಾಧಿಸಿದ ಯಾವುದೇ ಅದ್ಭುತಕಾರ್ಯವನ್ನು ದೇವರು ನಿತ್ಯತ್ವದೊಳಗಿಂದ ಹೊರಗೆ ಬಂದು ಸಮಯದಲ್ಲಿ ಕಾಲಿಟ್ಟಾಗಿನ ಕ್ಷಣದ ಅದ್ಭುತ ಕಾರ್ಯದೊಂದಿಗೆ ಹೋಲಿಸಲ್ಪಡಲಾರನು.

ಒಂದು ಮಗುವು ಜನಿಸುವುದು ಮತ್ತು ಒಬ್ಬ ಕುಮಾರನು ಕೊಡಲ್ಪಡುವನು ಎಂಬ ಪ್ರವಾದನೆಯು ಕೊಡಲ್ಪಟ್ಟ ನಂತರ, ಈ ಅದ್ವಿತೀಯ ವ್ಯಕ್ತಿಯ ಪ್ರವಾದಿಕ ''ಪರಿಚಯವು'' ವಿವರವಾಗಿ ಕೊಡಲ್ಪಡುತ್ತದೆ: ''ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ ಹೆಸರು. ಅವನ ಮುಖಾಂತರ ದಾವೀದನ ಸಿಂಹಾಸನದ ಆಡಳಿತವು ಅಭಿವೃದ್ಧಿಯಾಗುವುದು. ದಾವೀದನ ರಾಜ್ಯದಲ್ಲಿ ನಿತ್ಯ ಸಮಾಧಾನವಿರುವುದು'' (ಯೆಶಾಯ 9:6,7). ನಿಶ್ಚಯವಾಗಿಯೂ ಒಬ್ಬನು ಯಶಸ್ವಿ ಜಾಗತಿಕ ನಾಯಕನಾಗುವದಕ್ಕಾಗಿ ಒಬ್ಬನ ಬಲವೂ ಉದ್ದೇಶವೂ ಒಂದುಗೂಡಿರುವಂಥದ್ದಾಗಿರ ಬೇಕು. ಇಂದಿನ ಜಗತ್ತಿನಲ್ಲಿಯೂ ಸಹ, ಸರಿಯಾದ ಸಂಗತಿಯನ್ನು ತಿಳಿದವರನ್ನು ಮಾತ್ರವೇ

ಅಲ್ಲ ಅದನ್ನು ಮಾಡಲು ಬಲವುಳ್ಳ ನಾಯಕರಿಗಾಗಿ ಹುಡುಕಲಾಗುತ್ತಿದೆ. ಕೆಲವು ನಾಯಕರು ಯಾವ ಕಾರ್ಯ ಮಾಡಬೇಕು ಎಂಬುದನ್ನು ತಿಳಿದಿರಬಹುದು, ಆದರೆ ನಿರತಂರವಾದ ಸಮಾಧಾನವನ್ನು ಉತ್ಪಾದಿಸಲು ಬಲ ಮತ್ತು ಜ್ಞಾನವು ಚರಿತ್ರೆಯಲ್ಲಿ ಯಾವ ನಾಯಕನಿಗೂ ಇರುವದಿಲ್ಲ.

ಈ ಜಗತ್ತಿಗೆ ಸ್ಥಿರವಾದ ಸಮಾಧಾನವನ್ನು ತರಲು ಸಮಾಧಾನದ ಅರಸನಿಗೆ ಜ್ಞಾನವೂ ಬಲವೂ ಎರಡು ಇರುವವು. ಒಂದು ದಿನ ಭೂಲೋಕವನ್ನು ಆಳಲು ಯೇಸುವು ಹಿಂದಿರುಗಿ ಬರುವನು. ಆ ದಿನವು ಉದಯವಾಗುವಾಗ, ಎಲ್ಲಾ ಯುಧ್ಧಾಸ್ತ್ರಗಳ ಕಾರ್ಖಾನಗಳು ಮುಚ್ಚಲ್ಪಡುವವು : ಸ್ಫೋಟಗೊಳಿಸಿದ ನ್ಯೂಕ್ಲಿಯರ ಬಾಂಬುಗಳು ನಿಷ್ಕ್ರಿಯಗೊಳಿಸಲ್ಪಡುವವು, ಮತ್ತು ಪ್ರತಿಯೊಂದು ಗಡಿಯನ್ನು ಕಾಯುವವನು ಸೈನಿಕರು ಸದಾಕಾಲಕ್ಕೆ ಅವರ ಮನೆಗೆ ಕಳುಹಿಸಲ್ಪಡುವರು.

ಮನುಷ್ಯನು ಮಾನವ ಜನಾಂಗವನನ್ನು ಆಳಿ ನಡಿಸಲು ನಿರಾಶೆಯಿಂದ ಸಾಮರ್ಥ್ಯವಿಲ್ಲದವನಾಗಿದ್ದಾನೆಂಬುದನ್ನು ಆಗಲೇ ಪ್ರದರ್ಶಿಸಿದ್ದಾನೆ. ವಿಶ್ವ ಸಾಮ್ರಾಜ್ಯದ ರಾಜದಂಡವನ್ನು ಸಮಾಧಾನದ ಪ್ರಭುವು ಹಿಡಿಯುವಾಗ, ಆ ಕ್ಷಣದ ವರೆಗೆ ಎಲ್ಲರಿಗಾಗಿ ಸಮಾಧಾನ ಮತ್ತು ನ್ಯಾಯ ಕಾದುಕೊಂಡಿರಬೇಕು : ಆಗ ಜನರು, ''ತಮ್ಮ ಆಯುಧಗಳನ್ನು ಕುಲುಮೆಗೆ ಹಾಕಿ ಕತ್ತಿಗಳನ್ನು ಗುಳಗಳನ್ನಾಗಿಯೂ ಬರ್ಚಿಗಳನ್ನು ಕುಡುಗೋಲುಗಳನ್ನಾಗಿಯೂ ಮಾಡುವರು. ಜನಾಂಗವು ಜನಾಂಗಕ್ಕೆ ವಿರುದ್ಧವಾಗಿ ಕತ್ತಿಯೆನ್ನತ್ತದು, ಇನ್ನು ಯುದ್ಧಾಭ್ಯಾಸವು ನಡೆಯುವದೇ ಇಲ್ಲ.'' (ಯೆಶಾಯ 2:4).

ಆ ಸಮಾಧಾನದ ದಿನದಂದು : ''ಸಮುದ್ರದಲ್ಲಿ ನೀರು ಹೇಗೋ ಹಾಗೆಯೇ ಭೂಮಿಯಲ್ಲಿ ಯೆಹೋವನ ಮಹಿಮೆಯ ಜ್ಞಾನವು ತುಂಬಿಕೊಂಡಿರುವುದು'' (ಹಬಕ್ಕೂಕ 2:14).

ನಿತ್ಯತ್ವದ ದೇವರನ್ನು ತೃಪ್ತಿಗೊಳಿಸುವ ಇತಿಹಾಸಕ್ಕೆ ಬೇರೆಯಾವ ಮುಕ್ತಾಯವೂ ಇರುವದಿಲ್ಲ.

ಆದರೆ ಕರ್ತನಾದ ಯೇಸುವಿನ ನಿರ್ದೇಶನದ ಅಧೀನತೆಯಲ್ಲಿ ವಿಶ್ವದ ಸಮಾಧಾನದ ದಿನದ ಮೊದಲು, ಜನರ ಮಧ್ಯದಲ್ಲಿ ಆಳವಾದ ಮತ್ತು ನಿಜವಾದ ವಿಭಜನೆಯು ಸ್ಪಷ್ಟವಾಗಿ ತೋರಿ ಬರುವುದು ಮತ್ತು ಬರಲಿಕ್ಕಿದ್ದ ಸಂಘರ್ಷಣೆಯು ಯೇಸು ಕ್ರಿಸ್ತನ ವ್ಯಕ್ತಿತ್ವದ ಸುತ್ತ ಕೇಂದ್ರೀಕೃತವಾಗಿರುವುದು.

**ಆದುದರಿಂದ, ಯೇಸುವು ಯಾರು, ಆತನು ಯಾಕೆ ಬಂದನು ಮತ್ತು ಆತನು ಇಲ್ಲಿದ್ದಾಗ ನಿಮಗಾಗಿ ಏನು ಮಾಡಿದನು ಎಂಬುದರ ಬಗ್ಗೆ ನೀವು ನಿಶ್ಚಿತವಾಗಿರುವುದು ಬಹಳ ಮಹತ್ವದ್ದಾಗಿದೆ.**

ಆದಿಕಾಂಡ ಪುಸ್ತಕ ಮತ್ತು ಯೋಹಾನನ ಸುವಾರ್ತೆಯು ಒಂದೇ ರೀತಿಯಲ್ಲಿ ಪ್ರಾರಂಭವಾಗುತ್ತವೆ. ಆದಿಕಾಂಡದಲ್ಲಿ : ಆದಿಯಲ್ಲಿ ದೇವರು ಆಕಾಶವನ್ನು ಭೂಮಿಯನ್ನು ಉಂಟು ಮಾಡಿದನು (ಆದಿಕಾಂಡ 1:1) ಎಂದು ಓದುತ್ತೇವೆ. ಯೋಹಾನನಲ್ಲಿ : ಆದಿಯಲ್ಲಿ ವಾಕ್ಯವಿತ್ತು...... ಆ ವಾಕ್ಯವು ದೇವರಾಗಿತ್ತು...... ಆತನ ಮೂಲಕವಾಗಿ ಸಮಸ್ತವು ಉಂಟಾಯಿತು (ಯೋಹಾನ 1:1,3) ಎಂದು ಓದುತ್ತೇವೆ. ಆದಿಕಾಂಡದಲ್ಲಿ ಎಲೋಹಿಮ್ ಎಂದು ಕರೆಯಲ್ಪಟ್ಟ ದೇವರು, ಯೋಹಾನನ ಸುವಾರ್ತೆ ಯಲ್ಲಿ ''ವಾಕ್ಯ'' ಎಂದು ಉಲ್ಲೇಖಿಸಲ್ಪಟ್ಟಿದೆ. ಎಲೋಹಿಮ್ ವಾಕ್ಯವಾಗಿದ್ದಾನೆ ಮತ್ತು ತನ್ನ ಸ್ವಂತ ಸೃಷ್ಟಿಯ ಮಧ್ಯದೊಳಗೆ ನಡೆಯಲು ಆತನು ದೇಹಧರಿಸಿಕೊಂಡನು. ವಾಕ್ಯವೆಂಬಾತನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. ತನ್ನ ಪೂರ್ಣ ಪಠ್ಯದಲ್ಲಿ ಈ ಭಕ್ತಿಭಾವನೆಯ ಹೇಳಿಕೆ ಹೀಗಿರುತ್ತದೆ :

> ''ಆದಿಯಲ್ಲಿ ವಾಕ್ಯವಿತ್ತು ; ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು. ಆ ವಾಕ್ಯವೆಂಬವನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು. ಆತನ ಮೂಲಕವಾಗಿ ಸಮಸ್ತವು ಉಂಟಾಯಿತು.... ಆತನು ಲೋಕದಲ್ಲಿ ಇದ್ದನು ; ಮತ್ತು ಲೋಕವು ಆತನ ಮೂಲಕವಾಗಿ ಉಂಟಾಯಿತು ; ಆದರೂ ಲೋಕವು ಆತನನ್ನು ಅರಿಯಲಿಲ್ಲ. ಆತನು ತನ್ನ ಸ್ವಾಸ್ತಕ್ಕೆ ಬಂದನು. ಆದರೆ ಸ್ವಂತ ಜನರು ಆತನನ್ನು ಅಂಗೀಕರಿಸಲಿಲ್ಲ...

ಆ ವಾಕ್ಯವೆಂಬವನು ನರವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು ; ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು.'' (ಯೋಹಾನ 1:1-3, 10-12,14).

ಅನೇಕ ಶತಮಾನಗಳ ಮೊದಲು ಮೋಶೆಯಂತೆ ಮತ್ತು ಎಲ್ಲಾ ಸಮಯಗಳ ಜನರಂತೆ, ಶಿಷ್ಯನಾದ ಪಿಲಿಪ್ಪನು ದೇವರು ಹೇಗಿರುತ್ತಾನೆಂಬುದನ್ನು ತಿಳಿಯಲು ಅಪೇಕ್ಷಿಸಿದನು.

''ಕರ್ತನೆ, ನಮಗೆ ತಂದೆಯನ್ನು ತೋರಿಸು'' (ಯೋಹಾನ 14:8) ಎಂದು ಹೇಳಿದಾಗ ಪಿಲಿಪ್ಪನು ಯೇಸುವಿಗೆ ವಿಶೇಷಭಿನ್ನಹ ಮಾಡಿದನು. ಸಾಕಷ್ಟು ಆಶ್ಚರ್ಯಕರ ವಾಗಿ, ಯೇಸುವು, ''ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ'' (ಯೋಹಾನ 14:9) ಎಂದು ಉತ್ತರಕೊಟ್ಟನು. ಅಂಥ ಆಶ್ಚರ್ಯಗೊಳಿಸುವ ಉತ್ತರವು, ಆತನು ತಾನೇ ದೇವರು ಆಗಿರದಿದ್ದರೆ, ಯೇಸುವನ್ನು ಅದು ಹುಚ್ಚನನ್ನಾಗಿ ಇಲ್ಲವೇ ಮೋಸಗಾರನನ್ನಾಗಿ ಮಾಡುತ್ತದೆ. ಇಂಥವೆರಡಾಗಿದ್ದಾನೆಂದು ಯಾರೂ ಆತನನ್ನು ದೂರುವುದಿಲ್ಲ. ಆತನು ದೇವರಾಗಿರದಿದ್ದರೆ, ಆತನು ಲೋಕವೆಂದೂ ಕಂಡಿರದಂಥ ಅತಿದೊಡ್ಡ ಮೋಸಗಾರನಾಗಿರುತ್ತಿದ್ದನು. ಆದುದರಿಂದ ನಾವು ಯೇಸುವನ್ನು ನೋಡುವಾಗ ದೇವರನ್ನು ನೋಡುತ್ತೇವೆ ಎಂದು ಸ್ವೀಕರಿಸತಕ್ಕದ್ದು.

ಈ ಹಂತದಲ್ಲಿ - ಯೇಸುವು ಯಾರಾಗಿದ್ದಾನೆ ಎಂಬ ಘೋಷಣೆಯಿಂದ - ಜನರು ಯೇಸುವನ್ನು ಬಿಟ್ಟು ಹೋಗಲಿಕ್ಕೆ ಪ್ರಾರಂಭಿಸಿದರು. ಒಂದು ಅರ್ಥದಲ್ಲಿ, ''ನಾನು ಮತ್ತು ತಂದೆಯು ಒಂದಾಗಿದ್ದೇವೆ'' (ಯೋಹಾನ 10:30) ಎಂದು ಯೇಸು ಹೇಳಿದಾಗ, ಕೆಲವರು ಆತನಲ್ಲಿ ದೇವರಿಗಾಗಿ ತಮ್ಮ ಅನ್ವೇಷಣೆಯ ಉತ್ತರವನ್ನು ಕಂಡು ಕೊಂಡದ್ದರಲ್ಲಿ ಆಶ್ಚರ್ಯವಿರುವದಿಲ್ಲ. ಹೀಗಿದ್ದರೂ, ಆ ರೀತಿಯಲ್ಲಿ ದೇವರು ತನ್ನನ್ನು ತಗ್ಗಿಸಿಕೊಳ್ಳುವ ಸಾಧ್ಯತೆಯನ್ನು

ಗ್ರಹಿಸಿಕೊಳ್ಳಲಾರದವರು ವಿರೋಧದೊಂದಿಗೆ ಪ್ರತಿಕ್ರಿಯೆ ತೋರಿಸಿದರು. ಯೇಸುವು ಕೆಲವರನ್ನು ಆಕರ್ಷಿಸಿದನು ಆದರೆ ಇತರರನ್ನು ಆತನು ದೂರ ಮಾಡಿದನು ; ಆತನನ್ನು ಹಿಂಬಾಲಿಸಿದವರು ಇದ್ದರೂ ಆತನ ಮರಣಕ್ಕೆ ಒಳಸಂಚು ಮಾಡಿದವರೂ ಇದ್ದರು.

ತನ್ನ ಜೀವನದ ಸಮಯದಲ್ಲಿಯೇ ಯೇಸುವು ಜನರನ್ನು ವಿಭಾಗಿಸಿದನು, ಆತನು ಸ್ಪಷವಾಗಿ ಹೇಳಿದನು :

''ನನ್ನ ಪಕ್ಷ ಹಿಡಿಯದವನು ನನಗೆ ವಿರೋಧಿ'' (ಮತ್ತಾಯ 12:30).

**ಹೇಗಿದ್ದರೂ, ಒಂದು ಪ್ರಾರಂಭದ ಪ್ರತಿಕ್ರಿಯೆಯು ಶಾಶ್ವತವಾದ ಉತ್ತರವಾಗಿ ಇರಬೇಕಾಗಿಲ್ಲ.**

ಯೇಸುವಿನ ವೈರಿಯಾಗಿದ್ದರಿಂದ ಬದಲಾಗಿ ಆತನ ಹಿಂಬಾಲಕನಾದ ಒಬ್ಬ ಮನುಷ್ಯನ ಬಗ್ಗೆ ಈಗ ಯೋಚಿಸೋಣ. ತನ್ನ ಮೊದಲಿನ ದಿನಗಳಲ್ಲಿ ಸೌಲನು, ಒಬ್ಬ ಯೆಹೂದಿ ರಬ್ಬಿಯು ಯೇಸುವಿನ ಹಿಂಬಾಲಕರನ್ನು ಬಹಳವಾಗಿ ದ್ವೇಷಿಸಿದನು ; ಅವನು ಅವರನ್ನು ಹಿಂಸಿಸಿದನು ಮತ್ತು ಅವರ ಮರಣಕ್ಕೆ ತನ್ನ ಒಪ್ಪಿಗೆಯನ್ನು ಕೊಟ್ಟಿದ್ದನು. ಆದರೆ ಅವನು ಮಾರ್ಪಾಟ ಹೊಂದಿದ ನಂತರ, ತನ್ನ ಉಳಿದ ವರ್ಷಗಳನ್ನು ಯೇಸುವನ್ನು ತನ್ನ ಕರ್ತನೂ ಯಜಮಾನನೂ ಎಂದು ಗೌರವಿಸುವದರಿಂದ ಕಳೆದನು. ಕೊನೆಗೆ, ಕ್ರಿಸ್ತನಿಗಾಗಿ ತನ್ನ ನಿಷ್ಠೆಯ ಕಾರಣದಿಂದ ಸಂತೋಷದಿಂದ ಮಹಾ ಕಠಿಣವಾದ ಶ್ರಮೆಯನ್ನು ಅನುಭವಿಸಿದನು. ಯಾವುದು ಭಿನ್ನತೆಯನ್ನು ಮಾಡಿತು ?

ಸೌಲನು ದಮಸ್ಕಕ್ಕೆ ಪ್ರಯಾಣ ಮಾಡುತ್ತಿದ್ದಾಗ, ಅವನು ಒಂದು ''ದೊಡ್ಡ ಬೆಳಕನ್ನು'' ನೋಡಿದನು. ಅವನು ತಾತ್ಕಾಲಿಕವಾಗಿ ಕುರುಡನಾಗುವಷ್ಟು ಆ ಬೆಳಕು ಪ್ರಕಾಶಮಾನವಾಗಿತ್ತು. ಸೌಲನು ತಾನು ದೇವರ ಸನ್ನಿಧಿಯಲ್ಲಿ ಇದ್ದನೆಂದು ಅಂತರ್ ದೃಷ್ಟಿಯಿಂದ ತಿಳಿದುಕೊಂಡನು.

ಯಾಹ್ವೆಗಾಗಿ ಗ್ರೀಕ ಶಬ್ದವನ್ನು ಉಪಯೋಗಿಸಿ, ಅವನು, ''ಕರ್ತನೇ, ನೀನು ಯಾರು ?'' ಎಂದು ಕೇಳಿದನು. ''ನೀನು ಹಿಂಸೆ ಪಡಿಸುತ್ತಿರುವ ಯೇಸುವೇ ನಾನು'' (ಅ.ಕೃ. 9:5) ಎಂದು ದೇವರು ಉತ್ತರ ಕೊಟ್ಟನು. ಆ

ದಿನದಂದು ಸೌಲನು, ಯಾಹ್ವೆ ಮತ್ತು ಯೇಸು ಒಬ್ಬನೇ ಎಂದು ಕಲಿತುಕೊಂಡನು.

ಈ ಪ್ರಕಟಣೆಯು ಯೇಸುವಿನ ಒಬ್ಬ ವೈರಿಯಾಗಿರುವದರಿಂದ ಸೌಲನು ಅಪೊಸ್ತಲ ಪೌಲನಾಗಿ ಬದಲಾದನು. ಆ ದಿನದ ಮುಂದೆ ಅವನು ಸಂಪೂರ್ಣವಾಗಿ ತನ್ನ ಜೀವಿತವನ್ನು ಸಂಪೂರ್ಣವಾಗಿ ಕರ್ತನಾದ ಯೇಸು ಕ್ರಿಸ್ತನಿಗೆ ಸಮರ್ಪಿಸಿದನು. ತನ್ನ ವಿಶ್ವಾಸಕ್ಕಾಗಿ ಬಹಳವಾಗಿ ಶ್ರಮೆಹೊಂದಿದರೂ, ಅವನು ತನ್ನ ಜೀವಿತದ ಉಳಿದ ಭಾಗವನ್ನು ದೇವರು ಭೂಲೋಕವನ್ನು ಸಂದರ್ಶಿಸಿದ್ದಾನೆ ಎಂಬ ಶುಭ ವಾರ್ತೆಯನ್ನು ಸಾರುವದರಲ್ಲಿ ಕಳೆದನು, ಪೌಲನ ಜೀವನದಲ್ಲಿ ಯೇಸು ಕ್ರಿಸ್ತನ ವಾಸ್ತವಿಕತೆಯು ಎಲ್ಲಾ ಸಮಯಗಳಲ್ಲಿ ಆತನನ್ನು ಅತೀ ದೊಡ್ಡ ಮಿಶನರಿಯನ್ನಾಗಿ ಮಾರ್ಪಡಿಸಿತು, ಎಲ್ಲಾ ಸಂಗತಿಗಳ ಕರ್ತನಾದ ಯೇಸುವಿನಿಂದ, ಕರ್ತನಾದ ಯೇಸುವಿಗಾಗಿ ಸೃಷ್ಟಿಸಲ್ಪಟ್ಟನು ಎಂಬ ಅವನ ದೃಢ ನಂಬಿಕೆಯಿಂದ ಅವನ ಪತ್ರಿಕೆಗಳು ತುಂಬಿಕೊಂಡಿರುತ್ತವೆ. (ಕೊಲೊಸ್ಸೆ 1:16).

ನಾವು ನೋಡಿದಂತೆ, ನಜರೇತಿನ, ಯೇಸುವು ಮೊರ್ಮನ್ನರು, ಯೆಹೋವ ಸಾಕ್ಷಿಗಳು ಮತ್ತು ಅನೇಕ ಇತರರು ನಂಬುವಂತೆ ದೇವರ ಒಬ್ಬ ಮಗ ಮಾತ್ರವೇ ಆಗಿರದೇ ಕುಮಾರನಾದ ದೇವರು ಆಗಿದ್ದಾನೆಂದು ಬೈಬಲ್ ಘೋಷಿಸುತ್ತದೆ: ಇಸ್ಲಾಮ ಬೋಧಿಸುವಂತೆ ಆತನು ಕೇವಲ ಒಬ್ಬ ಪ್ರವಾದಿಯಾಗಿರುವದಿಲ್ಲ. ಅಂಥ ಗುಂಪುಗಳ ಸುಳ್ಳು ಬೋಧನೆಗಳನ್ನು ಒಂದುಗೂಡಿಸುವ ಪ್ರಯತ್ನದಲ್ಲಿ ಅನೇಕರು ದೇವರು ತನ್ನ ಬಗ್ಗೆ ಕೊಟ್ಟ ಪ್ರಕಟನೆಯನ್ನು ಕಡೆಗಣಿಸುವದನ್ನು ಆಯ್ದುಕೊಂಡರು. ಇದು "Syncretism" ಎಂದು ಕರೆಯಲ್ಪಟ್ಟಿದೆ. ''ಭಿನ್ನವಾಗಿರುವ ನಂಬಿಕೆಗಳನ್ನು ಒಂದು ಗೂಡಿಸುವ ಪ್ರಯತ್ನ'' ಎಂದು ವೆಬ್‌ಷ್ಟರ್ಸ ಡಿಕ್ಶನರಿ ವಿವರಿಸುತ್ತದೆ.

ಉದಾಹರಣೆಗಾಗಿ, ಹಿಂದುಗಳು ಯೇಸುವನ್ನು ಸುಮ್ಮನೇ ತಮ್ಮ ಅನೇಕ ಇತರ ''ದೇವರುಗಳ'' ಸಾಲಿನಲ್ಲಿ ಕೂಡಿಸಿ ಒಪ್ಪಿಕೊಳ್ಳುತ್ತಾರೆ, ಎಲೀಯನ ದೇವರು, ನಿಜವಾದ ಮತ್ತು ಜೀವಿಸುವ ದೇವರು ಬಾಳನ ಪೂಜಾರಿಗಳಿಗೆ ಮಾಡಿದ್ದನ್ನು ನಾವು ಬಲ್ಲವರಾಗಿದ್ದೇವೆ. ಅದೇ ರೀತಿಯಲ್ಲಿ ಕರ್ತನಾದ ಯೇಸು

ಕ್ರಿಸ್ತನ ಮುಂದೆ ಎಲ್ಲರೂ ಆರಾಧಿಸಬೇಕು. ಆತನು ಕುಮಾರನಾದ ದೇವರಾಗಿದ್ದು, ನಿತ್ಯನಾಗಿ ತಂದೆಯೊಂದಿಗೂ ಪವಿತ್ರಾತ್ಮನೊಂದಿಗೂ ಒಂದಾಗಿದ್ದಾನೆ.

ಯೇಸುಕ್ರಿಸ್ತನು ದೇವರಾಗಿದ್ದಾನೆ ಎಂಬುದನ್ನು ನಾವು ಒಮ್ಮೆ ಅರ್ಥ ಮಾಡಿಕೊಂಡರೆ, ಆತನು ಕನ್ನಿಕೆಯಲ್ಲಿ ಜನಿಸಿದ್ದನ್ನು, ಆತನ ಅನೇಕ ಅದ್ಭುತ ಕಾರ್ಯಗಳನ್ನು, ಆತನ ಮರಣವನ್ನು ಮತ್ತು ಪುನರುತ್ಥಾನವನ್ನು ಪರಲೋಕದೊಳಗೆ ಆತನ ದಿವಾರೋಹಣವನ್ನು ಮತ್ತು ಬಲ, ಮಹಿಮೆಯೊಂದಿಗೆ ಆತನು ಭೂಲೋಕಕ್ಕೆ ಹಿಂದಿರುಗಿ ಬರುವದನ್ನು ನಂಬುವದರಲ್ಲಿ ನಮಗೆ ತೊಂದರೆ ಇರುವದಿಲ್ಲ. ಯಾಕಂದರೆ ಯೇಸು ಕ್ರಿಸ್ತನು ನಿಜವಾದ ದೇವರೂ, ಎಲ್ಲಾ ನಿಯಮಗಳೊಂದಿಗೆ ಮತ್ತು ಜೀವನಕ್ಕೆ ಸಹಾಯ ಮಾಡುವ ಪದ್ಧತಿಗಳೊಂದಿಗೆ ವಿಶ್ವದ ಸೃಷ್ಟಿಕರ್ತನೂ ಆಗಿದ್ದಾನೆ. ಪ್ರೀತಿ ಮತ್ತು ವಿಮೋಚನೆಯ ತನ್ನ ಸ್ವಂತ ಉದ್ದೇಶಗಳಿಗಾಗಿ ಆತನು ಸೃಷ್ಟಿಸಿದ ಎಲ್ಲಾ ನಿಯಮಗಳನ್ನು ದಾಟಿ ಹೋಗುವಾತನಾಗಿದ್ದಾನೆ.

ನಜರೇತಿನ ಯೇಸುವಿನ ವ್ಯಕ್ತಿತ್ವದ ಸುತ್ತಲೂ ಲೋಕವು ವಿಭಜಿಸಲ್ಪಟ್ಟಿದೆ. ವಿಭಾಗವಾಗಿ ಹೋದ ಗುಂಪುಗಳು ಒಂದಕ್ಕೊಂದರಿಂದ ದೂರ ಹೋದದ್ದು ''ಇರುವವರು'' ಮತ್ತು ''ಇಲ್ಲದವರು'' ಎಂಬವರನ್ನಾಗಲೀ, ರಾಜಕೀಯವಾಗಿ ಬಲವುಳ್ಳವರೂ ಮತ್ತು ರಾಜಕೀಯವಾಗಿ ಬಲವಿಲ್ಲದವರೂ ಎಂಬುದಾಗಿಯಾಗಲೀ, ಭಿನ್ನವಾದ ಧೈಯಗಳನ್ನೊಳಗೊಂಡ ಜನಾಂಗಗಳನ್ನಾಗಲೀ ಒಳಗೊಂಡಿರುವದಿಲ್ಲ. ದೇವರು ಈ ಲೋಕವನ್ನು ಸಂದರ್ಶಿಸಿದಾಗ ಕಾರಣವಾದ, ಅಸ್ತಿತ್ವದಲ್ಲಿರುವ ನಿಜವಾದ ವಿಭಜನೆಯು, ಮಾನವತೆಯನ್ನು ವಿಭಾಗಿಸುವ ಇತರ ಎಲ್ಲಾ ವಿಷಯಗಳಿಗಿಂತ ಎಷ್ಟೋ ಹೆಚ್ಚು ಮೂಲವಾದದ್ದಾಗಿದೆ.

ಈ ನಿಶ್ಚಿತವಾದ ಹೇಳಿಕೆಯು ಘಟನೆಗಳನ್ನು ಅತಿಯಾಗಿ ನಾಟಕೀಯವಾಗಿ ಹೇಳಿದ್ದಾಗಿರುವದಿಲ್ಲ, ಯಾಕಂದರೆ ಕರ್ತನಾದ ಯೇಸುವು ತಾನೇ ಹೀಗೆ ಹೇಳಿದ್ದಾನೆ.

> ''ದೇವರು ನಿಮ್ಮ ತಂದೆಯಾಗಿದ್ದರೆ, ನನ್ನನ್ನು ಪ್ರೀತಿಸುತ್ತಿದ್ದಿರಿ ; ಯಾಕಂದರೆ ನಾನು ದೇವರಿಂದಲೇ ಹೊರಟು ಲೋಕಕ್ಕೆ ಬಂದವನಾಗಿದ್ದೇನೆ, ನನ್ನಷ್ಟಕ್ಕೆ ನಾನೇ ಬರಲಿಲ್ಲ ; ಆತನೇ ನನ್ನನ್ನು ಕಳುಹಿಸಿದ್ದಾನೆ. ನೀವು ನನ್ನ ಮಾತನ್ನು ಗ್ರಹಿಸದೆ ಇರುವದಕ್ಕೆ ಕಾರಣವೇನು ? ನನ್ನ ಬೋಧನೆಗೆ ಕಿವಿಗೊಡಲಾರದೆ ಇರುವುದೇ ಕಾರಣ. ಸೈತಾನನು ನಿಮ್ಮ ತಂದೆ ; ನೀವು ಆ ತಂದೆಯಿಂದ ಹುಟ್ಟಿದವರಾಗಿದ್ದು ನಿಮ್ಮ ತಂದೆಯ ದುರಿಚ್ಛೆಗಳನ್ನೇ ನಡಿಸಬೇಕೆಂದಿದ್ದೀರಿ. ಅವನು ಆದಿಯಿಂದಲೂ ಕೊಲೆಗಾರನಾಗಿದ್ದು ಸತ್ಯದಲ್ಲಿ ನಿಲ್ಲಲಿಲ್ಲ ; ಅವನಲ್ಲಿ ಸತ್ಯವು ಇಲ್ಲವೇ ಇಲ್ಲ. ಅವನು ಸುಳ್ಳಾಡುವಾಗ ಸ್ವಭಾವಾನುಸಾರವಾಗಿ ಆಡುತ್ತಾನೆ; ಅವನು ಸುಳ್ಳುಗಾರನೂ ಸುಳ್ಳಿಗೆ ಮೂಲ ಪುರುಷನೂ ಆಗಿದ್ದಾನೆ'' (ಯೋಹಾನ 8:42-44).

ದೇವರು ತಂದೆಯಾಗಿರುವ ವಿಶ್ವಾಸಿಗಳ ಒಂದು ಕುಟುಂಬವು ಇರುವ ಹಾಗೆಯೇ, ಸೈತಾನನು ತಂದೆಯಾಗಿರುವ ಅವಿಶ್ವಾಸಿಗಳ ಒಂದು ಕುಟುಂಬವು ಇರುವುದೆಂಬುದನ್ನು ತಿಳಿಯಕೊಳ್ಳುವುದು ನಿಮಗೆ ವಿಸ್ಮಯಕರವಾಗಿ ಬರುವುದೋ ? ಪ್ರತಿಯೊಬ್ಬನೂ ದೇವರ ಮಗುವಾಗಿರುವದಿಲ್ಲ. ದೇವರ ಕುಟುಂಬದಲ್ಲಿ ಇರುವುದು ಇಲ್ಲವೇ ಸೈತಾನನ ಕುಟುಂಬದಲ್ಲಿ ಇರುವುದು, ಇವು ನಿನಗಾಗಿ ಮತ್ತು ನಿನಗಾಗಿ ಇರುವ ನಿತ್ಯವಾದ ಪರ್ಯಾಯಗಳಾಗಿವೆ.

ದೇವರ ಬಗ್ಗೆ ನಿನ್ನ ವಿಶ್ವಾಸದಲ್ಲಿ ನೀನು ಎಷ್ಟೋ ಯತಾರ್ಥತೆಯುಳ್ಳವನಾಗಿದ್ದರೂ, ನೀನು ಇನ್ನೂ ''ಯತಾರ್ಥವಾಗಿ'' ತಪ್ಪಾದವನಾಗಿರಬಹುದು. ಒಬ್ಬನು ಯತಾರ್ಥನಾಗಿದ್ದರೆ, ಆ ವ್ಯಕ್ತಿಯು ಯಾವುದನ್ನೂ ನಂಬಿದರೂ ತೊಂದರೆಯಿಲ್ಲ ಎಂದು ಹೇಳುವುದು ಸುಳ್ಳು ಮಾತಾಗಿದೆ. ಅದೇ ರೀತಿಯಲ್ಲಿ, ವಿಷವನ್ನು ಅದು ಔಷಧಿಯಾಗಿದೆಯೆಂದು ಯತಾರ್ಥವಾಗಿ ನಂಬಿ ನೀನು ತಿನ್ನಬಹುದು ಆದರೆ ನೀನು ಸತ್ತು ಹೋಗುವುದು ಖಚಿತ.

ನಿಜವಾಗಿಯೂ, ಮಾನವ ಕುಲವು ಎರಡು ಕುಟುಂಬಗಳಾಗಿ ವಿಭಾಗವಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ಆ ಎರಡು ಕುಟುಂಬಗಳಲ್ಲಿ ಒಂದಕ್ಕೆ ಇಲ್ಲವೇ ಇನ್ನೊಂದಕ್ಕೆ ಸೇರಿದವನಾಗಿರುತ್ತಾನೆ. ದೇವರ ಕುಟುಂಬ ಇಲ್ಲವೇ ಸೈತಾನನ ಕುಟುಂಬ. ನೀನು ಯಾರ ಕುಟುಂಬಕ್ಕೆ ಸೇರಿರುವಿ ಎಂಬುದನ್ನು ನೀನು ತಿಳಿದುಕೊಳ್ಳುವುದು ಬಹಳ ಪ್ರಾಮುಖ್ಯವಾದದ್ದಾಗಿದೆ. ದೇವರ ಕುಟುಂಬದ ಸದಸ್ಯನಾಗುವಲ್ಲಿ ಪ್ರಥಮ ಹೆಜ್ಜೆಯು ದೇವರು ಯಾರಾಗಿದ್ದಾನೆ ಮತ್ತು ನಮಗಾಗಿ ತನ್ನ ಕುಮಾರನನ್ನು, ಯೇಸುವನ್ನು ಕೊಡುವದರಲ್ಲಿ ಆತನು ಏನು ಮಾಡಿದ್ದಾನೆ ಎಂಬುದನ್ನು ಅರ್ಥಮಾಡಿಕೊಳ್ಳುವುದಾಗಿದೆ.

''ಯೇಸು'' ಎಂಬ ಹೆಸರಿನ ಅರ್ಥ ''ಯೆಹೋವನು ರಕ್ಷಣೆಯಾಗಿದ್ದಾನೆ''. ದೇವರು ಯೋಸೆಫನಿಗೆ ಹೀಗೆ ಹೇಳಿದನು ; ''........ ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು ; ಯಾಕಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು'' (ಮತ್ತಾಯ 1:21).

**ಆಲೋಚಿಸಲು ವಿರಾಮ**

1. ನೀನು ಯತಾರ್ಥನಾಗಿರುವವರೆಗೆ, ದೇವರ ಬಗ್ಗೆ ನೀನು ಏನನ್ನಾದರೂ ನಂಬಬಹುದೋ ?
2. ಜನರೊಳಗೆ ವಿಭಾಗವಾಗುವ ಅಂತಿಮ ಕಾರಣ ಯಾವುದು ? ಅದು ರಾಜಕೀಯವಾದದ್ದೋ, ಆರ್ಥಿಕವಾದದ್ದೋ, ಮನೆಗೆ ಇಲ್ಲವೇ ಉದ್ಯೋಗಕ್ಕೆ ಸಂಬಂಧಿಸಿದ್ದೋ ? ಇಲ್ಲವೇ ಅದು ಆತ್ಮಿಕವಾದದ್ದೋ ಹಾಗೂ ನಿತ್ಯವಾದದ್ದೋ ?
3. ಕರ್ತನಾದ ಯೇಸುವು ವಿವರಿಸಿದ ಎರಡು ಕುಟುಂಬಗಳಲ್ಲಿ ಯಾವ ಒಂದಕ್ಕೆ ನೀನು ಒಳಪಡಲು ಬಯಸುತ್ತೀ ?

ನೈತಿಕ ಕೆಡುಕಿನ ಆಳವಾದ ಅರ್ಥದಲ್ಲಿ (ಗ್ರಹಿಕೆಯಲ್ಲಿ), ಬಹುಶಃ
ಇತರ ಯಾವುದಕ್ಕಿಂತಲೂ ಹೆಚ್ಚಾಗಿ ದೇವರ ರಕ್ಷಿಸುವ ಜ್ಞಾನವು
ವಾಸಿಸಿರುತ್ತದೆ.

**ಡಾ ॥ ಆರ್ನೊಲ್ಡ (ಹೆಡ್ ಮಾಸ್ತರ ರಗ್ಬಿ ಪಬ್ಲಿಕ್ ಸ್ಕೂಲ್)**

## ಅಧ್ಯಾಯ 5

# ನಿಜವಾದ ಸಮಸ್ಯೆಯು ಯಾವುದು ?

ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಈ ಜಗತ್ತಿನ ಭವಿಷ್ಯದ ಬಗ್ಗೆ ಅನೇಕ ಜನರು ಬಹಳ ಆಶಾವಾದಿಗಳಾಗಿದ್ದರು. ಅದು ಸಮಾದಾನದ ಮತ್ತು ಸಮೃದ್ಧಿಯ ಸುವರ್ಣ ಯುಗವನ್ನು ಪ್ರವೇಶಿಸಲಿಕ್ಕಿದೆಯೆಂದು ಅವರು ನಂಬಿದ್ದರು. ಈ ನೂತನ ಯುಗದ ಆಶೀರ್ವಾದಗಳು ಪ್ರತಿಯೊಂದು ದೇಶದಲ್ಲಿ, ನಿರಾಶೆ, ರೋಗ ಮತ್ತು ಕಡುಬಡತನದಿಂದ ವಿವರಿಸಲಾಗದಂಥ ಶ್ರಮೆಯಿಂದ ಬಾಧಿಸಲ್ಪಟ್ಟ ದೇಶಗಳಲ್ಲಿಯೂ ಸಹ ಕಂಡು ಬರುವವೆಂದು ಅನೇಕರು ಯೋಚಿಸಿದರು. ಆದರೆ 1914 ರಲ್ಲಿ ಯುರೋಪದಲ್ಲೆಲ್ಲಾ ಯುದ್ಧದ ಕಹಳೆಗಳು ಊದಲ್ಪಟ್ಟವು.

ಮತ್ತು ಇಂದು, ಇಪ್ಪತ್ತೊಂದನೆಯ ಶತಮಾನವು ತೆರೆದುಕೊಳ್ಳುತ್ತಿದ್ದಂತೆ, ನಾವು ನೋಡಿದ ಅಗ್ರಾಹ್ಯವಾದ ವೈಜ್ಞಾನಿಕ ಸಾಧನೆಗಳಿದ್ದರೂ, ಹೊಳೆಯುವ ನಾಳಿನ ದಿನದ ಬಗ್ಗೆ ಇನ್ನು ಮಾತನಾಡದಿರುವಂತೆ ತೋರುತ್ತದೆ. ಅದರ ಬದಲು, ಅತಿಶಯವಾಗಿ ವಿಪುಲ ಶಕ್ತಿಯೊಂದಿಗಿರುವ ಜಗತ್ತನ್ನು ನಾಶಪಡಿಸುವ ನ್ಯುಕ್ಲಿಯರ ಆಯುಧಗಳ ಬಗ್ಗೆ ಮಿಲಿಯಗಟ್ಟಲೆ ಜನರು ಚಿಂತೆಗೊಳಗಾಗಿದ್ದಾರೆ. ಅಂತರಾಷ್ಟ್ರೀಯ ಭಯೋತ್ಪಾದನೆ ಮತ್ತು ರಾಷ್ಟ್ರೀಯ ಸಮಸ್ಯೆಗಳ ಸಂಕೀರ್ಣತೆಯು ನಾವು ಇಂದು ಅತಿಯಾದ ಸಂಧಿಗ್ದವಾದ ಮತ್ತು ಸಂಭವನೀಯವಾದ ಗಂಡಾಂತಕಾರೀ

ಮಾನವ ಇತಿಹಾಸದ ವರ್ಷಗಳಲ್ಲಿ ನಾವು ಜೀವಿಸುತ್ತಿದ್ದೇವೆಂದು ಅನೇಕ ಬುದ್ಧಿವಂತ ಜನರು ನಿರ್ಧರಿಸಿರುತ್ತಾರೆ. ಇಂದಿನ ಜಗತ್ತಿನಲ್ಲಿ ಜನರ ಧೃವಿಕರಣದ ಬಗ್ಗೆ ಈಗಾಗಲೇ ಯೋಚಿಸಿದ್ದೇನೆ. ನಾಗರಿಕ ಸಮಾಜದ ತಿರುಳೇ ಇಂದು ದಾಳಿಗೊಳಪಟ್ಟದೆ. ಯಾವುದು ತಪ್ಪಾಗಿ ಹೋಯಿತು ?

ಈ ಪ್ರಶ್ನೆಗೆ ಉತ್ತರ ಕೊಡುವ ಪ್ರಯತ್ನದಲ್ಲಿ ಜಗತ್ತಿನ ಪ್ರಸಿದ್ಧ ನಾಯಕರು ಒಂದು ಗೂಡಿ ಮಾತನಾಡುತ್ತಾರೆ. ಅವರು ವಿಷಯಗಳನ್ನು ಚರ್ಚಿಗೆ ಒಬ್ಬರೊಬ್ಬರ ವಾದಗಳನ್ನೂ ಸಿದ್ಧಾಂತಗಳನ್ನು ಕೇಳಿ ಸೂಚಿಸುವಾಗ ಜಗತ್ತು ಒಂದು ಸಮಸ್ಯೆಯಿಂದ ಮತ್ತೊಂದು ಸಮಸ್ಯೆಗೆ, ಸಂಧಿಗ್ಧ ಪರಿಸ್ಥಿತಿಗೆ ಒಳಗಾಗಿರುತ್ತದೆ. ಎಷ್ಟೇ ಸಾಮರ್ಥ್ಯ ವ್ಯಯಿಸಲ್ಪಟ್ಟರೂ, ಎಷ್ಟೇ ಹಣಕಾಸು ಹಾಕಲ್ಪಟ್ಟರೂ ಜಗತ್ತು ಓಡುತ್ತಿರುವ ದಿಕ್ಕನ್ನು ಬದಲಾಯಿಸಲು ಯಾರೂ ಶಕ್ತರಾಗುವಂತೆ ಕಂಡು ಬರುತ್ತಿರುವದಿಲ್ಲ. ಪ್ರಸಿದ್ಧ ನಾಯಕರು, ರಾಜಕೀಯ ವ್ಯಕ್ತಿಗಳು, ಬುದ್ಧಿವಂತ ವಿಜ್ಞಾನಿಗಳು ಪಂಡಿತರು, ಜಾಣ ವ್ಯವಹಾರಜ್ಞರು, ಜಾಗತಿಕ ಬ್ಯಾಂಕರ್ಸ್, ಸನ್ಮಾನಿತ ವೈದ್ಯರು ಸಮಾಜ ಕಾರ್ಯಕರ್ತರು ಎಲ್ಲರೂ ತಮ್ಮ ಪ್ರತ್ಯೇಕವಾದ ಪಾಂಡಿತ್ಯವನ್ನು ದಯಪಾಲಿಸಿದ್ದಾರೆ. ಅದಾಗ್ಯೂ ಇನ್ನು ಉತ್ತರವು ಕಂಡುಹಿಡಿಯಲ್ಪಟ್ಟಿರುವದಿಲ್ಲ.

ಮತ್ತು ಈ ಪಂಡಿತರಿಂದ, ಪರಿಹಾರವು ಕಂಡುಕೊಳ್ಳಲ್ಪಡುವ ಮೊದಲು ಮೂಲ ಸಮಸ್ಯೆಯು ಗುರುತಿಸಲ್ಪಡಲಿಕ್ಕೆ ಅದು ಯಾವುದು ಎಂಬುದನ್ನು ದೇವರು ಘೋಷಿಸುತ್ತಾನೆಂಬುದರ ಕಡೆಗೆ ಗಮನ ಕೊಡಲ್ಪಟ್ಟಿಲ್ಲ. ನಮ್ಮ ನಿಜವಾದ ಸಮಸ್ಯೆ ಯನ್ನು ದೇವರು ಮಾತ್ರವೇ ನಮ್ಮ ಗಮನಕ್ಕೆ ತರಲು ಶಕ್ತನಾಗಿದ್ದಾನೆ ಮತ್ತು ಈ ಅಂಶದಲ್ಲಿ ದೇವರಿಗಾಗಿ ನಿಜವಾಗಿಯೂ ಹುಡುಕುವವರ ಮತ್ತು ಕೇವಲ ಧಾರ್ಮಿಕ ಕುತೂಹಲವಿರುವವರ ಮಧ್ಯದಲ್ಲಿಯ ಭಿನ್ನತೆಯನ್ನು ಗುರುತಿಸುತ್ತೇವೆ.

''ನಮ್ಮ ಸ್ವರೂಪದಲ್ಲಿ ಮನುಷ್ಯನನ್ನು ಉಂಟುಮಾಡೋಣ'' (ಆದಿಕಾಂಡ 1:26) ಎಂದು ದೇವರು ಹೇಳಿದನು. ''ದೇವರ ಸ್ವರೂಪದಲ್ಲಿ ಮನುಷ್ಯನು ಯಾವ ರೀತಿಯಲ್ಲಿ ಉಂಟು ಮಾಡಲ್ಪಟ್ಟನು ?'' ಎಂದು ನೀನು ಕೇಳಬಹುದು. ನಿಶ್ಚಯವಾಗಿ ದೈಹಿಕ ಸ್ವರೂಪದಲ್ಲಿ ಅಲ್ಲ, ಯಾಕಂದರೆ

''ದೇವರು ಆತ್ಮ ಸ್ವರೂಪನು'' ಎಂದು ಕರ್ತನಾದ ಯೇಸುವು ಹೇಳಿದ್ದಾನೆ. (ಯೋಹಾನ 4:24). ನಮಗಿರುವಂತೆ ದೇವರಿಗೆ, ಕಾಲುಗಳು, ಕಣ್ಣುಗಳು, ತೋಳುಗಳು ಇರುವದಿಲ್ಲ. ಈ ದೇವರು ''ಅಮರತ್ವವುಳ್ಳವನು ಅಗಮ್ಯವಾದ ಬೆಳಕಿನಲ್ಲಿ ವಾಸಮಾಡಿದವನೂ ಆಗಿದ್ದಾನೆ'' (1 ತಿಮೊಥೆ6:16). ಅದೃಶ್ಯನಾದ ಮನುಷ್ಯನು ಎಂದೂ ಅಸ್ತಿತ್ವದಲ್ಲಿರುವದಿಲ್ಲ. ಆದುದರಿಂದ ಮನುಷ್ಯರು ಜೀವಿಸುವದರಲ್ಲಿಯ ದೇಹಕ್ಕಿಂತಲೂ ಹೆಚ್ಚು ಬೆಲೆಯುಳ್ಳದ್ದು ಯಾವುದೋ ಇರುತ್ತದೆ. ದೇಹವು ಬಿಟ್ಟುಕೊಡುವಾಗ ಜೀವಿಸುವ ನಿಜವಾದ ವ್ಯಕ್ತಿ ಇದಾಗಿದೆ - ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟ ''ವ್ಯಕ್ತಿ'' ಅದಾಗಿದೆ.

ದೇವರಿಗೆ ಮನಸ್ಸು, ಭಾವನೆಗಳು ಮತ್ತು ಚಿತ್ತ ಇದೆಯೆಂದು ಬೈಬಲ್ ಪ್ರಕಟಿಸುತ್ತದೆ. ಈ ಮೂರು ಕ್ಷೇತ್ರಗಳಲ್ಲಿ ಮನುಷ್ಯನು ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟನು. ಹಾಗಿದ್ದರೂ ಆತನು ದೇವರಾಗಿದ್ದುದರಿಂದ, ಆತನ ಬುದ್ಧಿ ಶಕ್ತಿ, ಭಾವನೆಗಳು ಮತ್ತು ಇಚ್ಛಾಶಕ್ತಿಯು ಅಪರಿಮಿತವಾದವುಗಳು ; ಅಂದರೆ ಯಾವುದೇ ಮಿತಿಯಿಲ್ಲದವುಗಳಾಗಿವೆ. ಆತನ ಸ್ವಭಾವವು ಅಂಥದ್ದಾಗಿರುತ್ತದೆ. ಹೀಗಿರುವಾಗ, ತದ್ವಿರುದ್ಧವಾಗಿ ಮಾನವನು ಮಿತಿಯುಳ್ಳವನಾಗಿದ್ದಾನೆ. ಜ್ಞಾನವುಳ್ಳ ಐನ್‌ಸ್ಟೀನನಿಗೆ ಮಿತಿಯುಳ್ಳ ಮನಸ್ಸು ಇತ್ತು. ಯಾವದೇ ಮನುಷ್ಯನು ಪ್ರತಿಯೊಂದನ್ನೂ ತಿಳಿಯಲಾರನು, ಯಾವುದೇ ಮನುಷ್ಯನು ಮಿತಿಯಿಲ್ಲದೇ ಪ್ರೀತಿಸಲಾರನು, ಮತ್ತು ನಿಶ್ಚಯವಾಗಿ ಮನುಷ್ಯನ ಚಿತ್ತವು ವಿಶ್ವದಲ್ಲಿ ಸರ್ವಾಧಿಪತ್ಯವುಳ್ಳದ್ದಾಗಿರುವದಿಲ್ಲ. ಮನುಷ್ಯನು ತನ್ನ ಸ್ಥಿತಿಯ ಯಜಮಾನನಾಗಿರಲಾರನು ಹಾಗೂ ತನ್ನ ಅಂತಿಮ ಸ್ಥಿತಿಯ ಮುಂದಾಳಾಗಿರಲಾರನು.

ಇನ್ನೊಂದೆಡೆಯಲ್ಲಿ, ಮನುಷ್ಯನ ವ್ಯಕ್ತಿತ್ವಕ್ಕೆ ಅವನು ದೇವರನ್ನು ಅರಿತುಕೊಂಡು ಆತನೊಂದಿಗೆ ಅನ್ಯೋನ್ಯತೆಯಲ್ಲಿರುವ ಆತ್ಮಿಕ ಸಾಮರ್ಥ್ಯವಿರುವುದು. ಆದುದರಿಂದ ಮನುಷ್ಯನು ಆತ್ಮ, ಪ್ರಾಣ ಮತ್ತು ಶರೀರವಾಗಿದ್ದಾನೆಂದು ಬೈಬಲ ಸ್ಪಷ್ಟಪಡಿಸುತ್ತದೆ. (1 ಥೆಸಲೋನಿಕ 5:23).

ತನ್ನ ಆತ್ಮನ ಮುಖಾಂತರ, ಮನುಷ್ಯನಿಗೆ ತನ್ನ ಸೃಷ್ಟಿಕರ್ತನಿಗೆ ನಿಕಟವಾಗಿ ಸಂಬಂಧಿಸಿಕೊಳ್ಳಲು ದೇವರು ಕೊಟ್ಟ ಸಾಮರ್ಥ್ಯವಿರುತ್ತದೆ. ತನ್ನ ದೇಹದ

ಮುಖಾಂತರ, ಮನುಷ್ಯನ ವ್ಯಕ್ತಿತ್ವವು (ಇಲ್ಲವೇ ಪ್ರಾಣವು, ಇಲ್ಲವೇ ಯೋಚಿಸಲು, ಆಯ್ಕೆ ಮಾಡಲು ಮತ್ತು ಪ್ರೀತಿಸಲು ಅವನ ಸಾಮರ್ಥ್ಯವು) ಭೌತಿಕ ಲೋಕಕ್ಕೆ ಸಂಬಂಧಿಸಲ್ಪಟ್ಟಿದೆ.

ಆತ್ಮವನ್ನು ಮೊದಲು, ಪ್ರಾಣವನ್ನು ಎರಡನೆಯದಾಗಿ ಮತ್ತು ದೇಹವನ್ನು ಮೂರನೆಯದಾಗಿ ಇಡುವ ಪ್ರಾಧಾನ್ಯತೆಗಳ ಬೈಬಲ ದಾಖಲೆಯನ್ನು ನಾವು ಗಮನಿಸುವವರೆಗೆ ಎಲ್ಲವೂ ಚೆನ್ನಾಗಿರುತ್ತದೆ.

ಆದರೆ ಯಾವುದೋ ಒಂದು ತಪ್ಪಾಗಿ ಹೋಯಿತು. ಅದರ ಪರಿಣಾಮವಾಗಿ, ಅನೇಕ ಜನರಿಗೆ, ಕ್ರಮವು ವ್ಯತಿರಿಕ್ತವಾಗಿ ಮಾಡಲ್ಪಟ್ಟಿದೆ : ದೇಹವು ಪ್ರಾಧಾನ್ಯತೆ ಒಂದು ಆಗುತ್ತದೆ ; ಪ್ರಾಣವು ಪ್ರಾಧಾನ್ಯತೆ ಎರಡು ಆಗುತ್ತದೆ ; ಮತ್ತು ಆತ್ಮವು ಮೂರು ಆಗುತ್ತದೆ. ದುರ್ದೈವದಿಂದ ಇಂದಿನ ಜಗತ್ತಿನಲ್ಲಿ, ಅನೇಕ ಜನರ ದೈಹಿಕ, ಭೌತಿಕ ಮತ್ತು ಇಂದ್ರಿಯಾಸಕ್ತ ಆಸಕ್ತಿಗಳು ಅವರ ಯೋಚನೆಯ, ಅವರ ತೀರ್ಮಾನಗಳ ಮತ್ತು ಅವರ ಮೆಚ್ಚುವಿಕೆಗಳ ಮೇಲೆ ದಬ್ಬಾಳಿಕೆ ಮಾಡುತ್ತಲಿವೆ, ಅವರ ಆತ್ಮಿಕ ಸಾಮರ್ಥ್ಯವು ಕಡಿಮೆಯಾಗಿ ಸತ್ತು ಹೋಗುತ್ತಲಿದೆ. ಆತ್ಮಿಕ ಜೀವಿತವನ್ನು ಪುನಸ್ಥಾಪಿಸಲು ಮತ್ತು ತಾನು ಸೃಷ್ಟಿಸಿದ ವ್ಯಕ್ತಿಯನ್ನು ನಿಯಂತ್ರಿಸಲು ದೇವರಿಗೆ ಅವಕಾಶ ಕೊಡುವದರ ಬದಲು, ಆತನು ಕೆಳಗಿನ ಸ್ಥಾನಕ್ಕಿಳಿಸಲ್ಪಟ್ಟಿದ್ದಾನೆ ಇಲ್ಲವೇ ತಳ್ಳಿಹಾಕಲ್ಪಟ್ಟಿದ್ದಾನೆ. ಇದರಿಂದ ತಪ್ಪಾಗಿ ನಡೆಸಲ್ಪಟ್ಟ ಈ ಜನರಿಗೆ ಮತ್ತು ಅವರ ಸೃಷ್ಟಿಕರ್ತನಿಗೂ ಮಧ್ಯದಲ್ಲಿ ಸಂಪರ್ಕ ತಪ್ಪಿಹೋಗಿದೆ.

ಯಾವ ವ್ಯಕ್ತಿಗೆ ದೇವರು ದೂರವಾಗಿದ್ದಾನೋ ಮತ್ತು ನಿಜವಾಗಿ ಇಲ್ಲವೋ. ಆ ವ್ಯಕ್ತಿಯು ನಿಜವಾಗಿಯೂ ಆತ್ಮಿಕವಾಗಿ ಸತ್ತು ಹೋಗಿದ್ದಾನೆ. ಇನ್ನೊಂದೆಡೆಯಲ್ಲಿ, ದೇವರೊಂದಿಗೆ ಅನ್ಯೋನ್ಯತೆಯನ್ನು ಅನುಭವಿಸುತ್ತಿರುವ ವ್ಯಕ್ತಿಯು ನಿಜವಾಗಿಯೂ ಸಂಪೂರ್ಣವಾಗಿಯೂ ಸಜೀವವಾಗಿದ್ದಾನೆ.

> ''ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾ ಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು.''
> (ಎಫೆಸ 2:4,5).

ಈ ಜಗತ್ತಿನ ಎಲ್ಲಾ ಸಮಸ್ಯೆಗಳು ಮನುಷ್ಯನ ಚಿತ್ತದಲ್ಲಿ ಪ್ರಾರಂಭಿಸಿದವು. ಇನ್ನೊಬ್ಬನ ಚಿತ್ತವಿಲ್ಲದೇ ಚಲಿಸಲು ಶಕ್ತವಾಗದ ಸೂತ್ರದ ಗೊಂಬೆಗಳಂತೆ ದೇವರು ಜನರನ್ನು ಸೃಷ್ಟಿಸಲಿಲ್ಲ. ದಾರಗಳನ್ನು ಎಳೆಯುವದರಿಂದ ಸೂತ್ರದ ಗೊಂಬೆಗಳನ್ನು ನಡಿಸುವಾತನು ಸೂತ್ರದ ಗೊಂಬೆ ಮಾಡುವ ಪ್ರತಿಯೊಂದು ಚಲನೆಯನ್ನು ನಿಯಂತ್ರಿಸುತ್ತಾನೆ. ಇನ್ನೊಂದು ಕಡೆಯಲ್ಲಿ ನಾವು ಆಯ್ಕೆ ಮಾಡಿಕೊಂಡಂತೆ, ವರ್ತಿಸಲು ಸ್ವತಂತ್ರ ಚಿತ್ತವನ್ನು ಕೊಟ್ಟಿದ್ದಾನೆ. ಆದರೆ ಆ ಚಿತ್ತದವರದಿಂದ, ನಾವೂ ಸಹ ನಾವು ಮಾಡುವ ತೀರ್ಮಾನಗಳಿಗಾಗಿ ನೈತಿಕವಾಗಿ ಜವಾಬ್ದಾರರಾಗುತ್ತೇವೆ. (ಬೈಬಲ ಸತ್ಯವನ್ನು ಕಡೆಗಣಿಸುವ ಅನೇಕ ಮನಃಶಾಸ್ತ್ರಜ್ಞರಿಂದ ಅದನ್ನು ನೀವು ಕೇಳಿಸಿಕೊಳ್ಳುವದಿಲ್ಲ.)

ಮನುಷ್ಯನು ಸೃಷ್ಟಿಸಲ್ಪಟ್ಟ ನಂತರ ಮಾನವ ಕುಲದಲ್ಲಿ ಪ್ರಥಮ ಕ್ರಮದ ದುರಂತವು ಸಂಭವಿಸಿತು. ಏದೆನ್ ತೋಟದಲ್ಲಿಯ ಮರಗಳಲ್ಲಿ ಎರಡು ವಿಶೇಷವಾದ ಮರಗಳಿದ್ದವು. ಒಂದು ''ಜೀವ ವೃಕ್ಷ'' ಎಂದೂ ಇನ್ನೊಂದು, ''ಒಳ್ಳೆಯದರ ಮತ್ತು ಕೆಡುಕಿನ ಅರುಹನ್ನು ಹುಟ್ಟಿಸುವ ಮರ'' ಎಂದೂ ಕರೆಯಲ್ಪಟ್ಟಿದ್ದವು. (ಆದಿಕಾಂಡ 2:9). ಆದಾಮ, ಹವ್ವರು, ಒಳ್ಳೆಯದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದಿಂದ ಬಿಟ್ಟು ಉಳಿದ ಎಲ್ಲಾ ಮರಗಳ ಹಣ್ಣುಗಳನ್ನು ತಿನ್ನಬಹುದು ಎಂದು ದೇವರಿಂದ ಹೇಳಲ್ಪಟ್ಟಿದ್ದರು. ಅವರಿಗೆ ಈ ಆಯ್ಕೆಯನ್ನು, ವಿಧೇಯತೆ ಮತ್ತು ಅವಿಧೇಯತೆಯ ಮಧ್ಯದಲ್ಲಿ ಆಯ್ಕೆಯನ್ನು ಕೊಡುವದರಿಂದ, ದೇವರು ತಾನು ಮನುಷ್ಯನನ್ನು ಪುರುಷನನ್ನು ಮತ್ತು ಸ್ತ್ರೀಯನ್ನು ಸ್ವತಂತ್ರ ಚಿತ್ತದೊಂದಿಗೆ ಸೃಷ್ಟಿಸಿದ್ದಾನೆಂದು ಸ್ಪಷ್ಟಪಡಿಸಿದನು, ದೇವರಿಗೆ ಅವರು ವಿಧೇಯರಾಗಲು ಬಯಸುವರೋ ಇಲ್ಲವೋ ಎಂಬುದು ಅವರಿಗೆ ಬಿಟ್ಟ ವಿಷಯವಾಗಿತ್ತು. ಇದು ಅವರ ಸ್ವಂತ, ವೈಯಕ್ತಿಕ ತೀರ್ಮಾನವಾಗಿತ್ತು.

ಮಾನವ ಕುಲಕ್ಕೆ ದೇವರು ಒದಗಿಸಿಕೊಟ್ಟ ಅತ್ಯುತ್ತಮವಾದದಕ್ಕೆ ವಿರುದ್ಧವಾಗಿ ಆದಾಮ ಮತ್ತು ಹವ್ವರು ದಂಗೆ ಎದ್ದದ್ದು ದುಃಖಕರವಾದದ್ದಾಗಿದೆ. ಅವರು ಅವಿಧೇಯರಾಗುವಂತೆ ತೆಗೆದುಕೊಳ್ಳುವ ತೀರ್ಮಾನವು ತನಗೆ ವರ್ಣಿಸಲಾಗದ ಶ್ರಮೆಯನ್ನು ತರುವುದೆಂದೂ ಮತ್ತು ಅದು

ಎಲ್ಲಾ ಮಾನವ ಕುಲಕ್ಕೆ ನೋವನ್ನು ತರುವುದೆಂದೂ ದೇವರು ಸಮಯದ ಮೊದಲೇ ತಿಳಿದಿದ್ದನು. ಆದರೆ, ತನ್ನ ಸೃಷ್ಟಿಗಾಗಿರುವ ತನ್ನ ಪ್ರೀತಿಯಲ್ಲಿ ಮತ್ತು ಸರಿಯಾದ ಆಯ್ಕೆ ಮಾಡುವವರಿಗೆ ಮಹಿಮೆಯು ಅನಂತರದಲ್ಲಿ ಲಭ್ಯವಿರುವುದೆಂಬುದನ್ನು ತಿಳಿದುಕೊಂಡು, ದೇವರು ಪ್ರತಿಯೊಬ್ಬ ವ್ಯಕ್ತಿಗೆ ಆಯ್ಕೆಯ ಸ್ವಾತಂತ್ರ್ಯವನ್ನು ಕೊಟ್ಟಿರುತ್ತಾನೆ.

ಸೈತಾನನು, ಸುಳ್ಳುಗಾರನು, ಆದಾಮ ಮತ್ತು ಹವ್ವರು ತಪ್ಪಾದ ಆಯ್ಕೆಯನ್ನು ಮಾಡುವಂತೆ ಶೋಧಿಸಲು ಮರುಳುಗೊಳಿಸುವ ತನ್ನ ಪ್ರಭಾವ ಉಪಯೋಗಿಸಿದನು. ಅವರು ಅದನ್ನು ತಿಂದರೆ ಅವರು ದೇವರಂತಾಗುವರು ಎಂದು ಸೂಚಿಸುವದರಿಂದ ಪ್ರತಿಬಂಧಿಸಿದ ಹಣ್ಣಿನ ವರ್ಣನೆ ಮಾಡಿದನು. (ಮನುಷ್ಯನು ತನ್ನ ಸ್ವಂತ ದೇವರಾಗಬಹುದು ಎಂದು ಸೈತಾನನು ಇನ್ನೂ ಸೂಚಿಸುತ್ತಾನೆ. ಆದರೆ ದೇವರು ದೇವರಾಗಿರುವಂತೆ ಮತ್ತು ದೇವರಿಗಿಂತ ಎಂದೂ ಕಡಿಮೆಯಾಗದವನಂತೆ, ಹಾಗೆಯೇ ಮನುಷ್ಯನು ಮನುಷ್ಯನಾಗಿಯೇ ಇರುವನು ಮತ್ತು ಮನುಷ್ಯನಿಗಿಂತ ಎಂದೂ ಹೆಚ್ಚಾಗಲಾರನು.) ಹಾಗಿದ್ದರೂ, ದೇವರ ಚಿತ್ತಕ್ಕೆ ವಿರುದ್ಧವಾಗಿ ತಮ್ಮ ಚಿತ್ತವನ್ನು ಮಾಡುವಂತೆ ಸೈತಾನನು ಆದಾಮ ಮತ್ತು ಹವ್ವರನ್ನು ಕೆಡಿಸಿದನು. ಅದರ ಪರಿಣಾಮವಾಗಿ ಜನರ ಪ್ರತಿಯೊಂದು ಸಂತತಿಯು ತನ್ನ ಸೃಷ್ಟಿಕರ್ತನೊಂದಿಗಿನ ಸತ್ವವುಳ್ಳ, ವೈಯಕ್ತಿಕ ಮತ್ತು ನಿಕಟ ಅನ್ಯೋನ್ಯತೆಯನ್ನು ಕಡಿದು ಕೊಂಡಿತು. ಯಾಕಂದರೆ ಎಲ್ಲರೂ ಆದಾಮನ ಸಂತತಿಯವರೇ. ಮತ್ತು : **''ಹೇಗೆಂದರೆ ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು ; ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು.'' (ರೋಮಾಪುರ 5:12).**

ಜಗತ್ತು ಎಂದಾದರೂ ತಿಳಿದ ಪ್ರತಿಯೊಂದು ಸಮಾಧಿ, ಪ್ರತಿಯೊಂದು ಆಸ್ಪತ್ರೆ, ಪ್ರತಿಯೊಂದು ಸೈನ್ಯ ಹಾಗು ಪ್ರತಿಯೊಂದು ಸೆರೆಮನೆಯು ಸೃಷ್ಟಿಯ ಪ್ರಾರಂಭದಲ್ಲಿಯ ಮನುಷ್ಯನ ತಪ್ಪು ಆಯ್ಕೆಯ ಪರಿಣಾಮವಾಗಿರುತ್ತದೆ. ಪಾಪವೆಂದು ನಾವು ಕರೆಯುವ, ಮಾನವ ಕುಲದಲ್ಲಿಯ ಈ ಮರಣಾಂತಿಕ ಕೇಡು, ಎಲ್ಲಾ ಮಾನವ ಕುಲದ ಮೇಲೆ ಪರಿಣಾಮ ಮಾಡುವ ಒಂದು ಆಜನ್ಮ

ರೋಗವಾಗಿದೆ. ದೇವರೊಂದಿಗಿನ ಮನುಷ್ಯನ ನಿಜವಾದ ಅನ್ಯೋನ್ಯತೆಯನ್ನು ಪಾಪವು ಕಡಿದು ಹಾಕಿರುವದಲ್ಲದೇ, ಅದು ಅವನನ್ನು ಜೊತೆ ಮನುಷ್ಯನೊಂದಿಗಿನ ಅನ್ಯೋನ್ಯತೆಯಿಂದಲೂ ಬೇರೆ ಮಾಡಿರುತ್ತದೆ.

**ಆದರೆ, ನೀನು ಮತ್ತು ನಾನು ಜನನದಿಂದ ಪಾಪಿಗಳು ಮಾತ್ರವೇ ಆಗಿರದೇ, ನಾವು ಕೃತಿಯಿಂದಲೂ ಪಾಪಿಗಳಾಗಿದ್ದೇವೆ.**

ನಮ್ಮ ಜನನವನ್ನು ಕುರಿತು, ಕೀರ್ತನೆಗಾರನು ನಮ್ಮೆಲ್ಲರಿಗಾಗಿ ಹೀಗೆ ಹೇಳಿದ್ದಾನೆ ''ಹುಟ್ಟಿನಿಂದ ನಾನು ಪಾಪಿಯೇ. ಮಾತೃಗರ್ಭವನ್ನು ಹೊಂದಿದ ದಿನದಿಂದ ದ್ರೋಹಿಯೇ''. (ಕೀರ್ತನೆ51:5) ಆದರೆ ಆ ಪಾಪವನ್ನು ಸ್ವಾಸ್ತ್ಯವಾಗಿ ಪಡೆದುಕೊಂಡ ಸ್ಥಿತಿಯು ನಾವು ಎಲ್ಲರೂ ಮಾಡಿದ ಪಾಪದ ಕೃತಿಗಳಿಗಾಗಿ ಒಂದು ನೆವವನ್ನು ಒದಗಿಸಿ ಕೊಡುವದಿಲ್ಲ. ನಾವು ಈ ರೀತಿಯಲ್ಲಿ ಇರುವೆವೆಂದು ಬೈಬಲ್ ಸಹ ಹೇಳುತ್ತದೆ - **''ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಿಗೆ ಅನುಸಾರವಾಗಿ ನಡೆದುಕೊಂಡಿರಿ : ..... ಪೂರ್ವದಲ್ಲಿ ಅವಿಧೇಯರಾಗಿದ್ದು ಶರೀರ ಭಾವದ ಆಶೆಗಳಿಗೆ ಅಧೀನರಾಗಿ ಶರೀರಕ್ಕೂ ಮನಸ್ಸಿಗೂ ಸಂಬಂಧಪಟ್ಟ ಇಚ್ಛೆಗಳನ್ನು ನೆರವೇರಿಸುತ್ತಾ ನಡೆದು ಮಿಕ್ಕಾದವರಂತೆ ಸ್ವಭಾವಸಿದ್ಧವಾಗಿ ದೇವರ ಕೋಪಕ್ಕೆ ಗುರಿಯಾಗಿದ್ದೆವು.'' (ಎಫೆಸ 2:2,3).**

ಹೌದು, ನಾವು ದೇವರ ಮುಂದೆ ಅಪರಾಧಿಗಳಾಗಿದ್ದೇವೆ. ಯಾಕಂದರೆ ಅದಕ್ಕೆ ಕಾರಣ ನಮ್ಮ ಅವಿಧೇಯತೆಯೇ. ಬೇರೆ ಯಾರನ್ನು ದೂರಲಿಕ್ಕಾಗದು - ಹೆಂಡತಿಯನ್ನಲ್ಲ ಇಲ್ಲವೇ ಸ್ನೇಹಿತನನ್ನಲ್ಲ ಇಲ್ಲವೇ ತಂದೆ ತಾಯಿಗಳನ್ನಲ್ಲ. ನಾವು ಬಂದ ಹಿನ್ನೆಲೆಯನ್ನಾಗಲೀ ಮತ್ತು ನಾವು ಜೀವಿಸುತ್ತಿರುವ ವಾತವರಣವನ್ನಾಗಲೀ ತಪ್ಪುಳ್ಳದ್ದೆಂದು ಹೇಳಲಿಕ್ಕಾಗದು. ನಾನು ನನ್ನ ಪಾಪಕ್ಕಾಗಿ ಜವಾಬ್ದಾರನಾಗಿರುವಂತೆ ನೀನು ನಿನ್ನ ಪಾಪಕ್ಕಾಗಿ ಜವಾಬ್ದಾರನಾಗಿರುತ್ತೀ.

ಜನರ ಮಧ್ಯದಲ್ಲಿ ಅಷ್ಟು ವಿರೋಧವನ್ನು ವಿಭಜನೆಯನ್ನು ನೋಡಲಿಕ್ಕೆ ನಿಜವಾದ ಕಾರಣವು ಸಾಮಾನ್ಯ ವಿಭಜನೆ ಮಾಡುವ ನಮ್ಮ ಪಾಪವಾಗಿದೆ. ಪಾಪವು ನಾಸ್ತಿಕನನ್ನು ವಿಶ್ವಾಸಿಯೊಂದಿಗೆ ಮತ್ತು ಅರಾಬನನ್ನು ಯೆಹೂದ್ಯನೊಂದಿಗೆ ಕಟ್ಟುತ್ತದೆ. ಪಾಪವು ತೃತೀಯ ಜಗತ್ತಿನಲ್ಲಿಯ ಜನರನ್ನು ಔದ್ಯೋಗಿಕ ಜಗತ್ತಿನಲ್ಲಿಯ ಜನರಿಗೆ ಕಟ್ಟುತ್ತವೆ. ಪಾಪವು ಕಮ್ಯುನಿಸ್ಟನನ್ನು ಕ್ಯಾಪಿಟಲಿಸ್ಟನಿಗೆ

ಪೋಲಿಸನನ್ನು ಅಪರಾಧಿಗೆ, ಮತ್ತು ಮಹಿಳಾ ಪರ ವಾದಿಯನ್ನು ಪುರುಷ ಅಂಧಾಭಿಮಾನಿಗೆ ಕಟ್ಟುತ್ತದೆ. ಜನರು ವೇಶ್ಯೆಯರಾಗಿರಲಿ ಇಲ್ಲವೇ ಪ್ರಸಂಗಿಗಳಾಗಿರಲಿ ಉನ್ನತ ಐಶಾರಾಮ ದಲ್ಲಿ ಜೀವಿಸಲಿ ಇಲ್ಲವೇ ಕಡುಬಡತನದಲ್ಲಿ ಜೀವಿಸಲಿ, ಅವರು ವಿದ್ಯಾವಂತರಾಗಿರಲಿ ಇಲ್ಲವೇ ಅನಕ್ಷರಸ್ಥರಾಗಿರಲಿ **ಎಲ್ಲರೂ ಪಾಪ ಮಾಡಿದ್ದಾರೆ, ಮತ್ತು ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ.** (ರೋಮಾಪುರ 3:23). ಜನರ ಮಧ್ಯದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಉದ್ವೇಗಗಳಿಗೆ ಪಾಪವು ಮೂಲಕಾರಣವಾಗಿದೆ.

ಆದರೆ ಯೇಸುವು ಪಾಪಿಯ ನಿರೀಕ್ಷೆಯಾಗಿದ್ದಾನೆ ! ''ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವದಕ್ಕೆ ಬಂದವನು''. (ಮತ್ತಾಯ 9:13) ಎಂದು ಯೇಸು ಹೇಳಿದನು. ಸಮೀಪದ ಅಂತರದಿಂದಾಗಲೀ ಇಲ್ಲವೇ ದೂರದ ಅಂತರದಿಂದಾಗಲೀ, ನೀನು ಮತ್ತು ನಾನು ದೇವರ ಪವಿತ್ರತೆಯ ಗುರುತನ್ನು ತಪ್ಪಿಸಿಕೊಂಡಿರಬಹುದು. ''ಪಾಪ'' ಎಂಬ ಶಬ್ದವು ''ಗುರುತನ್ನು ತಪ್ಪಿಸಿಕೋ'' ಎಂದರ್ಥ ಕೊಡುತ್ತದೆ. ಅದನ್ನು ಸರಿಪಡಿಸಲು ನಮ್ಮಷ್ಟಕ್ಕೆ ನಾವು ಏನೂ ಮಾಡಲಾರೆವು. ಒಳ್ಳೆಯವರಾಗಿರುವದರಿಂದ ಇಲ್ಲವೇ ಒಳ್ಳೆಯದನ್ನು ಮಾಡುವದರಿಂದ ನಾವು ದೇವರೊಂದಿಗೆ ಸಮಾಧಾನ ಕಂಡುಕೊಳ್ಳುವೆವು ಎಂದು ಯೋಚಿಸುವುದು ವ್ಯರ್ಥವಾದ ನಿರೀಕ್ಷೆಯಾಗಿದೆ. ಅದು, ''ಪುಣ್ಯ ಕ್ರಿಯೆಗಳಿಂದ ಉಂಟಾದದ್ದಲ್ಲ ; ಅದರಿಂದ ಹೊಗಳಿ ಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ'' (ಎಫೆಸ 2:9) ಆದುದರಿಂದಲೇ ರಕ್ಷಣೆಯ ಬಗ್ಗೆ ಮಾತಾಡುವಾಗ ಯೇಸುವು ''ನನಗೆ ಯಜ್ಞವು ಬೇಡ, ಕರುಣೆಯೇ ಬೇಕು'' (ಮತ್ತಾಯ 9:13) ಎಂದು ಹೇಳಿದನು.

ದೇವರ ದಯೆಯ ನಿಜವಾದ ತಿಳುವಳಿಕೆಯು ತಮ್ಮ ವೈಯಕ್ತಿಕ ಪಾಪದ ಗಂಭೀರತೆಯಿಂದ ಹಿಡಿಯಲ್ಪಟ್ಟ ಜನರಿಗೆ ಆಶ್ಚರ್ಯಕರವಾದ ಪರಿಹಾರವನ್ನು ತರುವುದು.

ದೇವರು ಕರುಣಾನಿಧಿಯಾಗಿರುವದರಿಂದ (ಎಫೆಸ 21:4) ಆತನು ಕೇಳುವಂಥದ್ದೆಲ್ಲವೂ ರಕ್ಷಣೆಯನ್ನು ಆತನ ಉಚಿತವಾದ ವರದಂತೆ ಸ್ವೀಕರಿಸ

ಬೇಕೆಂಬುದು. ''ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ. **ಅದು ದೇವರ ವರವೇ.''** (ಎಫೆಸ 2:8). ದೇವರ ಪವಿತ್ರ ಸನ್ನಿಧಿಯನ್ನು ಪ್ರವೇಶಿಸಲು ಪಾಪಿಗೆ ಬಾಗಿಲು ತರೆಯುವದಕ್ಕಾಗಿ ಯೇಸು ತಾನೇ ಅದ್ವಿತೀಯವಾದ ಯಜ್ಞ ಅರ್ಪಿಸಿದನು.

ಕರುಣಾನಿಧಿಯಾದ ದೇವರಿಂದ ಕರ್ತನಾದ ಯೇಸು ಕ್ರಿಸ್ತನ ಮುಖಾಂತರ ಸಮೃದ್ಧ ಜೀವಿತವು ಉಚಿತವಾಗಿ ಲಭ್ಯ ಮಾಡಲ್ಪಟ್ಟಿದೆ. ಆದರೆ, ಆತನು ನಿನಗೆ ಒಂದು ಚಿತ್ತವನ್ನು ಕೊಟ್ಟದ್ದರಿಂದ, ಆ ಜೀವಿತದಲ್ಲಿ ಭಾಗವಹಿಸಲು ದೇವರು ನಿನಗೆ ಒತ್ತಾಯ ಮಾಡುವದಿಲ್ಲ, ದೇವರ ಉಚಿತವಾದ ವರದ ಕೊಡುಗೆಯನ್ನು ನೀನು ಹೇಗೆ ಸ್ವೀಕರಿಸುವಿಯೋ ಎಂಬುದು ಮಹಾ ಅವಸರದ ಸಂಗತಿಯಾಗಿರುತ್ತದೆ. **''ಈಗಲೇ. ಆ ಸುಪ್ರಸನ್ನತೆಯ ಕಾಲ ; ಇದೇ ಆ ರಕ್ಷಣೆಯ ದಿನ''** ಎಂದು ದೇವರು ಹೇಳುತ್ತಾನೆ (2 ಕೊರಿಂಥ 6:2). ಈಗ - ನೀನು ನೀನೇ ನಿನ್ನ ಜೀವಿತವನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸಿದ ನಂತರದಲ್ಲಿ ಭವಿಷ್ಯದಲ್ಲಿಯ ಒಂದು ಸಮಯದಲ್ಲಿ ಅಲ್ಲ. **''ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವದಕ್ಕೆ ಬಂದವನು''** (ಮತ್ತಾಯ 9:13) ಎಂದು ಯೇಸು ಹೇಳಿದ್ದನ್ನು ಜ್ಞಾಪಿಸಿಕೊಳ್ಳಿರಿ.

ನಿಮ್ಮ ನಿಜವಾದ ಸಮಸ್ಯೆಯ ಬಗ್ಗೆ ಪಾಪದ ಸಮಸ್ಯೆಯ ಬಗ್ಗೆ ಪ್ರಾಮಾಣಿಕತೆ ಯಿಂದರುವುದು ಅದರ ಪರಿಹಾರದ ಕಡೆಗೆ ಪ್ರಥಮ ಹೆಜ್ಜೆ ಇಡುವುದಾಗಿದೆ. ನೀನು ಎಲ್ಲಿಯೇ ಇರಲಿ ಮತ್ತು ನೀನು ಯಾವುದೇ ಪರಿಸ್ಥಿತಿಯಲ್ಲಿ ಇಲ್ಲವೇ ಸ್ಥಿತಿಯಲ್ಲಿ ಇರಲಿ ಇಂದು ನಿನ್ನನ್ನು ಸ್ವೀಕರಿಸಲು ಯೇಸುವಿನ ತೋಳುಗಳು ತರೆಯಲ್ಪಟ್ಟಿವೆ. ನಿನ್ನಿಂದ ಆತನು ಕೇಳಿಸಿಕೊಳ್ಳುವದೆಲ್ಲವೂ: **''ದೇವರೇ, ಪಾಪಿಯಾದ ನನ್ನನ್ನು ಕರುಣಿಸು''** (ಲೂಕ 18:13) ಎಂಬುದನ್ನು.

## ''C ಮಾಕ್ಸ ಪ್ರಿಜನ್'' ದಿಂದ ಒಂದು ಪತ್ರ

*ಬದಲಾಯಿಸದ ಈ ಕೆಳಗಿನ ಉಲ್ಲೇಖಗಳು ದಕ್ಷಿಣ ಆಫ್ರಿಕದಲ್ಲಿಯ ಅತ್ಯುನ್ನತ ಭದ್ರತೆಯ ಸೆರೆಮನೆಯಲ್ಲಿಯ ಒಬ್ಬ ಕೈದಿಯಿಂದ ನಾವು ಸ್ವೀಕರಿಸಿದೆವು.*

''ದೇವರಿಗಾಗಿ ನಿನ್ನ ಅನ್ವೇಷಣೆ ಪುಸ್ತಕವು ದೇವರ ವಾಕ್ಯವನ್ನು ಅರ್ಥ ಮಾಡಿಕೊಳ್ಳಲಿಕ್ಕೆ ನನಗೆ ಸಹಾಯ ಮಾಡುವುದು. ಅಂದರೆ ಜೀವನದ ನಿಜವಾದ ಮಾರ್ಗವನ್ನು ಕಂಡುಕೊಳ್ಳಲು ನಮಗೆ ಸಹಾಯ ಮಾಡುವುದು ಎಂದರ್ಥ : ನೀವು ನನ್ನನ್ನು ಅರ್ಥಮಾಡಿಕೊಳ್ಳುತ್ತೀರೆಂದು ನಾನು ನಂಬುತ್ತೇನೆ. ಈ ಪುಸ್ತಕವನ್ನು ನನ್ನ ಸ್ನೇಹಿತನು ನನಗೆ ಕೊಟ್ಟನು. ''.... ದೇವರು ಸೃಷ್ಟಿಕರ್ತನು, ಇಡೀ ವಿಶ್ವದ ಸೃಷ್ಠಿಕರ್ತನು ಎಂದು ನಾನು ನಂಬುತ್ತೇನೆ. ಈಗ ನಾನು ಸೆರೆಮನೆಯಲ್ಲಿರುವಾಗ ದೇವರು ನನಗೆ ಸಹಾಯ ಮಾಡುವನೆಂದು ನಂಬುತ್ತೇನೆ.....''

- Report Submitted by Trans World Radio.

**ಆಲೋಚಿಸಲು ವಿರಾಮ**

1. ಸಮಾಜದೊಂದಿಗೆ ಇಂದು ಯಾವುದೋ ದುಃಖಕರವಾಗಿ ತಪ್ಪಾಗಿದೆಯೆಂದು ನೀವು ಅರ್ಥಮಾಡಿಕೊಳ್ಳುವಿರೋ ?
2. ನೀವು ಅಸ್ವಸ್ಥತೆಯಿಂದ ಇರುವಾಗ, ನಿಮ್ಮ ವೈದ್ಯರು ನಿಮಗೆ ಔಷಧಿಯನ್ನು ಕೊಡುವ ಮೊದಲು ನಿಮ್ಮ ಅಸ್ವಸ್ಥತೆಯನ್ನು ಸರಿಯಾಗಿ ಗುರುತಿಸುವದು ಅತ್ಯವಶ್ಯ ವಾಗಿದೆಯಲ್ಲವೇ ?
3. ಬೈಬಲು ಹೇಗೆ: ನಿಮ್ಮ ಸಮಸ್ಯೆಯನ್ನು ಗುರುತಿಸುವುದು ? ನಿಮ್ಮ ಸಮಸ್ಯೆಗೆ ಪರಿಹಾರವನ್ನು ಸೂಚಿಸುವುದು ?

ಕೆಲವು ಕಾಲದಿಂದ ಆ ಪಟ್ಟಣದಲ್ಲಿದ್ದ ಸೀಮೋನನೆಂಬ ಒಬ್ಬ ಮನುಷ್ಯನು ತಾನು ಏನೋ ಒಬ್ಬ ಮಹಾತ್ಮನೆಂದು ಹೇಳಿಕೊಂಡು ಮಂತ್ರತಂತ್ರಗಳನ್ನು ನಡಿಸಿ ಸಮಾರ್ಯದ ಜನರನ್ನು ಬೆರಗನ್ನು ಹುಟ್ಟಿಸುತ್ತಿದ್ದನು. ಚಿಕ್ಕವರು ಮೊದಲುಗೊಂಡು ದೊಡ್ಡವರ ಪರ್ಯಂತರ ಎಲ್ಲರೂ - ಇವನು ಮಹಾಶಕ್ತಿ ಎನಿಸಿಕೊಂಡಿರುವ ದೇವರ ಶಕ್ತಿಯೇ ಎಂದು ಹೇಳುತ್ತಾ ಅವನಿಗೆ ಲಕ್ಷ್ಯ ಕೊಡುತ್ತಿದ್ದರು.

**ಡಾ. ಲೂಕ**

## ಅಧ್ಯಾಯ 6

# ಜನರು ಯಾಕೆ ಅಷ್ಟು ತಪ್ಪಾಗಿ ನಡಿಸಲ್ಪಡುತ್ತಿದ್ದಾರೆ ?

ಬಾಲಕನಾಗಿದ್ದಾಗ, ಬ್ರಿಟಿಷ ಐಲ್ಸದಲ್ಲಿ ವಾಸಿಸುತ್ತಿದ್ದೆನು. ಆ ಸಮಯದಲ್ಲಿ ವೈರಿಗಳ ಬಾಂಬ ದಾಳಿ ವಿಮಾನಗಳು ಸತತವಾಗಿ ಹಾರಾಡುತ್ತಿದ್ದವು. ಅದು ಯುದ್ಧದ ಸಮಯವಾಗಿತ್ತು ಮತ್ತು ಇಂಡಸ್ಟ್ರಿಯಲ್ ಮಿಡ್‌ಲ್ಯಾಂಡ ಮತ್ತು ನೊರ್ದನ್ ಇಂಗ್ಲೆಂಡದ ತಮ್ಮ ದಾಳಿ ಮಾಡುವ ಕ್ಷೇತ್ರಗಳಿಗೆ ಇವು ಹಾದು ಹೋಗುತ್ತಿದ್ದವು. ನನ್ನ ಸ್ನೇಹಿತರು ಮತ್ತು ನಾನು ನಮ್ಮ ಯುದ್ಧ ವಿಮಾನಗಳ ಮತ್ತು ವೈರಿ ಬಾಂಬ ದಾಳಿ ವಿಮಾನಗಳ ಸಪ್ಪಳದ ಮಧ್ಯದಲ್ಲಿ ವ್ಯತ್ಯಾಸವನ್ನು ಕಂಡುಹಿಡಿಯುವದನ್ನು ತಿಳಿದುಕೊಂಡಿದ್ದೆವು. ಆಕಾಶಗಳಲ್ಲಿ ವೈರಿ ವಿಮಾನಗಳ ಹುಡುಕುವ ಬೆಳಕುಗಳನ್ನು ನಾವು ನೋಡಿದಾಗ, ಬಹಳ ಉದ್ವೇಗಗೊಳ್ಳುತ್ತಿದ್ದೆವು. ಬಾಂಬ ಹಾಕಲಿಕ್ಕೆ ಬಂದ ಯುದ್ಧ ವಿಮಾನದ ಕಡೆಗೆ ಭೂಮಿಯಿಂದ ನಮ್ಮ ಕಡೆಯವರು ಪ್ರತಿದಾಳಿ ಮಾಡುವದರ ಶಬ್ದವನ್ನು ಮತ್ತು ಅದರ ಪರಿಣಾಮವಾಗಿ ಅವುಗಳನ್ನು ಹೊಡೆದುರುಳಿಸುವದನ್ನು ತಿಳಿದುಕೊಂಡಿದ್ದೆವು.

ವೈರಿ ವಿಮಾನವು ಹೊಡೆದುರುಳಿಸಲ್ಪಡುವಾಗ, ಯಾವಾಗಲೂ ಕೆಲವು ಸಿಬ್ಬಂದಿ ವರ್ಗದವರು ಪ್ಯಾರಾಚೂಟದಿಂದ ಸುರಕ್ಷಿತವಾಗಿ ಇಳಿಯಲು ಪ್ರಯತ್ನಿಸುವುದು ಕಂಡು ಬರುತ್ತಿತ್ತು. ಉಳಿದುಕೊಂಡವರು ತಮ್ಮ ಮಾರ್ಗಕಂಡುಕೊಂಡು, ತಪ್ಪಿಸಿಕೊಂಡು ಹೋಗಿ ಪುನಃ ಹೆಚ್ಚು ಬಾಂಬುಗಳೊಂದಿಗೆ ಹಿಂದಿರುವದನ್ನು ಕಠಿಣವಾಗಿ ಮಾಡಲು, ಅಧಿಕಾರಿಗಳು

ದಾರಿಗಳಲ್ಲಿಯ ಸೂಚನಾ ಫಲಕಗಳನ್ನು ಕಿತ್ತು ಹಾಕಿರುತ್ತಿದ್ದರು ಹೀಗೆ, ಮಾರ್ಗದಲ್ಲಿ ಯಾವದೇ ರೀತಿಯ ಮಾರ್ಗ ಸೂಚಿಗಳು ಇರಲಿಲ್ಲ.

ಹೀಗಿದ್ದರೂ, ಪಟ್ಟಣದ ಹೊರಗೆ, ವೂಟೆನ್ ವುಡ್ಸದಲ್ಲಿ, ಒಂದು ಗಣನೆಗೆ ಬಾರದ ಸ್ಥಳದಲ್ಲಿ ಒಂದು ಚಿಕ್ಕ ಮಾರ್ಗಸೂಚಿ ಫಲಕ ಉಳಿದುಕೊಂಡಿತ್ತೆಂದು ಬಾಲಕರಾದ ನಾವು ತಿಳಿದುಕೊಂಡಿದ್ದೆವು. ನಾವು ಆ ಮಾರ್ಗಸೂಚಿ ಫಲಕವನ್ನು ತಿರುಗಿಸಿ ವಿರುದ್ಧ ದಿಕ್ಕಿನ ಕಡೆಗೆ ಇಟ್ಟಾಗ, ನಾವು ಯುದ್ಧದ ಪ್ರಯತ್ನದಲ್ಲಿ ನಿಜವಾಗಿಯೂ ಸಹಾಯ ಮಾಡುತ್ತಿದ್ದೇವೆಂದು ಯೋಚಿಸಿದೆವು. ಸ್ಥಳಿಕ ಅಧಿಕಾರಿಗಳಂತೆ ನಾವು ನಮ್ಮ ಪ್ರದೇಶಗಳೊಳಗೆ ನಾವು ಸ್ವಾಗತಿಸದೇ ಇದ್ದ ಅತಿಥಿಗಳನ್ನು ಗಲಿಬಿಲಿ ಪಡಿಸಲು ನಾವು ಬಯಸುತ್ತಿದ್ದೆವು.

ಆದರೂ, ಅಂಥ ಒಬ್ಬ ವ್ಯಕ್ತಿಯು ತನ್ನ ಕೈಗಳಲ್ಲಿ ನಂಬಲರ್ಹ ನಕಾಶೆಯನ್ನು ಹಿಡಿದುಕೊಂಡರೆ, ಮಾರ್ಗಸೂಚಿ ಫಲಕಗಳಿಲ್ಲದಿದ್ದರೂ ಯಾವ ಸಮಸ್ಯೆ ಬರುತ್ತಿರಲಿಲ್ಲ. ವೈರಿಯು ತನ್ನ ನಕಾಶದಲ್ಲಿಯ ಮಾಹಿತಿಯನ್ನು ಆಯ್ಕೆ ಮಾಡಿಕೊಳ್ಳುವದನ್ನು ತಿರಸ್ಕರಿಸಿರದಿದ್ದರೆ, ಮಾರ್ಗದ ಬಗ್ಗೆ ಗಲಿಬಿಲಿ ಹುಟ್ಟಿಸಲು ಮಾರ್ಗ ಸೂಚಿಗಳನ್ನು ತಿರುಗಿಸಿಟ್ಟ ನಮ್ಮ ಬಾಲಿಶ ವಿಚಾರವು ಅವರಿಗೆ ಅಡ್ಡಿ ಮಾಡುತ್ತಿರಲಿಲ್ಲ.

ದೇವರಿಗಾಗಿ ತಮ್ಮ ಹುಡುಕುವಿಕೆಯಲ್ಲಿ ಸುಳ್ಳ ಮಾರ್ಗಸೂಚಕ ಫಲಕಗಳಿಂದ ತಪ್ಪು ಹಾದಿಗೆ ನಡಿಸಲ್ಪಡುವಂತ ಜನರ ಬಗ್ಗೆ ದೇವರು ನಮಗೆ ಹೇಳುತ್ತಾನೆ.

ಪ್ರಾರಂಭಿಸುವಂತೆ, ಈ ಆಶ್ಚರ್ಯಕರವಾದ ವಿಶ್ವದ ಅಸ್ತಿತ್ವವು ಸೃಷ್ಟಿಕರ್ತ ದೇವರ ಕಡೆಗೆ ತೋರಿಸುವದನ್ನು ಕಡೆಗಣಿಸುವದನ್ನು ಆಯ್ದುಕೊಳ್ಳುವ ಯಾವುದೇ ವ್ಯಕ್ತಿಯು ನಿಜವಾಗಿಯೂ ಗಲಿಬಿಲಿಗೊಳ್ಳುವನು !

> ''ತಾವು ಜ್ಞಾನಿಗಳೆಂದು ಹೇಳಿಕೊಂಡು ಹುಚ್ಚರಾದರು....
> ಇದಲ್ಲದೆ ದೇವರ ಜ್ಞಾನವು ಅವರಿಗೆ ಇಷ್ಟವಿಲ್ಲದ್ದರಿಂದ
> ಅಲ್ಲದ ಕೃತ್ಯಗಳನ್ನು ನಡಿಸುವರಾಗುವಂತೆ ದೇವರು ಅವರನ್ನು
> ಅನಿಷ್ಟಭಾವಕ್ಕೆ ಒಪ್ಪಿಸಿದನು.'' (ರೋಮಾಪುರ 1:22,28.)

ಮತ್ತು ಆ ನೀತಿಭ್ರಷ್ಟ ಮನಸ್ಸು ಸೃಷ್ಟಿಕರ್ತನನ್ನೇ ಆರಾಧಿಸುವ ಬದಲು

ಸೃಷ್ಟಿಯ ಕಾರ್ಯಗಳನ್ನು ಆರಾಧಿಸುವುದು. ಇನ್ನೊಂದೆಡೆಯಲ್ಲಿ, ಸ್ಪಷ್ಟವಾಗಿ ಯೋಚಿಸುವ ಮನುಷ್ಯನು, ತನ್ನ ಸೃಷ್ಟಿಕರ್ತನನ್ನು ಆರಾಧಿಸುವನು. ಹೀಗೆ, ದೇವರು ವಿಶ್ವವನ್ನು ಸೃಷ್ಟಿಸಿದನೆಂಬುದನ್ನು ನಿರಾಕರಿಸಿದರೆ, ದೇವರು ನಿಮ್ಮನ್ನು ಅನಿಷ್ಟ ಭಾವಕ್ಕೆ ಒಪ್ಪಿಸುವನು ಮತ್ತು ವಿಶ್ವವು ಹೇಗೆ ಅಸ್ತಿತ್ವಕ್ಕೆ ಬಂದಿತು ಎಂಬುದರ ಬಗ್ಗೆ ಬೇರೆ ವಿಚಾರವನ್ನು ನಂಬುವಂತೆ ನಡಿಸುವುದು. ನೀತಿ ಭ್ರಷ್ಠ ಮನಸ್ಸು ಕೆಟ್ಟು ಹೋದ ಮನಸ್ಸಾಗಿರುತ್ತದೆ.

ದೇವರ ವಾಕ್ಯವನ್ನು ಸತ್ಯದಂತೆ ಸ್ವೀಕರಿಸುವದನ್ನು ನಿರಾಕರಿಸುವ ಜನರು, ನಾಶನಕ್ಕೆ ನಡಿಸುವ ಮೋಸಕರವಾದ ಮಾರ್ಗವನ್ನು ಆಗಲೇ ಹಿಂಬಾಲಿಸುತ್ತಿರುವರೆಂದು ದೇವರು ಎಚ್ಚರಿಸಿದ್ದಾನೆ.

ದೇವರ ವಾಕ್ಯದ ಸತ್ಯವನ್ನು ಸಕಾರಾತ್ಮಕವಾಗಿಯೂ ಚಟುವಟಿಕೆಯಿಂದಲೂ ಪ್ರೀತಿಸುವದನ್ನು ಆಯ್ಕೆ ಮಾಡಿಕೊಳ್ಳದ ವ್ಯಕ್ತಿಯು ತನ್ನನ್ನು ಬಹಳ ಗಂಡಾಂತರ ಕಾರಿಯಾದ ಸ್ಥಾನದಲ್ಲಿ ಇಟ್ಟುಕೊಳ್ಳುತ್ತಾನೆ.

> ''ಅವರು ಸತ್ಯದಲ್ಲಿ ಪ್ರೀತಿಯನ್ನಿಡದ ಕಾರಣದಿಂದ ರಕ್ಷಣೆಯನ್ನು ಹೊಂದದೆ ನಾಶವಾಗುತ್ತಾರೆ. ಅದೇ ಕಾರಣದಿಂದ ದೇವರು ಅಸತ್ಯ ನಡಿಸುವ ಭ್ರಮೆಯನ್ನು ಅವರಲ್ಲಿಗೆ ಕಳುಹಿಸಿ ಆ ಸುಳ್ಳನ್ನು ನಂಬುವದಕ್ಕೆ ಅವರನ್ನು ಬಿಡಿಸುತ್ತಾನೆ'' (2 ಥೆಸಲೋನಿಕ 2:10,11).

ಒಂದು ಸಲ ಒಬ್ಬ ವ್ಯಕ್ತಿಯು ಸತ್ಯವನ್ನು ಅಲಕ್ಷಿಸಿದರೆ ಇಲ್ಲವೇ ತಿರಸ್ಕರಿಸಿದರೆ, ಅವನು ಕೂಡಲೇ ಸುಳ್ಳಾದದ್ದನ್ನು ಅಪ್ಪಿಕೊಳ್ಳುವನು.

ಒಂದು ಸಲ ಲಂಡನ್ನಿನ ದಟ್ಟವಾದ ಇಬ್ಬನಿಯ ಮುಖಾಂತರ ನನ್ನ ಮನೆಗೆ ಮಾರ್ಗ ಕಂಡುಕೊಳ್ಳುವ ಪ್ರಯತ್ನ ಮಾಡಿದ್ದನ್ನು ನಾನು ಜ್ಞಾಪಿಸಿಕೊಳ್ಳುತ್ತೇನೆ. ಕೇವಲ ರಸ್ತೆಯ ಪಕ್ಕಕ್ಕೆ ಮಾರ್ಗ ಕಂಡುಕೊಳ್ಳಲು, ನಾವು ಹೊಂದಿಕೊಳ್ಳಬೇಕಾದ ಎಲ್ಲಾ ಸಹಾಯದ ಅಗತ್ಯತೆ ನನಗಿತ್ತು. ನನ್ನ ಕೈಯಲ್ಲಿಯ ಫ್ಲಾಶ್‌ಲೈಟನ್ನು ಮುಂದೆ ಹಿಡಿದಾಗ ಅದರ ಬೆಳಕೂ ಕಾಣುತ್ತಿರಲಿಲ್ಲ. ನಿಜವಾಗಿಯೂ ಮಾನಸಿಕ ಇಬ್ಬನಿಯಂತೆ ಇರುವ ಬಲವಾದ ಭ್ರಮೆಯು ಈ ಭೂಲೋಕದ ಮೇಲೆ ಇರುವ ಇಂದಿನ ಸಂಗತಿಗಳ ಕ್ರಮದ ಅಂತ್ಯವನ್ನು

ಅನುಸರಿಸುವದೆಂದು ದೇವರು ನಮಗೆ ಹೇಳುತ್ತಾನೆ, ಯಾಕಂದರೆ ಜನರು ದೇವರ ವಾಕ್ಯದ ಸತ್ಯವನ್ನು ತಿರಸ್ಕರಿಸಿರುವರು. ''ನಿನ್ನ ಬರೋಣದ ಸಂಕೇತವು ಯಾವುದು, ಮತ್ತು ಯುಗದ ಅಂತ್ಯದ ಸಂಕೇತವು ಯಾವುದು ?'' ಎಂದು ಯೇಸುವಿನ ಶಿಷ್ಯರು ಆತನನ್ನು ಕೇಳಿದರು. ಇತರ ವಿಷಯಗಳಲ್ಲಿ ಆತನು ಉತ್ತರ ಕೊಟ್ಟನು :

> ''ಸುಳ್ಳು ಕ್ರಿಸ್ತರೂ ಸುಳ್ಳು ಪ್ರವಾದಿಗಳೂ ಎದ್ದು ಸಾಧ್ಯವಾದರೆ ದೇವರಾದು ಕೊಂಡವರನ್ನು ಸಹ ಮೋಸಗೊಳಿಸುವದಕ್ಕೋಸ್ಕರ ದೊಡ್ಡ ದೊಡ್ಡ ಸೂಚಕ ಕಾರ್ಯಗಳನ್ನು ಅದ್ಭುತ ಕಾರ್ಯಗಳನ್ನು ಮಾಡಿ ತೋರಿಸುವರು'' (ಮತ್ತಾಯ 24:24).

ಈಗಲೂ ಸಹ ನಿನ್ನಷ್ಟಕ್ಕೆ ನೀನೇ ''ನಾನು ಮೋಸಗೊಳಿಸಲ್ಪಟ್ಟಿರುವದಿಲ್ಲ'' ಎಂದು ಹೇಳುತ್ತಿರಬಹುದು, ಸುಳ್ಳು ಕ್ರಿಸ್ತನನ್ನು ಸುಳ್ಳು ಪ್ರವಾದಿಯನ್ನು ಗುರುತಿಸಿದ್ದಕ್ಕಾಗಿ ನೀನು ಹೆಮ್ಮೆ ಪಡುತ್ತಿರಬಹುದು. ಆದರೆ ಸ್ವಲ್ಪ ಹೊತ್ತು ನಿಂತುಕೋ. ಮತ್ತು ನಿನ್ನ ತೀರ್ಮಾನದ ಬಗ್ಗೆ ಯೋಚಿಸಿಕೋ. ಒಂದು ವೇಳೆ, ನೀನು ಸತ್ಯವನ್ನು ಪ್ರೀತಿಸಿರದಿದ್ದರೆ, ಸೈತಾನನು ನಿಮ್ಮ ಮನಸ್ಸನ್ನು ಮೋಸಗೊಳಿಸಲು ದೇವರು ಬಿಟ್ಟಿದ್ದರೆ, ನೀನು ನಿಶ್ಚಿತವಾಗಿ ಅದರ ಬಗ್ಗೆ ಅರುಹುವುಳ್ಳವನಾಗಿರುವದಿಲ್ಲ. ಯಾವುದೋ ಸುಳ್ಳು ಪ್ರವಾದಿಯು ನಿನ್ನನ್ನು ಮೋಸಪಡಿಸಿದ್ದಾನೆಂದು ನೀನು ನಿಜವಾಗಿಯೂ ತಿಳಿದುಕೊಂಡಿದ್ದರೆ, ನೀನು ನಿಜವಾಗಿಯೂ ಮೋಸಗೊಳಿಸಲ್ಪಟ್ಟಿರುವುದೇ ಇಲ್ಲ. ಎಲ್ಲಾ ಭ್ರಮೆಯು ಮನಸ್ಸಿನಲ್ಲಿ ಇರತಕ್ಕದ್ದು, ಮತ್ತು ಬೌದ್ಧಿಕವಾಗಿ ಹೆಮ್ಮೆಯುಳ್ಳ ಯಾವನೇ ಆಗಲೀ ತನ್ನ ಮನಸ್ಸು ಸುಳ್ಳನ್ನು ನಂಬಲು ನಡಿಸಲ್ಪಟ್ಟಿದೆ ಎಂಬುದನ್ನು ಸ್ವೀಕರಿಸುವದನ್ನು ಕಠಿಣವಾದದ್ದನ್ನಾಗಿ ಕಂಡುಕೊಳ್ಳುತ್ತಾನೆ.

ಬೈಬಲನ್ನು ಓದುವಾಗ ಸತ್ಯವನ್ನು ವಿರೋಧಿಸುವ ನಿಜವಾಗಿಯೂ ಎರಡು ರೀತಿಯ ಜನರಿದ್ದಾರೆ, ಆದರಿಂದ ಅವರು ಲೋಕವು ಕಲಿಸುವ ಮೋಸಕ್ಕೆ ತಮ್ಮನ್ನು ತೆರೆದಿಟ್ಟುಕೊಳ್ಳುತ್ತಾರೆ. ಒಬ್ಬನು ಬೌದ್ಧಿಕವಾಗಿ ಗರ್ವಿಯೂ ಮತ್ತು

ಸ್ವಯಂ ತೃಪ್ತಿಯಿಂದಿರುವವನಂತೆ ಕಾಣುವವನೂ ಆಗಿರುವನು. ಇನ್ನೊಬ್ಬನು ನೈತಿಕವಾಗಿ ಅವಿಧೇಯನಾದ ವ್ಯಕ್ತಿ, ಆದರೆ ದೇವರ ಚಿತ್ತವನ್ನು ಮಾಡಲು ನಿಜವಾಗಿಯೂ ಅಪೇಕ್ಷಿಸುವ ಪ್ರತಿಯೊಬ್ಬ ವ್ಯಕ್ತಿಗೆ, ಕರ್ತನಾದ ಯೇಸುವಿನಲ್ಲಿ ಒಂದು ವಿಶೇಷ ವಾಗ್ದಾನವಿದೆ ''ಆತನ ಚಿತ್ತದಂತೆ ನಡೆಯುವದಕ್ಕೆ ಯಾರಿಗೆ ಮನಸ್ಸಿದೆಯೋ ಅವರಿಗೆ ಈ ಬೋಧನೆಯು ದೇವರಿಂದ ಬಂದದ್ದೋ ನಾನೇ ಕಲ್ಪಿಸಿ ಹೇಳಿದ್ದೋ ಗೊತ್ತಾಗುವದು.....'' (ಯೋಹಾನ 7:17).

ನೀನು ನಿಜವಾಗಿಯೂ ದೇವರ ಚಿತ್ತ ಮಾಡಲು ಅಪೇಕ್ಷಿಸಿದರೆ, ಬೈಬಲಿನ ಮುಖಾಂತರ ಯಾವುದನ್ನು ನಂಬಬೇಕು ಮತ್ತು ಯಾವುದನ್ನು ನಂಬಬಾರದು, ಹೇಗೆ ವರ್ತಿಸಬೇಕು ಮತ್ತು ಹೇಗೆ ವರ್ತಿಸಬಾರದು ಎಂಬುದನ್ನು ದೇವರು ಕಲಿಸುವದನ್ನು ನಿಶ್ಚಿತಪಡಿಸಿಕೋ.

ಹೀಗಿದ್ದರೂ, ನಿಜವಾದ ದೇವರ ವಾಕ್ಯವನ್ನು ಬೋಧಿಸುವದರ ಬದಲು ತಪ್ಪಾದ ಸಂಗತಿಗಳನ್ನು ನೀನು ನಂಬುವಂತೆಯೂ ಮಾಡುವಂತೆಯೂ ನಿಮ್ಮನ್ನು ನಡಿಸಲು ಪ್ರಯತ್ನಿಸುವ ತಮ್ಮನ್ನು ತಾವೇ ನೇಮಿಸಿಕೊಂಡ ಧಾರ್ಮಿಕ ಬೋಧಕರನ್ನು ತಿರಸ್ಕರಿಸುವಲ್ಲಿ ನೀವು ಜಾಗರೂಕರಾಗಿರತಕ್ಕದ್ದು.

ಈ ಸಂತತಿಯಲ್ಲಿ, ಸೈತಾನನ ಏಜಂಟರಲ್ಲಿ ಕೆಲವರು, ಜನರನ್ನು ತಪ್ಪಾದ ಮಾರ್ಗಕ್ಕೆ ತೋರಿಸುವವರು ಸುಳ್ಳ ಕ್ರೈಸ್ತ ಆಚಾರ ಪದ್ಧತಿಗಳ ಸದಸ್ಯರಾಗಿರುವರು. ತಂದೆಯಾದ ದೇವರನ್ನು ಕುಮಾರನಾದ ದೇವರನ್ನು ಮತ್ತು ಪವಿತ್ರಾತ್ಮನಾದ ದೇವರನ್ನು ಕುರಿತು - ಒಬ್ಬಾತನಲ್ಲಿ ಮೂರು ಮತ್ತು ಮೂವರಲ್ಲಿ ಒಬ್ಬಾತನು - ಎಂಬ ಸತ್ಯವನ್ನು ತಿರಸ್ಕರಿಸುವದನ್ನು ಆಯ್ಕೆ ಮಾಡಿದ ಯಾವುದೇ ವ್ಯಕ್ತಿಯು ಸುಳ್ಳು ಪ್ರವಾದಿ ಯಾಗಿದ್ದಾನೆ. ಅಂಥ ಜನರು ಬೈಬಲಿನಿಂದ ಭಿನ್ನವಾಗಿರುವ ಕೆಲವು ವಚನಗಳನ್ನು ಉಲ್ಲೇಖಿಸಬಹುದಾದರೂ, ಅವರು ಸಂಪೂರ್ಣವಾಗಿ ಪಠ್ಯವನ್ನು ಹಿನ್ನೆಲೆಯಿಂದ ಬೇರ್ಪಡಿಸವರು ಮತ್ತು ಬೈಬಲಿನಲ್ಲದ ಧರ್ಮವನ್ನು ಪ್ರಚುರಪಡಿಸುವರು ''ಯೇಸು ಕ್ರಿಸ್ತನು ಯಾರಾಗಿದ್ದಾನೆ ?'' ಎಂದು ಕೇಳುವದರಿಂದ ಒಬ್ಬ ಸುಳ್ಳು ಬೋಧಕನನ್ನು ನೀನು ಯಾವಾಗಲೂ ಕಂಡು ಹಿಡಿಯಬಹುದು. ಆತನು ಯಾರಾಗಿದ್ದಾನೆಂಬುದನ್ನು ನೀನು ತಿಳಯುವುದು ಯಾಕೆ ಅಷ್ಟು ಮಹತ್ವದ್ದಾಗಿದೆ ಎಂಬುದರ ಕಾರಣದ ಭಾಗವಾಗಿದೆ.

ಯೇಸುವು ಕುಮಾರನಾದ ದೇವರು ಆಗಿದ್ದಾನೆಂದು ನೀನು ತಿಳಿದುಕೊಳ್ಳುವಾಗ, ಒಬ್ಬರಿಗೊಬ್ಬರು ಸಹಾಯ ಮಾಡುವ ರಹಸ್ಯ ಸಮಾಜಗಳೂ ಸಹ, ಇನ್ನೊಂದು ಆತ್ಮಿಕ ಭ್ರಾಂತಿಯಂತೆ ಕಾಣುವವು ★ ಅಂಥ ಸಮಾಜಗಳಲ್ಲಿ ದೇವರು ನಮೂದಿಸಲ್ಪಟ್ಟರೂ, ಈ ಗುಂಪುಗಳು, ಹೀಗೆ ಹೇಳಿದ ಯೇಸುವನ್ನು ಕಡೆಗಣಿಸುವವು.

> ''ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ'' (ಯೋಹಾನ 14:6). ದೇವರ ಬಗ್ಗೆ ತಪ್ಪಾಗಿ ನಡಿಸಲ್ಪಟ್ಟ ವಿಶ್ವಾಸವುಳ್ಳವರನ್ನು ಕುರಿತು ಬೈಬಲ್ ಕಠಿಣವಾದ

---

★ ಫ್ರೀಮೆಸನರಿ ಎಂಬುದು ಜಗತ್ತಿನಲ್ಲಿ ಅತೀ ದೊಡ್ಡದಾದ ಅಂತರಾಷ್ಟ್ರೀಯ ರಹಸ್ಯ ಸಮಾಜವಾಗಿದೆ. ಈಗ ಜಗತ್ತಿನಲ್ಲೆಲ್ಲಾ ಸುಮಾರು ಹತ್ತು ಮಿಲಿಯ ಪುರುಷರು ಸದಸ್ಯರಾಗಿರುವರೆಂದು ಹೊಗಳಿಕೊಳ್ಳುತ್ತದೆ. ಆದರ ''ಸಹೋದರ ಪ್ರೀತಿ, ಸಹಾಯ ಮತ್ತು ಸತ್ಯವು'' ಅನೇಕರಿಗೆ ಆಕರ್ಷಣವಾಗಿ ಕಂಡರೂ, ಮೇಸನರಿಯು ಹೊರಗಿನವರಿಗೆ ಅದು ಕಾಣಿಸುವಷ್ಟು ತೊಂದರೆಯಿಲ್ಲದ್ದಾಗಿ ಇರುವದಿಲ್ಲ. ಒಬ್ಬ ಮೇಸನ್ ಆಗಬೇಕಾದರೆ, ಪ್ರತಿಯೊಬ್ಬ ಅಭ್ಯರ್ಥಿಯು ಬೆಳಕನ್ನು ತಲುಪುವದಕ್ಕಾಗಿ ತಾನು ಕತ್ತಲೆಯಲ್ಲಿ ಇರುವೆನೆಂದು ಅರಿಕೆ ಮಾಡತಕ್ಕದ್ದು. ''ನಾನೇ ಲೋಕಕ್ಕೆ ಬೆಳಕು, ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವ ಕೊಡುವ ಬೆಳಕನ್ನು ಹೊಂದಿದವ ನಾಗಿರುವನು'' (ಯೋಹಾನ 8:12) ಎಂದು ಯೇಸು ಹೇಳಿದನು. ಮೆಸೊನಿಕ ರಹಸ್ಯ ಸಮಾಜದೊಳಗೆ ಪ್ರವೇಶಿಸುವ ಆಚರಣೆಯು ಬಹಳ ನಾಟಕೀಯವಾದದ್ದೂ ಸಂಕೇತಗಳಿಂದ ತುಂಬಿಕೊಂಡದ್ದು ಆಗಿರುತ್ತದೆ. ಆ ಸಮಯದಲ್ಲಿ, ಮೆಸೊನಿಕ ಅಭ್ಯರ್ಥಿಯು ಬೈಬಲಿನ ದೇವರ ತತ್ವದಿಂದ ಬಹಳ ದೂರಕ್ಕೆ ನಡಿಸಲ್ಪಡುತ್ತಾನೆ "Gauto" ನ ಹೆಸರು ಅವನಿಗೆ ಪರಿಚಯಿಸಲ್ಪಡುತ್ತದೆ. ಗೌಟೊ ಎಂಬುದು ''ದೇವರಿಗಾಗಿ ಕಳೆದು ಹೋದ ಹೆಸರು ಎಂದು ಅಭ್ಯರ್ಥಿಗೆ ಹೇಳಲ್ಪಡುತ್ತದೆ. ಮತ್ತು ಗೌಟೊನು ''ವಿಶ್ವದ ಶ್ರೇಷ್ಠ ಶಿಲ್ಪಿ'' ಆಗಿದ್ದಾನೆ. ತಾತ್ವಿಕವಾಗಿ ಯಾವುದೇ ದೇವರಲ್ಲಿಯ ವಿಶ್ವಾಸಿಯು, ಅವನು ಬುದ್ಧಿಷ್ಟನಾಗಿರಲಿ, ಹಿಂದುವಾಗಿರಲಿ, ಮುಸ್ಲಿಮನಾಗಿರಲಿ, ಯೆಹೂದ್ಯನಾಗಿರಲಿ. ಇಲ್ಲವೇ ಕ್ರೈಸ್ತನಾಗಿರಲಿ ಫ್ರೀಮೆಸನ್‌ನಾಗಬಹುದು. ಹೀಗೆ ಗೌಟೊನು (ಮನುಷ್ಯ ನಿರ್ಮಿತ ದೇವರ ತತ್ವವು) ಅಭ್ಯರ್ಥಿಯ ವಿಚಾರಗಳನ್ನು ನಿಜವಾದ ಬೆಳಕು ಎಂದು ಬೈಬಲ್ ಘೋಷಿಸುವ

ಮಾತುಗಳನ್ನು ದಾಖಲೆ ಮಾಡುತ್ತದೆ. ''ದೇವರು ಒಬ್ಬನೇ ಎಂದು ನೀನು ನಂಬುವವನು; ಹಾಗೆ ನಂಬುವುದು ಒಳ್ಳೆಯದೆ ; ದೆವ್ವಗಳು ಕೂಡ ಹಾಗೆಯೇ ನಂಬಿ ಹೆದರಿ ನಡಗುತ್ತವೆ'' (ಯಾಕೋಬ 2:19).

ಬೈಬಲಿನ ದೇವರನ್ನು ಅಲ್ಲಗಳೆಯುವ ಪ್ರಮುಖ ಧರ್ಮಗಳಿಂದ ಚಟುವಟಿಕೆಯ ಗಂಡಾಂತರಕಾರಿ ಬೆಳವಣಿಗೆಯನ್ನು ನಾವು ಇಂದು ನೋಡುತ್ತಲಿದ್ದೇವೆ. ಹಿಂದೂ ಧರ್ಮದ ವಿವಿಧ ಗುಂಪುಗಳು ಅನೇಕರನ್ನು ಆಕರ್ಷಿಸುತ್ತವೆ ಮತ್ತು ಅನೇಕ ಹೊಸ ಜನರನ್ನು ಅನುಯಾಯಿಗಳನ್ನಾಗಿ ಮಾಡಕೊಳ್ಳುತ್ತಲಿವೆ. ತಮ್ಮ ಬೈಬಲಿನ ಅನುಸರಣೆಗೆ ಪ್ರಸಿದ್ಧವಾದ ದೇಶಗಳಲ್ಲಿ, ಮೂಲ ಹಿಂದೂ ತತ್ವಜ್ಞಾನವು Transcendental Meditation ಇಲ್ಲವೇ ಅಂಥ ಯೋಗ ಮತ್ತು ಸನ್ಯಾಸತ್ವದಂಥ Eastern Mysticism ರೂಪಗಳಲ್ಲಿ ಕೊಡಲ್ಪಟ್ಟಿದೆ. ವಿವಿಧ ಆರಾಧನೆಗಳಿಂದ ಸೃಷ್ಟಿಯಲ್ಲಿ ಅನೇಕ ದೇವರುಗಳನ್ನು ಆರಾಧಿಸುತ್ತದೆ. ಭೂಲೋಕವನ್ನು ಸಂದರ್ಶಿಸಲು ತನ್ನನ್ನು ತಗ್ಗಿಸಿಕೊಂಡ ಸೃಷ್ಟಿಕರ್ತ ದೇವರನ್ನು ಗೌರವಿಸದೇ ಮೋಸ ಹೋದ ಜನರು ತಮ್ಮನ್ನೇ ಮೇಲಕ್ಕೇರಿಸಿಕೊಂಡ ಗುರುಗಳನ್ನು ಗೌರವಿಸುತ್ತಿದ್ದಾರೆ.

ಮುಸ್ಲಿಮ್ ಜಗತ್ತೂ ಕೂಡ ತನ್ನ ವಿಶ್ವಾಸವನ್ನು ಪ್ರಸಾರ ಮಾಡುವದರಲ್ಲಿ ಬಹಳವಾದ ಆಸಕ್ತಿಯನ್ನು ಪ್ರದರ್ಶಿಸುತ್ತಲಿದೆ. ಕೆಲವು ವರ್ಷಗಳ ಹಿಂದೆ ಅಸಾಧ್ಯವಾಗಿದ್ದದ್ದು ಈಗ ಲಭ್ಯವಿರುವ ಆರ್ಥಿಕ ಸಹಾಯವು

---

ಯೇಸುವಿನಿಂದ ಬದಲಾಯಿಸ ಲ್ಪಡುತ್ತಾನೆ. (ಯೋಹಾನ 1:9). ಅನಂತರ, ಮೇಸನ್‌ನು ಮಾಸ್ಟರ ಮೇಸನ್ ಆಗುವಾಗ, ಅವನು ದೇವರಿಗಾಗಿ ಮುಂದಿನ ಹೆಸರನ್ನು ಕಲ್ಪಿಸಲ್ಪಡುತ್ತಾನೆ - 'Jahbulon'. ಈ ಹೆಸರು ಯೆಹೂದಿ ಮತ್ತು ಮಧ್ಯ ಪ್ರಾಚ್ಯದ ದೇವರುಗಳಿಗಾಗಿರುವ ಹೆಸರುಗಳ ಒಂದುಗೂಡಿಸುವಿಕೆಯಾಗಿದೆ, ಇದು YAHWEH ಗಾಗಿ JAH, BUL (ಬಾಳನ ಒಂದು ರೂಪ) ಮತ್ತು ON ದಿಂದ ಬಂದಿದೆ. ಇದು ಐಗುಪ್ತದ ಸೂರ್ಯ ದೇವರಿಗೆ ಸಂಬಂಧಿಸಿದೆ. ಭಿನ್ನವಾದ ವಿಶ್ವಾಸಗಳನ್ನು ಒಂದುಗೂಡಿಸುವ ವ್ಯರ್ಥ ಪ್ರಯತ್ನಗಳಿಂದಾದ ಸ್ಪಷ್ಟವಾದ ಸಿಂಕ್ರೆಟಿಜಮ್ ದ ಉದಾಹರಣೆಯಾಗಿದೆ. ಯೇಸು ತಾನೇ ಹೀಗೆ ಹೇಳಿದ್ದಾನೆ: ''ನಿನ್ನೊಳಗಿರುವ ಬೆಳಕೇ ಕತ್ತಲಾದರೆ ಆ ಕತ್ತಲು ಎಷ್ಟನ್ನ ಬೇಕು'' (ಮತ್ತಾಯ 6:23).

ಈ ರೀತಿಯ ಬೆಳವಣಿಗೆಗೆ ಸಹಾಯ ಮಾಡುತ್ತಲಿದೆ. ಯೆರೂಸಲೇಮಿನಲ್ಲಿ ದೇವಾಲಯವಿದ್ದ ಸ್ಥಳದಲ್ಲಿರುವ ''ಡೋಮ ಆಫ್ ದ ರೊಕ್'' ಎಂದು ಕರೆಯಲ್ಪಡುವ ಪವಿತ್ರ ಮಂದಿರದಿಂದ, ದೇವರ ಶುಭ ಸಮಾಚಾರದ ತಿರುಳನ್ನೇ ಧೈರ್ಯದಿಂದ ಅಲ್ಲಗಳೆಯುತ್ತಿದೆ. ಡೋಮ ಆಫ್ ದ ರೊಕ್ ದ ಸುತ್ತಲು, ''ದೇವರು ಹುಟ್ಟಿದವನಲ್ಲ, ಇಲ್ಲವೇ ಹುಟ್ಟಿಸುವಾತನೂ ಅಲ್ಲ'' ಎಂದು ಬರೆಯಲ್ಪಟ್ಟಿದೆ. ಹೀಗಿದ್ದರೂ ಬೈಬಲು ಹೀಗೆ ಹೇಳುತ್ತದೆ:

> ''ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು ; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು'' (ಯೋಹಾನ 3:16)

ಆತ್ಮಿಕ ಭ್ರಮೆಯು ಧಾರ್ಮಿಕ ಜಗತ್ತಿಗೆ ಮಾತ್ರವೇ ಮಿತಿಗೊಂಡಿರುವದಿಲ್ಲ. ಮಾನವನು ವಿಶ್ವದ ಕೇಂದ್ರವಾಗಿದ್ದಾನೆ ಮತ್ತು ಸಮಾಜದ ಅತ್ಯುನ್ನತ ಗುರಿಯು ಮನುಷ್ಯನ ಬೆಳವಣಿಗೆಯಾಗಿದೆ ಎಂದು ನಂಬುವ ಮಾನವತೆಯ ತತ್ವಜ್ಞಾನವನ್ನು ಲೌಕಿಕ ಜಗತ್ತು ಅಪ್ಪಿಕೊಂಡಿದೆ. ಮಾನವತಾವಾದವು ವಿಶ್ವವಿದ್ಯಾಲಯಗಳಲ್ಲಿ ವೃತ್ತ ಪತ್ರಿಕೆಗಳಲ್ಲಿ, ಬಹುರಾಷ್ಟ್ರೀಯ ಸಂಘಟನೆಗಳ ಚರ್ಚಾಗೋಷ್ಠಿಗಳಲ್ಲಿ, ಪ್ರಸಿದ್ಧ ನಿಯತ ಕಾಲಿಕಗಳಲ್ಲಿ ಮತ್ತು ಆಕಾಶವಾಣಿ, ದೂರದರ್ಶನಗಳಲ್ಲಿ ಬಿತ್ತರಿಸಲ್ಪಡುತ್ತಲಿದೆ, ''ನಿನ್ನನ್ನೇ ಪ್ರೀತಿಸಿಕೋ'' ಎಂಬುದು ಜಾಹೀರಾತು ಜಗತ್ತಿನಿಂದ ಜನಪ್ರಿಯಗೊಳಿಸಿದ ಸ್ವಾರ್ಥದ ಮುಖ್ಯ ಪ್ರಸ್ತಾಪವಾಗಿದೆ.

ಮಾನವತಾವಾದವು ಮಾನವನನ್ನು ಆರಾಧಿಸುವದಕ್ಕಿಂತ ಹೆಚ್ಚಿನದಾಗಿರದಂಥದ್ದು, ಕೆಲವರು ಯೋಚಿಸುವಂತೆ ಒಂದು ಹೊಸ ತತ್ವಜ್ಞಾನವಾಗಿರುವದಿಲ್ಲ. ಪೌಲನ ದಿನಗಳಲ್ಲಿ ಹಿಂದೆ, ದೇವರು ಹೀಗೆ ಹೇಳಿದನು : ''ಅವರು ಸತ್ಯದೇವರನ್ನು ಬಿಟ್ಟು ಅಸತ್ಯವಾದದ್ದನ್ನು ಹಿಡಿದುಕೊಂಡು ಸೃಷ್ಟಿಕರ್ತನನ್ನು ಪೂಜಿಸದೆ ಸೃಷ್ಟಿವಸ್ತುಗಳನ್ನೇ ಪೂಜಿಸಿ ಸೇವಿಸುವವರಾದರು. ....'' (ರೋಮಾಪುರ 1:25). ಮಾನವತಾವಾದಿಗಳಿಗೆ ನಿಶ್ಚಯವಾಗಿಯೂ ಯಾವುದು ತಗ್ಗಿಸುವಂತೆ ಮಾಡುವ ಪ್ರಶ್ನೆಯಾಗಿದೆ ಎಂದು ದೇವರು ಪ್ರಶ್ನಿಸುತ್ತಾನೆ: ''ಲೋಕಕ್ಕೆ ನಾನು ಆಸ್ತಿವಾರವನ್ನು ಹಾಕಿದಾಗ ನೀನು

ಎಲ್ಲಿದ್ದೀ? ನೀನು ಜ್ಞಾನಿಯಾಗಿದ್ದರೆ ಹೇಳು'' (ಯೋಬ 38:4). ಅದು ಹಳೇ ಕಥೆಯಾಗಿರುತ್ತದೆ. ಸೈತಾನನು ಹವ್ವಳ ಬಳಿಗೆ ಬಂದಾಗ, ''ನೀವು ದೇವರಂತಾಗುವಿರಿ'' (ಆದಿಕಾಂಡ 3:5) ಎಂದು ಹೇಳುವದರಿಂದ ಅಸಾಧ್ಯವಾದದ್ದನ್ನು ಸಾಧ್ಯವಾದದ್ದರಂತೆ ಆಕೆಯ ಮುಂದಿಟ್ಟನು. ನಮ್ಮ ದಿನದಲ್ಲಿ ಸೈತಾನನು ಪ್ರಾಪಂಚಿಕ ಮಾನವತಾವಾದದ ಮೋಸಕರವಾದ ಬೋಧನೆಗಳ ಮುಖಾಂತರ ತನ್ನ ಹೊಲಸಾದ ಕಾರ್ಯವನ್ನು ಮುಂದರಿಸಿರುವನು.

ರಾಜಕೀಯ ಇಲ್ಲವೇ ಧಾರ್ಮಿಕ ದೃಶ್ಯದಿಂದ ಮರುಳುಗೊಂಡಿರದ ಆಧುನಿಕ ಯುವಕನು ನೀನಾಗಿರಬಹುದು. ನಿನಗೆ, ರಾಜಕಾರಣಿಗಳು ಸಂಶಯಾಸ್ಪದವಾದವರು ಮತ್ತು ಧರ್ಮವು ಅಸಂಗತವಾದದ್ದು ಆಗಿದೆ. ನೀನು ನಿನ್ನ ಸಮಾನಸ್ತರೊಂದಿಗೆ ಜೊತೆಗೂಡಿ ವೈಯಕ್ತಿಕ ನೆರವೇರಿಸುವಿಕೆಗಾಗಿ ಬೇರೆಲ್ಲಿಯೋ ನೋಡುತ್ತಿರಬಹುದು. 'Punk rock', 'new wave music', 'heavy metal' ಎಂಬ ಹಾಡುಗಳಿಂದ ವಿವರಿಸಲ್ಪಟ್ಟ ಇಲ್ಲವೇ ಪ್ರಚಾರದಲ್ಲಿರುವದರಿಂದ ಕೊಡಲ್ಪಟ್ಟ ಜೀವನ ಶೈಲಿಯು ನೀನು ನಿನ್ನನ್ನೇ ಕಂಡುಕೊಳ್ಳುತ್ತಿರುವ ಏಕಾಂತ ಜಗತ್ತಿನಿಂದ ತಪ್ಪಿಸಿಕೊಳ್ಳುವಿಕೆ ಯನ್ನು ನಿನಗೆ ಕೊಡಬಹುದು ಎಂದು ನೀನು ಯೋಚಿಸಬಹುದು.

ನೀನು ಕೇಳಿಸಿಕೊಂಡ ಮತ್ತು ಕುಣಿದ ಶಬ್ದಗಳನ್ನು ನೀನು ಅರಿತುಕೊಂಡಿರ ಬಹುದು. ಈ ರೀತಿಯಲ್ಲಿ ನೀನು ಅವುಗಳನ್ನು ವಿವರಿಸಲು ಬಯಸದಿದ್ದರೂ, ನಿಶ್ಚಯವಾಗಿ ಅವು ಸೈತಾನತ್ವ, ವಿಕೃತಕಾಮ ಮತ್ತು ಲೈಂಗಿಕತೆಯ ಮಿಶ್ರಣಗಳಾಗಿವೆ. ಅರ್ಥವಿಲ್ಲದ ಅಸ್ತಿತ್ವಕ್ಕೆ ಆಕರ್ಷಕ ಪರ್ಯಾಯವಾಗಿ ಸಂಗೀತದಲ್ಲಿ ನರಕದ ಭಯಾನಕಗಳು ಆಗಾಗ ಪ್ರಕಟಿಸಲ್ಪಡುತ್ತವೆ. ಅತೀಯಾದ ಹಿಂಸೆಯನ್ನು ಕೆಲವು ಸಲ ತಲುಪುವ ವಾತಾವರಣದಲ್ಲಿ, ಈ ಯುವ ಜನರು ಒಂದು ಗೂಡುವುದು ಅವರು ತಮ್ಮನ್ನು ತಾವೇ ಮತ್ತು ಒಬ್ಬರನ್ನೊಬ್ಬರು ನಾಶಪಡಿಸಿಕೊಳ್ಳುವದಕ್ಕೆ ನಡಿಸುತ್ತದೆ.

ಲೊಸ್ ಎಂಜಲಸ್‌ದ ಪಟ್ಟಣದಲ್ಲಿಯ ಒಂದು ಸ್ಥಳದ ಬಗ್ಗೆ ನಿಮಗೆ ಹೇಳ ಬಯಸುತ್ತೇನೆ. ಅದು 'The Refrigerator' ಎಂದು

ಕರೆಯಲ್ಪಡುವ ಶವಾಗಾರವಾಗಿದೆ ಅಲ್ಲಿ 600 ಶವಗಳು, ಹೆಚ್ಚಾದವುಗಳು ಯುವಕರವುಗಳು, ಯಾರಾದರೂ ಅವುಗಳನ್ನು ಗುರುತಿಸಬಹುದು ಎಂಬ ನಿರೀಕ್ಷೆಯಿಂದ ಮೂರು ತಿಂಗಳುಗಳವರೆಗೆ ಅಲ್ಲಿ ಕಾದಿಡಲ್ಪಡುತ್ತವೆ "Anonymus" ಎಂದು ಗುರುತಿನ ಚೀಟಿಗಳು ಅವರ ಕಾಲ್ಬೆರುಳಗಳಿಗೆ ಕಟ್ಟಲ್ಪಡುತ್ತವೆ. ಈ ದುರ್ದೈವಿಗಳಲ್ಲಿ ಹೆಚ್ಚಾದವರು ಕ್ರಮೇಣವಾಗಿ ಗುರುತು ಹಿಡಿಯಲ್ಪಡದ "John Does" ರಂತೆ ನಿರ್ಗತಿಕರ ಸಮಾಧಿಗಳಲ್ಲಿ ಹೂಣಲ್ಪಡುತ್ತಾರೆ. ಅವರಲ್ಲಿ ಹೆಚ್ಚಾದವರು ಮದ್ಯವ್ಯಸನಿಗಳಿಂದ ಬಂದವರು. ಈ ಸಂದೇಶವು ಡಿಸ್ಕೊಗಳಿಂದ ಪೋಷಿಸಲ್ಪಡುತ್ತಿದೆ. ಮಿಲಿಯಗಟ್ಟಲೆ ಮನೆಗಳಲ್ಲಿ ಸಿಡಿ ಪ್ಲೇಯರಗಳ ಮೇಲಿಂದ ಕೇಳಲ್ಪಡುತ್ತಿದೆ. ಅವರು ತಪ್ಪಾದ ಮಾರ್ಗಸೂಚಿಗಳನ್ನು ಅನುಸರಿಸಿದವರು. ಈಗ, ಮಾರ್ಗದ ಅಂತ್ಯದಲ್ಲಿ, ಬದಲಾಗುವುದು ಸಾಧ್ಯವಾಗದಷ್ಟು ತಡವಾಗಿ ಹೋಗಿದೆ. ''ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು'' (ಯೋಹಾನ 10:10) ಎಂದು ಹೇಳಿದ, ಕರ್ತನಾದ ಯೇಸುವಿನ ಮಾತುಗಳನ್ನು ಕೇಳಿ ಅವುಗಳಿಗೆ ವಿಧೇಯರಾಗಿದ್ದರೆ ಎಷ್ಟೋ ಒಳ್ಳೇದಿತ್ತು.

ಈಗ ಈ ಎಲ್ಲಾ ಗಲಿಬಿಲಿಗೆ ಕೂಡಿಸಿ "black arts" ದಲ್ಲಿ ಆಸಕ್ತಿಯು ಅತಿಶಯವಾಗಿ ಬೆಳೆದಿರುವುದು. ಕತ್ತಲೆಯುಗದಲ್ಲಿ ತಿಳಿಯಲ್ಪಟ್ಟಂತೆ ಇಂದು ನಿಗೂಢ (Occult) ವಿಷಯದಲ್ಲಿ ಆಸಕ್ತಿಯು ಬಹಳವಾಗಿರುವುದೆಂದು ನಂಬಲರ್ಹ ಮೂಲಗಳು ಸೂಚಿಸುತ್ತಿರುವವು. ''ವೈಜ್ಞಾನಿಕ ಜ್ಞಾನೋದಯ'' ಎಂದು ಕರೆಯಲ್ಪಡುವುದು ಇಂದಿನ ದಿನಗಳಲ್ಲಿದ್ದರೂ ಇದು ಸಂಭವಿಸುತ್ತಲಿದೆ.

ಹೆಚ್ಚಾಗಿ ಸಂಭವವಲ್ಲದ ಸ್ಥಳಗಳಲ್ಲಿ ಸೈತಾನನ ಆರಾಧಕರ ಸಂಖ್ಯೆಗಳು ಬೆಳೆಯುತ್ತಲಿವೆ. ಲಂಡನ್ ಪಟ್ಟಣದಿಂದ ಉದ್ಯೋಗಿಗಳು "Black Mass" ಆಚರಿಸಲು ಕೆನ್ಸಿಂಗಟನ್‌ದಲ್ಲಿ ಕೂಡಿಬರುತ್ತಾರೆ. ಯುರೋಪಿನಲ್ಲೆಲ್ಲಾ ವ್ಯಾಂಕೂವರ ಐಲಾಂಡಿನಂಥ ಸುಂದರವಾದ ದೂರದ ಸ್ಥಳಗಳಲ್ಲಿಯೂ ''ಯಕ್ಷಿಣೆಯರ'' ಗುಂಪುಗಳು ಪಸರಿಸಿಕೊಂಡಿವೆ. ಆಫ್ರಿಕಾದಿಂದ ಪೂರ್ವಜರ ಕತ್ತಲೆ ಆಚಾರಗಳು ಜಗತ್ತಿನಲ್ಲೆಲ್ಲಾ ಭೂತಪ್ರೇತಗಳ ಆರಾಧನೆಯಲ್ಲಿ ಅನುಕರಿಸಲ್ಪಟ್ಟಿವೆ. "Dungeons and Dragons" ಮತ್ತು "Ouija

Board" ದಂಥ ವಿವಿಧ ಪಾರ್ಲರ ಆಟಗಳು ದುಷ್ಟತ್ವದೊಂದಿಗೆ ಮತ್ತು ಅಲೌಕಿಕವಾದವುಗಳ ಬಗ್ಗೆ ಜನರಲ್ಲಿ ಬೆಳಯುತ್ತಿರುವ ಹವ್ಯಾಸಗಳಾಗುತ್ತಲಿವೆ. ಇಂಥ ಎಲ್ಲಾ ಕಾರ್ಯಗಳು ಬಾಹ್ಯ ರೀತಿಯ ಆತ್ಮಿಕ ಕುತೂಹಲದ ಪರಿಣಾಮುಗಳಾಗಿವೆ. ತಮ್ಮ ತಪ್ಪಾಗಿ ನಡಿಸಲ್ಪಟ್ಟ ದೇವರಿಗಾಗಿರುವ ಅನ್ವೇಷಣೆಯಲ್ಲಿ, ಅನೇಕ ಜನರು, ದೇವರ ಬೆಳಕಿಗೆ ಬೆನ್ನು ಹಾಕುವದಲ್ಲದೇ ಒಂದು ರೀತಿಯ ಸುಳ್ಳಾದ, ಖಾಲಿಯಾದ ಆತ್ಮಿಕ ನೆರವೇರಿಕೆಗೆ, ಯಕ್ಷಿಣಿ ವಿದ್ಯೆಯ ಕತ್ತಲೆಯ ಕಡೆಗೆ ತಿರುಗಿಕೊಳ್ಳುವರು ಮತ್ತು ಇದೆಲ್ಲವೂ ನಾವು ಇಂದು ಸುಸಂಸ್ಕೃತ ಜಗತ್ತು ಎಂದು ಕರೆಯುವ ಸ್ಥಳದಲ್ಲಿ ನಡೆಯುವುದು.

ಅಂತಿಮ ದಿನಗಳ ಬಗ್ಗೆ ದೇವರು ಏನು ಹೇಳುವನು ಎಂಬುದನ್ನು ನಾವು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಂಡಿರುವೆವು. ಅಂತ್ಯ ಸಮಯಗಳಲ್ಲಿಯ ಮಹಾ ನಾಶನವನ್ನು ಹಿಂಬಾಲಿಸಿ ಬರುವ ಸುಳ್ಳು ಪ್ರವಾದಿಗಳ ಬಗ್ಗೆ ಮತ್ತು ಭಯಾನಕವಾದ ಸಂಕೇತಗಳ ಹಾಗೂ ಅದ್ಭುತಗಳ ಬಗ್ಗೆ ಆತನು ನಮಗೆ ಎಚ್ಚರಿಸಿದ್ದಾನೆ. ಮೋಸತನದ ಯಜಮಾನನು ಕಾಣಿಸಿಕೊಳ್ಳುವನು ಎಂದು ದೇವರು ಹೇಳುತ್ತಾನೆ. ''ಆ ಅಧರ್ಮ ಸ್ವರೂಪದ ಪ್ರತ್ಯಕ್ಷತೆಯು ಸೈತಾನನ ಮಾಟಕ್ಕನುಗುಣವಾಗಿರುವುದು. ಅದು ಮೋಸಗೊಳಿಸುವ ಸಕಲ ವಿಧವಾದ ಮಹತ್ಕಾರ್ಯ ಸೂಚಕ ಕಾರ್ಯ ಅದ್ಭುತ ಕಾರ್ಯ ಇವುಗಳಿಂದಲೂ ದುರ್ನೀತಿಯ ಎಲ್ಲಾ ವಂಚನೆಯಿಂದಲೂ ಕೂಡಿ ನಾಶನ ಮಾರ್ಗದಲ್ಲಿ ಇರುವವರಿಗೋಸ್ಕರ ಸಂಭವಿಸುವುದು'' (2 ಥೆಸಲೋನಿಕ 2:9,10).

ಸುಳ್ಳು ಬೋಧನೆಗಳಲ್ಲಿ ಮತ್ತು ದುಷ್ಟ ಆಚಾರಗಳಲ್ಲಿ ಈ ತೀವ್ರಗೊಳ್ಳುತ್ತಿರುವ ಆಸಕ್ತಿಯ ಕಾರಣದಿಂದ ಹೆಚ್ಚಾಗುತ್ತಿರುವ ಸಂಖ್ಯೆಯಲ್ಲಿ ಜನಾಂಗಗಳೂ ಸಮಾಜಗಳೂ ನಾಸ್ತಿಕತೆಯ, ತಿರಸ್ಕಾರದ ಮತ್ತು ನಿರಾಶೆಯ ಬಲಾತ್ಕಾರದ ಒತ್ತಡಗಳಿಂದ ಮುಚ್ಚಲ್ಪಟ್ಟಿರುವುವು ಎಂದು ಅರ್ಥಮಾಡಿಕೊಳ್ಳುವುದು ಕಠಿಣವಾಗಿರುವದಿಲ್ಲ. ಸೈತಾನನ ಸೂಚನಾ ಫಲಕಗಳು ಹೇಳಲಾರದಷ್ಟು ಅನೇಕವಾದವುಗಳಾಗಿವೆ. ಆದರೆ ಕರ್ತನಾದ ಯೇಸು ಕ್ರಿಸ್ತನ ಕಡೆಗೆ ಆತನು ಮನುಷ್ಯರನ್ನು ವಿಮೋಚಿಸುವ ಒಬ್ಬಾತನೇ ಆಗಿದ್ದಾನೆಂದು ಅವುಗಳಲ್ಲಿ ಯಾವುದೂ ಆತನ ಕಡೆಗೆ ತೋರಿಸುವದಿಲ್ಲ.

ಜೀವನದ ಜಾಗತಿಕ ಭೀಕರವಾದ ಚಿತ್ರಕ್ಕೆ ವಿರುದ್ಧವಾಗಿ, ದೇವರ ಸಂದೇಶವು, ಗಲಿಬಿಲಿಯ ಹಾಗೂ ಮರಣದ ಚಿತ್ರವಾಗಿರುವದಿಲ್ಲ. ಆತನ ಸಂದೇಶವು ನಿರೀಕ್ಷೆಯ, ಭರವಸೆಯ ಹಾಗೂ ಕ್ರಿಸ್ತನಲ್ಲಿ ಕಂಡು ಬರುವಂತೆಚಟುವಟಿಕೆಗಳು ಜೀವನದ ಸಂದೇಶವಾಗಿದೆ. ದೇವರಿಗಾಗಿ ನಿನ್ನ ಅನ್ವೇಷಣೆಯಲ್ಲಿ ನೀನು ಬೈಬಲನ್ನು ಓದುವಂತೆ, ಪವಿತ್ರಾತ್ಮನು, ''ನಾನು ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ'' ಎಂದು ಹೇಳಿದ ಕರ್ತನಾದ ಯೇಸುವಿನ ಕಡೆಗೆ ಯಾವಾಗಲೂ ತೋರಿಸುವನು, ಮತ್ತು ಬೇರೆ ಯಾರೂ ಇರಲಾರರು, ಯಾಕಂದರೆ, ''ನನ್ನ ಹೊರತು ತಂದೆಯ ಬಳಿಗೆ ಯಾವನೂ ಬರಲಾರನು'' (ಯೋಹಾನ 14:6) ಎಂದು ಯೇಸು ಮುಂದರಿಸಿ ಹೇಳಿದನು.

ನೀವು ತಪ್ಪಾಗಿ ನಡಿಸಲ್ಪಡದಂತೆ ಮೋಸಕರವಾದ ಸಂಕೇತ ಫಲಕಗಳ ಬಗ್ಗೆ ದೇವರು ನಿನ್ನನ್ನು ಎಚ್ಚರಿಸಿದ್ದಾನೆ. ನಿನ್ನ ಯೋಚನೆಯನ್ನು ಮುಸುಕಿಕೊಳ್ಳಬಹುದಾದ ಭ್ರಮೆಯ ಬೆಳವಣಿಗೆಯ ಬಗೆಗೂ ಆತನು ತಿಳಿಸಿದ್ದಾನೆ. ಈಗ ಆತನು ನಿನಗೆ ಈ ವಾಗ್ದಾನ ಕೊಡುತ್ತಾನೆ:

> ''.....ನಾನು ನಿಮ್ಮ ವಿಷಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನು ಬಲ್ಲೆನು ; ಅವು ಅಹಿತದ ಯೋಚನೆಗಳಲ್ಲ, ಹಿತದ ಯೋಚನೆಗಳೇ. ನೀವು ನನಗೆ ಮೊರೆಯಿಡುವಿರಿ, ನನ್ನನ್ನು ಪ್ರಾರ್ಥಿಸಲು ಹೋಗುವಿರಿ ; ನಾನು ಕಿವಿಗೊಡುವೆನು. ನೀವು ನನ್ನನ್ನು ಹುಡುಕುವಿರಿ. ಮನಃಪೂರ್ವಕವಾಗಿ ಹುಡುಕಿದಾಗ ನನ್ನನ್ನು ಕಂಡುಕೊಳ್ಳುವಿರಿ. ನಾನು ನಿಮಗೆ ದೊರೆಯುವೆನು, ನಿಮ್ಮನ್ನು ನಿಮ್ಮ ದುರವಸ್ಥೆಯಿಂದ ತಪ್ಪಿಸಿ ನಾನು ನಿಮ್ಮನ್ನು ಅಟ್ಟಿಬಿಟ್ಟದ್ದ ಸಮಸ್ತ ದೇಶಗಳಿಂದಲೂ ಸಕಲ ಜನಾಂಗಗಳ ಮಧ್ಯದಿಂದಲೂ ಒಟ್ಟುಗೂಡಿಸಿ ನಿಮ್ಮನ್ನು ಯಾವ ಸ್ಥಳದಿಂದ ಸೆರೆಗೆ ಸಾಗಿಸಿದೆನೋ ಅಲ್ಲಿಗೆ ತಿರಿಗಿ ಬರಮಾಡುವೆನು. ಇದು ಯೆಹೋವನ ನುಡಿ'' (ಯೆರಮೀಯ 29:11-14).

**ಆಲೋಚಿಸಲು ವಿರಾಮ.**

1. ಯಾವ ರೀತಿಯ ಮನಸ್ಸು ಸೃಷ್ಟಿಕರ್ತನಿಗಿಂತ ಹೆಚ್ಚಾಗಿ ಸೃಷ್ಟಿಯನ್ನು ಆರಾಧಿಸುವುದು ? (ಓದಿರಿ. ರೋಮಾಪುರ 1:22-28).
2. ದೇವರಿಗಾಗಿ ನಿಮ್ಮ ಅನ್ವೇಷಣೆಯಲ್ಲಿ, ನಿನಗಿರುವ ಯಾವುದೇ ಬೌದ್ಧಿಕ ಸಮಸ್ಯೆಯನ್ನು ತೆರೆಯುವ ಬೀಗದ ಕೈ ಯಾವುದು ? (ಓದಿರಿ. ಯೋಹಾನ 7:17).

   ಅದು ನಿನ್ನ ಮನಸ್ಸಾಗಿರುವುದೋ ?

   ಅದು ನಿನ್ನ ಅಪೇಕ್ಷೆ ಮತ್ತು ಚಿತ್ತವಾಗಿರುವುದೋ ?
3. ದೇವರು ನಿನ್ನನ್ನು ತನ್ನ ಬಳಿಗೆ ನಡಿಸಲು ನಿನಗೆ ಒಂದು ಸ್ಪಷ್ಟವಾದ ''ಸೂಚನ ಫಲಕ'' ವನ್ನು ಕೊಟ್ಟಿರುವನೋ ? (ಓದಿರಿ. ಯೋಹಾನ 8:12).

ಅನೇಕ ವರ್ಷಗಳ ಹಿಂದೆ ಇಂಗ್ಲಂಡಿನಲ್ಲಿಯ ಒಂದು ಸಂಡೇ ಸ್ಕೂಲ್ ಕ್ಲಾಸಿನಲ್ಲಿ ಒಬ್ಬ ಬಾಲಕನು ತನ್ನ ಸಂಡೇ ಸ್ಕೂಲ್ ಶಿಕ್ಷಕಿಗೆ, ''ಕಿಡಿಗೇಡಿ ಬಾಲಕರನ್ನು ದೇವರು ಪ್ರೀತಿಸುವನೋ ?'' ಎಂದು ಕೇಳಿದನು. ಮತ್ತು ಶಿಕ್ಷಕಿ, ''ಇಲ್ಲ, ನಿಶ್ಚಯವಾಗಿಯೂ ಇಲ್ಲ'' ಎಂದು ಹೇಳಿದಳು. ಒಬ್ಬ ಬಾಲಕನಿಗೆ ಅದನ್ನು ಹೇಳುವ ಉದ್ದೇಶವಿಲ್ಲದ ದೇವ ಧೂಷಣೆ! ದೇವರು ಕಿಡಿಗೇಡಿ ಬಾಲಕರನ್ನು ಪ್ರೀತಿಸದಿದ್ದರೆ, ಆತನು ನನ್ನನ್ನು ಎಂದೂ ಪ್ರೀತಿಸುತ್ತಿರಲಿಲ್ಲ ! ''ಬದಲಾವಣೆಯನ್ನು ಕಂಡುಕೊಳ್ಳುವಾಗ ಬದಲಾಯಿಸುವಂತೆ ಪ್ರೀತಿಯು ಪ್ರೀತಿಯಾಗಿರುವದಿಲ್ಲ'' ಎಂದು ಶೇಕ್ಸಪಿಯರ ಹೇಳುತ್ತಾನೆ''.

G. CAMPBELL MORGAN

# ಅಧ್ಯಾಯ 7

# ದೇವರು ನಿಜವಾಗಿಯೂ ನನ್ನನ್ನು ಪ್ರೀತಿಸುವನೋ ?

ನಿನಗೆ ಬಹಳ ಮಹತ್ವವಾಗಿರುವ ಯಾರಾದರೊಬ್ಬರ ಪ್ರೀತಿಯನ್ನು ನೀನು ಎಂದಾದರೂ ಪ್ರಶ್ನಿಸಿರುವಿಯೋ ? ಇಲ್ಲವೇ, ಬೇರೆಯವರು ಅದನ್ನು ನಂಬದೇ ಇರುವಾಗ ಯಾರನ್ನಾದರೂ ನೀನು ಪ್ರೀತಿಸುವಿ ಎಂಬುದನ್ನು ರುಜುವಾತು ಪಡಿಸಲು ಎಂದಾದರೂ ಪ್ರಯತ್ನಿಸಿರುವಿಯೋ ? ಎರಡರಲ್ಲಿಯೂ, ನಿಜವಾದ ಪ್ರೀತಿಯು ಮಾತುಗಳಿಗಿಂತ ಹೆಚ್ಚು ಚೆನ್ನಾಗಿ ಕೃತಿಗಳಿಂದ ನಿಜವಾದ ಪ್ರೀತಿಯನ್ನು ವ್ಯಕ್ತಪಡಿಸ ಬೇಕಾದ ಸಮಯಗಳಿರುವವೆಂಬುದನ್ನು ನೀನು ತಿಳಿದಿರುವಿ.

ಕೃತ್ಯಗಳು ಮಾತುಗಳಿಗಿಂತ ಹೆಚ್ಚು ಬಲವುಳ್ಳವುಗಳಾಗಿರುವದರಿಂದ, ಯೇಸುವು ಶಿಲುಬೆಯ ಮೇಲೆ ಮರಣ ಹೊಂದಿದಾಗ ಆತನು ಮಾಡಿದ್ದರಲ್ಲಿ, ದೇವರು ನಿನಗಾಗಿ ಮಾಡಿದ್ದರಲ್ಲಿ ತನ್ನ ಪ್ರೀತಿಯನ್ನು ಪ್ರದರ್ಶಿಸಿದನು. ಇದರ ಮಹತ್ವವನ್ನು ನೀನು ಅರ್ಥ ಮಾಡಿಕೊಳ್ಳುವಾಗ, ದೇವರು ನಿಜವಾಗಿಯೂ ನಿನ್ನನ್ನು ಪ್ರೀತಿಸುವನು ಎಂಬುದನ್ನು ಅರಿತುಕೊಳ್ಳಲು ನಿನಗೆ ಸಹಾಯ ಮಾಡುವದಕ್ಕೆ ಬೇರೆ ವಿವರಣೆ ನಿನಗೆ ಅಗತ್ಯವಾಗಿರುವದಿಲ್ಲ.

ನಾನು ಕ್ರಿಸ್ತನ ಕಡೆಗೆ ಮಾರ್ಪಾಟ ಹೊಂದಿದ ಸ್ವಲ್ಪ ಸಮಯದ ನಂತರ, ತುತ್ತೂರಿ ಊದುವ ಬಾಲಕ ಮತ್ತು ಒಬ್ಬ ಸೈನಿಕನ ಬಗ್ಗೆ ನಿಜಕತೆಯನ್ನು ಓದಿದೆನು. ಅವರಿಬ್ಬರು ಬೋಯೆರ ಯುದ್ಧದಲ್ಲಿ ಸೈನ್ಯದಲ್ಲಿ ಸೇವೆ ಮಾಡಿದರು.

ತುತ್ತೂರಿ ಊದುವ ಬಾಲಕ ವಿಲ್ಲಿ ಹೊಲ್ಟ, ದೇವಭಕ್ತಿಯಿಲ್ಲದ ಏಳು ಜನ ಸೈನಿಕರೊಂದಿಗೆ ಡೇರೆಯಲ್ಲಿ ಕೆಲಸ ಮಾಡಲು ನೇಮಿಸಲ್ಪಟ್ಟಾಗ, ಹನ್ನೆರಡು ವರ್ಷದವನಾಗಿದ್ದನು. ಈ ಜನರಲ್ಲಿ ಒಬ್ಬನು ಬಿಲ್ ಎಂದು ಕರೆಯಲ್ಪಡುತ್ತಿದ್ದನು. ಬಿಲ್ಲನಂತೆ ಇರದೇ ವಿಲ್ಲಿಯು ಕರ್ತನಾದ ಯೇಸು ಕ್ರಿಸ್ತನಲ್ಲಿ ಭಕ್ತಿಯುಳ್ಳ ವಿಶ್ವಾಸಿಯಾಗಿದ್ದನು. ಪ್ರತೀರಾತ್ರಿ ತನ್ನ ಹಾಸಿಗೆಯ ಬಳಿಯಲ್ಲಿ ಅವನು ಮೌನವಾಗಿ ಪ್ರಾರ್ಥಿಸಲು ಮತ್ತು ತನ್ನ ಬೈಬಲ್ ಓದಲು ಮೊಣಕಾಲೂರುತ್ತಿದ್ದನು. ಅವನು ಹಾಗೆ ಮಾಡಿದಾಗ ಇತರ ಸೈನಿಕರು ಅಪಹಾಸ್ಯಮಾಡಿ ಶಪಿಸುತ್ತಿದ್ದರು.

ಒಂದು ದಿನ ಸೈನ್ಯಾಧಿಕಾರಿಯು ಸೈನಿಕರ ಗುಂಪು ಸಾಲಾಗಿ ನಿಲ್ಲಲು ಆಜ್ಞಾಪಿಸಿದನು. ವಿಲ್ಲಿ ಮತ್ತು ಬಿಲ್ಲ ಅವರ ಡೇರೆಯೊಳಗೆ ಕಳ್ಳನು ಬಂದು ಹೋದದ್ದನ್ನು ಗುರುತಿಸಲಾಗಿತ್ತು. ಅಪರಾಧಿಯನ್ನು ಕಂಡು ಹಿಡಿಯಲು ಸೈನ್ಯಾಧಿಕಾರಿಯೂ ಎಲ್ಲರನ್ನೂ ಒಂದುಗೂಡಿಸಿದನು. ''ಹಿಂದಿನ ನನ್ನ ಎಚ್ಚರಿಕೆಯಿಂದ ಪ್ರಯೋಜನವಾಗಲಿಲ್ಲ. ಹಿಂದಿನ ರಾತ್ರಿ ಕಳ್ಳನು ಅದೇ ಪ್ರಯತ್ನ ಮಾಡಿದ್ದಾನೆ. ಇಂದು ಕಳ್ಳನಿಗೆ ತನ್ನನ್ನು ಗುರುತಿಸಲು ನಾನು ಕೊನೆಯ ಅವಕಾಶ ಕೊಡುತ್ತೇನೆ. ಪುರುಷನಂತೆ ಅವನು ತನ್ನ ಶಿಕ್ಷೆಯನ್ನು ತೆಗೆದುಕೊಳ್ಳಲಿ. ಅವನು ಉತ್ತರ ಕೊಡದಿದ್ದರೆ, ಕಂಪನಿಯಲ್ಲಿಯ ಪ್ರತಿಯೊಬ್ಬ ಮನುಷ್ಯನು ತನ್ನ ಬರಿದಾದ ಬೆನ್ನಿನ ಮೇಲೆ ಹತ್ತು ಛಡಿಯೇಟುಗಳಿಂದ ಶಿಕ್ಷಿಸಲ್ಪಡುವನು. ಆದರೆ ನಿಮ್ಮಲ್ಲಿ ಒಬ್ಬನು ಶಿಕ್ಷೆಯನ್ನು ತೆಗೆದುಕೊಳ್ಳಲು ಮುಂದೆ ಬಂದರೆ, ಉಳಿದವರು ಉಳಿಸಲ್ಪಡುವರು'' ಎಂದು ಹೇಳಿದನು.

ಗಂಭೀರವಾದ ಮೌನದ ತರುವಾರ, ವಿಲ್ಲಿ ಎದ್ದು ನಿಂತನು, ಮುಂದೆ ಬಂದನು ಮತ್ತು, ''ಅಯ್ಯಾ, ಶಿಕ್ಷೆಯನ್ನು ತೆಗೆದುಕೊಳ್ಳಲು ಒಬ್ಬನು ಮುಂದೆ ಬಂದರೆ ನೀನು ಉಳಿದವರನ್ನು ಬಿಟ್ಟು ಬಿಡುವಿ ಎಂದು ಈಗಲೇ ನೀವು ಹೇಳಿದ್ದೀರಿ. ಅಯ್ಯಾ, ನಾನೇ ಆ ವ್ಯಕ್ತಿ'' ಎಂದು ಹೇಳಿದನು. ಕೋಪದಿಂದ, ಸೈನ್ಯಾಧಿಕಾರಿಯು ಅಪರಿಚಿತ ಹೇಡಿಗೆ ವಿರುದ್ಧವಾಗಿ ಕೂಗಿದನು: ''ನಿರಪರಾಧಿ ಬಾಲಕನು ನಿನ್ನ ಶಿಕ್ಷೆಯನ್ನು ತೆಗೆದುಕೊಳ್ಳಲು ಹೇಗೆ ಬಿಡುವಿ ?'' ಯಾರೂ ಚಲಿಸಲಿಲ್ಲ. ''ಹಾಗಾದರೆ, ಅಪರಾಧಿ ಮನುಷ್ಯನಿಗಾಗಿ ಒಬ್ಬ ನಿರಪರಾಧಿ

ಬಾಲಕನ ದುಃಖಕರವಾದ ನೋಟುವನ್ನು ನೀವು ನೋಡುವಿರಿ'' ಎಂದು ಅಧಿಕಾರಿಯು ಹೇಳಿದನು.

ತನ್ನ ಮಾತಿಗೆ ತಕ್ಕಂತೆ, ಅಧಿಕಾರಿಯು ವಿಲ್ಲಿಯ ಬೆನ್ನು ತೆರೆಯಲ್ಪಡುವಂತೆ ಆಜ್ಞಾಪಿಸಿದನು ಮತ್ತು ಬಾರುಕೋಲಿನ ಕ್ರೂರವಾದ ಏಟುಗಳು ಪ್ರಾರಂಭವಾದವು. ನೋವಿನ ಹೊಡೆತಗಳ ಕೆಳಗೆ ವಿಲ್ಲಿ ಮೂರ್ಛೆ ಹೋಗುತ್ತಿದ್ದಂತೆ, ಬಿಲ್, ದೃಶ್ಯವನ್ನು ಇನ್ನು ಮುಂದೆ ನೋಡಲಾರದೇ, ತನ್ನ ಸ್ಥಳದಿಂದ ಓಡಿ ಬಂದು, ''ನಿಲ್ಲಿಸಿರಿ, ನಾನು ಕಳ್ಳನು. ನಾನು ನನ್ನ ಸ್ವಂತ ಶಿಕ್ಷೆಯನ್ನು ತೆಗೆದುಕೊಳ್ಳುತ್ತೇನೆ'' ಎಂದು ಗಟ್ಟಿಯಾಗಿ ಕೂಗಿದನು. ತನ್ನ ಮೂರ್ಛೆಯಿಂದ ಎಚ್ಚತ್ತ ವಿಲ್ಲಿ, ದೀನತೆಯಿಂದ ತನ್ನ ಕಣ್ಣುಗಳನ್ನು ಬಿಲ್‌ನ ಕಡೆಗೆ ತಿರುಗಿಸಿ, ''ಅದು ಚೆನ್ನಾಗಿದೆ ಬಿಲ್, ಅಧಿಕಾರಿಯು ಈಗ ತನ್ನ ಮಾತುಗಳನ್ನು ನಿಲ್ಲಿಸಿ ಹಿಂದೆ ಹೋಗಲಾರನು. ನಿನ್ನ ಎಲ್ಲಾ ಶಿಕ್ಷೆಯನ್ನು ನಾನು ತೆಗೆದುಕೊಳ್ಳುವೆನು'' ಎಂದು ಉಸುರಿದನು. ಮತ್ತು ಶಿಕ್ಷೆ ಸಹಿಸಿಕೊಂಡನು.

ಯುವಕ ವಿಲ್ಲಿಯು ತನ್ನ ಪೆಟ್ಟುಗಳ ಪರಿಣಾಮದಿಂದ ಸುಧಾರಿಸಿಕೊಳ್ಳಲಿಲ್ಲ, ಆದರೆ, ವಿಲ್ಲಿ ಪರಲೋಕಕ್ಕೆ ಹೋಗುವ ಮೊದಲು, ಬಿಲ್, ಈಗ ಮುರಿಯಲ್ಪಟ್ಟ ಮನುಷ್ಯನು, ಅವನ ಹಾಸಿಗೆಯ ಪಕ್ಕದಲ್ಲಿ ಕಣ್ಣೀರು ಸುರಿಸಿದನು. ''ಯಾಕೆ ವಿಲ್ಲಿ ? ಅದನ್ನು ನನಗಾಗಿ ಯಾಕೆ ನೀನು ಮಾಡಿದೀ ? ಅದಕ್ಕೆ ನಾನು ಯೋಗ್ಯನಲ್ಲ'' ಎಂದು ಹೇಳಿದನು. ವಿಲ್ಲಿಯ ಉತ್ತರ ಸರಳವಾಗಿತ್ತು : ''ಬಿಲ್, ದೇವರು ನಿನ್ನನ್ನು ಎಷ್ಟು ಪ್ರೀತಿಸುತ್ತಾನೆಂಬುದನ್ನು ನಿನಗೆ ಹೇಳಲು ನಾನು ಬಹಳ ಸಲ ಪ್ರಯತ್ನಿಸಿದೆನು ಆದರೆ ನೀನು ಯಾವಾಗಲೂ ನಕ್ಕು ಬಿಡುತ್ತಿದ್ದೀ : ನಾನು ನಿನ್ನ ಶಿಕ್ಷೆಯನ್ನು ತೆಗೆದುಕೊಂಡರೆ, ನಿನ್ನ ಸ್ಥಳವನ್ನು ತೆಗೆದುಕೊಳ್ಳಲು ಮತ್ತು ನಿನ್ನ ಪಾಪಗಳಿಗಾಗಿ ಸಾಯಲು ಯೇಸುವು ಶಿಲುಬೆಗೆ ಹೋದಾಗ ಆತನು ನಿನ್ನನ್ನು ಎಷ್ಟು ಪ್ರೀತಿಸಿದನು ಎಂಬುದನ್ನು ನೀನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುವುದು ಎಂದು ನಾನು ಯೋಚಿಸಿದೆನು'' ಎಂದು ಹೇಳಿದನು. ವಿಲ್ಲಿ ಪರಲೋಕಕ್ಕೆ ಹೋಗುವ ಮೊದಲು, ಬಿಲ್‌ನು ಪ್ರೀತಿಯುಳ್ಳ ಕ್ರಿಸ್ತನಿಂದ ಉಚಿತವಾಗಿ ಕೊಡಲ್ಪಟ್ಟ ರಕ್ಷಣೆಯನ್ನು ಸ್ವೀಕರಿಸಿದನು.

ಕ್ರಿಸ್ತನಲ್ಲಿ, ಪರಲೋಕವು ತಪ್ಪಿ ಹೋದ ಮಾನವತೆಗಾಗಿ ವಿಮೋಚಿಸುವ ಜಯಶಾಲೀ ತನ್ನ ಕಾರ್ಯವನ್ನು ಪ್ರಾರಂಭಿಸಿತು ಮತ್ತು ಅದು ನಮ್ಮೊಬ್ಬೊಬ್ಬರಿಗೆ ಕ್ರಿಸ್ತನ ಅಗ್ರಾಹ್ಯವಾದ ತ್ಯಾಗದ ಮತ್ತು ಶ್ರಮೆಯ ಕಾರ್ಯವಾಗಿತ್ತು, ನಮಗಾಗಿದ್ದ ದೇವರ ಪ್ರೀತಿಯ ಕಾರ್ಯವಾಗಿತ್ತು.

## ಪರಿಪೂರ್ಣ ಮನುಷ್ಯ

ಗೊಲ್ಗೊಥಾ ಬೆಟ್ಟದ ಮೇಲೆ ಮೂರು ಶಿಲುಬೆಗಳು ನಿಲ್ಲಿಸಲ್ಪಟ್ಟಿದ್ದವು, ಅವುಗಳಲ್ಲಿ ಎರಡರ ಮೇಲೆ ಕಳ್ಳರು ಶಿಲುಬೆಗೆ ಹಾಕಲ್ಪಟ್ಟದ್ದರು. ಈ ಅಪರಾಧಿಗಳ ಮಧ್ಯದಲ್ಲಿ ಕರ್ತನಾದ ಯೇಸು ತೂಗು ಹಾಕಲ್ಪಟ್ಟಿದ್ದನು ಮತ್ತು ಅಲ್ಲಿ ಆತನು ಮರಣ ಹೊಂದಿದನು.

ತನ್ನ ಕೊನೆಯ ಅತ್ಯಂತ ಯಾತನೆಯ ಶ್ರಮೆಯ ತಾಸುಗಳಲ್ಲಿ, ಕಳ್ಳರಲ್ಲಿ ಒಬ್ಬನು ಸಾಯುವಂತೆ ಎಲ್ಲಾ ಮೂವರಿಗೆ ದಂಡನೆ ವಿಧಿಸಿದ ನ್ಯಾಯ ಪದ್ಧತಿಯ ಬಗ್ಗೆ ತನ್ನ ಅಭಿಪ್ರಾಯ ವ್ಯಕ್ತಪಡಿಸಲು ಸಾಹಸ ಮಾಡಿದನು. ಆಶ್ಚರ್ಯಕರವಾಗಿ ಅದು ತೋರಿದರೂ, ಅವನ ಪ್ರಾಥಮಿಕ ಚಿಂತನೆಯು ತನ್ನ ನೋವಿನಿಂದ ತುಂಬಿದ, ಹಿಂಸಿಸಲ್ಪಟ್ಟ ದೇಹಕ್ಕಾಗಿರಲಿಲ್ಲ. ಅದರ ಬದಲು ಅವನ ವಿಚಾರಗಳು ಇಬ್ಬರು ಕಳ್ಳರಂತೆ ಅದೇ ಮರಣ ಶಿಕ್ಷೆಯನ್ನು ಯೇಸುವಿಗೆ ಕೊಡುವಲ್ಲಿ ರೋಮನ್ ನ್ಯಾಯ ಪದ್ಧತಿಯು ಹೇಗೆ ದಾರಿಬಿಟ್ಟು ಹೋಗಿದೆ ಎಂಬುದರ ಕಡೆಗೆ ತಿರುಗಿದವು. ಈ ಸ್ಪಷ್ಟವಾದ ಮತ್ತು ದೀನತೆಯಿಂದ ಸಾಯುತ್ತಿದ್ದ ಕಳ್ಳನು ತನ್ನ ಅಂತಿಮ ಕ್ಷಣವನ್ನು ಸಮೀಪಿಸಿದಂತೆ ಮೂರು ಬಹಳ ಚುರುಕಾದ ಅಭಿಪ್ರಾಯಗಳನ್ನು ಹೇಳಿದನು.

ಮೊದಲನೆಯದು : **ನಾವು ಮಾಡಿದ್ದಕ್ಕೆ ತಕ್ಕ ಪ್ರತಿ ಫಲವನ್ನು ಹೊಂದುತ್ತಾ ಇದ್ದೇವೆ.** ಆ ಸಂಕ್ಷಿಪ್ತವಾದ ಮತ್ತು ದೀನತೆಯ ಹೇಳಿಕೆಯಲ್ಲಿ, ಸಾಯುತ್ತಿದ್ದ ಕಳ್ಳನು ತನ್ನ ಅಪರಾಧಕ್ಕಾಗಿ ತನ್ನ ವೈಯಕ್ತಿಕ ಜವಾಬ್ದಾರಿಕೆಯನ್ನು ಅರಿಕೆ ಮಾಡಿದನು, ಮತ್ತು ಅದರಿಂದ ತನ್ನ ಸ್ವಂತ ವೈಯಕ್ತಿಕ ಅಪರಾಧವನ್ನು ಒಪ್ಪಿಕೊಂಡನು.

ಎರಡನೆಯದು : **ನಾವು ನ್ಯಾಯವಾಗಿ ಸಾಯುತ್ತೇವೆ...** ನಮ್ಮ ದಿನಗಳಲ್ಲಿ

ಸಣ್ಣಪುಟ್ಟ ಕಳ್ಳತನಗಳೂ ಹಾಗೆಯೇ ದರೋಡೆಯ ಹಿಂಸಾತ್ಮಕ ಕೃತ್ಯಗಳು ಸಾಮಾನ್ಯ ವಾದವುಗಳಾಗಿರುವಾಗ, ಅಂಥ ಅಪರಾಧಗಳು ಮೊದಲನೆಯ ಶತಮಾನದಲ್ಲಿ ಎಷ್ಟು ಗಂಭೀರವಾಗಿ ತೆಗೆದುಕೊಳ್ಳಲ್ಪಟ್ಟವು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಕಠಿಣ ವಾದದ್ದಾಗುತ್ತದೆ. ಆದರೆ ಮೂರು ಸಂಕ್ಷಿಪ್ತ ಶಬ್ದಗಳಲ್ಲಿ, ಸಾಯುತ್ತಿದ್ದ ಕಳ್ಳನು, ತನ್ನ ದಿನದಲ್ಲಿ, ತನಗೆ ಕೊಡಲ್ಪಟ್ಟ ಮರಣ ದಂಡನೆಯು ಕಾನೂನು ಬದ್ಧವಾಗಿಯೂ ನ್ಯಾಯವಾಗಿಯೂ ಇತ್ತೆಂದು ತನ್ನ ನಂಬಿಕೆಯನ್ನು ವ್ಯಕ್ತಪಡಿಸಿದನು. ನಾವು ನ್ಯಾಯವಾಗಿ ಸಾಯುತ್ತೇವೆ.

ಮೂರನೆಯದು : **ಈತನಾದರೋ ಅಲ್ಲದ್ದೇನೂ ಮಾಡಲಿಲ್ಲ.** ಕಳ್ಳನು ತನ್ನ ವೈಯಕ್ತಿಕ ಅಪರಾಧವನ್ನು ಹೇಗೆ ಒಪ್ಪಿಕೊಂಡನು ಎಂಬುದನ್ನು ಮತ್ತು ಕಾನೂನು ಪದ್ಧತಿಯ ನ್ಯಾಯವನ್ನು ಹೇಗೆ ಸ್ವೀಕರಿಸಿದನೆಂಬುದನ್ನು ಓದುವುದು ಗಮನಾರ್ಹವಾದದ್ದಾಗಿದ್ದರೂ, ತನ್ನ ಪಕ್ಕದಲ್ಲಿ ಶಿಲುಬೆಯ ಮೇಲೆ ನೇತಾಡಿದ ಯೇಸುವಿಗಾಗಿ ಅವನ ಚಿಂತನೆಯನ್ನು ಕುರಿತು ಓದುವುದು ಇನ್ನೂ ಹೆಚ್ಚು ಆಶ್ಚರ್ಯಕರವಾದದ್ದಾಗಿದೆ. ಈ ಮನುಷ್ಯನು – ಈ ಯೇಸುವು, ಯಾವ ತಪ್ಪನ್ನು ಮಾಡಿಲ್ಲ, ಆದುದರಿಂದ ಅನ್ಯಾಯವಾಗಿ ಸಾಯಲು ದಂಡಿಸಲ್ಪಟ್ಟಿದ್ದಾನೆ ಎಂದು ಸಾಯುತ್ತಿದ್ದ ಕಳ್ಳನು ಗಮನಿಸಿದನು.

ತನ್ನ ಸ್ವಂತ ಪಾಪಕ್ಕಾಗಿ ಶಿಕ್ಷಿಸಲ್ಪಟ್ಟ, ಶಿಲುಬೆಯ ಮೇಲೆ ಸಾಯುತ್ತಿದ್ದ ಕಳ್ಳನು ಯೇಸುವಿನ ಕಡೆಗೆ ತಿರುಗಿಕೊಳ್ಳುವದನ್ನು ಬಿಟ್ಟರೆ ಅವನಿಗೆ ಬೇರೆ ಯಾವ ನಿರೀಕ್ಷೆಯೂ ಇರಲಿಲ್ಲ. ಆದುದರಿಂದ ಆಗ ಅವನು ಮನಃಪೂರ್ವಕವಾಗಿ ''ಯೇಸುವೇ, ನಿನ್ನ ರಾಜ್ಯದಲ್ಲಿ ಬರುವಾಗ ನನ್ನನ್ನು ನೆನಪು ಮಾಡಿಕೋ'' ಎಂದು ಬೇಡಿಕೊಂಡನು. ಅಪರಾಧದ ಮತ್ತು ಅಗತ್ಯತೆಯ ಅಂಥ ಯಥಾರ್ಥವಾದ ಅರಿಕೆಗೆ ಯಾವಾಗಲೂ ಉತ್ತರ ಕೊಟ್ಟಂತೆ ಯೇಸುವು ಕೂಡಲೇ ಅವನಿಗೆ ವಾಗ್ದಾನ ಮಾಡಿದನು: ''ಈ ಹೊತ್ತೇ ನನ್ನ ಸಂಗಡ ಪರದೈಸಿನಲ್ಲಿರುವಿ'' (ಲೂಕ 23:39-43).

ಆ ದಿನ, ಸಾಯುತ್ತಿದ್ದ ಕಳ್ಳನು, ಕರ್ತನ ಕಡೆಗೆ ತಿರುಗಿಕೊಂಡ ಮಾನಸಾಂತರ ಪಟ್ಟ ಎಲ್ಲಾ ಪಾಪಿಗಳಂತೆ, ನಿತ್ಯ ಜೀವದ ಭರವಸೆಯನ್ನು ಹೊಂದಿದನು. ಅವನು ಸರಿಯಾದ ವ್ಯಕ್ತಿಯ ಕಡೆಗೆ – ಕರ್ತನಾದ ಯೇಸು ಕ್ರಿಸ್ತನ

ಕಡೆಗೆ ತಿರುಗಿ ಕೊಂಡಿದ್ದನು ಮತ್ತು ಸರಿಯಾದ ಸ್ಥಳದಲ್ಲಿ - ಯೇಸು ಮರಣ ಹೊಂದಿದ ಶಿಲುಬೆಯ ಬಳಿಯಲ್ಲಿ ಆತನ ದಯೆಗಾಗಿ ಬೇಡಿಕೊಂಡನು.

ಹೌದು, ಆ ಭಯಾನಕವಾದ ದಿನದಂದು, ಸಾಯುತ್ತಿದ್ದ ಒಬ್ಬ ಕಳ್ಳನ ಕಣ್ಣುಗಳಲ್ಲಿ, ಕರ್ತನಾದ ಯೇಸುವು ನಿಜವಾಗಿಯೂ **ನಿರಪರಾಧಿಯಾಗಿದ್ದನು.** ಹೀಗಿದ್ದರೂ, ಅನಂತರದ ಸಮಯದಲ್ಲಿ ಇಬ್ಬರು ಶಿಷ್ಯರು ತಮ್ಮ ಗಮನಿಸುವಿಕೆಯಲ್ಲಿ ಇನ್ನೂ ಹೆಚ್ಚು ಸ್ಪಷ್ಟವಾಗಿದ್ದರು. ಯೇಸುವು ಪಾಪರಹಿತನು ಆಗಿದ್ದನೆಂದು ಅವರು ಸಾಕ್ಷಿ ಕೊಟ್ಟರು. ಈ ಇಬ್ಬರಲ್ಲಿ ಪ್ರತಿಯೊಬ್ಬ ಶಿಷ್ಯನು, ಅಪೊಸ್ತಲ ಪೌಲನೊಂದಿಗೆ, ಯೇಸುವಿನಲ್ಲಿ ಪಾಪವಿಲ್ಲದ್ದರ ಬಗ್ಗೆ ತಮ್ಮ ವೈಯಕ್ತಿಕ ಸಾಕ್ಷಿಯನ್ನು ಹೇಳಿರುವರು.

ಕರ್ತನಾದ ಯೇಸುವಿನ ನಿಕಟ ಸ್ನೇಹಿತನಾದ **ಪೇತ್ರನು** ವೇಗವುಳ್ಳ ಕಾರ್ಯದ ಮನುಷ್ಯನೆಂದು ತಿಳಿಯಲ್ಪಟ್ಟದ್ದನು. ಆದುದರಿಂದ, ಯೇಸುವಿನ ಪಾಪರಹಿತತೆಯ ಬಗ್ಗೆ ಸಾಕ್ಷಿ ಕೊಟ್ಟಾಗ, ತನ್ನ ವ್ಯಕ್ತಿತ್ವಕ್ಕೆ ಅನುಗುಣವಾಗಿ, ಅವನು ಕೃತ್ಯದ ಮಾತನ್ನು ಉಪಯೋಗಿಸಿದನು : ''ಆತನು (ಕರ್ತನಾದ ಯೇಸುವು) ಪಾಪ ಮಾಡಲಿಲ್ಲ'' (1 ಪೇತ್ರ 2:22).

ಯೋಹಾನನಿಗೂ ಸಹ ಕರ್ತನಾದ ಯೇಸುವಿನೊಂದಿಗೆ ಬಹಳ ವಿಶೇಷವಾದ ಸ್ನೇಹವಿತ್ತು. ಅದರ ಪರಿಣಾಮವಾಗಿ ಅವನು ಜನಸಮೂಹಗಳ ವಿಮರ್ಶಾತ್ಮಕ ಪರೀಕ್ಷೆಯಿಂದ ದೂರವಿರುವಾಗ ತನ್ನ ಕರ್ತನನ್ನು ಗಮನಿಸುವ ಅನೇಕ ಅವಕಾಶಗಳನ್ನು ಹೊಂದಿಕೊಂಡನು. ಈ ಅವಕಾಶವುಳ್ಳ ದೃಷ್ಟಿಕೋನದಿಂದ ಯೋಹಾನನು ಸ್ಪಷ್ಟವಾಗಿ, ''ಆತನಲ್ಲಿ (ಕರ್ತನಾದ ಯೇಸುವಿನಲ್ಲಿ) ಪಾಪವಿಲ್ಲ'' (1 ಯೋಹಾನ 3:5) ಎಂದು ಸಾಕ್ಷಿ ಕೊಟ್ಟನು.

ಇನ್ನೊಂದು ಕಡೆಯಲ್ಲಿ ಪೌಲನು, ಪ್ರಖ್ಯಾತವಾದ ಪಂಡಿತನೆಂದು ತಿಳಿಯಲ್ಪಟ್ಟಿದ್ದನು. ಆದುದರಿಂದ, ವಿದ್ಯೆಯುಳ್ಳ, ಜ್ಞಾನವುಳ್ಳ ಪೌಲನು ಕರ್ತನಾದ ಯೇಸುವಿನ ಬಗ್ಗೆ ಮಾತಾಡಿದಾಗ, ''ಪಾಪ ಜ್ಞಾನವಿಲ್ಲದ ಆತನು'' (2 ಕೊರಿಂಥ 5:21) ಎಂದು ಹೇಳಿದ್ದರಲ್ಲಿ ಆಶ್ಚರ್ಯವಿಲ್ಲ. ಪಾಪರಹಿತ ಕ್ರಿಸ್ತನನ್ನು ಕುರಿತು ಈ ಮೂರು ಜನರ ಅಧಿಕೃತ ಸಾಕ್ಷಿಯು ಅತ್ಯಂತ ಪ್ರಭಾವಯುಕ್ತವಾದದ್ದಾಗಿದೆ.

''ಆಹಾ, ಸಾಯುತ್ತಿದ್ದ ಕಳ್ಳ, ಇಲ್ಲವೇ ಅಪೊಸ್ತಲರಾದ ಪೇತ್ರ, ಯೋಹಾನ ಅಥವಾ ಪೌಲರು ವಾಸ್ತವವಾದ ಸಾಕ್ಷಿಗಳಂತೆ ವಿವರಿಸಲ್ಪಡಲಾರರು. ಸಾಯುತ್ತಿದ್ದ ಕಳ್ಳನು ಹತಾಶನಾದ ಮನುಷ್ಯನಾಗಿದ್ದನು ಮತ್ತು ಅಪೊಸ್ತಲರು ಕರ್ತನಾದ ಯೇಸುವಿಗೆ ತಮ್ಮ ಭಕ್ತಿಯಿಂದ ಪೂರ್ವ ಕಲ್ಪಿತ ಅಭಿಪ್ರಾಯವುಳ್ಳವರಾಗಿದ್ದರು'' ಎಂದು ಹೇಳುತ್ತ, ಕೆಲವರು ಈ ಚತುರ ಗಮನಿಸುವಿಕೆಗಳನ್ನು ತಳ್ಳಿ ಹಾಕಬಹುದು. ಹಾಗಾದರೆ, ಆಗ ಯೂದಾಯದ ರೋಮನ್ ಗವರ್ನರ ಪೊಂತಿ ಪಿಲಾತನ ಬಗೆಗೆ ಹೇಗೆ ? ನಿಶ್ಚಯವಾಗಿಯೂ, ಅವನು ಕ್ರಿಸ್ತನ ಸ್ನೇಹಿತನಾಗಿರಲಿಲ್ಲ. ಹಾಗಿದ್ದರೂ ಯೇಸುವಿನ ಮರಣವನ್ನು ಪಡೆದುಕೊಳ್ಳುವದಕ್ಕಾಗಿ ಆತನಿಗೆ ವಿರೋಧವಾಗಿ ಸುಳ್ಳು ಅಪರಾಧ ಹೊರಿಸಿದ ಯೇಸುವಿನ ವಿರೋಧಿಗಳಿಗೆ ಉತ್ತರ ಕೊಡುವಾಗ ಪಿಲಾತನು ಹೀಗೆ ಘೋಷಿಸಿದನು :

> ''ನೀವು ಇವನ ಮೇಲೆ ತಂದ ದೂರುಗಳ ವಿಷಯವಾಗಿ ನಾನು ನಿಮ್ಮ ಮುಂದೆಯೇ ವಿಚಾರಣೆ ಮಾಡಿದರೂ ಇವನಲ್ಲಿ ಒಂದು ತಪ್ಪಾದರೂ ನನಗೆ ಕಾಣಲಿಲ್ಲ'' (ಲೂಕ 23:14).

ಎಲ್ಲಾ ಈ ಮಾನವ ಸಾಕ್ಷಿಗಳನ್ನು ಪರಲೋಕದಲ್ಲಿಯ ತನ್ನ ಸಿಂಹಾಸನದಿಂದ ತಂದೆಯಾದ ದೇವರ ಘೋಷಣೆಯೊಂದಿಗೆ ಹೋಲಿಸಿದರೆ ಇವೆಲ್ಲವೂ ಏನಾಗಿವೆ ? ಒಬ್ಬ ವ್ಯಕ್ತಿಯು ಬಹಿರಂಗ ಕೂಟದಲ್ಲಿ ಮಾತನಾಡಲಿಕ್ಕಿದ್ದಾಗ. ನಮ್ರತೆಯಿಂದ ಅವನನ್ನು ಪರಿಚಯಿಸಿಕೊಡುವುದು ಯೋಗ್ಯವಾದದ್ದೂ, ಸರಿಯಾದದ್ದೂ ಆಗಿರುತ್ತದೆ. ಹಾಗೆಯೇ, ಯೇಸುವು ತನ್ನ ಸ್ವಂತ ಬಹಿರಂಗ ಸೇವೆಯನ್ನು ಪ್ರಾರಂಭಿಸಲಿಕ್ಕಿದ್ದಾಗ ತಂದೆಯಾದ ದೇವರು ತನ್ನ ಪ್ರಿಯ ಕುಮಾರನನ್ನು ಪರಿಚಯಿಸುವ ಅವಕಾಶವನ್ನು ತನ್ನಲ್ಲಿಯೇ ಕಾದಿಟ್ಟುಕೊಂಡಿದ್ದನು. ದೊಡ್ಡ ಧ್ವನಿಯಿಂದ ತಂದೆಯು ಪರಲೋಕ ದಿಂದ ಪ್ರಕಟಿಸಿದನು : ''ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ''. (ಮತ್ತಾಯ 3:17).

ಯೇಸುವು ಈ ಲೋಕದಲ್ಲಿ ಮಾನವ ರೂಪದಲ್ಲಿ ಇದ್ದಾಗ ಮನುಷ್ಯನನ್ನು ಜೀವಿಸಲಿಕ್ಕೆ ದೇವರು ಸೃಷ್ಟಿಸಿದಂತೆ ಆತನು ಜೀವಿಸಿದನೆಂಬುದನ್ನು

ತಂದೆಯು ತಿಳಿದಿದ್ದನು. ಇತರ ಪ್ರತಿಯೊಬ್ಬ ವ್ಯಕ್ತಿಯೂ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದನು. (ರೋಮಾಪುರ 3:23). ಆದರೆ ಯೇಸುವು ಅಲ್ಲ! ಆತನು ಪ್ರತಿಯೊಂದು ರೀತಿಯಲ್ಲಿ ಪರಿಪೂರ್ಣನಾಗಿದ್ದನು. ಆದುದರಿಂದ ಯೇಸುವು ತನ್ನ ಬಹಿರಂಗ ಸೇವೆಯನ್ನು ಪ್ರಾರಂಭಿಸಲಿಕ್ಕಿದ್ದಾಗ, ಆತನ ತಂದೆಯು ಆತನನ್ನು ಪರಿಚಯಿಸಿದನು ಮತ್ತು ಆತನು ಆತನ ಪವಿತ್ರ ತಂದೆಯಾಗಿದ್ದನು. (ಯೋಹಾನ 17:11). ಆತನು ತನ್ನ ಪ್ರಿಯ ಕುಮಾರನು ಜೀವಿಸಿದ ರೀತಿಗೆ ತನ್ನ ಒಳ್ಳೇ ಮೆಚ್ಚಿಕೆಯನ್ನು ವ್ಯಕ್ತಪಡಿಸಿದನು.

ನಾವು ಆಗಲೇ ವಿವರಿಸಿದಂತೆ, ಕರ್ತನಾದ ಯೇಸುವು ಎಂದೆಂದೂ ದೇವರಿಗಿಂತ ಕಡಿಮೆಯಾದಾತನಾಗಿರಲಿಲ್ಲ. ಆದುದರಿಂದ ದೇವರು ತನ್ನನ್ನು ದೀನನ್ನಾಗಿ ಮಾಡಿಕೊಂಡದ್ದು ಮತ್ತು ಕನ್ಯೆಕೆಯಾದ ತಾಯಿಯ ಗರ್ಭದ ಮುಖಾಂತರ ಜನಿಸಲು ಒಪ್ಪಿಕೊಂಡದ್ದು, ಮನುಷ್ಯನ ರೂಪವನ್ನು ತನ್ನ ಮೇಲೆ ತೆಗೆದುಕೊಂಡದ್ದು ಅರ್ಥ ಮಾಡಿಕೊಳ್ಳಲು ಭಯಭಕ್ತಿಯುಳ್ಳದ್ದಾಗಿದೆ. ಹಾಗಿದ್ದರೂ, ಯೇಸುವು ಮನುಷ್ಯನಂತೆ ತನ್ನ ಪರಲೋಕದ ತಂದೆಗೆ ಸಂಪೂರ್ಣವಾದ ತೃಪ್ತಿಯನ್ನು ಎಂದೆಗೂ ತರುತ್ತಿದ್ದಿಲ್ಲ. ತನ್ನ ಭೂಲೋಕದ ಯಾತ್ರೆಯಲ್ಲೆಲ್ಲಾ ಯೇಸುವು ಯಾವಾಗಲೂ ತನ್ನ ತಂದೆಗೆ ವಿಧೇಯನಾಗಿದ್ದನು ಮತ್ತು ಆತನ ಮೇಲೆ ಅವಲಂಭಿಸಿದ್ದನು. ಹೀಗೆ ಆತನ ಮಾನವತೆಯು, ಶ್ರಮೆಯ, ಸ್ವಾರ್ಥತೆಯ ಮತ್ತು ಪಾಪದ ಈ ಜಗತ್ತಿನಲ್ಲಿ ಆತನ ಪರಲೋಕದ ತಂದೆಯ ಪವಿತ್ರತೆಯ, ಪ್ರೀತಿಯ ಮತ್ತು ಉದ್ದೇಶದ ಲೋಕದ ವ್ಯಕ್ತಪಡಿಸುವಿಕೆಯಾಯಿತು.

ಹೌದು, ಮನುಷ್ಯನಂತೆ, ಯೇಸುವು ದೇವರಂತೆ, ತಾನು ಸೃಷ್ಟಿಸಿದ ಭೂಗ್ರಹದ ಮೇಲೆ ನಡೆದಾಡಿದನು. ಕರ್ತನಾದ ಯೇಸುವು ಎಂದೂ ದೇವರಿಗಿಂತ ಕಡಿಮೆ ಯಾದವನಾಗಿರದಿದ್ದರೂ, 33 ವರ್ಷಗಳವರೆಗೆ ಮಾನವನು ಹೇಗೆ ಜೀವಿಸಬೇಕೆಂದು ದೇವರು ಉದ್ದೇಶಿಸಿದ್ದನೆಂಬುದನ್ನು ಮಾನವನಿಗೆ ತೋರಿಸಿದನು. ಯೇಸುವಿನ ಮಾನವತೆಯಲ್ಲಿ ಮಾನವನು ಏನಾಗಿರಬೇಕೆಂದು ದೇವರು ಉಂಟು ಮಾಡಿದನೋ ಅದರಲ್ಲಿ ಯಾವುದೂ ಅತಿಕ್ರಮಿಸಲ್ಪಡಲಿಲ್ಲ. ಆ ವರ್ಷಗಳಲ್ಲಿ, ಪರಲೋಕದಲ್ಲಿಯ ತನ್ನ ತಂದೆಗೆ ಆತನು ಯಾವಾಗಲೂ

ಸಂಪೂರ್ಣವಾಗಿ ಲಭ್ಯವಾಗಿದ್ದನು. ಆದುದರಿಂದ, ಮನುಷ್ಯರ ಮಧ್ಯದಲ್ಲಿ **ಪರಿಪೂರ್ಣ** ಮನುಷ್ಯನಂತೆ ಜೀವಿಸಿದ, ತನ್ನ ಸ್ವಂತ ಪ್ರಿಯ ಕುಮಾರನ ಮೇಲೆ ತಂದೆಯ ದೃಷ್ಟಿ ಹಾಯಿಸಿದಾಗ, ಬಹಳವಾಗಿ ಮೆಚ್ಚಿಕೊಂಡನು.

ಅಪರಾಧವಿಲ್ಲದವನು ! ಪಾಪ ರಹಿತನು ! ಪರಿಪೂರ್ಣನು ! ಸಾಯುತ್ತಿದ್ದ ಕಳ್ಳನಿಗೆ, ಪೊಂತಿ ಪಿಲಾತನಿಗೆ ಯೇಸುವು ಅಪರಾಧವಿಲ್ಲದವನಾಗಿದ್ದನು. ಪೇತ್ರನಿಗೆ, ಯೋಹಾನನಿಗೆ ಮತ್ತು ಪೌಲನಿಗೆ ಯೇಸುವು ಪಾಪರಹಿತನಾಗಿದ್ದನು. ಪರಲೋಕದಲ್ಲಿಯ ಪವಿತ್ರ ತಂದೆಗೆ, ಯೇಸುವು ಪರಿಪೂರ್ಣನಾಗಿದ್ದನು. ಅಪರಾಧ ವಿಲ್ಲದವನು ! ಪಾಪ ರಹಿತನು ! ಪರಿಪೂರ್ಣನು ! - ಮತ್ತು ಆತನು ಮರಣ ಹೊಂದಿದನು ; ನಮ್ಮೊಬ್ಬೊಬ್ಬರಿಗಾಗಿ ಆತನ ಮಹಾ ಪ್ರೀತಿಯ ಕಾರಣದಿಂದ ನಮಗಾಗಿ ಮರಣ ಹೊಂದಿದನು !

## ಮಿತಿಯಿಲ್ಲದ ಪ್ರೀತಿ

ಈಗ, ನಿಮ್ಮ ಕಲ್ಪನೆಯಲ್ಲಿ, ಪ್ರಥಮ ''ಗುಡ್ ಫ್ರೈಡೇ' ದ ಭಯಾನಕವಾದ ಘಟನೆಗಳನ್ನು ದೃಷ್ಟಿಸಿದವರೊಂದಿಗೆ ಒಂದಾಗಲು ಪ್ರಯತ್ನಿಸಿರಿ. ಶಿಲುಬೆಯ ಸುತ್ತಲೂ ಜನರ ಗುಂಪು ನೋಡಿತು, ಭಯಂಕರವಾದ ನೋಟವನ್ನು ಅವರು ನೋಡುತ್ತಿದ್ದಂತೆ, ಆಘಾತಕ್ಕೊಳಪಡಿಸುವ ರಕ್ತಮಯ ದೃಶ್ಯವನ್ನು ಎದುರಿಸಿದನು.

ಯೇಸುವಿನ ಎರಡೂ ಬದಿಗಳಲ್ಲಿ ಒಬ್ಬೊಬ್ಬ ಅಪರಾಧಿ ನೇತು ಹಾಕಲ್ಪಟ್ಟಿದ್ದ. ಈ ಇಬ್ಬರು ಪುರುಷರು ತಮ್ಮ ಜೊತೆಮಾನವರ ಎದುರಿನಲ್ಲಿ ಅಪರಾಧಿಗಳಾಗಿದ್ದರು ಮತ್ತು ಅವರಿಬ್ಬರೂ ತಮ್ಮ ಸೃಷ್ಟಿಕರ್ತ ದೇವರ ಮುಂದೆ ಅಪರಾಧಿಗಳಾಗಿದ್ದರು. ದೇಶದ ನಿಯಮದಂತೆ ಅವರಿಬ್ಬರಿಗೂ ಮರಣ ದಂಡನೆಯ ಅಗತ್ಯತೆಯಿತ್ತು.

ಈ ಇಬ್ಬರು ಮನುಷ್ಯರ ಮಧ್ಯದಲ್ಲಿ ಯೇಸುವು ತನ್ನ ಸ್ವಂತ ಶಿಲುಬೆಯ ಮೇಲೆ ನೇತಾಡುತ್ತಿದ್ದನು. ಕಳ್ಳರಿಗೆ ಸ್ಪಷ್ಟವಾಗಿ ವಿರುದ್ಧವಾದ ದಿಶೆಯಲ್ಲಿ ಯೇಸುವು ಇದ್ದನು. ಆತನು ಜನರ ಮುಂದೆ ಅಪರಾಧವಿಲ್ಲದವನೂ

ಪಾಪವಿಲ್ಲದವನೂ ಆಗಿದ್ದನು. ಮತ್ತು ತನ್ನ ಪವಿತ್ರ ತಂದೆಯ ಮುಂದೆ ಪರಿಪೂರ್ಣನಾಗಿದ್ದನು, ಹೌದು, ದೇವರು... ಕ್ರಿಸ್ತನಲ್ಲಿ (2 ಕೊರಿಂಥ 5:19) 'ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯಂತೆ'' (1 ಪೇತ್ರ 1:19) ಶಿಲುಬೆಗೆ ಹೋದನು ಮತ್ತು ದೇವರ ಪ್ರೀತಿಯ ಹೃದಯದಿಂದ ಪಾಪಿಗಳಿಗಾಗಿ ಕ್ರಿಸ್ತನ ಪರಾರ್ಥ ಮರಣವು ಕೊಡಲ್ಪಟ್ಟಿತು.

ಕಳ್ಳರು ಸಾಯಬೇಕಾಗಿತ್ತು, ಆದರೆ ನಿಶ್ಚಯವಾಗಿಯೂ ಕರ್ತನಾದ ಯೇಸುವು ಸಾಯಬೇಕಾಗಿರಲಿಲ್ಲ. ತನ್ನನ್ನು ವಿರೋಧಿಸುತ್ತಿರುವವರ ಬಗ್ಗೆ ಈ ಮೊದಲು ಮಾತಾಡುತ್ತಿದ್ದಾಗ, ಯೇಸು ಹೀಗೆ ದೃಢ ಪಡಿಸಿದ್ದನು : ''ನಾನು ತಿರಿಗಿ ಪಡಕೊಳ್ಳುತ್ತೇನೆಂದು ನನ್ನ ಪ್ರಾಣವನ್ನು ಕೊಡುತ್ತೇನೆ..... ನನ್ನ ಪ್ರಾಣವನ್ನು ಯಾರೂ ನನ್ನಿಂದ ತೆಗೆಯರು........ ಅದನ್ನು ಕೊಡುವದಕ್ಕೆ ನನಗೆ ಅಧಿಕಾರವುಂಟು''. (ಯೋಹಾನ 10:17,18). ಆತನ ಪ್ರೀತಿಯು ಎಷ್ಟರವರೆಗೆ ಬೇಗನೇ ಹೋಗುವುದು ಎಂಬುದನ್ನು ತನ್ನ ಶಿಷ್ಯರಿಗೆ ವಿವರಿಸಿದಾಗ, ಆತನು ಹೀಗೆ ಹೇಳಿದನು : ''ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವುದೂ ಇಲ್ಲ'' (ಯೋಹಾನ 15:13).

ಕರ್ತನಾದ ಯೇಸುವಿನ ಮರಣ ಮತ್ತು ಪುನರುತ್ಥಾನದ ನಂತರ ಅಪೊಸ್ತಲ ಪೌಲನು ಇನ್ನೂ ಒತ್ತಿ ಹೇಳಿದನು : ''ದೇವರು ಕ್ರಿಸ್ತನಲ್ಲಿ ಇದ್ದನು ಮತ್ತು ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿ ಸ್ವರೂಪಿಗಳಾಗುವಂತೆ ದೇವರು ಪಾಪ ಜ್ಞಾನವಿಲ್ಲದ ಆತನನ್ನು (ಕ್ರಿಸ್ತನನ್ನು) ನಮಗೋಸ್ಕರ ಪಾಪ ಸ್ವರೂಪಿಯಾಗಿ ಮಾಡಿದನು'' (2 ಕೊರಿಂಥ 5:21). ಶತಮಾನಗಳ ನಂತರ, ನಮ್ಮ ಪಾಪಕ್ಕಾಗಿ ಕ್ರಿಸ್ತನು ನಮ್ಮ ಬದಲಾಗಿ ಮರಣಪಟ್ಟದ್ದರ ಅದ್ಭುತಕರವಾದ ಸತ್ಯವು ಅರ್ಥಗರ್ಭಿತವಾಗಿ ಈ ಮಾತುಗಳಲ್ಲಿ ವ್ಯಕ್ತಪಡಿಸಲ್ಪಟ್ಟಿದೆ :

ನೀನು ನನ್ನ ನೀತಿಯಾಗಿರುವಿ,
ನಾನು ನಿನ್ನ ಪಾಪವಾಗಿದ್ದೆನು,
ನನ್ನದಾಗಿದ್ದದ್ದನ್ನು ನೀನು ತೆಗೆದುಕೊಂಡಿ
ನಿನ್ನದಾಗಿದ್ದದ್ದನ್ನು ನನಗೆ ಕೊಟ್ಟಿರುವಿ,

ನೀನಾಗಿರದೇ ಇರುವಂತೆ - ನೀನಾದೆ
ನಾನಾಗಿರದೇ ಇದ್ದವನು ನಾನಾಗಲಿಕ್ಕಾಗುವಂತೆ

## ಗೋದಿಯ ಕಾಳು

ತನ್ನ ಬರಲಿಕ್ಕಿದ್ದ ಮರಣದ ಬಗ್ಗೆ ಬಹಳ ಅರುಹುವುಳ್ಳವನಾಗಿ, ಕರ್ತನಾದ ಯೇಸುವು ತನ್ನ ಶಿಷ್ಯರಿಗೆ ತನ್ನ ಹೃದಯವನ್ನು ತೆರೆದು ಹೀಗೆ ಹೇಳಿದನು:

> ''ಈಗ ನನ್ನ ಪ್ರಾಣವು ತತ್ತರಿಸುತ್ತದೆ ; ಮತ್ತು ನಾನು ಏನು ಹೇಳಲಿ ? ತಂದೆಯೇ ಈ ಕಾಲದೊಳಗಿಂದ ನನ್ನನ್ನು ತಪ್ಪಿಸು. ಆದರೆ ಇದಕ್ಕಾಗಿಯೇ ಈ ಕಾಲ ಸೇರಿದೆನು, ತಂದೆಯೇ, ನಿನ್ನ ಹೆಸರನ್ನು ಮಹಿಮೆಪಡಿಸಿಕೋ ಅಂದನು. ಅದಕ್ಕೆ - ಮಹಿಮೆ ಪಡಿಸಿದ್ದೇನೆ, ತಿರಿಗಿ ಮಹಿಮೆ ಪಡಿಸುವೆನು ಎಂದು ಆಕಾಶವಾಣಿ ಆಯಿತು.'' (ಯೋಹಾನ 12:27, 28).

**ಆದರೆ ರೋಮನ್ ಶಿಲುಬೆಗೆ ಹಾಕುವಿಕೆಯಂಥ ಭಯಾನಕವಾದ ದೃಶ್ಯದಿಂದ ತಂದೆಯು ಹೇಗೆ ಮಹಿಮೆ ಹೊಂದಬಹುದು ಎಂದು ನೀವು ಆಶ್ಚರ್ಯಪಡುತ್ತಿರ ಬಹುದು.**

ಕರ್ತನಾದ ಯೇಸುವು ತಂದೆಗೆ ಪ್ರಾರ್ಥಿಸುವ ಮೊದಲು ತನ್ನ ಶಿಷ್ಯರಿಗೆ, ಸುಗ್ಗಿ ಇರುವ ಮೊದಲು ಜೀವಾಂಕುರ ಬೀಜವು ಸಾಯುವುದು ಅಗತ್ಯವಾಗಿದೆ ಎಂದು ಜ್ಞಾಪಕಕ್ಕೆ ತಂದಿದ್ದನು.

> ''ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಗೋದಿಯ ಕಾಳು ಭೂಮಿಯಲ್ಲಿ ಬಿದ್ದು ಸಾಯದಿದ್ದರೆ ಒಂದೇಯಾಗಿ ಉಳಿಯುವುದು ; ಸತ್ತರೆ ಬಹಳ ಫಲಕೊಡುವುದು'' (ಯೋಹಾನ 12:24).

ಪಾಪವಿಲ್ಲದ ಮನುಷ್ಯನಂತೆ, ಯೇಸುವಿನ ಮೇಲೆ ಮರಣಕ್ಕೆ ಹಿಡಿತವಿರಲಿಲ್ಲ. ಆದರೆ, ಆತನು ಸಾಯುವದನ್ನು ಆಯ್ದುಕೊಂಡನು ; ನಿನ್ನ ಮತ್ತು ನನ್ನ ಪಾಪಕ್ಕಾಗಿ ಪ್ರತಿಯಾಗಿ ಕ್ರೂರ ಮರಣ ಹೊಂದುವದನ್ನು

ಆಯ್ದುಕೊಂಡನು ಮತ್ತು ಈ ರೀತಿಯಲ್ಲಿ ಆತನು ವಿಮೋಚಿತ ಜನರ ನಿತ್ಯವಾದ ಸುಗ್ಗಿಯನ್ನು ಕೊಯ್ಯುವನು. ಆದುದರಿಂದ ಕರ್ತನಾದ ಯೇಸುವು ತನ್ನ ಯೋಜನೆಯ ಬಗ್ಗೆ ಹೇಳುವನು ಮತ್ತು ಪ್ರತಿಯೊಬ್ಬ ನಿಜವಾದ ವಿಶ್ವಾಸಿಗೆ ತನ್ನ ವಾಗ್ದಾನವನ್ನು ಕೊಡುವನು.

> (ಆತನ ಯೋಜನೆ) ''ತಂದೆಯ ಬಳಿಯಿಂದ ಹೊರಟು ಈ ಲೋಕಕ್ಕೆ ಬಂದಿದ್ದೇನೆ; ಇನ್ನು ಲೋಕವನ್ನು ಬಿಟ್ಟು ತಂದೆಯ ಬಳಿಗೆ ಹೋಗುತ್ತೇನೆ'' (ಆತನ ವಾಗ್ದಾನ) ''ನಾನು.... ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ, ನನ್ನ ಬಳಿಗೆ ಸೇರಿಸಿಕೊಳ್ಳುವನು; ಯಾಕಂದರೆ ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು'' (ಯೋಹಾನ 16:28; 14:3).

ಇದು ಅದ್ಭುತಕರವಾದ, ಆದರೆ ಅದು ಅಗ್ರಾಹ್ಯವಾದಂತೆ ತೋರಿದರೂ, ಅವರಿಗಾಗಿರುವ ರಕ್ಷಕನ ಆಶ್ಚರ್ಯಕರವಾದ ಪ್ರೀತಿಯಿದ್ದರೂ, ಕೆಲವು ಜನರು ಆತನು ಕೊಡುವ ಕ್ಷಮಾಪಣೆಯನ್ನು ತಿರಸ್ಕರಿಸುವದನ್ನು ಆಯ್ದುಕೊಳ್ಳುತ್ತಾರೆ, ಇತರರು ಆತನ ಮರಣದ ಬಗ್ಗೆ ವಿಚಲಿತರಾಗದೇ ತಟಸ್ಥರಾಗಿ ಉಳಿಯುತ್ತಾರೆ. ಹೀಗಿದ್ದಾಗ್ಯೂ, ಜನರು ರಕ್ಷಕನನ್ನು ತಿರಸ್ಕರಿಸಿದರೂ ಇಲ್ಲವೇ ಆತನನ್ನು ಕಡೆಗಣಿಸಿದರೂ ಪರಿಣಾಮವು ಒಂದೇಯಾಗಿರುತ್ತದೆ - ನಿತ್ಯ ಜೀವದ ಕೇವಲ ಮೂಲವಾಗಿರುವಂಥದ್ದರಿಂದ ನಿತ್ಯ ಬೆಳಕಿನಿಂದ ಮತ್ತು ನಿತ್ಯ ಪ್ರೀತಿಯಿಂದ ಎಂದೆಂದಿಗೂ ಬೇರೆಯಾಗಿ ಹೋಗುವುದು. ಈ ಭಯಂಕರ ವಾದ ಸ್ಥಿತಿಯು ಈ ಮಾತುಗಳಲ್ಲಿ ವಿವರಿಸಲ್ಪಟ್ಟದೆ.

> ಸಾಯುವಲ್ಲಿ ನೀನು ಸಾಯುವಿ,
> ಅಂಥ ದೊಡ್ಡ ಮರಣದಲ್ಲಿ ಸಾಯುವಿ,
> ನಿತ್ಯವಾಗಿ ಸಾಯುವಿ,
> ಸತತವೂ ಸಾಯುತ್ತ, ಆದರೂ ಎಂದು ಸತ್ತು ಹೋಗುವದಿಲ್ಲ.

**ಹೀಗಿದ್ದರೂ, ಕರ್ತನಾದ ಯೇಸುವು ನಿನ್ನನ್ನು ನರಕದಿಂದ ಹೊರಗೆ ತೆಗೆದು ಪರಲೋಕದೊಳಗೆ ಸೇರಿಸಲು ಸತ್ತದ್ದಲ್ಲದೆ, ದೇವರನ್ನು ಪರಲೋಕದಿಂದ ಹೊರಗೆ ಮತ್ತು ನಿನ್ನೊಳಗೆ ತರಲೂ ಸಹ ಸತ್ತನು.**

ಇಲ್ಲ, ನಿತ್ಯ ಜೀವವು ಪರಲೋಕದಲ್ಲಿ ನನ್ನ ಭವಿಷ್ಯದ ಭರವಸೆ ಮಾತ್ರವೇ ಆಗಿರುವದಿಲ್ಲ. ನಿತ್ಯ ಜೀವವು ಮಹಿಮೆಯುಳ್ಳದ್ದೂ, ಈಗಿರುವಂಥದ್ದೂ, ಸಜೀವ ವಾಸ್ತವಿಕತೆಯೂ ಆಗಿದೆಯೆಂದು ನಿಜವಾದ ವಿಶ್ವಾಸಿಗೆ ಬೈಬಲು ಭರವಸೆ ಕೊಡುತ್ತದೆ.

> ''ದೇವರು ನಮಗೆ ನಿತ್ಯ ಜೀವವನ್ನು ಅನುಗ್ರಹಿಸಿದನು, ಆ ಜೀವವು ಆತನ ಮಗನಲ್ಲಿ ಅದೆ ಎಂಬುದೇ. ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ. ಅವನಿಗೆ ಆ ಜೀವವುಂಟು ; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ'' (1 ಯೋಹಾನ 5:11,12).

ನಿತ್ಯಜೀವವು ಒಬ್ಬ ವ್ಯಕ್ತಿಯಲ್ಲಿ - ಕರ್ತನಾದ ಯೇಸು ಕ್ರಿಸ್ತನಲ್ಲಿ ಇದೆ. ಮತ್ತು ಆತನು ಮಾನವ ಹೃದಯದಲ್ಲಿ ತನ್ನ ವಾಸಸ್ಥಾನ ಮಾಡಿಕೊಳ್ಳುವಾಗ, ಅದೇ ಕ್ಷಣದಲ್ಲಿ ನಿತ್ಯ ಜೀವವು ಪ್ರಾರಂಭವಾಗುತ್ತದೆ.

## ಅಪರಿಮಿತವಾದ ಕ್ರಯ

ಕ್ರಿಸ್ತನ ಶಿಲುಬೆಯಲ್ಲಿ ; ದೇವರ ಪವಿತ್ರತೆಯು, ದೇವರ ನ್ಯಾಯವು ಮತ್ತು ದೇವರ ಪ್ರೀತಿಯು ಎಲ್ಲವೂ ಒಂದು ಯಜ್ಞದ ಅತ್ಯುನ್ನತ ಕಾರ್ಯದಲ್ಲಿ ಸಂದರ್ಶಿಸಿದವು. ಅಲ್ಲಿ, ಆತನ ಪವಿತ್ರತೆಯು ಪ್ರತಿಪಾದಿಸಲ್ಪಟ್ಟಿತು ; ಆತನ ನ್ಯಾಯವು ತೃಪ್ತಿಗೊಳಿಸಲ್ಪಟ್ಟಿತು ; ಮತ್ತು ಅಲ್ಲಿ ದೇವರ ಪ್ರೀತಿಯು ನಿನ್ನಂಥ, ನನ್ನಂಥ ಪಾಪಭರಿತ ಜನರನ್ನು ಅಪ್ಪಿಕೊಂಡಿತು. ಆದರೆ ಆತನು ಕೊಟ್ಟ ಕ್ರಯವು ಅಪರಿಮಿತವಾದದ್ದಾಗಿತ್ತು.

"My Utmost for His Highest" ಎಂಬ ತನ್ನ ದೈನಂದಿನ ಧ್ಯಾನದ ಪುಸ್ತಕದಲ್ಲಿ, ಓಸ್ವಾಲ ಚೇಂಬರ್ಸ ಈ ಎಚ್ಚರಿಕೆ ಕೊಟ್ಟಿದ್ದಾರೆ:

> ''ದೇವರು ದಯೆಯುಳ್ಳವನೂ ಪ್ರೀತಿಸುವವನೂ ಆಗಿದ್ದು, ಆತನು ನಮ್ಮನ್ನು ಕ್ಷಮಿಸುತ್ತಾನೆ'' ಎಂದು ಹೇಳುವ ದೇವರ ಪಿತೃತ್ವದ ಆನಂದ ಕರವಾದ ದೃಷ್ಟಿಕೋನದ ಬಗ್ಗೆ

ಎಚ್ಚರವಾಗಿರಿ. ಆ ಭಾವನೆಗೆ ಯಾವದೇ ರೀತಿಯಲ್ಲಿ ಹೊಸ ಒಡಂಬಡಿಕೆಯಲ್ಲಿ ಸ್ಥಳವಿರುವದಿಲ್ಲ. ದೇವರು ಪಾಪವನ್ನು ಕ್ಷಮಿಸುವ ಮತ್ತು ಆತನ ಮೆಚ್ಚಿಕೆಯಲ್ಲಿ, ಪುನಃಸ್ಥಾಪಿಸುವದಕ್ಕೆ ಕೇವಲ ನೆಲೆಯು ಕ್ರಿಸ್ತನ ಮುಖಾಂತರ ವಾಗಿರುತ್ತದೆ, ಮತ್ತು ಬೇರೆ ಮಾರ್ಗದಲ್ಲಿ ಇರುವದಿಲ್ಲ. ಇದು ಸತ್ಯವಾಗಿದೆ ಎಂದು ನಾವು ಅರ್ಥಮಾಡಿ ಕೊಂಡರೂ, ನಂಬಿಕೆಯ ಸರಳತೆಯೊಂದಿಗೆ ಪಾಪದ ಕ್ಷಮಾಪಣೆಯನ್ನು ತೆಗೆದು ಕೊಳ್ಳಲಿಕ್ಕೆ ಇನ್ನೂ ಸಾಧ್ಯವಿದೆ ಮತ್ತು ಆಗ ಅದು ನಮ್ಮದಾಗಿ ಯಾವ ಅಪರಿಮಿತವಾದ ಬೆಲೆಯನ್ನು ದೇವರು ಕೊಡಬೇಕಾಯಿತು ಎಂಬುದನ್ನು ಮರೆತು ಬಿಡುತ್ತೇವೆ''.

ವಿಲ್ಲಿ ಹೋಲ್ಪನ ಸ್ವಾರ್ಥರಹಿತ ಕೃತ್ಯದ ಬಗ್ಗೆ ನಾವು ಮೊದಲು ಹೇಳಿದಾಗ್ಯೂ, ನಮಗಾಗಿ ತನ್ನ ಪ್ರೀತಿಯನ್ನು ಹೋಲಿಸುವದಕ್ಕೆ ಒಂದು ಉದಾಹರಣೆಯಾಗಿ ಕಲ್ವಾರಿಯಲ್ಲಿ ದೇವರು ಸಹಿಸಿದ ಶ್ರಮೆಗೆ ಯಾವುದೇ ಮಾನವ ಸಮಾಂತರತೆ ಇರುವದಿಲ್ಲ ಮತ್ತು ಪವಿತ್ರ ಬೈಬಲ್ ಎಂದು ನಾವು ಕರೆಯುವ ಆತ್ಮನು - ಉಸುರಿದ ವಾಕ್ಯದ ಮುಖಾಂತರ, ದೇವರು ತಾನೇ ತನ್ನ ಸ್ವಂತ ಪರದೆಯನ್ನು ಸರಿಸಿ ಅಂಥ ತ್ಯಾಗದ ಪ್ರೀತಿಯ ಪೂರ್ಣ ನೋಟವನ್ನು ನಮಗೆ ಕೊಡುವನು, ಹೀಗಿದ್ದರೂ ಆಗ, ನಮ್ಮ ಮಿತಿಯುಳ್ಳ ತಿಳುವಳಿಕೆಯ ಸಾಮರ್ಥ್ಯವನ್ನು ದಾಟಿ ಆತನ ಪ್ರೀತಿಯ ಘನತೆ ಯಿರುವುದು. ಪ್ರೀತಿಯ ಅಂಥ ಆಶ್ಚರ್ಯಕರವಾದ ಕಾರ್ಯದ ಮೇಲೆ ಪ್ರತಿಕ್ರಿಯೆ ವ್ಯಕ್ತಪಡಿಸುವದರಿಂದ, ದೇವರ ಪ್ರೀತಿಯ ಉದ್ದ, ಅಗಲ, ಎತ್ತರ ಮತ್ತು ಆಳವನ್ನು ಮೆಚ್ಚಿಕೊಳ್ಳಲು ನಾವು ಪ್ರಾರಂಭಿಸುತ್ತೇವೆ.

**ಯೇಸುವು ಶಿಲುಬೆಯ ಮೇಲೆ ಮರಣಹೊಂದಿದಾಗ ಮೂರು ರೀತಿಯಲ್ಲಿ ನಮ್ಮ ಪಾಪಗಳಿಗಾಗಿ ಆತನು ಶ್ರಮೆಹೊಂದಿದನು.**

ಶಿಲುಬೆಯ ಮೇಲೆ ಯೇಸುವಿನ ದೇಹವು ವೇದನೆಯಿಂದ ಜಜ್ಜಲ್ಪಟ್ಟಿತು ; ಶಿಲುಬೆಯ ಮೇಲೆ ಆತನ ಪ್ರೀತಿಯು ಅತ್ಯುನ್ನತಕ್ಕೇರಿತು ; ಶಿಲುಬೆಯ ಮೇಲೆ ಯೇಸುವು ತಂದೆಯೊಂದಿಗೆ ಸದಾಕಾಲವೂ ತನ್ನ ಒಂದಾಗಿರುವಿಕೆಯನ್ನು

ಅನುಭವಿಸಿದ ಬೆಳಕಿನಿಂದ, ಮಹಿಮೆಯಿಂದ ಮತ್ತು ಸಮಾಧಾನದಿಂದ ಕಡಿಯಲ್ಪಟ್ಟನು. ಹೌದು, ಯೇಸುವು ಅನುಭವಿಸಿದ ಶ್ರಮೆಗಳು ನಿಜವಾಗಿಯೂ ನಮ್ಮ ಮಾನವ ಗ್ರಹಿಕೆಯನ್ನು ಮೀರಿದವುಗಳಾಗಿವೆ.

ಹೀಗಿದ್ದರೂ, ಆತನ ದೈಹಿಕ ಶ್ರಮೆ, ಆತನ ಮಾನಸಿಕ ಶ್ರಮೆ ಮತ್ತು ವಿಶೇಷವಾಗಿ ಆತನ ಆತ್ಮೀಕ ಶ್ರಮೆಯ ಮೇಲೆ ಪ್ರತಿಬಿಂಬಿಸುವಾಗ ಪಾಪಭರಿತ ಜನರಿಗಾಗಿ ಆತನ ಪ್ರೀತಿಯ ಆಳತೆಯನ್ನು ಹೊಸ ರೀತಿಯಲ್ಲಿ ನಾವು ಮೆಚ್ಚಿಕೊಳ್ಳುವೆವು.

**ದೈಹಿಕ ಶ್ರಮೆ :** ಅಮೂಲ್ಯ ಬೆಲೆಯ ರೆಂಬ್ರಾಂಟನ ಪೇಂಟಿಂಗನ್ನು ನಾಶ ಪಡಿಸುವದನ್ನು ಕೊಳೆಯಾದ ಪೇಪರಿನ ತುಂಡನ್ನು ಮುದುಡಿ ಮಾಡುವದರೊಂದಿಗೆ ಹೋಲಿಸುವುದು ನಿಜವಾಗಿಯೂ ಅಸಾಧ್ಯವಾದದ್ದಾಗಿದೆ. ಪರಿಪೂರ್ಣ ಮನುಷ್ಯನಾದ ಕ್ರಿಸ್ತ ಯೇಸುವಿನ ಮರಣವು ಇತರ ಯಾವುದೇ ಮಾನವ ಜೀವಿಯ ಮರಣಕ್ಕೆ ಸಮಾನವಾಗಿ ಮಾಡಲ್ಪಡಲಾರದು ಇಲ್ಲವೇ ಸಾಕಷ್ಟು ಹೋಲಿಸಲ್ಪಡಲಿಕ್ಕಾಗದು.

ಹಳೇ ಒಡಂಬಡಿಕೆಯಲ್ಲಿ ಅನಂತರದಲ್ಲಿ ಯೇಸುವು ಸಹಿಸಬಹುದಾದ ದೈಹಿಕ ವಿಕಾರತೆಯನ್ನು ಸರಿಯಾಗಿ ಮುಂತಿಳಿಸಿದ ಪ್ರವಾದನೆಯನ್ನು ನಾವು ಕಂಡುಕೊಳ್ಳುವೆವು. ಆತನ ನೋಟವು ಯಾವುದೇ ಮನುಷ್ಯನ ಮುಖಕ್ಕಿಂತ ಹೆಚ್ಚು ವಿಕಾರವಾಗಿ ಕಾಣುವದೆಂದು ನಮಗೆ ಹೇಳಲ್ಪಟ್ಟಿದೆ. (ಯೆಶಾಯ 52:14). ಹೀಗಿದ್ದರೂ ಈ ಮಾತಿನ ಇಂಗ್ಲೀಷ ಭಾಷಾಂತರವು ಮೂಲ ಹಿಬ್ರೂ ಪಠ್ಯದ ಪೂರ್ಣ ಒತ್ತಡವನ್ನು ಹೇಳುವದಿಲ್ಲ. ಆ ಹೇಳಿಕೆಯನ್ನು ದೇವರು ತನ್ನ ಪ್ರಿಯ ಕುಮಾರನು ಮಾನವ ಜೀವಿಯಂತೆ ಇನ್ನು ಕಾಣಲಾರದಷ್ಟು ವಿಕಾರವಾಗಿರುವದೆಂದು ವಿವರಿಸಿದ್ದಾನೆ. ಅಂಥ ಕ್ರಿಸ್ತನ ದೈಹಿಕ ರೂಪದ ಕೆಡಿಸುವಿಕೆಯು ಯೇಸುವಿನಿಂದಲೇ ಮುಂತಿಳಿಸಲ್ಪಟ್ಟಿತ್ತು :

> ‘‘ನೋಡಿರಿ, ನಾವು ಯೆರೂಸಲೇಮಿಗೆ ಹೋಗುತ್ತಾ ಇದ್ದೀವೆ ಮತ್ತು ಮನುಷ್ಯ ಕುಮಾರನನ್ನು ಮಹಾಯಾಜಕರ ಮತ್ತು ಶಾಸ್ತ್ರಿಗಳ ಕೈಗೆ ಹಿಡಿದು ಕೊಡುವರು. ಅವರು ಅವನಿಗೆ ಮರಣ ದಂಡನೆಯನ್ನು ವಿಧಿಸಿ ಅವನನ್ನು ಅನ್ಯರ ಕೈಗೆ ಒಪ್ಪಿಸುವರು.

ಇವರು ಅವನನ್ನು **ಅಪಹಾಸ್ಯ ಮಾಡುವರು,** ಅವನ ಮೇಲೆ **ಉಗಳುವರು,** ಅವನನ್ನು **ಕೊರಡೆಗಳಿಂದ ಹೊಡೆಯುವರು, ಕೊಂದು ಹಾಕುವರು.....**'' (ಮಾರ್ಕ 10:33,34).

ಇದೇ ನಿರ್ದಿಷ್ಟವಾಗಿ ಸಂಭವಿಸಿತು! ಅನಂತರದಲ್ಲಿ ಪ್ರತ್ಯಕ್ಷದರ್ಶಿಗಳು ನೋಡಿದ್ದನ್ನು ಮಾರ್ಕನು ವಿವರಿಸಿದನು : ಮೊದಲು ಅವರು ಆತನನ್ನು ಹೊಡೆದರು ಆಮೇಲೆ ಅವರು ಆತನ ಮೇಲೆ **ಉಗುಳಿದರು,** ಅದರ ನಂತರ ಅವರು **ಪರಿಹಾಸ್ಯ ಮಾಡಿದರು,** ಮತ್ತು ಅಂತಿಮವಾಗಿ ಆತನನ್ನು **ಶಿಲುಬೆಗೆ ಹಾಕಿದರು.** (ಮಾರ್ಕ 15:19,20).

ರಕ್ಷಕನ ದೇಹವನ್ನು ಜಜ್ಜಿದ ರೋಮನ್ ಚಾವಟಿಯು ಚರ್ಮದ ಬಾರುಗಳಿಂದ ಮಾಡಲ್ಪಟ್ಟಿದ್ದು ಚೂಪಾದ ಎಲುಬಿನ ಇಲ್ಲವೇ ಸೀಸದ ತುಂಡುಗಳಿಂದ ಹೆಣೆಯಲ್ಪಟ್ಟಿತು. ಇವು ಕ್ರೂರವಾಗಿ ಆತನ ಬೆನ್ನಿನ ಮತ್ತು ಎದೆಯ ಚರ್ಮವನ್ನು ಹರಿದು ಹಾಕಿತು. ಆದುದರಿಂದ, ಮೆಸ್ಸೀಯನು ಹೀಗೆ ಹೇಳುವನೆಂದು ಕೀರ್ತನೆಗಾರನು ಪ್ರವಾದಿಸಿದ್ದಾನೆ: ''....ನನ್ನ ಕೈಕಾಲುಗಳನ್ನು ತಿವಿದಿದ್ದಾರೆ. ನನ್ನ ಎಲುಬುಗಳನ್ನೆಲ್ಲಾ ಎಣಿಸುವದಕ್ಕಾಗುವುದು : ಅವರೋ ನನ್ನನ್ನು ನೋಡಿ ನೋಡಿ ಹಿಗ್ಗುತ್ತಾರೆ'' (ಕೀರ್ತನೆ 22:16,17) ಹೌದು, ಕರ್ತನಾದ ಯೇಸುವು - ಪ್ರತಿಯೊಂದು ರೀತಿಯಲ್ಲಿ ಪರಿಪೂರ್ಣನಾದಾತನು - ನೋವಿನ, ವೇದನೆಯ ಮರಣ ಹೊಂದಿಕೊಂಡನು. ಕ್ರೂರವಾದ ದೈಹಿಕ ಜಜ್ಜಲ್ಪಡುವಿಕೆಯನ್ನು ಆತನು ಅಕ್ಷರಶಃವಾಗಿ ಸಹಿಸಿದ್ದು ಆತನ ದೈಹಿಕ ನೋಟವನ್ನು ಮನುಷ್ಯನಂಥವನಲ್ಲದಂತೆ ಮಾಡಿತ್ತು.

ನಿನ್ನನ್ನು ದೇವರು ಎಷ್ಟು ಪ್ರೀತಿ ಮಾಡುತ್ತಾನೆಂಬುದನ್ನು ನೀನು ಅರ್ಥ ಮಾಡಿಕೊಳ್ಳಲಿಕ್ಕೆ ಹೆಚ್ಚು ಉತ್ತಮ ವಾಗಿ ಸಹಾಯ ಮಾಡುತ್ತದಲ್ಲವೇ ?

**ಮಾನಸಿಕ ಶ್ರಮೆ :** ಕ್ರೂಜಿಸಲ್ಪಟ್ಟ ಕರ್ತನಾದ ಯೇಸುವಿನ ದೈಹಿಕ ಶ್ರಮೆಯು ನಮ್ಮ ಮಾನವ ಗ್ರಹಿಕೆಗೆ ಮೀರಿದ್ದಾಗಿದ್ದರೂ ಅದು ಆತನ ನಿಜವಾದ ಶ್ರಮೆಯ ಕೇವಲ ಒಂದು ಭಾಗವಾಗಿತ್ತು. ಆತನ ದೈಹಿಕ ನೋವು ಆತನ ಆಳವಾದ ಮರಣಯಾತನೆಯ ಮೇಲ್ಭಾಗವನ್ನು ಮಾತ್ರ ಸ್ಪರ್ಶಿಸಿತ್ತು.

ಶಿಲುಬೆಯ ಮೇಲೆ ಯೇಸುವು ಮಹಾ ಮಾನಸಿಕ ವ್ಯಥೆಯನ್ನು ಅನುಭವಿಸಿದನು. ಆ ಭಯಾನಕವಾದ ತಾಸುಗಳ ಘಟನೆಯನ್ನು ಯೋಹಾನನು ನಮಗಾಗಿ ದಾಖಲಿಸಿದ್ದಾನೆ :

> ''ಆದರೆ ಯೇಸುವಿನ ಬಳಿಗೆ ಬಂದಾಗ ಆತನು ಆಗಲೇ ಸತ್ತಿರುವದನ್ನು ಅವರು (ರೋಮನ್ ಸಿಪಾಯಿಗಳು) ಕಂಡು ಆತನ ಕಾಲುಗಳನ್ನು ಮುರಿಯಲಿಲ್ಲ : ಆದರೂ ಸಿಪಾಯಿಗಳಲ್ಲಿ ಒಬ್ಬನು ಈಟಿಯಿಂದ ಆತನ ಪಕ್ಕೆಯನ್ನು ತಿವಿದನು ; ತಿವಿದ ಕೂಡಲೇ ರಕ್ತವೂ ನೀರೂ ಹೊರಟಿತು'' (ಯೋಹಾನ 19:33,34).

ರಕ್ತ ಮತ್ತು ನೀರು ಎರಡೂ ಬಂದದ್ದು ಯೇಸುವು ಮುರಿದ ಹೃದಯದಿಂದ ಮರಣ ಹೊಂದಿದನು ಎಂಬುದನ್ನು ತೋರಿಸುತ್ತದೆ ಎಂದು ವೈದ್ಯಕೀಯ ಅಧಿಕಾರಿಗಳು ವ್ಯಕ್ತಪಡಿಸಿದ್ದನ್ನು ನಾನು ಕೇಳಿದ್ದೇನೆ. ಕೆಲವು ಹೃದಯ ತಜ್ಞರು ಈ ಚಮತ್ಕಾರವನ್ನು ಇನ್ನೂ ವಿವರಿಸಿ, ಯೇಸುವಿನ ಹೃದಯವು ನಿಜವಾಗಿಯೂ ಮುರಿಯಲ್ಪಟ್ಟಾಗ ವಿಸ್ತಾರ ಗೊಂಡು ಹೃದಯಕೋಶದ ಸುತ್ತಲೂ ಉಕ್ಕಿ ಹರಿಯಿತು ಎಂದು ಹೇಳುತ್ತಾರೆ. ಇದು ಸಿಪಾಯಿಯು ರಕ್ಷಕನ ಪಕ್ಕೆಯನ್ನು ತಿವಿಯುವಾಗ ರಕ್ತ ಮತ್ತು ನೀರು ಎರಡೂ ಬಂದಿತು ಎಂಬುದನ್ನು ವಿವರಿಸುತ್ತದೆ. ಕೀರ್ತನೆ 69ರಲ್ಲಿ ಕ್ರಿಸ್ತನ ಮರಣದ ಬಗ್ಗೆ ಸ್ಪಷ್ಟವಾದ ಇತರ ಪ್ರವಾದನೆಗಳಲ್ಲಿ, ಆತನ ಹೃದಯ ಒಡೆಯುವ ಗಾಯದ ಪ್ರವಾದಿಕ ಮುಂತಿಳಿಸುವಿಕೆಯ ಬಗ್ಗೆ ಓದುತ್ತೇವೆ : ''ನಿಂದೆಯಿಂದ ಖಿನ್ನನಾಗಿ ಕುಂದಿ ಹೋಗಿದ್ದೇನೆ....'' (ಕೀರ್ತನೆ 69:20) ಹೌದು, ಯೇಸುವಿನ ಅವರ್ಣನೀಯವಾದ ಮಾನಸಿಕ ಶ್ರಮೆಯು ಅಕ್ಷರಶಃ ವಾಗಿ ಆತನ ಪ್ರೀತಿಯ ಹೃದಯವನ್ನು ಮುರಿಯಿತು.

ಆತನ ಪ್ರೀತಿಯ ಹೃದಯದ ಮೇಲೆ ಮಾನವ ಕುಲದ ಶ್ರಮೆಯ ಸಮೂಹವೇ ದಾಳಿ ಮಾಡಿದಾಗ; ಮತ್ತು ಆತನ ಕಲೆಯಿಲ್ಲದ ಪ್ರಾಣದ ಮೇಲೆ - ಪಾಪಿಗಳಿಂದ ಬೇರೆಯಾಗಿದ್ದ ಆತನ ಪ್ರಾಣದ ಮೇಲೆ (ಇಬ್ರಿಯ 7:26)

ನರಕದ ವಿಚಾರ ಮಾಡಲಾಗದ, ಮುದ್ರಿಸಲಾಗದ ಕೊಳೆಯು ತಾನೇ ಉರುಳಿಸಿದಾಗ, ಕರ್ತನಾದ ಯೇಸುವು ಮುರಿದ ಹೃದಯದವನಾಗಿ ಮರಣ ಹೊಂದಿದನು.

ದೇವರು ನಿನ್ನನ್ನು ಎಷ್ಟು ಪ್ರೀತಿ ಮಾಡುತ್ತಾನೆ ಎಂಬುದನ್ನು ನೀನು ಅರ್ಥ ಮಾಡಿಕೊಳ್ಳುವದಕ್ಕೆ ಅದು ಹೆಚ್ಚು ಉತ್ತಮವಾಗಿ ಸಹಾಯ ಮಾಡುವುದೋ ?

**ಆತ್ಮಿಕ ಶ್ರಮೆ :** ಹೆಚ್ಚಾದ ಜನರು ಆತನ ಆತ್ಮಿಕ ವೇದನೆಯನ್ನು ಅರ್ಥಮಾಡಿಕೊಳ್ಳುವದಕ್ಕಿಂತ ಹೆಚ್ಚಾಗಿ ನಮ್ಮ ಕರ್ತನ ದೈಹಿಕ ಮತು ಮಾನಸಿಕ ಶ್ರಮೆಯನ್ನು ಹೆಚ್ಚು ಬೇಗನೇ ಅರ್ಥಮಾಡಿಕೊಳ್ಳುತ್ತಾರೆ. ಅದಾಗ್ಯೂ, ನಿಶ್ಚಿತವಾಗಿಯೂ ಯೇಸು ಸಹಿಸಿದ ಅತೀ ದೊಡ್ಡ ಶ್ರಮೆಯು, ತಂದೆಯೊಂದಿಗೆ ಮತ್ತು ಪವಿತ್ರಾತ್ಮನೊಂದಿಗೆ ತನ್ನ ನಿತ್ಯವಾದ ಅನ್ಯೋನ್ಯತೆಯನ್ನು ಕಳೆದುಕೊಂಡಾಗ ಇತ್ತು.

ಗಾಢಾಂಧಕಾರದ ಮೂರು ತಾಸುಗಳವರೆಗೆ 12 ರಿಂದ ಮಧ್ಯಾಹ್ನ 3ರ ವರೆಗೆ ತಂದೆಯಾದ ದೇವರಿಂದಲೂ ಪವಿತ್ರಾತ್ಮನಾದ ದೇವರಿಂದಲೂ ಯೇಸುವು ಕೈಬಿಡಲ್ಪಟ್ಟನು. ಆ ಸಮಯದಲ್ಲಿ ಯೇಸುವು - ಕುಮಾರನಾದ ದೇವರು - ''ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ ?'' (ಮತ್ತಾಯ 27:46) ಎಂದು ಮಹಾಧ್ವನಿಯಿಂದ ಕೂಗಿದನು.

ಆ ಆಶ್ಚರ್ಯಕಾರಿ ದಿನದಂದು ದೇವರ ಏಕತೆಯ ನಿತ್ಯವಾದ ತ್ರಿತ್ವವು (ನಿತ್ಯವಾಗಿ ಅವರ್ಣನೀಯ ಬೆಳಕನ್ನು ಅಪ್ಪಿಕೊಂಡದ್ದು) ಬೇರ್ಪಡಿಸಲ್ಪಟ್ಟಿತು. ನಿನ್ನ ಮತ್ತು ನನ್ನ ಪಾಪಗಳಿಂದ ಬೇರ್ಪಡಿಸಲ್ಪಟ್ಟಿತು, ಅದರ ಪರಿಣಾಮವಾಗಿ ಯೇಸುವು ಶಿಲುಬೆಯ ಮೇಲೆ ನೇತಾಡಿದಾಗ, ಆತನ ಪಾಪ ರಹಿತ ದೇಹದಲ್ಲಿ ಹೊತ್ತುಕೊಂಡು, ಪಾಪದೊಂದಿಗೆ ದೇವರು ಸಹ - ಅಸ್ವಿತ್ವದಲ್ಲಿ ಇರಲಾರನು. ಯಾಕಂದರೆ ದೇವರು ''ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗಿ ಮಾಡಿದನು'' (2 ಕೊರಿಂಥ 5:21).

ಆದುದರಿಂದ, ಯೇಸುವು ಮರಣ ಹೊಂದಿದಾಗ, ಈ ದುಷ್ಟ ಜಗತ್ತು

ಭಯಾನಕ ಕತ್ತಲೆಯಲ್ಲಿ ಮೂರು ಗಂಭೀರ ತಾಸುಗಳ ವರೆಗೆ ಮುಚ್ಚಲ್ಪಟ್ಟಿದ್ದು ಆಶ್ಚರ್ಯಕರವಾದದ್ದಾಗಿರುವದಿಲ್ಲ.

ಸೂರ್ಯನು ಕತ್ತಲೆಯಲ್ಲಿ ಅಡಗಿಕೊಂಡನು
ತನ್ನ ಮಹಿಮೆಗಳನ್ನು ಮರೆಮಾಡಿದನು,
ಕ್ರಿಸ್ತನು, ಬಲಶಾಲಿ ನಿರ್ಮಾಣಿಕನು, ಮರಣ ಹೊಂದಿದಾಗ,
ಮಾನವ ಜೀವಿಯ ಪಾಪಕ್ಕಾಗಿ,

ಐಸಾಕ ವಾಟ್ಸ (1674 - 1748)

''ದೇವರು ಬೆಳಕಾಗಿದ್ದಾನೆ, ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ'' (1 ಯೋಹಾನ 1:5). ದೇವರ ಪವಿತ್ರತೆಯ ಬೆಳಕು ಮತ್ತು ಮನುಷ್ಯನ ಪಾಪದ ಕತ್ತಲೆ ಯು ಒಂದಕ್ಕೊಂದು ಹೊಂದಿಕೊಂಡು ಅಸ್ತಿತ್ವದಲ್ಲಿರಲಾರವು. ನೀನು ದೀಪವನ್ನು ಹಚ್ಚುವಾಗ ಕತ್ತಲೆಯು ಇಲ್ಲವಾಗಿ ಹೋಗುವಂತೆ, ನೀನು ದೀಪವನ್ನು ಆರಿಸುವಾಗ ಕತ್ತಲೆಯು ತುಂಬಿಕೊಳ್ಳುವುದು. ತಪ್ಪಿ ಹೋದ ಮಾನವತೆಯ ಪಾಪವನ್ನು ಯೇಸು ಹೊತ್ತುಕೊಂಡಾಗ ತುಂಬಿಕೊಂಡದ್ದು ಕತ್ತಲೆಯು.

ದೇವರ ವಿಮೋಚಿಸುವ ಪ್ರೀತಿಯ ಬೆಳಕಿನಿಂದ ಹಿಂದಿರುಗಿ ಹೋಗುವ ಪ್ರತಿಯೊಬ್ಬ ವ್ಯಕ್ತಿಯ ನಿತ್ಯವಾದ ಸ್ಥಿತಿಯು ಈ ಆತ್ಮಿಕ ಕತ್ತಲೆಯಾಗಿರುವುದು. ಮಧ್ಯ ರಾತ್ರಿಗಿಂತ ಹೆಚ್ಚು ದಟ್ಟವಾದ ಕತ್ತಲೆ ; ಏಕಾಂಗಿಯಾಗಿ ಸೆರೆಯಲ್ಲಿರುವದಕ್ಕಿಂತ ಹೆಚ್ಚಾದ ಏಕಾಂಗಿತನ, ಮತ್ತು ಸಮಯಕ್ಕಿಂತ ಹೆಚ್ಚು ದೀರ್ಘಕಾಲ ; ಯಾಕಂದರೆ ''ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವುಗಳಾಗಿರುವದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು'' (ಯೋಹಾನ 3:19). ಯೇಸುವಿನಿಂದ ಹಿಂದಿರುಗಿ ಹೋಗುವುದು ಆತ್ಮಿಕ ಕತ್ತಲೆ ಮತ್ತು ಮರಣದಲ್ಲಿ - ಆತ್ಮಿಕ ಮರಣ ಮತ್ತು ನಿತ್ಯ ಮರಣದಲ್ಲಿ ಪರಿಣಾಮಗೊಳ್ಳುವುದು. ಯೇಸುವಿನ ಕಡೆಗೆ ತಿರುಗಿಕೊಳ್ಳುವುದು ಜೀವದಲ್ಲಿ - ಆತ್ಮಿಕ ಜೀವ ಮತ್ತು ನಿತ್ಯ ಜೀವದಲ್ಲಿ ಪರಿಣಾಮಗೊಳ್ಳುವುದು.

## ಜಯಶಾಲಿಯ ಕೂಗು

ಕತ್ತಲೆಯ ಆ ಮೂರು ಭಯಾನಕವಾದ ತಾಸುಗಳು ತಮ್ಮ ಮುಕ್ತಾಯಕ್ಕೆ ಸಮೀಪಿಸಿದಾಗ, ಯೇಸುವು ದುಃಖದಿಂದ ''ತೀರಿತು'' ಎಂದು ನರಳದೇ ಇದ್ದದ್ದು ಶುಭವಾರ್ತೆಯಾಗಿದೆ, ನಿಶ್ಚವಾಗಿಯೂ ಇಲ್ಲ! ಪ್ರೀತಿಯ ವಿಮೋಚನಾ ಕಾರ್ಯವು ಪೂರ್ತಿಗೊಳಿಸಲ್ಪಟ್ಟಿದೆ. ಆದುದರಿಂದ ಈಗ ಜಯೋತ್ಸವದೊಂದಿಗೆ ''ತೀರಿತು'' ಎಂದು ಘೋಷಿಸಿದು. (ಯೋಹಾನ 13:30).

**ನಿನ್ನ ಮತ್ತು ನನ್ನ ಪಾಪಕ್ಕಾಗಿ ಕ್ರಯವು ಪೂರ್ಣವಾಗಿ ಕೊಡಲ್ಪಟ್ಟಿದೆ. ತೀರಿತು.**

ತನ್ನ ವಿಮೋಚನಾ ಕಾರ್ಯವನ್ನು ತೀರಿಸಿದ ನಂತರ, ತ್ರೈಯೇಕ ದೇವರಲ್ಲಿ ಕರ್ತನಾದ ಯೇಸುವು ಸದಾಕಾಲವೂ ಅನುಭವಿಸಿದ ಬೆಳಕಿನ ಅನ್ಯೋನ್ಯತೆಯು ನಿತ್ಯವಾಗಿ ಪುನಸ್ಥಾಪಿಸಲ್ಪಟ್ಟಿತು (ಯೋಹಾನ 17:5) : ಈಗ ಅಲ್ಲಿ ಪಾಪಕ್ಕಾಗಿ ಕೊಡುವದಕ್ಕಾಗಿ ನಿನಗಾಗಲೀ ನನಗಾಗಲೀ ಏನು ಉಳಿದಿರುವದಿಲ್ಲ. ನಿನ್ನ ಪರವಾಗಿ ಯೇಸುವಿನ ಪೂರ್ತಿ ಗೊಳಿಸಲ್ಪಟ್ಟ ಕಾರ್ಯವನ್ನು ರದ್ದುಪಡಿಸುವಂತೆ ಮಾಡಲು ಸೈತಾನನಿಗೆ ಏನೂ ಉಳಿದಿರುವದಿಲ್ಲ. ಸೈತಾನನ, ಸರ್ಪನ ವಿಷಕೊಂಡಿಯು ಮುರಿಯಲ್ಪಟ್ಟಿತು.

**ಮರಣವು ಮರಣಾಧಿಕಾರಿಯನ್ನು ಜಯಿಸುತ್ತದೆ.**

ದೇವರು ತನ್ನನ್ನು ''ಮಾಂಸ ಮತ್ತು ರಕ್ತದಿಂದ'' ಹೊಂದಿಸಿಕೊಂಡದ್ದಕ್ಕೆ ಕಾರಣವು ಆತನು ನಿನ್ನ ಪಾಪಕ್ಕಾಗಿ ಮತ್ತು ನನ್ನ ಪಾಪಕ್ಕಾಗಿ ಸಾಯುವದಕ್ಕಾಗಿ ಅಷ್ಟೇ ಅಲ್ಲ, ''ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನ್ನು ಅಡಗಿಸಿ ಬಿಡುವದಕ್ಕಾಗಿಯೂ'' ಇತ್ತು. (ಇಬ್ರಿಯ 2:14).

ಚಕಿತಗೊಂಡ ಗೊಲೆಯಾತನನ್ನು ನಾಶಪಡಿಸಲು ದಾವೀದನು ಗೊಲೆಯಾತನ ಸ್ವಂತ ಖಡ್ಗವನ್ನು ಉಪಯೋಗಿಸಿದಂತೆ, ಯೇಸುವು ಸೈತಾನನ ಸ್ವಂತ ಆಯುಧವನ್ನು - ಮರಣವನ್ನು - ತೆಗೆದುಕೊಂಡನು ಮತ್ತು ಅವನನ್ನು ಸಂಪೂರ್ಣವಾಗಿ ಸೋಲಿಸಲು ಉಪಯೋಗಿಸಿದನು. ಯೇಸುವು ಮನುಷ್ಯನ - ಪುರುಷರ ಮತ್ತು ಸ್ತ್ರೀಯರ ನಿಜವಾದ ವಿಮೋಚಕನು. ಆತನು ದೇವರ

ವಿಮೋಚಕನು - ಜನರನ್ನು ನಿತ್ಯ ಮರಣದಿಂದ ಮತ್ತು ತನ್ನ ಸ್ವರೂಪದಲ್ಲಿ ಮಾನವ ಕುಲವನ್ನು ಸೃಷ್ಟಿಸಿದ ದೇವರಿಗೆ ವಿರುದ್ಧವಾಗಿ ಎದ್ದ ತನ್ನ ಸ್ವಂತ ದಂಗೆಯಲ್ಲಿ ಸೈತಾನನು ಪ್ರತಿಯೊಬ್ಬ ವ್ಯಕ್ತಿಗಾಗಿ ಉದ್ದೇಶಿಸಿದ್ದ ಆತ್ಮಿಕ ಬಂಧನದಿಂದ ಬಿಡುಗಡೆ ಮಾಡಲು ಶಕ್ತನು.

ನಿಜವಾದ ಮಾಂಸ ಮತ್ತು ನಿಜವಾದ ಎಲುಬುಗಳ ತನ್ನ ಮಾನವ ದೇಹದಲ್ಲಿ ಯೇಸುವು ಸೈತಾನನನ್ನು ಸೋಲಿಸಿದನು, ಮರಣವನ್ನು ಜಯಿಸಿದನು ಹಾಗೂ ಸಮಾಧಿಯಿಂದ ಎದ್ದು ಬಂದನು. ಆಮೇಲೆ ಆತನು ಪರಲೋಕಕ್ಕೆ ಏರಿಹೋಗಿ, ನಮಗೋಸ್ಕರವಾಗಿ ಮುಂದಾಗಿ ಹೋಗಿ ಆ ಸಾನಿಧ್ಯವನ್ನು ಪ್ರವೇಶಿಸಿದ್ದರ ಬಗ್ಗೆ ಓದುತ್ತೇವೆ. (ಇಬ್ರಿಯ 6:20). ಮೊದಲನೆಯಸಲಕ್ಕೆ ಮನುಷ್ಯನು - **ನಿರಪರಾಧಿ, ಪಾಪರಹಿತ, ಪರಿಪೂರ್ಣ ಮನುಷ್ಯನು** - ಪರಲೋಕವನ್ನು ಪ್ರವೇಶಿಸಿದನು. ಶಿಲುಬೆಯ ಮೇಲಿನ ಆತನ ಮರಣದ ಕಾರಣದಿಂದ ಇತರರು ಅನುಸರಿಸುವದಕ್ಕಾಗಿ ಆತನು ಈಗ ಹೊಸ ಮಾರ್ಗವನ್ನು ತೆರೆದನು.

**ತನ್ನ ದಿನದಲ್ಲಿ, ಚಾರ್ಲ್ಸ್ ವೆಸ್ಲಿಯು** "Amazing love : how can it be ; that thou my God ; should die for me ?" **ಎಂಬುದನ್ನು ಬರೆದಾಗ ದೇವರು ನಿಜವಾಗಿಯೂ ತನ್ನನ್ನು ಪ್ರೀತಿಸಿದನೆಂದು ದೃಢತೆ ಹೊಂದಿದನು.**

## ಆದರೆ ಈಗ ಕ್ರಿಸ್ತನು ಎದ್ದಿದ್ದಾನೆ!

''ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ ; ನಿದ್ರೆ ಹೋದವರಲ್ಲಿ ಪ್ರಥಮ ಫಲವಾದನು. ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನವುಂಟಾಗುವುದು'' (1 ಕೊರಿಂಥ 15:20-21).

ದಿವಂಗತ ಡಾ|| ಸ್ಯಾಂಗಸ್ಟರ ಅವರು ನಾನು ಕೇಳಿದ ವರವುಳ್ಳ ಭಾಷಣಕಾರರಲ್ಲಿ ಒಬ್ಬರಾಗಿದ್ದಾರೆ. ತನ್ನ ಕರ್ತನೂ ರಕ್ಷಕನೂ ಆದ ಯೇಸು ಕ್ರಿಸ್ತನ ಬಗ್ಗೆ ಚೆನ್ನಾಗಿ ಮಾತನಾಡಲು ತನ್ನ ಬಾಯನ್ನು ಉಪಯೋಗಿಸುವದರಲ್ಲಿ

ಆನಂದ ಪಡುತ್ತಿದ್ದರು. ಅವನು ಸಾಯುವ ಮೊದಲು ಡಾ|| ಸ್ಯಾಂಗಸ್ಟರ ಬಾಯಿಯು ಕ್ಯಾನ್ಸರಿನಿಂದ ಮಾತನಾಡಲಾರದೇ ಇದ್ದದ್ದು ದುಃಖಕರವಾದ ಸಂಗತಿ. ಪರಲೋಕಕ್ಕೆ ಹೋಗುವದಕ್ಕಿಂತ ಸ್ವಲ್ಪ ಮೊದಲು ತನಗೆ ಪೆನ್ಸಿಲ್ ಮತ್ತು ಪೇಪರ ಕೊಡಬೇಕೆಂದು ತಮ್ಮ ಮಗಳಿಗೆ ಸನ್ನೆ ಮಾಡಿದರು. ಆ ಪುನುರುತ್ಥಾನದ ಭಾನುವಾರದಂದು ಪ್ರಾಥಃಕಾಲ ಹೀಗೆ ಬರೆದರು: ''ಕ್ರಿಸ್ತನು ಎದ್ದಿದ್ದಾನೆ'' ಎಂದು ಘೋಷಿಸಲು ನಾಲಿಗೆಯಿದ್ದು ಕೂಗಲು ಅಪೇಕ್ಷೆಯಿಲ್ಲದಿರುವದಕ್ಕಿಂತ ನಾಲಿಗೆಯಿಲ್ಲದೇ ಇದ್ದು ಘೋಷಿಸಲು ಬಲವಾದ ಅಪೇಕ್ಷೆ ಇರುವುದು ಹೆಚ್ಚು ಉತ್ತಮವಾಗಿದೆ''.

ಸುಳ್ಳಾಗಿ ದೂರು ಹೇಳಿದವರಿಗೆ ವಿರುದ್ಧವಾಗಿ ತನ್ನನ್ನು ಪ್ರತಿಪಾದಿಸಿಕೊಳ್ಳಲು ಅಗ್ರಿಪ್ಪ ರಾಜನ ಎದುರಿನಲ್ಲಿ ಅಪೊಸ್ತಲ ಪೌಲನು ಕಾಣಿಸಿಕೊಂಡಾಗ ಕ್ರಿಸ್ತನ ಶ್ರಮೆ ಮತ್ತು ಪುನರುತ್ಥಾನ ಎರಡರ ಕಡೆಗೆ ಅವರ ಗಮನ ಸೆಳೆದನು : ''ಆ ಸಂಗತಿಗಳು ಏನೆಂದರೆ - ಕ್ರಿಸ್ತನು ಬಾಧೆಪಟ್ಟು ಸಾಯಬೇಕಾದವನು ಮತ್ತು ಆತನು ಸತ್ತವರೊಳಗಿಂದ ಮೊದಲನೆಯವನಾಗಿ ಎದ್ದು ಯೆಹೊದ್ಯರಿಗೂ ಅನ್ಯಜನರಿಗೂ ಬೆಳಕನ್ನು ಪ್ರಸಿದ್ಧಪಡಿಸುವವನಾಗಿರುವನು''. (ಅ.ಕೃ. 26:23).

ಹಾಗಿದ್ದರೂ. ಕರ್ತನಾದ ಯೇಸು ಕ್ರಿಸ್ತನ ಪುನರುತ್ಥಾನದ ಮೊದಲು ಇತರ ಜನರು ಸತ್ತವರೊಳಗಿಂದ ದೈಹಿಕವಾಗಿ ಎಬ್ಬಿಸಲ್ಪಟ್ಟದ್ದು ಹೊಸ ಒಡಂಬಡಿಕೆಯಲ್ಲಿ ದಾಖಲೆಯಾಗಿರುತ್ತದೆ. ಲಾಜರನ, ಯಾಯೀರನ ಮಗಳ ಹಾಗೆಯೇ ನಾಯೀನ ಊರಿನ ವಿಧವೆಯ ಮಗನ ಉದಾಹರಣೆಗಳಿರುತ್ತವೆ. ಯೇಸುವು ಈ ಜನರನ್ನು ಅದ್ಭುತಕರವಾಗಿ ದೈಹಿಕ ಜೀವಿತಕ್ಕೆ ಪುನಃಸ್ಥಾಪಿಸಿದರೂ ಕೆಲವೇ ವರ್ಷಗಳಲ್ಲಿ ಅವರು ಸತ್ತು ಹೋದರು. ಆದರೆ ಕರ್ತನಾದ ಯೇಸು ಕ್ರಿಸ್ತನೊಂದಿಗೆ ಹಾಗಿರಲಿಲ್ಲ. ಇಂದು ಆತನು ದೈಹಿಕವಾಗಿ ಜೀವಿಯಾಗಿರುವದಷ್ಟೇ ಅಲ್ಲ, ಆತ್ಮಿಕವಾಗಿಯೂ ನಿತ್ಯವಾಗಿಯೂ ಸಜೀವಿಯಾಗಿದ್ದಾನೆ. ಸತ್ತವರೊಳಗಿಂದ ಎಬ್ಬಿಸಲ್ಪಡಬೇಕಾಗಿದ್ದವರಲ್ಲಿ ಆತನು ಮೊದಲನೆಯವನಾಗಿದ್ದಾನೆ.

ಮರಣದ ಮತ್ತು ಕೊಳೆಯುವಿಕೆಯ ಸಮಾಧಿಯು ಜೀವವನ್ನು ಸೃಷ್ಟಿಸುವಾತನನ್ನು ಹೇಗೆ ಬಂಧಿಸಿಡಬಹುದು ? ಕರ್ತನಾದ ಯೇಸು ಕ್ರಿಸ್ತನು ಸೃಷ್ಟಿಕರ್ತ ದೇವರಾಗಿರುವದರಿಂದ, ಏನು ಇಲ್ಲದ್ದರಿಂದ ಆತನು ಜೀವವನ್ನು ತಂದನು. ಪರಿಪೂರ್ಣ ಮಾನವನಾಗಿ ಯೇಸುವು ರಕ್ಷಕ ದೇವರಾಗಿದ್ದು ಸಮಾಧಿಯೊಳಗಿಂದ ಹೊರಗೆ ಜೀವವನ್ನು ತಂದನು ಮತ್ತು ನಂಬಿಕೆಯಿಂದ ತನ್ನನ್ನು ಸ್ವೀಕರಿಸುವ ಪ್ರತಿಯೊಬ್ಬ ವ್ಯಕ್ತಿಗಾಗಿ ಪರಲೋಕಕ್ಕೆ ಮಾರ್ಗ ಸ್ಥಾಪಿಸಿದನು. ಅವರಿಗೆ ಇದು ವಾಗ್ದಾನವಾಗಿ ಕೊಡಲ್ಪಟ್ಟಿದೆ :

> ''ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾ ಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. (ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ). ಬದುಕಿಸಿದ್ದಲ್ಲದೆ ತಾನು ಕ್ರಿಸ್ತ ಯೇಸುವಿನಲ್ಲಿ ನಮಗೆ ಮಾಡುವ ಉಪಕಾರದ ಮೂಲಕ ತನ್ನ ಅಪಾರವಾದ ಕೃಪಾತಿಶಯವನ್ನು ಮುಂದಣಯುಗಗಳಲ್ಲಿ ತೋರಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ''. (ಎಫೆಸ 2:4-7).

ಕೊರಿಂಥ ಪಟ್ಟಣದಲ್ಲಿಯ ವಿಶ್ವಾಸಿಗಳಿಗೆ ಬರೆಯುತ್ತ, ಅಪೊಸ್ತಲ ಪೌಲನು ಅವರು ತಮ್ಮ ಪಾಪದ ಪರಿಣಾಮಗಳಿಂದ ರಕ್ಷಿಸಲ್ಪಟ್ಟವರೆಂದು ಅವರ ಜ್ಞಾಪಕಕ್ಕೆ ತಂದನು. ಯಾಕಂದರೆ ''ಶಾಸ್ತ್ರದಲ್ಲಿ ಮುಂತಿಳಿಸುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು''. (1 ಕೊರಿಂಥ 15:3,4) ಇಂದು ಪ್ರತಿಯೊಬ್ಬ ವಿಶ್ವಾಸಿಯು, ''ಕ್ರಿಸ್ತನು ನನ್ನ ಪಾಪಗಳಿಗಾಗಿ ಸತ್ತನು; ಪುನಃ ಎದ್ದು ಬಂದನು ಮತ್ತು ಆತನಲ್ಲಿ ನನಗೆ ನೂತನ ಜೀವನ ಕೊಡುವನು'' ಎಂಬ ಮಹಿಮೆಯುಳ್ಳ ಸಂಗತಿಯ ಮೇಲೆ ಆತು ಕೊಂಡಿರುವನು.

## ದಿನ ಒಂದರಿಂದ ದಿನ ಮೂರರ ವರೆಗೆ

ಈಗ, ''ಕರ್ತನಾದ ಯೇಸುವಿಗೆ ಆತನು ಶಿಲುಬೆಗೆ ಹಾಕಲ್ಪಟ್ಟ ಸಮಯ ಮತ್ತು ಮೂರು ದಿನಗಳ ನಂತರ ಸಮಾಧಿಯಿಂದ ಎದ್ದು ಬಂದ ಸಮಯದ ಮಧ್ಯದಲ್ಲಿ ಏನು ಸಂಭವಿಸಿತು?'' ಎಂದು ನೀನು ಆಶ್ಚರ್ಯಪಡುತ್ತಿರಬಹುದು. ಅಂಥ ಪ್ರಶ್ನೆಯನ್ನು ನಿರೀಕ್ಷಿಸಿ, ದೇವರು ಉತ್ತರವನ್ನು ಪ್ರಕಟಿಸಿದ್ದಾನೆ :

> ''ಏರಿ ಹೋದನೆಂದು ಹೇಳಿದ್ದರಲ್ಲಿ ಭೂಮಿಯ ಅಧೋಭಾಗಕ್ಕೆ ಇಳಿದಿದ್ದನೆಂತಲೂ ಹೇಳಿದ ಹಾಗಾಯಿತಲ್ಲಾ. ಇಳಿದು ಬಂದವನು ಮೇಲಣ ಎಲ್ಲಾ ಲೋಕಗಳಿಗಿಂತ ಉನ್ನತವಾಗಿ ಏರಿ ಹೋದವನೇ. ಆದುದರಿಂದ ಸಮಸ್ತ ಲೋಕಗಳನ್ನು ತುಂಬಿದವನಾದನು'' (ಎಫೆಸ 4:9,10).

ಹೌದು, ಪರಲೋಕಕ್ಕೆ ಏರಿಹೋಗುವ ಮೊದಲು, ಕರ್ತನಾದ ಯೇಸು ಕ್ರಿಸ್ತನು ನಿಜವಾಗಿಯೂ ಅಧೋಲೋಕದೊಳಗೆ ಇಳಿದುಹೋದನು ಎಂದು ಬೈಬಲ್ ನಮಗೆ ಹೇಳುತ್ತದೆ. ಅದರ ನಂತರ ಹಳೇ ಒಡಂಬಡಿಕೆಯ ಭಕ್ತರನ್ನು (ನಂಬುತ್ತ ಸತ್ತು ಹೋಗಿದ್ದವರನ್ನು) ತನ್ನ ಜಯೋತ್ಸವದಲ್ಲಿ ಪರಲೋಕಕ್ಕೆ ಆತನು ಏರಿಹೋದನು. ಇಂದು, ಪ್ರತಿಯೊಬ್ಬ ನಿಜವಾದ ವಿಶ್ವಾಸಿಗೆ ಮರಣದ ಬಾಗಿಲವು ನಿಜವಾಗಿಯೂ ಮಹಿಮೆಗೆ ಅವನ ದ್ವಾರವಾಗಿರುವುದು ಎಂಬ ಭರವಸೆ ಕೊಡಲ್ಪಟ್ಟಿದೆ : ಅದ್ಭುತಕರವಾಗಿ, ಕ್ರಿಸ್ತನು ತಾನೇ ನಮ್ಮ ಪರವಾಗಿ ದೈಹಿಕ ಹಾಗೂ ಆತ್ಮಿಕ ಮರಣಗಳೆರಡರ ಮೇಲೆ ಜಯ ಸಾಧಿಸಿದ್ದಾನೆ.

> ''ಮರಣವೇ, ನಿನ್ನ ಜಯವೆಲ್ಲಿ ? ಮರಣವೇ ನಿನ್ನ ವಿಷದ ಕೊಂಡಿ ಎಲ್ಲಿ ? ಮರಣದಕೊಂಡಿ ಪಾಪವೇ; ಮತ್ತು ಪಾಪದ ಬಲಕ್ಕೆ ಆಧಾರವು ಧರ್ಮಶಾಸ್ತ್ರವೇ. ಆದರೆ ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ, ಆತನಿಗೆ ಸ್ತೋತ್ರ'' (1 ಕೊರಿಂಥ 15:55-57).

## ಅನುಬಂಧ – ಆತನು ಕೊಟ್ಟ ಪ್ರೀತಿಯ ಸ್ವಾಸ್ತ್ಯ

ಕರ್ತನಾದ ಯೇಸುವು ಪರಲೋಕಕ್ಕೆ ಮಾರ್ಗವನ್ನು ಮಾಡಿದ್ದಾನೆ ಮತ್ತು

ಈಗ ನಾವು ಆತನ ಜಯೋತ್ಸವದ ಹಾದಿಯಲ್ಲಿ ಹಿಂಬಾಲಿಸಬಹುದು ಎಂಬುದನ್ನು ತಿಳಿಯುವುದು ಅದ್ಭುತಕರವಾದದ್ದಾಗಿದೆ.

ತನ್ನ ಮರಣಕ್ಕಿಂತ ಮೊದಲು, ತನ್ನವರಿಗಾಗಿರುವ ಪ್ರೀತಿಯಲ್ಲಿ, ಯೇಸುವು, ಪರಲೋಕಕ್ಕೆ ತಾನು ಏರಿಹೋದನಂತರ, ಭೂಮಿಯ ಮೇಲಿನ ವಿಶ್ವಾಸಿಗಳಿಗೆ ಪವಿತ್ರಾತ್ಮನನ್ನು ಕಳುಹಿಸುವೆನೆಂದು ವಾಗ್ದಾನ ಮಾಡಿದ್ದು ಇನ್ನೂ ಅದ್ಭುತಕರ ವಾದದ್ದಾಗಿದೆ.

ತನ್ನ ಶಿಷ್ಯರಿಗೆ ಆತನು ಹೀಗೆ ಹೇಳಿದ್ದಾನೆ :

> ''ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು. ಇದನ್ನು ಯೇಸು ತನ್ನನ್ನು ನಂಬಿದವರು ಹೊಂದಲಿರುವ ಪವಿತ್ರಾತ್ಮವರವನ್ನು ಕುರಿತು ಹೇಳಿದನು ; ಆತನು ಇನ್ನೂ ತನ್ನ ಮಹಿಮೆಯ ಪದವಿಯನ್ನು ಹೊಂದದೆ ಇದ್ದ ಕಾರಣ ಪವಿತ್ರಾತ್ಮ ವರವು ಇನ್ನೂ ಬಂದಿದ್ದಿಲ್ಲ'' (ಯೋಹಾನ 7:38-39).
>
> ''ಆದರೆ ಈಗ ನಾನು ನನ್ನನ್ನು ಕಳುಹಿಸಿಕೊಟ್ಟಾತನ ಬಳಿಗೆ ಹೋಗುತ್ತೇನೆ.... ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು ; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಕೊಡುವನು...... ಸತ್ಯದ ಆತ್ಮನೇ...... ನಾನು ಹೋಗುವುದು ನಿಮಗೆ ಹಿತಕರವಾಗಿದೆ; ಹೇಗೆಂದರೆ ನಾನು ಹೋಗದಿದ್ದರೆ ಆ ಸಹಾಯಕನು ನಿಮ್ಮ ಬಳಿಗೆ ಬರುವದಿಲ್ಲ ; ನಾನು ಹೋದರೆ ಆತನನ್ನು ನಿಮ್ಮ ಬಳಿಗೆ ಕಳುಹಿಸಿ ಕೊಡುತ್ತೇನೆ..... ಆತನು ...... ನನ್ನನ್ನೇ ಮಹಿಮೆ ಪಡಿಸುವನು'' (ಯೋಹಾನ 16:5 ; 14:16,17 ; 16:7,14).

ದೇವರು ತನ್ನ ಕುಮಾರನ ಮರಣದಲ್ಲಿ ಹೇಗೆ ಮಹಿಮೆ ಪಡಿಸಲ್ಪಟ್ಟನು ಎಂಬುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ಈಗ ನೀವು ಇನ್ನೊಂದು

ಪ್ರಶ್ನೆಯನ್ನು ಕೇಳಬಹುದು : ''ನಿನಗು ಮತ್ತು ನನಗೂ ಪವಿತ್ರಾತ್ಮನನ್ನು ಕಳುಹಿಸುವದರಿಂದ ಯೇಸುವು ಹೇಗೆ ಮಹಿಮೆಪಡಿಸಲ್ಪಡುವನು ?''

ದೇವರ ಪ್ರೀತಿಯು ಹರಿಯುತ್ತಿರುವವರ ಮುಖಾಂತರವಾಗಿ ಪ್ರತಿಯೊಬ್ಬ ವಿಶ್ವಾಸಿಯ ಜೀವನದಲ್ಲಿ ಯೇಸುವು ಮಹಿಮೆಪಡಿಸಲ್ಪಟ್ಟಿದ್ದಾನೆ ಎಂಬ ಸಂಗತಿಯಿಂದ ಈ ಪ್ರಶ್ನೆಯು ಭಾಗಶಃವಾಗಿ ಉತ್ತರಿಸಲ್ಪಟ್ಟಿದೆ. ''ನಮಗೆ ಕೊಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿ ರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದದೆಯಲ್ಲಾ'' (ರೋಮಾಪುರ5:5) ಎಂದು ನಾವು ಓದುತ್ತೇವೆ. ಆಂತರ್ಯದಲ್ಲಿ ವಾಸಿಸುವ ದೇವರ ಪ್ರೀತಿಯು - ಪವಿತ್ರಾತ್ಮನಿಂದ ನಿಜವಾಗಿ ಮಾಡಲ್ಪಟ್ಟದ್ದು - ಮಾನವ ಆಕರ್ಷಣೆಯ ಇಲ್ಲವೇ ಪ್ರೀತಿಯ ಅತ್ಯುನ್ನತ ಶಿಖರವನ್ನು ದಾಟಿ ಹೋಗುವುದು. ನಂಬಿಕೆಯಿಂದ ನೀನು ಶಿಲುಬೆಯ ಬಳಿ ಆತನು ಪೂರ್ತಿಗೊಳಿಸಿದ ಕಾರ್ಯಕ್ಕೆ ಉತ್ತರ ಕೊಡುವಾಗ, ಕರ್ತನಾದ ಯೇಸುವು, ಪವಿತ್ರಾತ್ಮನ ವ್ಯಕ್ತಿಯಲ್ಲಿ, ನಿನ್ನ ಮುಖಾಂತರ ಇತರ ಜನರನ್ನು ಪ್ರೀತಿಸಲು ಪ್ರಾರಂಭಿಸುವನು. ಅದ್ಭುತಕರವಾದದ್ದು !

ಕ್ರಿಸ್ತನು ನಿನ್ನ ಪಾಪಗಳಿಗಾಗಿ ಸತ್ತನು ಎಂದು ನಂಬುವುದು ಮತ್ತು ಆ ಸಂಗತಿಗಾಗಿ ನಿನ್ನ ಹೃದಯದಲ್ಲಿ ಉಪಕಾರ ಹೇಳುವುದು, ದೇವರ ಕ್ಷಮಾಪಣೆಯ ಮತ್ತು ರಕ್ಷಿಸುವ ಪ್ರೀತಿಯ ವೈಯಕ್ತಿಕ ಭರವಸೆಯನ್ನು ಅನುಭವಿಸುವುದು ನಿನ್ನದಾಗಿದೆ.

ಆಗ, ಕರ್ತನಾದ ಯೇಸು ಕ್ರಿಸ್ತನ ಆಂತರ್ಯದಲ್ಲಿ ವಾಸಿಸುವ ಸಾನಿಧ್ಯಕ್ಕೆ ನಿನ್ನ ಜೀವಿತವನ್ನು ಲಭ್ಯವಾಗಿರಿಸುವದು, ಪ್ರೀತಿಯಿಲ್ಲದ ಜಗತ್ತಿಗೆ ಆತನ ಪ್ರೀತಿಯ ಸಾಧನ ವಾಗುವುದು ನಿನ್ನದಾಗಿದೆ.

ತನ್ನ ಪಾಂಡಿತ್ಯಕ್ಕಾಗಿ ಪ್ರಸಿದ್ಧನಾದ ಒಬ್ಬ ಜರ್ಮನ್ ದೈವಜ್ಞಾನ ಶಾಸ್ತ್ರಿಗೆ ಒಮ್ಮೆ ಈ ಪ್ರಶ್ನೆ ಕೇಳಲ್ಪಟ್ಟಿತು : ''ದೇವರ ಬಗ್ಗೆ ನಿನ್ನ ಅತೀ ಅಗಾಧವಾದ ವಿಚಾರವು ಯಾವುದು?'' ಅದ್ಭುತವಾದ ರೀತಿಯಲ್ಲಿ ಅವನು ಮಕ್ಕಳ ಕಿರು ಪದ್ಯದ ಮಾತುಗಳಲ್ಲಿ ಉತ್ತರ ಕೊಟ್ಟನು: ''ಯೇಸುವು ನನ್ನನ್ನು ಪ್ರೀತಿಸುತ್ತಾನೆ ; ಇದನ್ನು ನಾನು ಬಲ್ಲೆನು, ಯಾಕಂದರೆ ಬೈಬಲು ನನಗೆ ಹಾಗೆ ಹೇಳುತ್ತದೆ''.

**ಹೌದು, ದೇವರು ನಿಜವಾಗಿ ನನ್ನನ್ನು ಪ್ರೀತಿಸುತ್ತಾನೆ!**
**ಹೌದು, ದೇವರು ನಿಜವಾಗಿಯೂ ನಿನ್ನನ್ನು ಪ್ರೀತಿಸುತ್ತಾನೆ.**
ರಕ್ಷಣೆಯ ಯೋಜನೆಯನ್ನು ರಚಿಸಿದ ಪ್ರೀತಿಯೇ,
ಅದನ್ನು ಮಾನವನಿಗೆ ಕೆಳಗೆ ತಂದ ಕೃಪೆಯೇ,
ದೇವರು ಸೇತುವೆ ಕಟ್ಟಿದ ಬಲವಾದ ಡೊಂಗರವೇ,
ಕಲ್ವಾರಿಯಲ್ಲಿ !
ಅಲ್ಲಿದ್ದ ದಯೆ ದೊಡ್ಡದಾಗಿತ್ತು ಮತ್ತು ಕೃಪೆ ಉಚಿತವಾಗಿತ್ತು,
ನನಗೆ ಅಲ್ಲಿ ಕ್ಷಮಾಪಣೆ ಗುಣಿಸಲ್ಪಟ್ಟಿತು,
ಅಲ್ಲಿ ನನ್ನ ಭಾರಗೊಂಡ ಪ್ರಾಣ ಬಿಡುಗಡೆ ಕಂಡುಕೊಂಡಿತು,
ಕಲ್ವಾರಿಯಲ್ಲಿ.



## ಇರಾಕಿನಿಂದ ಒಂದು ಪತ್ರ

''ನಾನು ಒಂದು ಮುಸ್ಲಿಮ (Scheltey) ಮನೆಯಲ್ಲಿ ಇದ್ದೆನು. ನನ್ನ ಕುಟುಂಬವು ಮುಸ್ಲಿಮನಂತೆ ಹೇಗೆ ಪ್ರಾರ್ಥಿಸಬೇಕು ಮತ್ತು ಉಪವಾಸ ಮಾಡಬೇಕು ಎಂಬುದನ್ನು ನನಗೆ ಕಲಿಸಿತು. ಮುಸ್ಲಿಮ್ ಮಹಿಳೆಯಂತೆ ನಾನು ಉಡುಪು ಧರಿಸುತ್ತಿದ್ದೆ, ನನ್ನ ಮುಖದಲ್ಲಿ ನೋಡಿ ಯಾವ ಪುರುಷನೂ ಪಾಪ ಮಾಡದಂತೆ ನನ್ನ ಮುಖ ಮುಚ್ಚಿಕೊಳ್ಳುತ್ತಿದ್ದೆನು.

''ಇದೆಲ್ಲದರ ಕಾರಣದಿಂದ, ಮಾಡಲಿಕ್ಕೆ ಏನೂ ಇಲ್ಲದ್ದರಿಂದ, ನನಗೆ ಬಹಳ ಸಮಯ ಉಳಿಯುತ್ತಿತ್ತು. ಆದುದರಿಂದ ನನ್ನ ಉಳಿದ ಸಮಯವನ್ನು ಅನೇಕ ರೇಡಿಯೋ ಕಾರ್ಯಕ್ರಮಗಳನ್ನು ಕೇಳಲು ಉಪಯೋಗಿಸಿದೆನು ಮತ್ತು ಅನೇಕ ಬೈಬಲ್ ಸಂದೇಶಗಳನ್ನು ಕೇಳಿಸಿಕೊಂಡೆನು, ಒಂದು ದಿನ ಸುಂದರವಾದ ಬಣ್ಣಗಳೊಂದಿಗಿನ ಕೆಲವು ಉತ್ತಮವಾದ ಸ್ಟಿಕ್ಕರಗಳೊಂದಿಗೆ ನನ್ನ ಅತ್ತಿಗೆಯನ್ನು ನೋಡಿದೆನು. ನನ್ನ ಅತ್ತಿಗೆಯ ವಿಳಾಸದೊಂದಿಗೆ ನನ್ನ ಮೊದಲನೆಯ ಪತ್ರವನ್ನು

ಬರೆದೆನು. ನಿಮ್ಮ ಉತ್ತರವು ''ದೇವರಿಗಾಗಿ ನಿನ್ನ ಅನ್ವೇಷಣೆ'' ಪುಸ್ತಕವನ್ನೊಳಗೊಂಡಿತ್ತು.

''ದೇವರಿಗಾಗಿ ಅನ್ವೇಷಣೆ ಎಂಬುದರ ಅರ್ಥವೇನೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿದೆನು.... ಅಧ್ಯಾಯ 7ರಲ್ಲಿ ಒಂದು ಪ್ರಶ್ನೆಯಿದೆ; ದೇವರು ನಿಜವಾಗಿ ನನ್ನನ್ನು ಪ್ರೀತಿಸುವನೋ ?'' ಹೀಗೆ ಹೇಳುವ ಪರಿಚ್ಛೇದದಲ್ಲಿ ಪ್ರತ್ಯೇಕವಾಗಿ ತಡೆದುಕೊಂಡೆನು: ''ಆತನು ಶಿಲುಬೆಯ ಮೇಲೆ ಮಾಡಿದ್ದರಿಂದ ದೇವರು ನಿನಗಾಗಿ ತನ್ನ ಪ್ರೀತಿಯನ್ನು ತೋರಿಸುತ್ತಾನೆ. ಶಿಲುಬೆಯ ಅರ್ಥವನ್ನು ನೀನು ತಿಳಿದುಕೊಳ್ಳುವಾಗ ದೇವರು ನಿನ್ನನ್ನು ಪ್ರೀತಿಸುತ್ತಾನೆ ಎಂಬುದಕ್ಕೆ ನಿನಗೆ ಹೆಚ್ಚಿನ ರುಜುವಾತಿನ ಅಗತ್ಯತೆ ಇರುವದಿಲ್ಲ''.

''ನಾನು ಈ ಅಧ್ಯಾಯವನ್ನು 100ಕ್ಕಿಂತಲೂ ಹೆಚ್ಚು ಸಲ ಓದಿದ್ದೇನೆ. ಆಗ ಶಿಲುಬೆಯು ಮಾತ್ರವೇ ನನಗಾಗಿ ಮಾರ್ಗವಾಗಿದೆ ಎಂಬುದನ್ನು ಸಂಶಯವಿಲ್ಲದೇ ಅರ್ಥ ಮಾಡಿಕೊಳ್ಳುವದಕ್ಕೆ ಪ್ರಾರಂಭಿಸಿದೆನು.''

-Report Submitted by Trans World Radio.

**ಆಲೋಚಿಸಲು ವಿರಾಮ**

1. ನೀನು ಯಾರನ್ನಾದರೂ ಪ್ರೀತಿಸುತ್ತೀ ಎಂಬುದನ್ನು ರುಜುವಾತುಪಡಿಸಲು ಅತ್ಯುತ್ತಮವಾದ ಮಾರ್ಗವು ಯಾವುದು?

   ಅದು ನೀನು ಯಾವುದನ್ನು ಹೇಳುತ್ತೀಯೋ ಅದರಿಂದಲೋ?

   ಅದು ನೀನು ಯಾವುದನ್ನು ಮಾಡುತ್ತೀಯೋ ಅದರಿಂದಲೋ?
2. ದೇವರು ತನ್ನ ಪ್ರೀತಿಯನ್ನು ನಿನಗಾಗಿ ಹೇಗೆ ರುಜುವಾತುಪಡಿಸಿದನು ?
3. ದೇವರ ಪ್ರೀತಿಗೆ ನೀನು ಹೇಗೆ ವೈಯಕ್ತಿಕವಾಗಿ ಉತ್ತರ ಕೊಡುವಿ?

ಶಸ್ತ್ರ ಚಿಕಿತ್ಸೆಯ ಕೋಣೆಯ ವಿದ್ಯುನ್ಮಾನ ವಾತಾವರಣದಲ್ಲಿ ಪ್ರತಿಯೊಬ್ಬ ಸರ್ಜನ್‌ನು ಜೀವದೊಂದಿಗೆ ರಕ್ತವನ್ನು ಗುರುತಿಸುವದನ್ನು ಕಲಿತುಕೊಳ್ಳುತ್ತಾನೆ. ಅವೆರಡು ಬೇರ್ಪಡಿಸಲಾರದವುಗಳಾಗಿವೆ ; ನೀವು ಒಂದನ್ನು ಕಳೆದುಕೊಂಡರೆ, ನೀವು ಎರಡನ್ನೂ ಕಳೆದುಕೊಳ್ಳುವಿರಿ.

**ಡಾ ॥ ಪೌಲ ಬ್ರಾಂಡ.**

# ಅಧ್ಯಾಯ 8

# ಜೀವವನ್ನು ನಾನು ಎಲ್ಲಿ ಕಂಡುಕೊಳ್ಳಬಹುದು ?

ಮಧ್ಯರಾತ್ರಿಯ ತಾಸು ಬೇಗನೇ ಬರಲಿಕ್ಕಿತ್ತು. ಹದಿನೆಂಟು ತಾಸುಗಳ ಆಯಾಸ ಕರವಾದ ರೈಲು ಪ್ರಯಾಣದ ನಂತರ ನನ್ನ ಹೆಂಡತಿ ಮತ್ತು ನಾನು ಇತರ ನೂರಾರು ಜೊತೆ ಪ್ರಯಾಣಿಕರೊಂದಿಗೆ ಪ್ಯಾರಿಸನಲ್ಲಿ Gare St. Lazare ರೇಲ್ವೆ ನಿಲ್ದಾಣದಲ್ಲಿದ್ದೆವು. ರೇಲ್ವೆ ಅಧಿಕಾರಿಯು ಟಿಕೇಟ ಅಡ್ಡಗಾವಲನ್ನು ತೆರೆದು ನಾವು ನಮ್ಮ ಟ್ರೇನಿಗೆ ಹೋಗುವಂತೆ ಮಾಡುವದಕ್ಕಾಗಿ ತಾಳ್ಮೆಯಿಂದ ಕಾದುಕೊಂಡಿದ್ದೆವು.

ನಮ್ಮ ಸುತ್ತಲೂ ಇದ್ದವರಲ್ಲಿ ಹೆಚ್ಚಾದವರು ಯುವಜನರಾಗಿದ್ದರು. ಡೊರೊತಿ ಮತ್ತು ನಾನು ಅವರೊಳಗೆ ಜೊತೆಗೂಡಿದಾಗ, ಆ ಗುಂಪಿನಲ್ಲಿ ಯುರೋಪಿನಲ್ಲಿಯ ಪ್ರತಿಯೊಂದು ದೇಶವು ಪ್ರತಿನಿಧೀಕರಿಸಲ್ಪಟ್ಟಂತೆ ತೋರಿತು. ಅಲ್ಲಿದ್ದ ಕೆಲವು ಜನ ಯುವಕ, ಯುವತಿಯರು ತಮ್ಮ ಬೆನ್ನು ಚೀಲಗಳನ್ನು ತಲೆಗಿಂಬಾಗಿಟ್ಟುಕೊಂಡು ಸ್ವಲ್ಪ ನಿದ್ರೆ ಮಾಡಲು ಪ್ರಯತ್ನಿಸಿದರು. ಅವರು ನೆಲದ ಹಾಸಿಗೆಯ ಮೇಲೆ ಒರಗಿಕೊಂಡಾಗ, ಅವರ ಸ್ನೇಹಿತರು ಅವರ ಕಾವಲುಗಾರರಂತೆ ಇದ್ದು ಸ್ಯಾಂಡವಿಚ್ ತಿನ್ನುತ್ತ ನೀರು ಕುಡಿಯುತ್ತಿದ್ದರು.

ನಾವು ಕಾದುಕೊಂಡಿದ್ದಾಗ, ಈ ಯುವಕರೊಂದಿಗೆ ನಾವು ಮಾತಾಡಿದೆವು, ನಕ್ಕೆವು. ಅವರ ಯೌವನ ಪ್ರಾಯದ ಕುತೂಹಲವಿದ್ದರೂ, ಅವರಲ್ಲಿ ಹೆಚ್ಚಾದವರು ತಾವು ಹುಡುಕುತ್ತಿದ್ದ ಕಾಲ್ಪನಿಕ ''ಜೀವಿತವನ್ನು'' ಇನ್ನೂ

ಕಂಡುಕೊಂಡಿರುವದಿಲ್ಲ ಎಂಬ ಅರುಹುವುಳ್ಳವರಾಗಿದ್ದರು. ಸ್ವಲ್ಪ ಸಮಯದಲ್ಲಿಯೇ ನಮ್ಮ ಸಂಭಾಷಣೆಯು ಡೊರೊತಿ ಮತ್ತು ನನ್ನೊಂದಿಗೆ ಪ್ರಯಾಣ ಮಾಡುತ್ತಿದ್ದ ವ್ಯಕ್ತಿಯ ಕಡೆಗೆ ಅಂದರೆ ಕರ್ತನಾದ ಯೇಸು ಕ್ರಿಸ್ತನ ಕಡೆಗೆ ತಿರುಗಿತು !

ನಾವು ಮಾತಾಡುತ್ತಿದ್ದಂತೆ ಈ ವಿಶ್ರಾಂತಿಯಿಲ್ಲದ ಮತ್ತು ಸಾಹಸೀ ಯುವ ಜನರು ಹೃದಯ ತೆರೆದು ''ನಿಜವಾದ'' ಜೀವನ ಕಂಡುಕೊಳ್ಳುವ ಅಪೇಕ್ಷೆಯನ್ನು ಹಂಚಿಕೊಂಡರು. ಕೆಲವರು ಅದು ಮುಂದಿನ ಪಟ್ಟಣದಲ್ಲಾಗಬಹುದೆಂದು ನಿರೀಕ್ಷಿಸಿದರು: ಕೆಲವರ ಮುಂದಿನ ಸ್ನೇಹದಲ್ಲಿ ಅದಾಗಬಹುದೆಂದು ಯೋಚಿಸಿದರು; ಇತರರು ನಾಚಿಕೆಯಿಲ್ಲದೇ ತಮ್ಮ ಜೀವನ ಅನುಭವವನ್ನು ಮುಂದಿನ ಮಧ್ಯಪಾನ ಪಾರ್ಟಿಯಲ್ಲಿ ವಿಸ್ತರಿಸಬಹುದೆಂದು ನಂಬಿದರು. ಕೆಲವರಿಗೆ ಮರಣಾಂತಿಕ ರೋಗದೊಂದಿಗೆ ಇದ್ದೇವೆಂಬ ಭಯದ ಯೋಚನೆಯಿತ್ತು.

ಆಫ್ರೀಕದ ದೂರದ ಗ್ರಾಮಗಳಲ್ಲಿ ಈ ಭಯಪಡುವ ಪಿಡುಗನ್ನು "the thin man's disease" ಎಂದು ಕರೆಯುತ್ತಾರೆ, ವೈದ್ಯಕೀಯ ಕ್ಷೇತ್ರದಲ್ಲಿ ಇದು HIV ಪೊಜಿಟಿವ ಎಂದು ಗುರುತಿಸಲ್ಪಟ್ಟಿದೆ. ಪುರುಷನಲ್ಲಿ, ಮಹಿಳೆಯಲ್ಲಿ, ಬಾಲಕನಲ್ಲಿ ಇಲ್ಲವೇ ಬಾಲಕಿಯಲ್ಲಿ ಇದು ಪೂರ್ಣವಾಗಿ ಬೆಳವಣಿಗೆ ಹೊಂದಿದಾಗ ಇದು AIDS ಎಂದು ತಿಳಿಯಲ್ಪಡುತ್ತದೆ. ಈ ರೋಗ ಅಂಟಿಕೊಂಡಿದೆ ಎಂಬ ಭಯಾನಕವಾದ ವರ್ತಮಾನವು ಯಾವಾಗಲೂ ಒಂದೆಯಾಗಿರುತ್ತದೆ : ತಕ್ಷಣದ ಮತ್ತು ಭಯಾನಕವಾದ ನಾಶನ. ಜಗತ್ತಿನಲ್ಲೆಲ್ಲಾ ಭಯಂಕರವಾದ ಹಿಂಸೆಯ AIDS ರೋಗವು ''ರಕ್ತದ ವ್ಯಾಧಿ''ಯಾಗಿದೆಯೆಂದು ಜನರು ಬಲ್ಲವರಾಗಿದ್ದಾರೆ. ರಕ್ತವು ಜೀವದ ಶುದ್ಧಿಕರಿಸುವ ನದಿಯಾಗುವ ಮೊದಲು, ಅದು ಮರಣದ ಕೊಳೆಯಾದ ನದಿಯಾಗಿದೆ.

ಹೀಗಿದ್ದರೂ, ರಕ್ತವು ಜೀವ ಕೊಡುವ ಅತ್ಯವಶ್ಯಕವಾದ ಹೊಳೆಯಾಗಿದ್ದರೂ, ನನಗೆ ರಕ್ತದ ಅಂಥ ನೋಟವು ಯಾವಾಗಲೂ ಅಸಹ್ಯವಾದದ್ದಾಗಿದೆ : ನನ್ನ ಈ ಭಯದಿಂದ ಬಿಡುಗಡೆ ಹೊಂದಲು ಒಂದು

ಸಲ ಲಂಡನ್‌ದಲ್ಲಿಯ ಆಸ್ಪತ್ರೆಯಲ್ಲಿ ದೈಹಿಕ ಶಸ್ತ್ರಚಿಕಿತ್ಸೆ ಮಾಡುವ ನೋಟವನ್ನು ನೋಡಲು ಅಪೇಕ್ಷಿಸಿದ್ದೆನು. ವೈದ್ಯರು ರೋಗಿಯ ಚರ್ಮವನ್ನು ಕೊಯ್ಯುವಾಗ ನಾನು ಮೂರ್ಛೆ ಹೋಗುವ ಸ್ಥಿತಿಯಲ್ಲಿದ್ದೆನು. ನನ್ನ ವೈದ್ಯ ಸ್ನೇಹಿತನು ನಾನು ಭಯದಿಂದ ತುಂಬಿ ಹೋಗಿ ಬೆಳ್ಳಗಾಗುತ್ತಿದ್ದನ್ನು ನೋಡಿ ನಾನು ಅಪರೇಶನ್ ಕೋಣೆಯಿಂದ ಹೋಗಬೇಕೆಂದು ಹೇಳಿದರು. ಹಾಗೆ ಮಾಡಲು ನಾನು ಹೆಚ್ಚು ಹೇಳಿಸಿಕೊಳ್ಳುವ ಅಗತ್ಯತೆಯಿರಲಿಲ್ಲ.

ರಕ್ತದ ನೋಟಕ್ಕೆ ವ್ಯಕ್ತಿಯ ಪ್ರತಿಕ್ರಿಯೆಗಳು ಯಾವವಿದ್ದರೂ, ಜೀವ ಮತ್ತು ಆರೋಗ್ಯವನ್ನು, ಗಂಭೀರವಾಗಿ ರಕ್ತ ಸುರಿಯುತ್ತಿದ್ದ ವ್ಯಕ್ತಿಗೆ ಬ್ಲಡ್ - ಟ್ರಾನ್ಸಫೂಜನ್ ದಿಂದ ನವೀಕರಿಸಬಹುದು. ಇಂದು ಆಧುನಿಕ ವಿಜ್ಞಾನದ ಅಗಾಧದೊಂದಿಗೆ, ಆರೋಗ್ಯ ವಂತ ವ್ಯಕ್ತಿಯಿಂದ ತೆಗೆದುಕೊಂಡ ರಕ್ತವನ್ನು ಸಾಯುತ್ತಿರುವ ಇಲ್ಲವೇ ರೋಗಗ್ರಸ್ಥ ವ್ಯಕ್ತಿಯ ರಕ್ತನಾಳದೊಳಗೆ ಜೀವ ಉಳಿಸುವದಕ್ಕಾಗಿ ಅನಂತರದಲ್ಲಿ ಕೊಡಬಹುದು.

ರಕ್ತದ ಅಗಾಧತೆಗಳನ್ನು ರಹಸ್ಯಗಳನ್ನು ವೈದ್ಯಕೀಯ ಸಂಶೋಧನೆಯು ಪ್ರಕಟಿಸುವದಕ್ಕಿಂತ ಎಷ್ಟೋ ಮೊದಲು, ದೇವರು ತಾನೇ ಹೀಗೆ ಘೋಷಿಸಿದ್ದಾನೆ : ''ದೇಹದ ಜೀವವು ರಕ್ತದಲ್ಲಿದೆ.....'' (ಯಾಜಕಕಾಂಡ 17:11). ರಕ್ತವು ಜೀವದ ಸತ್ವವನ್ನು ಒಳಗೊಂಡಿದೆ ಎಂದು ಡಾ ॥ ಪೌಲ ಬ್ರಾಂಡ ಒಪ್ಪಿಕೊಂಡಿದ್ದಾರೆ. ''ಆಪರೇಶನ್ ಕೋಣೆಯ ಎಲೆಕ್ಟ್ರೊನಿಕ್ ವಾತಾವರಣದಲ್ಲಿ, ಪ್ರತಿಯೊಬ್ಬ ಸರ್ಜನ್ ಜೀವದೊಂದಿಗೆ ರಕ್ತವನ್ನು ಗುರುತಿಸುವದನ್ನು ಕಲಿತುಕೊಳ್ಳುತ್ತಾನೆ. ಅವೆರಡೂ ಬೇರೆ ಮಾಡಕ್ಕಾಗದಂಥವುಗಳಾಗಿವೆ : ನೀವು ಒಂದನ್ನು ಕಳೆದುಕೊಂಡರೆ, ನೀವು ಎರಡನ್ನೂ ಕಳೆದುಕೊಳ್ಳುವಿರಿ''.

ಹೀಗಿದ್ದರೂ, ಅನೇಕ ಜನರು '' HIV ರೋಗದಂಥ ರಕ್ತ ಕೆಟ್ಟು ಹೋಗುವುದು ಬಹಿರಂಗಪಡಿಸುವದರ ಮೇಲೆ ಅವಲಂಬಿಸಿ, ಇನ್ನೊಂದು ವಿಶ್ವವ್ಯಾಪಿ ''ರೋಗವು'' ಇರುತ್ತದೆ ಎಂಬುದನ್ನು ತಿಳಿದುಕೊಂಡಿರುವದಿಲ್ಲ. ''ಆತನು ಒಬ್ಬನಿಂದಲೇ ಎಲ್ಲಾ ಜನಾಂಗದವರನ್ನು ಹುಟ್ಟಿಸಿ ಅವರವರು ಇರತಕ್ಕ ಕಾಲಗಳನ್ನು.. ನಿಷ್ಕರಿಸಿದನು''. (ಅ.ಕೃ.17:26) ; ಈ ಮರಣಕರವಾದ

ಕೊಳೆಯುವಿಕೆಯು ಇಡೀ ಮಾನವ ಕುಲಕ್ಕೆ ಪರಿಣಾಮ ಮಾಡಿದೆ: ಬೈಬಲಿನಲ್ಲಿ ಎಲ್ಲಾ ಸಂತತಿಗಳಿಗೆ ಮೂಲನಾದ ಆದಾಮನಿಗೆ ಇದು ಗುರುತಿಸಲ್ಪಟ್ಟಿದೆ.

ಮೊದಲ ಮನುಷ್ಯ, ಆದಾಮನು (1 ಕೊರಿಂಥ 15:45) ಪಾಪ ಮಾಡಿದಾಗ, ಅನಂತರದ ಎಲ್ಲಾ ಸಂತತಿಗಳು, ಚರ್ಮದ ಯಾವದೇ ಬಣ್ಣ, ಯಾವುದೇ ನಿವಾಸ ಸ್ಥಳ ಇಲ್ಲವೇ ಜೀವನದಲ್ಲಿ ಹಂತ ಇರಲಿ, ಅದು ಮರಣ ದಂಡನೆಗೆ ಒಳಗಾಯಿತು. ''...... ಆದಾಮನಲ್ಲಿ ಎಲ್ಲರೂ ಸಾಯುವರು......'' (1 ಕೊರಿಂಥ 15:22) ಎಂದು ಬೈಬಲ್ ಸ್ಪಷ್ಟವಾಗಿ ಹೇಳುತ್ತದೆ. ಹೌದು, AIDS ದೊಂದಿಗೆ ಮರಣವು ಕೆಟ್ಟು ಹೋದ ರಕ್ತದ ಮೂಲಕ ಒಯ್ಯಲ್ಪಡುತ್ತದೆ ; ಹಾಗೆಯೇ ಪಾಪದಿಂದ ಕೆಟ್ಟು ಹೋಗುವಿಕೆಯು ಸಂತತಿ ಯಿಂದ ಸಂತತಿಗೆ ದಾಟಿಸಲ್ಪಟ್ಟಿದೆ. ಇದು ಹಾಗಿರದಿದ್ದರೆ ಜನರು ದೈಹಿಕ ರೋಗ ಮತ್ತು ಮರಣದ ಕೊಳ್ಳದ ಮುಖಾಂತರವಿಲ್ಲದೆ ನೇರವಾಗಿ ಪರಲೋಕಕ್ಕೆ ಹೋಗುತ್ತಿದ್ದರು. ಆದರೆ ಅದು ಹಾಗಿರುವದಿಲ್ಲ.

ದೇವರಿಗೆ ಕೃತಜ್ಞತೆ ಸಲ್ಲಿಸಿರಿ, ಯೇಸುವು ಜನಿಸಿದಾಗ ಮಾನವ ಕುಲದೊಳಗೆ ರಕ್ತದ ಜೀವ ಕೊಡುವ ಹೊಳೆಯು ಪರಿಚಯಿಸಲ್ಪಟ್ಟಿತು. ಹೀಗೆ ಅದು ಸಂಭವಿಸಿತು. ಗಬ್ರಿಯೇಲ ದೂತನು ಮರಿಯಳಿಗೆ, ಆಕೆ ಗರ್ಭಧರಿಸಿ ಒಂದು ಗಂಡುಮಗುವಿಗೆ ಜನ್ಮ ಕೊಡುವಳು ಮತ್ತು ಆತನ ಹೆಸರು ಯೇಸು ಎಂದು ಕರೆಯಲ್ಪಡುವುದು ಎಂದು ಹೇಳಿದನು. ಆಕೆಯ ಭಿನ್ನತೆಯು ಹೇಗೆ ಸಂಭವಿಸುವುದು ಎಂಬುದನ್ನು ಆ ವಿವಾಹವಾಗದಿದ್ದ, ಕನ್ಯಕೆಗೆ ಗಬ್ರಿಯೇಲನು ವಿವರಿಸಿದನು :

''ನಿನ್ನ ಮೇಲೆ ಪವಿತ್ರಾತ್ಮ ಬರುವುದು ; ಪರಾತ್ಮರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವುದು ; ಆದುದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿ ಕೊಳ್ಳುವುದು'' (ಲೂಕ 1:35).

ಪವಿತ್ರಾತ್ಮನಿಂದ ಕನ್ಯಕೆಯು ಗರ್ಭ ಧರಿಸಿದಾಗ ಅದ್ಭುತವು ನಡೆಯಿತು. ಈ ನಾಟಕೀಯ ಘಟನೆಯಲ್ಲಿ ದೇವರ ಜೀವವು ಮಾನವ ಕುಲದೊಳಗೆ ಪರಿಚಯಿ ಸಲ್ಪಟ್ಟಿತು, ಹೀಗೆ ಮರಿಯಳ ಗರ್ಭದಲ್ಲಿ ಮಗು ಬೆಳೆಯಲು

ಪ್ರಾರಂಭವಾಯಿತು. ಆತನ ಅಮೂಲ್ಯ ರಕ್ತವು ಕೆಟ್ಟು ಹೋದದ್ದು ಮಿಶ್ರವಾದದ್ದೂ ಆಗಿರಲಿಲ್ಲ : ಹೌದು ಕರ್ತನಾದ ಯೇಸುವಿನ ರಕ್ತದಲ್ಲಿ ಜೀವವು ತಾನೇ ಇತ್ತು. ★

ಮಾನವ ರಕ್ತವು ಅಗ್ರಾಹ್ಯವಾದ ಸಂಕೀರ್ಣ ಸತ್ವವಾಗಿದೆ. ಇಂದೂ ಸಹ ವೈದ್ಯಕೀಯ ಸಂಶೋಧನೆಯಲ್ಲಿ ಒಳಗೊಂಡವರು ಈ ಅದ್ಭುತಕರವಾದ ದ್ರವದ ಜೀವ ಕೊಡುವ ರಹಸ್ಯಗಳನ್ನು ಹುಡುಕುತ್ತಲಿರುವರೇ. ಸರಳ ಮಾತುಗಳಲ್ಲಿ ಮಾನವ ದೇಹದಲ್ಲಿಯ ರಕ್ತದ ಕೆಲವು ಕಾರ್ಯಗಳನ್ನು ಹೀಗೆ ವಿವರಿಸಬಹುದು : ದೇಹ ಶುದ್ಧೀಕರಿಸುವುದು, ಜೀವ ಒದಗಿಸುವುದು ಮತ್ತು ರೋಗಾಣುಗಳನ್ನು ಹೊರಗೆ ಹಾಕುವುದು. ಇದು ಅದ್ಭುತಕರವಾದದ್ದಾಗಿದ್ದು, ಒಂದೇ ರೀತಿಯಲ್ಲಿರುವ ಅದಾಗ್ಯೂ ಹೆಚ್ಚು ಅದ್ಭುತಕರವಾದ ಉದ್ದೇಶಗಳಿಗಾಗಿ ಇರುವ ರಕ್ತ ನದಿಯನ್ನು ದೇವರು ನಿನಗಾಗಿ ಮತ್ತು ನನಗಾಗಿ ಲಭ್ಯವಾಗಿರುವಂತೆ

---

★ ತನ್ನ ಪುಸ್ತಕ "The Chemistry of the blood" ದಲ್ಲಿ ಎಮ್. ಆರ್. ಡೆಹಾನ, M.D. ಹಲವಾರು ದೈಹಿಕ, ಓಬ್‌ಸ್ಟೆಟ್ರಿಕ್ ಮತ್ತು ನರ್ಸಿಂಗ ಪ್ರಕಟನೆಗಳನ್ನು ಗುರುತಿಸಿದ್ದಾನೆ ಮತ್ತು ತೀರ್ಮಾನಿಸಿದ್ದಾನೆ. ''ಇನೂ ಜನಿಸದ ಶಿಶುವಿಗೆ ತಾಯಿಯು ತನ್ನ ಗರ್ಭದ ರಹಸ್ಯದಲ್ಲಿ ಚಿಕ್ಕ ದೇಹವು ರಚಿಸಲ್ಪಡುವಂತೆ ಪೋಷಕಾಂಶ ಗಳನ್ನು ಒದಗಿಸುತ್ತಾಳೆ, ಆದರೆ ಇಡೀ ರಕ್ತದಲ್ಲಿ ಶಿಶುವು ತಾನೇ ರೂಪಗೊಳ್ಳುತ್ತದೆ. ಗರ್ಭಧಾರಣೆಯ ಸಮಯದಿಂದ ಜನನದ ಸಮಯದ ವರೆಗೆ ತಾಯಿಯಿಂದ ಮಗುವಿಗೆ ಒಂದೇ ಒಂದು ಹನಿ ರಕ್ತವು ದಾಟಿ ಹೋಗುವದಿಲ್ಲ''. ಹೀಗಿದ್ದರೂ ಡೆ ಹಾನನ ದೃಷ್ಟಿಕೋನದ ಮೇಲೆ ವ್ಯಾಖ್ಯಾನಿಸಿ, ಡಾ ॥ ರೊಬರ್ಟ ಈ. ಕೊಲಮ್ಯಾನ ತನ್ನ ಪುಸ್ತಕ "Written in Blood" ದಲ್ಲಿ ಹೀಗೆ ಹೇಳಿದ್ದಾನೆ: ''ಈ ತೀರ್ಪನ್ನು ಕಡೆಗಣಿಸಲು ಪ್ರಯತ್ನಿಸದೇ (Dehaan's view that blood of one human body is formed in the fefus itself by the instruction of the introduction of the male sperm, and therefore has no direct contact with the mother's body), ಇತರ ವೈದ್ಯಕೀಯ ಡಾಕ್ಟರುಗಳು ಅದರ ಮೌಲ್ಯತೆಯನ್ನು ಗಂಭೀರವಾಗಿ ಪ್ರಶ್ನಿಸುವರು ಎಂಬುದು ಕೇವಲ ನ್ಯಾಯ ಎಂದು ನಾನು ಯೋಚಿಸುತ್ತೇನೆ, ದೈಹಿಕ ಸ್ವಭಾವದ ಸ್ಥಿತಿಯನ್ನು ಗಮನಿಸದೇ ಇದೊಂದು ಪ್ರಶ್ನೆಯ ವಿಷಯಾಗಬೇಕಿತ್ತು ಎಂಬುದಕ್ಕೆ ಕಾರಣವನ್ನು ನಾನು ನೋಡುವದಿಲ್ಲ. ಯೇಸುವಿನ ರಕ್ತದ ಮಹತ್ವದ ಬಗ್ಗೆ ಬೈಬಲಿನ ಯೋಚನೆಯು ಯೇಸುವಿನಲ್ಲಿ ಪಾಪದ ಅನುವಂಶಿಕ ರಕ್ತದ ಸಂಚರಣೆಯ ಸಾಧ್ಯತೆಯು ತೆಗೆದು ಹಾಕಲ್ಪಡುತ್ತದೆ.

ಮಾಡಿದ್ದಾನೆಂಬುದನ್ನು ತಿಳಿಯುವುದು ಹೆಚ್ಚು ಅದ್ಭುತಕರವಾದದ್ದಾಗಿದೆ. ''ನಿಜವಾದ'' ಜೀವವನ್ನು ಹುಡುಕುವ ಎಲ್ಲರಿಗಾಗಿ ರಕ್ತವು ಇರುತ್ತದೆ. ಪಾಪಿಗಾಗಿ, ಯೇಸುವಿನ ರಕ್ತವು ಪಾಪದಿಂದ ತೊಳೆಯುವ ದೇವರ ಶುದ್ಧೀಕರಿಸುವಿಕೆಯ ಸಾಧನವಾಗಿದೆ. ಆತ್ಮೀಕವಾಗಿ ಸತ್ತವರಿಗೆ ಆತನ ಅಮೂಲ್ಯ ರಕ್ತವು ದೊಡ್ಡ 'L' ದೊಂದಿಗೆ ಜೀವವನ್ನು ಸುರಿಸುತ್ತದೆ. ಆತ್ಮಿಕವಾಗಿ ಜೀವದಿಂದಿರುವವರಿಗೆ, ಯೇಸುವಿನ ರಕ್ತವು ಸೈತಾನನ ದಾಳಿಗಳಿಂದ ದೇವರ ಕಾಪಾಡುವಿಕೆಯ ಸಾಧನವಾಗಿದೆ. ಈ ಅಮೂಲ್ಯ ರಕ್ತದ ಬಗ್ಗೆ ನಾವು ಹೀಗೆ ಓದುತ್ತೇವೆ: ''ನಿಮ್ಮ ಹಿರಿಯರು ಕಲಿಸಿಕೊಟ್ಟ ವ್ಯರ್ಥವಾದ ನಡವಳಿಕೆಯಿಂದ ನಮಗೆ ಬಿಡುಗಡೆಯಾದದ್ದು ಬೆಳ್ಳಿ ಬಂಗಾರ ಮೊದಲಾದ ನಶಿಸಿಹೋಗುವ ವಸ್ತುಗಳಿಂದಲ್ಲ, ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ ಎಂದು ಬಲ್ಲಿರಲ್ಲವೆ.'' (1 ಪೇತ್ರ 1:18,19).

## ರಕ್ತ : ಅದರ ಶುದ್ಧೀಕರಿಸುವ ಶಕ್ತಿ

ಸ್ವಲ್ಪ ಹಿಂದೆ,, ಆಶೆಬುರುಕ ಸರಕುಸಾಗಣೆ ಕಂಪನಿಯು ಆರೋಗ್ಯಕ್ಕೆ ಅಗತ್ಯವಾದ ಸಂಗತಿಗಳ ಬಗ್ಗೆ ಒಪ್ಪಂದ ಮಾಡಿಕೊಂಡಿತೆಂದು ವಾರ್ತಾ ಮಾಧ್ಯಮವು ವರದಿ ಮಾಡಿತು. ತಮ್ಮ ಲಾಭವನ್ನು ಹೆಚ್ಚಿಸಲು, ಈ ಕಂಪನಿಯು ವಿಷಪೂರಿತ ಉತ್ಪಾದನೆಗಳನ್ನು ಒಂದು ದಿಕ್ಕಿಗೆ ಒಯ್ಯುವುದಕ್ಕೆ ಟ್ಯಾಂಕ ಟ್ರಕ್ಕನ್ನು ಬಳಸಿತು. ಆ ಮೇಲೆ ಅನಧಿಕೃತವಾಗಿ ಅದೇ ಟ್ಯಾಂಕನ್ನು ದ್ರವ ಆಹಾರ ರಸ ಉತ್ಪಾದನೆಯನ್ನು ತರಲು ಮರು ಪ್ರಯಾಣದಲ್ಲಿ ಉಪಯೋಗಿಸಿತು. ಇದರ ಪರಿಣಾಮವಾಗಿ ಅನೇಕ ಜನರು ಕಠಿಣವಾಗಿ ರೋಗದಿಂದ ಬಳಲಬೇಕಾಯಿತು.

ಹೀಗಿದ್ದರೂ, ಮಾನವ ದೇಹದಲ್ಲಿ, ದೇವರು ಅದ್ಭುತಕರವಾದ ಸಾಗಾಣಿಕ ಪದ್ಧತಿಯನ್ನು ಮಾಡಿರುವನು, ಆಹಾರವನ್ನು ಕಣಗಳಿಗೆ ಒಯ್ಯುವುದು ಮತ್ತು ಅದೇ ಸಮಯದಲ್ಲಿ ಕಲ್ಮಷವನ್ನು ಹೊರಗೆ ಹಾಕುವುದು ಮತ್ತು ದೇವರ ಪರಿಪೂರ್ಣ ಸೃಷ್ಟಿಯ ಕಾರಣದಿಂದ, ರಕ್ತನಾಳಗೊಳಗೆ ಅಡ್ಡಗೂಡಿ ಕೆಟ್ಟುಹೋಗುವಂಥದ್ದು ಇರುವದಿಲ್ಲ. ಆಶ್ಚರ್ಯಕರವಾಗಿ, ಮಾನವ

ದೇಹದಲ್ಲಿಯ ಯಾವುದೇ ಕಣವು ಒಂದು ಕೂದಲಿನಷ್ಟು ಅಗಲವಾಗಿರುವದಿಲ್ಲ. ಈ ಕಣಗಳಿಂದ ವಿಷಪೂರಿತ ಉತ್ಪಾದನೆಗಳು ಹೊರಗೆ ಹಾಕಲ್ಪಡದಿದ್ದರೆ, ಅಗತ್ಯವಾಗಿ ಬರುವ ಪರಿಣಾಮವು ರೋಗವಾಗಲೀ ಮರಣವಾಗಲೀ ಆಗುವುದು.

ನಮ್ಮ ಜೀವಗಳಿಂದ ಪಾಪದ ಹೊಲೆಮಾಡುವ ಪ್ರಸನ್ನತೆಯನ್ನು ತೆಗೆದುಹಾಕುವ ಆತನ ವಿಧಾನವನ್ನೇ ದೇವರು ವಿವರಿಸಿದನು. ಅಂಥ ಶುದ್ಧೀಕರಣವು ಯೇಸುವಿನ ಅಮೂಲ್ಯ ರಕ್ತದ ಮುಖಾಂತರ ಇರುವುದು : ''ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ, ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ''. (1 ಯೋಹಾನ 1:7). ಅದಲ್ಲದೆ, ನಮ್ಮ ಪಾಪಗಳು ಕ್ಷಮಿಸಲ್ಪಡುವದಕ್ಕೆ ಬೇರೆ ಮಾರ್ಗವೇ ಇಲ್ಲವೆಂದು ಯೇಸು ಹೇಳಿದನು, ಯಾಕಂದರೆ ರಕ್ತಧಾರೆಯಿಲ್ಲದೇ ಕ್ಷಮಾಪಣೆಯಿರುವದಿಲ್ಲ. (ಇಬ್ರಿಯ 9:22).

## ರಕ್ತ : ಅದರ ಜೀವ-ಕೊಡುವ ಬಲ

ರಕ್ತದ ಇನ್ನೊಂದು ಕಾರ್ಯವು ಜೀವವನ್ನು ಕಾಪಾಡಲು ದೇಹದಲ್ಲೆಲ್ಲಾ ಅಗತ್ಯವಾದ ನೀರನ್ನು ಆಹಾರವನ್ನು ಒಯ್ಯುವುದು. ದೇಹದ ಕಣಗಳನ್ನು ನರಗಳನ್ನು ತಲುಪಲು ರಕ್ತವು ಸೋತು ಹೋದರೆ, ಆ ದೇಹದ ರಚನೆಗಳು ಕೂಡಲೇ ಸತ್ತು ಹೋಗುವವು. ಹೀಗೆ ರಕ್ತ ಚಲನೆಯು ನಿಂತು ಹೋಗುವಾಗ ದೇಹವು ಸತ್ತು ಹೋಗುವುದು. ಜೀವವು ರಕ್ತದಲ್ಲಿಯೇ ಇರುತ್ತದೆ.

ಇದನ್ನು ಅರ್ಥ ಮಾಡಿಕೊಂಡು, ಯೇಸುವು ತನ್ನ ಸ್ವಂತ ರಕ್ತದ ಬಗ್ಗೆ ಮಾತಾಡಿದಾಗ ಆತನ ಶಿಷ್ಯರಿಗೆ ಆಶ್ಚರ್ಯವಾಯಿತು. ಆತನು ಒತ್ತಿಕೊಟ್ಟು ಹೇಳಿದನು:

> ''ನೀವು ಮನುಷ್ಯಕುಮಾರನ ಮಾಂಸವನ್ನು ತಿನ್ನದೆ ಅವನ ರಕ್ತವನ್ನು ಕುಡಿಯದೆ ಹೋದರೆ ನಿಮ್ಮೊಳಗೆ ಜೀವವಿಲ್ಲ ; ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನು ನಿತ್ಯ

ಜೀವವನ್ನು ಹೊಂದಿದ್ದಾನೆ; ಮತ್ತು ನಾನು ಅವನನ್ನು ಕಡೇ ದಿನದಲ್ಲಿ ಎಬ್ಬಿಸುವೆನು. ಯಾಕಂದರೆ ನನ್ನ ಮಾಂಸವೇ ನಿಜವಾದ ಆಹಾರ, ನನ್ನ ರಕ್ತವೇ ನಿಜವಾದ ಪಾನ'' (ಯೋಹಾನ 6:53-55).

ಹಾಗಿದ್ದರೂ, ಯೇಸು ತನ್ನ ನಿಜವಾದ ಅರ್ಥವನ್ನು ಸ್ಪಷ್ಟಪಡಿಸಲು ಮುಂದೆ ಹೋದನು : ''..... ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನು ನನ್ನಲ್ಲಿ ಇರುತ್ತಾನೆ ; ನಾನು ಅವನಲ್ಲಿ ಇರುತ್ತೇನೆ'' (ಯೋಹಾನ 6:56). ಆತ್ಮಿಕ ಜೀವನದ ನಿಜವಾದ ಮೂಲವನ್ನು ಅರ್ಥ ಮಾಡಿಕೊಳ್ಳುವುದು ಎಂಥಾ ಆನಂದದ್ದಾಗಿರುತ್ತದಲ್ಲವೇ! ಯೇಸುವಿನ ರಕ್ತವು ಪಾಪಿಗಳನ್ನು ಅವರ ಪಾಪದಿಂದ ವಿಮೋಚಿಸಲು ಸುರಿಸಲ್ಪಟ್ಟಿತು. ಮತ್ತು ಆತನ ರಕ್ತದ ಸುರಿಸುವಿಕೆಯ ಕಾರಣದಿಂದ ಆತನ ಜೀವನದಲ್ಲಿ ಈಗ ನಾವು ಪಾಲುಗಾರರಾಗುತ್ತೇವೆ. ''ನಾನು ಅವನಲ್ಲಿ'' ಎಂದು ಆತನು ಹೇಳಿದಾಗ ಆತನ ರಕ್ತವನ್ನು ಕುಡಿಯುವದರ ನಿಜವಾದ ಅರ್ಥವನ್ನು ಕರ್ತನಾದ ಯೇಸುವು ವಿವರಿಸಿದನು. ಅದ್ಭುತಕರವಾದದ್ದು !

ಕ್ರಿಸ್ತನ ಆಂತರ್ಯದಲ್ಲಿಯ ಸನ್ನಿಧಿಯ ಪುನರುತ್ಥಾನದ ಬಲವನ್ನು ವೈಯಕ್ತಿಕವಾಗಿ ಅನುಭವಿಸಿದ ವಿಶ್ವಾಸಿಗಳು ಜಯೋತ್ಸವದಿಂದ ಸಾಕ್ಷಿ ಕೊಡುವರು : ''ಉತ್ಥಾನವಾದ ಕ್ರಿಸ್ತನು ಈಗ ನನ್ನಲ್ಲಿ ಜೀವಿಸುವನು'' ಅಂಥ ಜನರಿಗಾಗಿ, ಕರ್ತನ ಭೋಜನ ಆರಾಧನೆಯಲ್ಲಿ ರೊಟ್ಟಿ ಮತ್ತು ದ್ರಾಕ್ಷಾರಸದಲ್ಲಿ ಪಾಲು ತೆಗೆದುಕೊಳ್ಳುವುದು ಕೃತಜ್ಞತೆ ಅರ್ಪಿಸುವ ಮತ್ತು ಸಾಕ್ಷಿಯ ಸರಳವಾದ ಮತ್ತು ಸಾಂಕೇತಿಕ ಕಾರ್ಯವಾಗಿದೆ. ★

ಯೇಸುವಿನ ಅಮೂಲ್ಯವಾದ ರಕ್ತದ ಜೀವಕೊಡುವ ಉತ್ಪತ್ತಿ ಬಲವು,

★ *ಕೆಲವೊಂದು ''ಯೂಖರಿಸ್ಟಗಳಲ್ಲಿ'' ಕೊಡಲ್ಪಡುವ ರೊಟ್ಟಿ ಮತ್ತು ದ್ರಾಕ್ಷಾ ರಸವು ಅಕ್ಷರಶಃವಾಗಿ ಕ್ರಿಸ್ತನ ದೈಹಿಕ ಮಾಂಸ ಮತ್ತು ರಕ್ತವಾಗಿ ಮಾರ್ಪಡಿಸಲ್ಪಡುತ್ತದೆ ಎಂದು ನಂಬಿರುವವರು ಅನೇಕರಿರುವುದು ದುಃಖಕರವಾದ ಸಂಗತಿಯಾಗಿದೆ. ತನ್ನ ಆಂತರ್ಯ ಜೀವನದ ಸಂಕೇತದಂತೆ ತಿಳಿಯಬೇಕೆಂದು ಹೇಳಿದ ನಮ್ಮ ಕರ್ತನ ಉದ್ದೇಶವು ಅಕ್ಷರಶಃವಾದ ದೈಹಿಕವಾದ ಘಟನೆಯೆಂದು ತಿಳಿದು ಕೊಂಡದ್ದು ದುಃಖಕರವಾದದ್ದಾಗಿದೆ.*

ವಿಶ್ವಾಸಿಯು ಮೇಲಿನಿಂದ ಜನಿಸಿದಾಗ ಪವಿತ್ರಾತ್ಮನ ಬಲದಿಂದ ಅದ್ಭುತಕರವಾಗಿ ಅವನ ಜೀವಿತಕ್ಕೆ ಕೊಡಲ್ಪಟ್ಟಿದೆ, ಹೌದು, ಜೀವನಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಯ ಅನ್ವೇಷಣೆಗೆ ಮೂಲವಾಗಿ, ಜೀವ ಕೊಡುವ ''ಬ್ಲಡ್ ಟ್ರಾನ್ಸಫ್ಯೂಜನ್'' ಆಗಿದೆ.

## ರಕ್ತ : ಅದರ ಕಾಪಾಡುವ ಶಕ್ತಿ

ಮಾನವ ರಕ್ತದ ಇನ್ನೊಂದು ಅದ್ಭುತ ಕಾರ್ಯವು ಇದೆ. ರಕ್ತವು ಜೀವ - ಶುದ್ಧಿಕರಿಸುವ ಮತ್ತು ಜೀವ ಕೊಡುವದಾಗಿರುವದಲ್ಲದೇ ಅದು ಜೀವ ಕಾಪಾಡುವಂಥದ್ದು ಆಗಿದೆ.

ಗಡ್ಡೆ ರೋಗದ ಪಿಡುಗು ಭಾರತದಲ್ಲಿ ಗುರುತಿಸಿದಾಗ ಲೋಕದಲ್ಲೆಲ್ಲಾ ಭಯವು ಆವರಿಸಿಕೊಂಡಿತು. ಆ ದೇಶದಲ್ಲಿ ಮೂಲವಾದ ವಿಮಾನಗಳು ಶುದ್ಧಗೊಳಿಸಲ್ಪಟ್ಟವು. ಕೆಲವು ಸಂದರ್ಭಗಳಲ್ಲಿ ವಿಮಾನ ಪ್ರಯಾಣಿಕರು ವೈದ್ಯಕೀಯ ಪರೀಕ್ಷೆಗಾಗಿ ತಾತ್ಕಾಲಿಕವಾಗಿ ಪ್ರತ್ಯೇಕವಾಗಿ ಬಂಧಿಸಿಡಲ್ಪಟ್ಟರು. ಬೇರೆ ದೇಶಗಳಲ್ಲಿ ಈ ರೋಗ ಹಬ್ಬದಂತೆ ಭಾರತದಿಂದ ಹೊರಡುವ ಎಲ್ಲಾ ವಿಮಾನ ಯಾನಗಳ ಮೇಲೆ ಪ್ರತಿಬಂಧಕಗಳು ಹೇರಲ್ಪಟ್ಟವು.

ಗಡ್ಡೇ ರೋಗವು ಭಯ ಪಡಿಸುವಿಕೆಗಳಿಲ್ಲದೆಯೂ ಸಹ ಯಾವಾಗಲೂ ಹೊರಗಿನ ಮತ್ತು ಜೀವಕ್ಕೆ ಭಯಪಡಿಸುವ ಕ್ರಿಮಿಗಳಿಂದ ಮಾನವ ದೇಹಕ್ಕೆ ತೊಂದರೆಯಿರುತ್ತದೆ. ಆದರೆ ರಕ್ತಕ್ಕೆ ಪ್ರತಿಭಟಿಸುವ ಆಶ್ಚರ್ಯಕರವಾದ ಯಾಂತ್ರಿಕತೆ ಇರುತ್ತದೆ. ರೋಗಾಣುಗಳ ದಾಳಿಗೆ ವಿರುದ್ಧವಾಗಿ ಪ್ರತಿರೋಧ ಮಾಡುವ ಇತರ ಸತ್ವಗಳೂ ಜೀವ ಕಾಪಾಡುವ ವಿಷರೋಧಕಗಳೂ ಇರುತ್ತವೆ. ರೋಗಾಣುಗಳ ದಾಳಿಯಾಗುವಾಗ ಬಿಳಿ ರಕ್ತ ಕಣಗಳು ( ಅವು ಪ್ರಾಥಮಿಕವಾಗಿ ಕಾಪಾಡುವ ಉದ್ದೇಶಕ್ಕಾಗಿರುವವು) ನಾಟಕೀಯವಾಗಿ ಸಂಖ್ಯೆಯಲ್ಲಿ ವೃದ್ಧಿಗೊಂಡು ಕಾಪಾಡುವ ಕಾರ್ಯದಲ್ಲಿ ತೊಡಗುವವು.

ಕರ್ತನಾದ ಯೇಸು ಕ್ರಿಸ್ತನ ರಕ್ತವು ಮಾನವ ರಕ್ತದ ಅದ್ಭುತಕರವಾದ ಬಲದಂತೆ ಇದೆ ಹಾಗೂ ಜೀವ - ಕಾಪಾಡುವ ಸೇವೆಯುಳ್ಳದ್ದಾಗಿದೆ ಎಂದು ತಿಳಿಯುವುದು ಎಷ್ಟೋ ಆಶ್ಚರ್ಯಕರವಾದದ್ದಾಗಿರುತ್ತದಲ್ಲವೆ. ಸೈತಾನ ಶಕ್ತಿಗಳ ಸತತ ದಾಳಿಯಿಂದ ವಿಶ್ವಾಸಿಯನ್ನು ಕಾಪಾಡುವುದು ಯೇಸು ಕ್ರಿಸ್ತನ ರಕ್ತವಾಗಿದೆ.

ಅಂತಿಮ ಸಮಯದಲ್ಲಿ ಸೈತಾನನ ಮತ್ತು ದೇವರ ಜನಾಂಗದ ಮಧ್ಯದಲ್ಲಿಯ ಯುದ್ಧದ ಬಗೆಗಿನ ಪ್ರವಾದನೆ ಯಲ್ಲಿ, ನಾವು ಹೀಗೆ ಓದುತ್ತೇವೆ : ''ಅವರು ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂದೆಗೆಯದೆ ಯಜ್ಞದ ಕುರಿಯಾದಾತನ ರಕ್ತದ ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು ಜಯಿಸಿದರು'' (ಪ್ರಕಟನೆ 12:11). ಯೇಸುವಿನ ಅಮೂಲ್ಯ ರಕ್ತದ ಕಾಪಾಡುವ ಬಲದಿಂದ ಸೈತಾನನ ದುಷ್ಟ ಕಾರ್ಯಗಳನ್ನು ನೀವು ಜಯಿಸಬಹುದು.

ಸೈತಾನನ ಮೇಲಿನ ಯೇಸುವಿನ ಈ ಜಯವು ಸೈತಾನನು ಆದಾಮ ಹವ್ವರನ್ನು ಭ್ರಷ್ಟಗೊಳಿಸಿದ ಕೂಡಲೇ ಪ್ರವಾದಿಸಲ್ಪಟ್ಟಿತು. ಅವನ ನಾಶನಕ್ಕೆ ಸ್ತ್ರೀ ಸಂತಾನವು ಕಾರಣವಾಗುವದೆಂದು ಕರ್ತನಾದ ದೇವರು ವಾಗ್ದಾನ ಮಾಡಿದನು ''ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು, ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವುದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ.'' (ಆದಿಕಾಂಡ 3:15). ಸ್ತ್ರೀಯ ಸಂತಾನವು ಸೈತಾನನ ತಲೆಯನ್ನು ಜಜ್ಜುವುದು ಆದರೆ ಸರ್ಪವು ಮೆಸ್ಸೀಯನ ಹಿಮ್ಮಡಿಯನ್ನು ಕಚ್ಚುವ ಮೊದಲು ಅಲ್ಲ. ಹೌದು, ಸ್ತ್ರೀ ಸಂತಾನವಾದ, ತನ್ನ ಅಮೂಲ್ಯವಾದ ರಕ್ತವನ್ನು ಸುರಿಸಿದ ಕರ್ತನಾದ ಯೇಸು ಕ್ರಿಸ್ತನು ತಾನೇ ಆಗಿದ್ದನು :

''ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಸೈತಾನನನ್ನು ಅಡಗಿಸಿ ಬಿಡುವವನಾಗಿದ್ದನು'' (ಇಬ್ರಿಯ 2:14).

ಪ್ಯಾರಿಸಿನGare St. Lazare ನಿಲ್ದಾಣದಲ್ಲಿ ನಾವು ಸಂದರ್ಶಿಸಿದ ಭ್ರಮೆ ಯನ್ನು ಬೆನ್ನಟ್ಟಿದ ವಿದ್ಯಾರ್ಥಿಗಳಂತಿರದೆ, ಅನೇಕ ಇತರರು ನಿಜ ಜೀವನದ ಮೂಲವನ್ನು ಹುಡುಕಿ ಕಂಡುಕೊಂಡರು.

ಕೆಲಸಮಯದ ಹಿಂದೆ, ಡೊರೊತಿ ಮತ್ತು ನಾನು, ನಿಜವಾದ ಜೀವವನ್ನು ಕಂಡು ಕೊಂಡಿದ್ದೇವೆಂಬ ಭರವಸೆಯುಳ್ಳ ಒಂದು ನೂರು ಉಗಾಂಡರನ್ನು ಸಂದರ್ಶಿಸಿದೆವು. ಕರ್ತನಾದ ಯೇಸು ಕ್ರಿಸ್ತನ ಅಮೂಲ್ಯ ರಕ್ತದಲ್ಲಿ ಅವರು ಹೃದಯ ಶುದ್ಧೀಕರಿಸುವ, ಜೀವ ಕೊಡುವ ಹಾಗೂ ಸೈತಾನನ್ನು ವಿರೋಧಿಸುವ

ಬಲವನ್ನು ಅವರು ಕಂಡು ಕೊಂಡಿದ್ದರು. ಅವರಿಗಾಗಿ, ಹಳೇ ಸಂಗತಿಗಳು ದಾಟಿ ಹೋಗಿದ್ದವು ಮತ್ತು ಪ್ರತಿಯೊಂದು ನೂತನವಾಗಿತ್ತು ಎಂದು ಅವರು ನಿಜವಾಗಿ ಸಾಕ್ಷಿ ಕೊಡಬಲ್ಲವರಾಗಿದ್ದರು.

ಬರಲಿಕ್ಕಿದ್ದ ಗಂಡಾಂತರದ ಬಗ್ಗೆ ಎಚ್ಚರಿಕೆ ಕೊಟ್ಟ ಕೇನ್ಯದಲ್ಲಿಯ ಎಂಬಾಸ್ಸಿ ಅಧಿಕಾರಿಗಳ ಸಲಹೆಗೆ ವಿರುದ್ಧವಾಗಿ ಇದ್ದರೂ ನನ್ನ ಹೆಂಡತಿ ಮತ್ತು ನಾನು ಉಗಾಂಡಕ್ಕೆ ಹೋಗಬೇಕೆಂದು ದೇವರ ಆತ್ಮನಿಂದ ಒತ್ತಾಯಿಸಲ್ಪಟ್ಟೆವು. ಉಗಾಂಡದ ಸಭಾಪಾಲಕರೊಂದಿಗೆ ಮತ್ತು ಅವರ ಪತ್ನಿಯರೊಂದಿಗೆ ನಮ್ಮ ಯೋಜಿತ ಸಮ್ಮೇಳನದ ಸಮಯಗಳನ್ನು ದೇವರು ಯೋಜಿಸಿದ್ದನು. ನಾವು ಅನಂತರ ಕಂಡುಕೊಂಡಂತೆ, ನಮ್ಮ ಮರುಪ್ರಯಾಣದ ಯೋಜನೆಯನ್ನು ಆತನು ಮಾಡಿದ್ದನು. (ಇನ್ನೊಂದು ಮಿಲಿಟರಿ ದಂಗೆಯೇಳುವ ಮೊದಲು ಇದು ಎಂಟೆಬೆಯನ್ನು ಬಿಟ್ಟು ಹೋಗುವ ಕೊನೆಯ ವಿಮಾನವಾಗಿತ್ತು.)

ವಿಮಾನ ನಿಲ್ದಾಣವನ್ನು ತಲುಪಿದ ಕೂಡಲೇ, ಉದ್ವೇಗದ, ಭಯದ ವಾತಾವರಣವನ್ನು ಅನುಭವಿಸಿದೆವು, ಗಲಿಬಿಲಿ ಮತ್ತು ಹೊಲಸು ನಾವು ಎದುರಿಸಿದ್ದು ವಿವರಿಸಲಾಗದದ್ದಾಗಿತ್ತು. ಪ್ರದೇಶದಲ್ಲಿಯ ಕೆಲವೇ ಕಾರುಗಳಲ್ಲಿ ಒಂದು ಕಾರು ವಿಮಾನ ನಿಲ್ದಾಣದಿಂದ ಇನ್ನು ಬಾಂಬ ಸ್ಫೋಟಗಳಿಂದ ತಗ್ಗು ಬಿದ್ದ ರೋಡಿನಲ್ಲಿ ಹೋಗಲು ನಮಗೆ ಕೊಡಲ್ಪಟ್ಟಿತು. ಸ್ವಲ್ಪ ದೂರದ ನಂತರ ಕಠಿಣತೆಯಿಂದ ವರ್ತಿಸುತ್ತಿದ್ದ ನಮ್ಮ ಕಡೆಗೆ ಗನ್‌ಗಳನ್ನು ತೋರಿಸುತ್ತಿದ್ದ ಸೈನಿಕರನ್ನು ಎದುರಿಸಿದೆವು. ಅವರು ಸರಕಾರೀ ಸೈನಿಕರೋ, ಸರಕಾರಿ ವಿರೋಧಿ ಸೈನಿಕರೋ ಇಲ್ಲವೇ ಸಮವಸ್ತ್ರ ಧರಿಸಿದ ನಕಲಿ ಸೈನಿಕರೋ ಎಂಬುದನ್ನು ನಾವು ತಿಳಿದಿರಲಿಲ್ಲ. ನಮ್ಮ ಡ್ರೈವರನನ್ನು ಅವರು ಕೂಡಲೇ ಗುರುತಿಸಿದರು. ಅವನು ಅದರ ಗೋತ್ರದವನಾಗಿದ್ದನು. ಅವರು ನಮಗೆ ತೊಂದರೆ ಕೊಡದೇ, ನಮ್ಮಿಂದ ದೋಚಿಕೊಳ್ಳದೇ ನಾವು ಮುಂದೆ ಹೋಗುವಂತೆ ಬಿಟ್ಟರು.

ನಾವು ತಲುಪಬೇಕಾದ ಸ್ಥಳವನ್ನು ಮುಟ್ಟಿದಾಗ, ನನ್ನ ಪತ್ನಿ ಮತ್ತು ನಾನು, ನಮ್ಮ ಕೂಟದ ಸ್ಥಳವನ್ನು ಕಂಡುಕೊಂಡೆವು, ಭಯತುಂಬಿದ ಸಮಾಜದ ಮಧ್ಯದಲ್ಲಿ ಕತ್ತಲೆಯ, ಹೊಲಸಾದ ಕಟ್ಟಡವದಾಗಿತ್ತು. ಸಭಾ ಪಾಲಕರುಗಳು ಮತ್ತು ಅವರ ಪತ್ನಿಯರು ತಲುಪಿದಾಗ ಬೇಗನೇ ಈ ವಾತಾವರಣವನ್ನು

ಮರೆತುಬಿಟ್ಟೆವು. ನಮ್ಮ ಕರ್ತನು ತಾನೇ ತನ್ನ ಮಹಿಮೆ ಮತ್ತು ತನ್ನ ಸಾನಿಧ್ಯದಿಂದ ತುಂಬಿದ ಅದ್ಭುತವಾದ ಸ್ಥಳ ಅದಾಗಿತ್ತು. ಉಗಾಂಡದಲ್ಲಿಯ ಈ ಕೂಟಗಳಲ್ಲಿ ಜೀವಿಸುವ ದೇವರೊಂದಿಗೆ ನಮ್ಮ ಸಂದರ್ಶನದ ಪರ್ವತದ ಮೇಲಿನ ನಮ್ಮ ಅನುಭವದ ಸ್ಮರಣೆಯು ಶ್ರೇಷ್ಟವಾದದ್ದಾಗಿತ್ತು.

ಪ್ರತಿದಿನ ಎಂಟು ತಾಸುಗಳವರೆಗೆ ಬೆಂಚುಗಳ ಮೇಲೆ ಕುಳಿತುಕೊಂಡು ಸಭಾ ಪಾಲಕರುಗಳು ಅವರ ಪತ್ನಿಯರೂ ಡೊರೊತಿಯ ಮಾತನ್ನು, ನಾನು ಬೈಬಲಿನಿಂದ ಹಂಚಿಕೊಳ್ಳುತ್ತಿದ್ದ ದೇವರ ಸತ್ಯವನ್ನು ಗಮನವಿಟ್ಟು ಕೇಳಿದರು. ನಾನು ಬೋಧಿಸಿದಂತೆ, ನನ್ನ ಪತ್ನಿಯು ಕೇಳುಗರು ಬರೆದುಕೊಳ್ಳಲಿಕ್ಕೆ ಸಹಾಯವಾಗುವಂತೆ ಹಳೇ ಕರಿಹಲಿಗೆಯ ಮೇಲೆ ನನ್ನ ಬೋಧನೆಯ ಮುಖ್ಯಾಂಶಗಳನ್ನು ಬರೆಯುತ್ತಿದ್ದಳು. ಫಕ್ಕನೆ ಬಾಗಿಲ ಬಳಿಯಲ್ಲಿ ಸಪ್ಪಳವಾಯಿತು. ಮದ್ಯಪಾನ ಮಾಡಿದ ಪುರುಷರಲ್ಲಿ ಒಬ್ಬನು ತನ್ನ ರೈಫಲನ್ನು ಹಿಡಿದುಕೊಂಡು ಬಾಗಿಲಲ್ಲಿ ನಿಂತನು. ಅವನ ಜೊತೆಗಾರನು ಡೊರೊತಿಯ ಹೃದಯದ ಕಡೆಗೆ ಗುರಿಯಿಟ್ಟು ತನ್ನ ರೈಫಲಿನೊಂದಿಗೆ ಜನ ಸಮೂಹದ ಮಧ್ಯದಲ್ಲಿ ದೂಡುತ್ತ ಬಂದನು.

''ಈ ಪ್ರಿಯ ಮನುಷ್ಯನು ಯೇಸುವನ್ನು ತಿಳಿದುಕೊಳ್ಳುವಂತೆ ನಾವೆಲ್ಲರೂ ಪ್ರಾರ್ಥನೆ ಮಾಡೋಣ'' ಎಂದು ಡೊರೊತಿ ಹೇಳಿದಳು.

ನನಗೆ ನಿತ್ಯತ್ವದಂತೆ ಕಂಡ, ಕ್ಷಣಗಳ ತರುವಾಯ ನನ್ನ ಅನುವಾದಕನು ಅತ್ಯಾಶ್ಚರ್ಯದಿಂದ ನನ್ನ ಕಡೆಗೆ ತಿರುಗಿಕೊಂಡು, ''ಆ ಕುಡಿದ ಸೈನಿಕ ಹೇಳಿದ್ದನ್ನು ನಾನು ನಂಬಲಾರೆನು - ಅವನು ಇಷ್ಟೇ ಹೇಳಿದನು, ಈ ಮಹಿಳೆಯ ದೇವರನ್ನು ನಾನು ತಿಳಿದುಕೊಳ್ಳಲು ಬಯಸುತ್ತೇನೆ ಎಂದು ಹೇಳಿದನು'' ಎಂದು ತಿಳಿಸಿದನು.

ಅನುವಾದಕನು ಮಾತಾಡುತ್ತಿರುವಂತೆ ನಾನೆಂದೂ ಮರೆಯದ ದೃಶ್ಯವನ್ನು ನೋಡಿದೆನು. ಕಾರಣವು ಏನೇ ಆಗಿದ್ದಿರಬಹುದು ಮಧ್ಯೆ ಪ್ರವೇಶಿಸಿದವನನ್ನು ಮೊಣಕಾಲೂರುವಂತೆ ಮಾಡಿದ್ದು ದೇವದೂತನೋ, ಕುಡಿದ ಸೈನಿಕನಿಗಾಗಿ ಅವನು ದೇವರ ಪವಿತ್ರತೆಯ ಮತ್ತು ಬಲದ ಭಯಾನಕ ಪರಿಣಾಮವಾಗಿತ್ತೋ ಇಲ್ಲವೇ ತನ್ನ ಹೃದಯದ ಆಳವಾದ ಅಗತ್ಯತೆಯನ್ನು

ಬಹಿರಂಗವಾಗಿ ತಗ್ಗಿಸಿಕೊಂಡು ವ್ಯಕ್ತಪಡಿಸಿದ ಸ್ವಯಂ ಕಾರ್ಯವಾಗಿತ್ತೋ ಎಂಬುದು ನನಗೆ ತಿಳಿಯಲಿಲ್ಲ. ಆ ನಿರ್ಧಿಷ್ಟವಾದ ಕ್ಷಣದಲ್ಲಿ ರೈಫಲಿನ ಬ್ಯಾರಲ್ ಮೆಲ್ಲಗೆ ಕೆಳಮುಖವಾಯಿತು ಮತ್ತು ಆಗ ನಾಶಪಡಿಸುವ ಉದ್ದೇಶದ ಆಯುಧವನ್ನು ನೆಲದ ಮೇಲೆ ಎಸೆದು ಸೈನಿಕನು ತನ್ನ ಮೊಣಕಾಲುಗಳನ್ನು ನೆಲದ ಮೇಲೆ ಊರಿದನು.

ಚೆನ್ನಾಗಿ ಯೋಚಿಸಿದ ಕೂಟಗಳ ನಿರ್ದೇಶನಗಳನ್ನು ಕೊಟ್ಟ ತರುವಾಯ ಆದ ಘಟನೆ ಇದಾಗಿರಲಿಲ್ಲ. ಡೊರೊತಿ ಇದನ್ನು ತಿಳಿದಿದ್ದಳು. ''ಈ ಪ್ರಾರ್ಥನೆಯನ್ನು ನನ್ನೊಂದಿಗೆ ಪ್ರಾರ್ಥಿಸು'' ಎಂದು ಆಕೆ ಹೇಳಿದಳು. ಆನಂತರ ಹಂತ ಹಂತವಾಗಿ ಈ ಭಯೆಯುಳ್ಳ ಅಗತ್ಯತೆಯುಳ್ಳ ಪ್ರಾಣವನ್ನು ಶಿಲುಬೆಯ ಅಡಿಗೆ ಪಾಪಿಜನರ ರಕ್ಷಕನ ಕಡೆಗೆ - ಯೇಸುವಿನ ರಕ್ತದ ಮುಖಾಂತರವಾಗಿ ಎಲ್ಲ ನಿಜವಾದ ಜೀವನದ ಮೂಲವನ್ನು ಅವನು ಕಂಡುಕೊಳ್ಳುವದಕ್ಕೆ ನಡಿಸಿದಳು.

ಈ ಅನುಭವವನ್ನು ಈಗ ನಾನು ಯಾಕೆ ಹಂಚಿಕೊಳ್ಳುತ್ತಿದ್ದೇನೆ ? ಆ ಸ್ಮರಣೀಯ ಸಮಯದಲ್ಲಿ ಮುಂದೇನಾಯಿತೆಂಬ ಕಾರಣದಿಂದ ಹೀಗೆ ಮಾಡುತ್ತಿದ್ದೇನೆ.

ಅಲ್ಲಿಯ ನಮ್ಮ ಕೂಟದಲ್ಲಿ, ನಮ್ಮ ಕೂಟದೊಳಗೆ ಅಷ್ಟು ಕಠಿಣವಾಗಿ ಮಧ್ಯೆ ಪ್ರವಶಿಸಿದ ಆ ಮನುಷ್ಯನ ಬಗ್ಗೆ ಭಯಪಡಲು ಹಾಗೂ ಅವನನ್ನು ದ್ವೇಷಿಸಲು ಕೆಲವರಿಗೆ ಕಾರಣಗಳು ಇದ್ದಿರಬಹುದು. ಇತ್ತೀಚೆಗಷ್ಟೇ ನಮ್ಮಲ್ಲಿ ಕೆಲವು ಜನರಿಗೆ ಪ್ರಾಣದ ಬೆದರಿಸುವಿಕೆಯೂ ಕೊಡಲ್ಪಟ್ಟಿತು. ಒಬ್ಬ ಸಭಾಪಾಲಕನನ್ನು ಕೊಲ್ಲುವ ಪ್ರಯತ್ನದಲ್ಲಿ ಒಬ್ಬ ಸೈನಿಕನು ಅವನ ಕೈಬೆರಳುಗಳನ್ನು ಕತ್ತರಿಸಿದ್ದು, ಆ ಸಭಾಪಾಲಕನೂ ಕೂಟದಲ್ಲಿ ಹಾಜರಿದ್ದನು, ಆದರೆ ಅವರು ವೈಯಕ್ತಿಕ ರೀತಿಯಲ್ಲಿ ಕರ್ತನಾದ ಯೇಸುವನ್ನು ತಿಳಿದು ಕೊಂಡು ಆತನನ್ನು ಪ್ರೀತಿಸುತ್ತಿದ್ದರಿಂದ, ಈ ಜನರು ಅವನ ಸುತ್ತಲೂ ಕೂಡಿ ಬಂದು ಅವನನ್ನು ಅಪ್ಪಿಕೊಂಡರು ಹಾಗೂ ಕ್ರಿಸ್ತನಲ್ಲಿ ತಮ್ಮ ಹೊಸ ಸಹೋದರನಿಗಾಗಿ ಪ್ರಾರ್ಥಿಸಿದರು :

ಆಗ, ಯಾವ ವಾದ್ಯಗಳ ಜೊತೆಯಿಲ್ಲದೇ, ಆದರೆ ಮಹಿಮೆಯುಳ್ಳ ಆಫ್ರಿಕನ್ ಸಾಮರಸ್ಯದೊಂದಿಗೆ, ಅವರು ಸಂಗೀತ ಹಾಡಿದರು. ಹಾಡಿದ ಶಬ್ದಗಳ ಮೇಲೆ ಪ್ರತಿಬಿಂಬಿಸುವಾಗ ಇನ್ನೂ ನನ್ನ ಹೃದಯವು ಭಕ್ತಿಯಿಂದ ತುಂಬಿಕೊಳ್ಳುತ್ತದೆ :

ಓ, ಯೇಸುವಿನ ರಕ್ತವೇ,

ಓ, ಯೇಸುವಿನ ರಕ್ತವೇ,

ಓ, ಯೇಸುವಿನ ರಕ್ತವೇ

ಪಾಪದಿಂದ ನನ್ನನ್ನು ಶುದ್ಧೀಕರಿಸುವ ರಕ್ತವೇ.

ಆ ದಿನ ನಮ್ಮ ಜಾಗತಿಕ ನಾಯಕರು ನಮ್ಮ ಕೂಡ ಇದ್ದಿದ್ದರೆ. ನಿಶ್ಚಯವಾಗಿ ಅವರೂ ಸಹ, ಅಂತರಗೋತ್ರದಲ್ಲಿಯ, ಅಂತರ್-ಜಾತಿಯ ಮತ್ತು ಅಂತರ್‌ರಾಷ್ಟ್ರೀಯ ಸಂಘರ್ಷಣೆಗೆ ದೇವರ ಕೇವಲ ಪರಿಹಾರಕ್ಕೆ ಸಾಕ್ಷಿಗಳಾಗಿರುತ್ತಿದ್ದರು :

''ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನು ಉಂಟು ಮಾಡಿ.....'' (ಕೊಲೊಸ್ಸೆ 1:20)..... ''ನೀವು ಹಿಂದಿನ ಕಾಲದಲ್ಲಿ ಅನ್ಯರೂ ದುಷ್ಕೃತ್ಯಗಳನ್ನು ಮಾಡುವವರೂ ಆಗಿದ್ದಿರಿ... ಆತನು... ಸಮಾಧಾನಪಡಸಿ ಕೊಂಡಿದ್ದಾನೆ'' (ಕೊಲೊಸ್ಸೆ 1:21).

ಹೌದು, ದೇವರೊಂದಿಗೆ ಸರಿಯಾದ ಸಂಬಂಧದಲ್ಲಿ ತರಲ್ಪಟ್ಟವರು ಮಾತ್ರವೇ, ''ಆತನ (ಕ್ರಿಸ್ತನ) ರಕ್ತದಿಂದ.... ಆತನ ಮುಖಾಂತರ ಮಾತ್ರವೇ ದೇವರ ರೋಷದಿಂದ ರಕ್ಷಿಸಲ್ಪಡುವರು... ಆ ಮಗನಿರುವ ಜೀವದಿಂದ ರಕ್ಷಣೆಯಾಗುವುದು ಮತ್ತು ನಿಶ್ಚಯ ವಲ್ಲವೇ'' (ರೋಮಾಪುರ 5:9-10).

## ಆಲೋಚಿಸಲು ವಿರಾಮ

1. ನೀನು ನಿಜವಾಗಿಯೂ "life" ನ್ನು ದೊಡ್ಡ ಅಕ್ಷರ "L" ದೊಂದಿಗೆ ಬಯಸುವಿಯೋ ? ''ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು'' (ಯೋಹಾನ 10:10) ಎಂದು ಕರ್ತನಾದ ಯೇಸು ಹೇಳಿದಾಗ ಆತನು ವಿವರಿಸಿದ ಜೀವನ ಇದೇ ಆಗಿರುತ್ತದೆ.
2. ಬೈಬಲಿಗನುಗುಣವಾಗಿ ಮಾನವ ದೇಹದಲ್ಲಿ ಜೀವವು ಎಲ್ಲಿ ಕಂಡು ಬರುತ್ತದೆ. (ಓದಿರಿ ಯಾಜಕಕಾಂಡ 17:11).
3. ಕರ್ತನಾದ ಯೇಸುವಿನ ಅಮೂಲ್ಯ ರಕ್ತದ ನಿತ್ಯವಾದ ಮಹತ್ವವು ಯಾವುದು ?

   ಅದರ ಶುದ್ಧೀಕರಿಸುವ ಬಲದಲ್ಲಿ ನೀನು ನಂಬುವಿಯೋ ?

   ಅದರ ಜೀವ - ಕೊಡುವ ಬಲದಲ್ಲಿ ನೀನು ನಂಬುವಿಯೋ ?

   ಅದರ ಕಾಪಾಡುವ ಬಲದಲ್ಲಿ ನೀನು ನಂಬುವಿಯೋ ?

   ''ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ ; ನನ್ನನ್ನು ನಂಬುವವನು ಸತ್ತರೂ ಬದುಕುವನು ; ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವದಿಲ್ಲ'' (ಯೋಹಾನ 11:25,26) ಎಂದು ಕರ್ತನಾದ ಯೇಸು ಹೇಳಿದನು.

ಒಬ್ಬ ಚಿತ್ರಕಾರನ ಪೇಂಟಿಂಗ, ಒಬ್ಬ ಮಾನವನ ಮುಖದ ಪ್ರಭಾವವು,
ಸೃಷ್ಟಿ ದೃಶ್ಯದ ಭವ್ಯತೆಯು - ನಿಶ್ಚಯವಾಗಿ ಇವುಗಳಲ್ಲಿ ಯಾವುದೂ
ಧ್ವನಿಯಿಂದ ಸಾಕಷ್ಟಾಗಿ ವಿವರಿಸಲ್ಪಡಲಾಗದು. ದೃಷ್ಟಿಯ
ಅಗತ್ಯತೆಯಿರುತ್ತದೆ.

# ಅಧ್ಯಾಯ 9

# ಹೇಗೆ ನಾನು ದೇವರ ಕುಟುಂಬದ ಭಾಗವಾಗಬಹುದು?

1940ರ ಪ್ರಾರಂಭದಲ್ಲಿ, ವೈದ್ಯಕೀಯ ವಿಜ್ಞಾನವು ಕಣ್ಣಿನ ಶಸ್ತ್ರಚಿಕಿತ್ಸೆಯಲ್ಲಿ ಮಹಾಪ್ರಗತಿಯನ್ನುಂಟು ಮಾಡಿತು. ಆಗಲೇ ಸತ್ತು ಹೋದ ಮನುಷ್ಯನ ಆರೋಗ್ಯವಾದ ಕಣ್ಣು ಗುಡ್ಡೆಗಳನ್ನು ಕುರುಡು ವ್ಯಕ್ತಿಯ ಕಣ್ಣುಗಳಲ್ಲಿ ಕಸಿಮಾಡುವ ಸಾಧ್ಯತೆಯು ಈಗ ಬಂದಿರುತ್ತದೆ. ಪ್ರಥಮ ಯಶಸ್ವಿ ಕಣ್ಣು ಗುಡ್ಡೆಯನ್ನು ಕಸಿ ಮಾಡಿದ ಪರಿಣಾಮಕ್ಕೆ ತಾವು ಸಾಕ್ಷಿಯಾದದ್ದರ ಬಗ್ಗೆ ಡಾ॥ ಸ್ಯಾಂಗಸ್ಟರ ನಮಗೆ ಹೇಳಿದರು.

ಸೂರ್ಯೋದಯಕ್ಕಿಂತ ಬಹಳ ಮೊದಲು, ಡಾ॥ ಸ್ಯಾಂಗಸ್ಟರ ಅವರು ಇಬ್ಬರು ಜನರ ಜೊತೆಗೂಡಿ ಇಂಗ್ಲಂಡಿನಲ್ಲಿಯ ಸುಂದರವಾದ ಸರ್ರೆ ಡೌನ್ಸಗೆ ಹೋದರು. ಅವರಲ್ಲಿ ಒಬ್ಬಳು ಕುರುಡಿಯಾಗಿ ಜನಿಸಿದ ಸ್ತ್ರೀಯಾಗಿದ್ದಳು : ಇನ್ನೊಬ್ಬರು ಆಕೆಯ ಕಣ್ಣಿನ ಸರ್ಜನ್ನರು. ಆಕೆಯ ಶಸ್ತ್ರಚಿಕಿತ್ಸೆಯ ನಂತರದ ದಿನಗಳಲ್ಲಿ ಆಕೆಯ ಕಣ್ಣುಗಳನ್ನು ಬೆಳಕಿನಿಂದ ಕಾಪಾಡಲು ಬ್ಯಾಂಡೇಜುಗಳು ಸುತ್ತಲ್ಪಟ್ಟಿದ್ದವು. ಕ್ರಮೇಣವಾಗಿ ಇವು ತೆರೆಯಲ್ಪಟ್ಟವು. ಆಗಲೇ ಬೆಳಕಿಗೆ ಹೊಸ ಭಾವನೆಯು ಆಕೆಯಲ್ಲಿ ಬಂದು ಆಕೆ ಬಹಳ ಉತ್ತೇಜಿತಳಾಗಿದ್ದಳು. ಈಗ ಸೂರ್ಯೋದಯದ ಮೊದಲು, ಎಂದೂ ನೋಡದೇ ಇದ್ದ ಈ ಮಹಿಳೆಯ ಕಣ್ಣುಗಳಿಂದ ಉಳಿದ ಕೊನೆಯ ಬ್ಯಾಂಡೇಜಗಳು ತೆಗೆದು ಹಾಕಲ್ಪಟ್ಟವು.

ಕ್ಷಿತಿಜದಲ್ಲಿ ಮುಂಜಾವಿನ ಸೂರ್ಯನು ಇಣುಕಿದಂತೆ ಆ ದಿನ ಸೂರ್ಯೋದಯವು ಹೆಚ್ಚು ಮಹಿಮೆಯುಳ್ಳದ್ದಾಗಿರದೇ ಇರಬಹುದು.

ನೆರಳುಗಳು ಚಿಕ್ಕವಾದವು, ಪ್ರಾರ್ಥಕಾಲದ ಸೌಂದರ್ಯದ ಹಿನ್ನೆಲೆಯಲ್ಲಿ ಹಸಿರು ಎಲೆಗಳ ನಾಜೂಕಾದ ಅಂದವು ಕಂಡುಬಂದಿತು. ಪಕ್ಷಿಗಳು ಮಂಜಿನ ಹನಿಗಳಿಂದ ತುಂಬಿದ ಹುಲ್ಲು ಹಾಸಿಗೆಯ ಮೇಲೆ ಪ್ರಾಥಃಕಾಲದ ಆಹಾರಕ್ಕಾಗಿ ನೆಗೆಯುತ್ತಿದ್ದವು. ತನ್ನ ಜೀವನದಲ್ಲಿ ಪ್ರಥಮ ಸಲ ನೋಡಬಲ್ಲ ಆ ಮಹಿಳೆಗೆ ಎಲ್ಲಾ ದೃಶ್ಯವು ಆಹ್ಲಾದಕರವಾಗಿ ಕಂಡಿತು, ಆಕೆಯ ಗಲ್ಲಗಳ ಮೇಲೆ ಕಣ್ಣೀರುಗಳು ಹರಿಯುತ್ತಿದ್ದಂತೆ, ''ನೀನು ಅದನ್ನು ನನಗೆ ವಿವರಿಸಲು ಪ್ರಯತ್ನಿಸಿದೆ ಆದರೆ ಅಷ್ಟು ಅದ್ಭುತವಾದ ಯಾವುದನ್ನಾದರೂ ನಾನು ಎಂದೂ ಕಲ್ಪಿಸಲಾರದವಳಾಗಿದ್ದೆನು.'' ಎಂದು ಆಕೆ ಉದ್ಗರಿಸಿದಳು. ಆಗ ಆಕೆ ದೇವರ ಸೃಷ್ಟಿಯ ವೈಭವದ ಮುಂದೆ ಭಕ್ತಿಭಾವದಿಂದ ಮೌನವಾಗಿ ಕುಳಿತುಕೊಂಡಳು.

ಎಂದೂ ನೋಡದಿದ್ದ ಒಬ್ಬ ವ್ಯಕ್ತಿಗೆ ಕೆಂಪು ಬಣ್ಣವನ್ನು ವಿವರಿಸಲು ನೀವು ಹೇಗೆ ಪ್ರಯತ್ನಿಸುವಿರಿ ? ಬೆಳಕಿಗೆ ಎಂದೂ ಪ್ರತಿಕ್ರಿಯೆ ತೋರಿಸದ ಕಣ್ಣುಗಳ ಒಬ್ಬ ವ್ಯಕ್ತಿಗೆ ಸೂರ್ಯಾಸ್ತಮಾನದ ನಾಟಕವನ್ನು ಹೇಗೆ ವಿವರಿಸುವಿರಿ ? ಅದು ನಿಶ್ಚಯವಾಗಿಯೂ ಅಸಾಧ್ಯವಾದದ್ದಾಗಿದೆ. ದೃಷ್ಟಿಯಿಲ್ಲದವನ ಕಿವಿಗಳಿಗೆ ದೃಷ್ಟಿಗೋಚರವಾದ ಸೌಂದರ್ಯದ ಮಾತುಗಳು ಬೀಳುವಾಗ ಅವನಿಗೆ ಯಾವ ಅರ್ಥವೂ ಆಗದೇ ಹೋಗುತ್ತದೆ. ಕಲಾಕಾರನ ಪೇಂಟಿಂಗಿನ ಪರಿಪೂರ್ಣತೆಯು, ಮಾನವನ ಮುಖದ ಪ್ರಭಾವವೂ ಸೃಷ್ಟಿಯ ವೈಭವದ ನೋಟವು - ನಿಶ್ಚಯವಾಗಿ ಇವುಗಳಲ್ಲಿ ಯಾವುದೂ ಸಪ್ಪಳದಿಂದ, ಧ್ವನಿಯಿಂದ ಸಾಕಷ್ಟು ರೀತಿಯಲ್ಲಿ ವಿವರಿಸಲ್ಪಡಲಾರವು. ದೃಷ್ಟಿಯು ಬೇಕಾಗುತ್ತದೆ.

ನಂಬದೇ ಇರುವವನಿಗೆ ಆತ್ಮಿಕ ಸೌಂದರ್ಯವನ್ನು ಹೇಳುವಾಗ ವಿಶ್ವಾಸಿಗೂ ಸಹ ಇದೇ ತೊಂದರೆಯು ಎದುರಾಗುತ್ತದೆ. ಒಂದು ಸಲ, ಲಂಡನ್ನಿನಲ್ಲಿ ಗುಯ್ಯಜ ಹಾಸ್ಪಿಟಲಿನಲ್ಲಿ ತಮ್ಮ ಅಂತಿಮ ಪರೀಕ್ಷೆಗಾಗಿ ಅಧ್ಯಯನ ಮಾಡುತ್ತಿದ್ದ ಒಬ್ಬ ವೈದ್ಯಕೀಯ ವಿದ್ಯಾರ್ಥಿಯೊಂದಿಗೆ ಮಾತನಾಡುತ್ತಿದ್ದಾಗ, ದೇವರ ಪ್ರೀತಿಯ ಅದ್ಭುತವನ್ನು ವಿವರಿಸಲು ಪ್ರಯತ್ನಿಸಿದನು. ''ನಾನು ಅದನ್ನು ಕಾಣುತ್ತೇನೆ'' ಎಂದು ಅವನು ಉತ್ತರ ಕೊಟ್ಟನು. ನಾನು ಅದನ್ನು ಅರ್ಥ ಮಾಡಿಕೊಂಡು ಸಂವಾದವನ್ನು ಇನ್ನು ಸ್ವಲ್ಪ ಮುಂದುವರಿಸಿದೆನು : ''ಇಲ್ಲ, ನಿನ್ನ ಮೇಲೆ ನನಗೆ ಸಂಶಯ ಪಡುವದಿಲ್ಲ, ಯಾಕಂದರೆ ನೀನು ಕತ್ತಲೆ ಕೋಣೆಯಲ್ಲಿ ವಾಸಿಸುತ್ತಿರುವ ಮನುಷ್ಯನಂತೆ ಇರುವಿ. ಅದು ಹೇಗಿರುವುದೆಂದು

ನಾನು ತಿಳಿದಿರುವೆನು : ನಾನೇ ಆತ್ಮಿಕ ಕತ್ತಲೆಯಲ್ಲಿ ಜೀವಿಸಿದ್ದೆನು, ಆದರೆ ಈಗ ನಾನು ದೇವರ ಪ್ರೀತಿಯು ಪ್ರಕಾಶಿಸುವಲ್ಲಿ ನಾನಿದ್ದೇನೆ, ಡೇವಿಡ್ ; ದೇವರ ಪ್ರೀತಿಯನ್ನು ನೀನು ಅರ್ಥಮಾಡಿಕೊಳ್ಳಬೇಕಾಗಿದ್ದರೆ ; ಕತ್ತಲೆಯ ಕೋಣೆಯಿಂದ ಹೊರಗೆ ಆತನ ಬೆಳಕಿನೊಳಗೆ ನೀನು ಬರತಕ್ಕದ್ದು'' ಎಂದು ನಾನು ಹೇಳಿದೆನು. ಆ ದಿನ ಡೇವಿಡ್‌ನು ತನ್ನ ಪಾಪವನ್ನು ಕ್ಷಮಿಸಲು ಮತ್ತು ತನ್ನ ಜೀವಿತದಲ್ಲಿ ಪ್ರವೇಶಿಸಲು ಕರ್ತನಾದ ಯೇಸುವನ್ನು ಬೇಡಿಕೊಳ್ಳಲು ಮೊಣಕಾಲೂರಿದನು. ''ಅದು ಇಷ್ಟು ಅದ್ಭುತಕರವಾದದ್ದಾಗಿರುವುದು ಎಂಬುದನ್ನು ನಾನೆಂದೂ ಯೋಚಿಸಲಿಲ್ಲ'' ಎಂದು ಅವನು ಮೇಲಕ್ಕೆದ್ದು ಹೇಳಿದ್ದನ್ನು ನಾನೆಂದೂ ಮರೆಯಲಾರೆನು.

ದೈಹಿಕ ದೃಷ್ಟಿಯು ದೇವರ ಸೃಷ್ಟಿಯ ಸೌಂದರ್ಯವನ್ನು ಮಾನವ ಅನುಭವಕ್ಕೆ ತಿಳಿಸುವಂತೆ, ಆತ್ಮಿಕ ದೃಷ್ಟಿಯು ದೇವರ ಸನ್ನಿಧಿಯ, ಬಲದ ಮತ್ತು ಮಾನವ ಪ್ರಾಣಕ್ಕೆ ಪ್ರೀತಿಯ ವಾಸ್ತವಿಕತೆಯನ್ನು ಅನುಗ್ರಹಿಸುತ್ತದೆ.

ಕರ್ತನಾದ ಯೇಸುವು ಪರಲೋಕಕ್ಕೆ ಏರಿ ಹೋದ ನಂತರ, ಅಪೊಸ್ತಲ ಯೋಹಾನನ ಮುಖಾಂತರ ಮಾತನಾಡುತ್ತ ಲವೋದಿಕಿಯ ಪಟ್ಟಣದಲ್ಲಿಯ ಜನರ ಆತ್ಮಿಕ ಪರಿಸ್ಥಿತಿಯನ್ನು ಕುರಿತು ಆಶ್ಚರ್ಯಕರವಾದ ಸ್ಥಿತಿಯನ್ನು ಗುರುತಿಸಿ ಹೇಳಿದನು. ಅವರಿಗೆ ಆತನು, ''ನೀನು ನಿನ್ನ ವಿಷಯದಲ್ಲಿ.... ಕುರುಡನು..... ಆಗಿರುವದನ್ನು ತಿಳಿಯದೇ ಇದ್ದೀ'' (ಪ್ರಕಟನೆ 3:17) ಎಂದ ಹೇಳಿದನು. ತನ್ನ ದುಃಖಕರವಾದ ಸ್ಥಿತಿಯನ್ನು ತಿಳಿಯದೇ ಇರುವ ಒಬ್ಬ ಕುರುಡು ವ್ಯಕ್ತಿಯನ್ನು ನೀನು ಕಲ್ಪಿಸಬಹುದೋ ? ಆತ್ಮಿಕ ಕುರುಡು ಸ್ಥಿತಿಯನ್ನು ಕಂಡುಹಿಡಿದ ತರುವಾಯ, ಕರ್ತನಾದ ಯೇಸುವು ಅದಕ್ಕೆ ತನ್ನ ಪರಿಹಾರವನ್ನು ತಿಳಿಸಲು ಮುಂದರಿದನು. ''ಕಣ್ಣು ಕಾಣುವಂತೆ ನಿನ್ನ ಕಣ್ಣುಗಳಿಗೆ ಹಚ್ಚುವದಕ್ಕಾಗಿ ಅಂಜನವನ್ನು'' ಹಚ್ಚಿಕೋ (ಪ್ರಕಟನೆ 3:18). ಅದು ಎಂಥಾ ಮಹತ್ವದ ಪರಿಹಾರ ಸೂಚನೆಯಾಗಿದೆ ! ಆತ್ಮಿಕ ಕುರುಡುತನಕ್ಕೆ ಆತ್ಮಿಕ ಕಣ್ಣುಗಳ ಶಸ್ತ್ರ ಚಿಕಿತ್ಸೆಯು, ಪವಿತ್ರಾತ್ಮನ ಕಾರ್ಯವು ಅಗತ್ಯವಾಗಿದೆ.

ಮೊದಲನೆಯ ಸಲ ನೀನು ಜನಿಸಿದ್ದು, ದೈಹಿಕ ಜನನವಾಗಿತ್ತು. ಆದರೆ ಅದು ನಿನಗೆ ಆತ್ಮಿಕ ದೃಷ್ಟಿಯನ್ನು ಮತ್ತು ತಿಳುವಳಿಕೆಯನ್ನು ಕೊಡಲಿಲ್ಲ. ಆತ್ಮಿಕ ಕತ್ತಲೆಯೊಳಗಿಂದ, ದೇವರ ಮಹಿಮೆಯ ತಿಳುವಳಿಕೆಯ ಬೆಳಕಿನೊಳಗೆ ನೀನು

ನಿನ್ನ ಮಾರ್ಗವನ್ನು ಕಂಡುಕೊಳ್ಳಬೇಕಾದರೆ(2 ಕೊರಿಂಥ4:6), ನೀನು ಎರಡನೆಯ ಸಲ ಜನಿಸುವ ಅಗತ್ಯತೆಯಿದೆ. ಯೇಸುವು ನಿಕೊದೇಮನಿಗೆ ಹೀಗೆ ಹೇಳಿದನು :

> ''ದೇಹದಿಂದ ಹುಟ್ಟಿದ್ದು ದೇಹವೇ ; ಆತ್ಮನಿಂದ ಹುಟ್ಟಿದ್ದು ಆತ್ಮವೇ. ನೀವು ಹೊಸದಾಗಿ ಹುಟ್ಟಬೇಕು ಎಂದು ನಾನು ನಿನಗೆ ಹೇಳಿದ್ದರಿಂದ ಆಶ್ಚರ್ಯಪಡಬೇಡ ! (ಯೋಹಾನ 3:6,7)....... ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು'' (ಯೋಹಾನ 3:3).

## ದೇವರ ರಾಜ್ಯವನ್ನು ನೀನು ನೋಡಬೇಕಾದರೆ, ನೀನೂ ಹೊಸದಾಗಿ ಹುಟ್ಟುವ ಅಗತ್ಯತೆ ಇದೆ.

ಇತರ ಎಲ್ಲಾ ಮಾನವ ಜೀವಿಯಂತೆ ನಿನ್ನ ಜೀವನದಲ್ಲಿ ತುಂಬಲ್ಪಡುವದಕ್ಕಾಗಿ ಕೂಗುತ್ತಿರುವ ದೇವರ ಆಕಾರದ ಬರಿದಾದದ್ದರೊಂದಿಗೆ ನೀನು ಜನಿಸಿರುವಿ. ಈ ಆತ್ಮಿಕ ಬರಿದಾಗಿರುವಿಕೆಯು ಉತ್ಥಾನವಾದ ಕ್ರಿಸ್ತನು ಒಳಗೆ ಬರುವದರಿಂದ ಮತ್ತು ಆಂತರ್ಯ ದಲ್ಲಿ ವಾಸಿಸುವ ಸಾನಿಧ್ಯದಿಂದ ಮಾತ್ರವೇ ತೃಪ್ತಿ ಪಡಿಸಲ್ಪಡುತ್ತದೆ. ನಿಮ್ಮ ರಕ್ಷಕನಂತೆ ನಿಮ್ಮ ಜೀವನದೊಳಗೆ ಆತನನ್ನು ಸ್ವೀಕರಿಸುವಾಗ, ಆತನ ಮರಣದ ಉದ್ದೇಶವೂ ಅಗತ್ಯತೆಯೂ ನಿನ್ನ ಜೀವಿತದಲ್ಲಿ ಫಲಭರಿತವಾಗಲು ತರಲ್ಪಡುವುದು. ನಿನ್ನ ಪಾಪಗಳನ್ನು ಕ್ಷಮಿಸಲು ಮಾತ್ರವೇ ಆತನು ಸಾಯಲಿಲ್ಲ ; ಆದರೆ ನಿನ್ನ ಹೃದಯವು ಆತನು ವಾಸಿಸುವದಕ್ಕೆ ಆತ್ಮಿಕವಾಗಿ ಶುದ್ಧೀಕರಿಸಲ್ಪಟ್ಟ ಸ್ಥಳವಾಗಬೇಕು ಎಂಬುದಕ್ಕಾಗಿ ಆತನು ಸತ್ತನು : ಆತನು ನಿನ್ನ ಹೃದಯದೊಳಗೆ ಬರುವದಕ್ಕಿಂತ ಮೊದಲು ನಿನ್ನ ಪಾಪಗಳು ಕ್ಷಮಿಸಲ್ಪಡುವ ಅಗತ್ಯತೆಯಿದೆ.

ಯುವ ಆಫ್ರಿಕನ್ ವಿಶ್ವಾಸಿಯೊಂದಿಗೆ ಮಾತಾಡುವಾಗ ಕ್ರಿಸ್ತನ ಶುಭವಾರ್ತೆ ಯನ್ನು ತನ್ನ ದೇಶದ ಯುವಜನರೊಂದಿಗೆ ಹಂಚಿಕೊಳ್ಳುವ ಅವನ ಆಳವಾದ ಭಾರವನ್ನು ನಾನು ಅರಿತುಕೊಂಡೆನು. ಅನಂತರದ ವಾರದಲ್ಲಿ ಸುಮಾರು ಇನ್ನೂರು ಜನ ಸಭಾಪಾಲಕರಿಗೆ ಬೈಬಲನ್ನು ಬೋಧಿಸಬೇಕಾಗಿತ್ತು. ನಮ್ಮೊಂದಿಗೆ ಆ ದಿನಗಳಲ್ಲಿ ಬರಬೇಕೆಂದು ಅವನನ್ನು ಆಹ್ವಾನಿಸಿದೆನು. ಸಭಾಪಾಲಕರು ಕೂಡಿ ಬರಬೇಕಾದ ಸ್ಥಳದಿಂದ ನಾನು ಹಲವಾರು ನೂರು ಮೈಲುಗಳ ದೂರದಲ್ಲಿದ್ದರೂ ನಮ್ಮೊಂದಿಗೆ ಸಂದರ್ಶಿಸಲು ಸರಿಯಾಗಿ ಇರದ

ಮಾರ್ಗದ ಮೂಲಕ ಬಸ್ಸಿನಲ್ಲಿ ಬಹಳ ದೂರ ಪ್ರಯಾಣಿಸಬೇಕೆಂದು ಅವನಿಗೆ ಸೂಚಿಸಿದೆನು, ವಿಲಿಯಮ್‌ನು ಆಯಾಸವುಳ್ಳವನಾಗಿ ದಣಿದವನಾಗಿ ಬಂದರೂ ದೇವರ ಬಗ್ಗೆ ಮತ್ತು ಆತನ ವಾಕ್ಯದ ಬಗ್ಗೆ ಹೆಚ್ಚು ಕಲಿಯಲು ಶಕ್ತನಾದದ್ದಕ್ಕಾಗಿ ಬಹಳ ಸಂತೋಷವುಳ್ಳವನಾದನು. ಜನತುಂಬಿದ ಆಫ್ರಿಕನ್ ಬಸ್ಸಿನಲ್ಲಿ ವಿಲಿಯಮ್‌ನು ಸುಮ್ಮನೇ ಒಂದು ಪ್ರಯಾಣ ಮಾಡಿರಲಿಲ್ಲ. ಕಾನ್ಫರನ್ಸಿಗೆ ಬರಲಿಕ್ಕೆ ಬಸ್ ಪ್ರಯಾಣ ಮಾತ್ರವೇ ಸಾಧನವಾಗಿತ್ತು. ಅವನ ನಿಜವಾದ ಉದ್ದೇಶವು ಅವನ ಪ್ರಯಾಣದ ಅಂತ್ಯದಲ್ಲಿ ಕಾದುಕೊಂಡದ್ದು ಆಗಿತ್ತು.

ಅದೇ ರೀತಿಯಲ್ಲಿ, ಕರ್ತನಾದ ಯೇಸುವು, ನಿನ್ನೊಂದಿಗೆ ಅನ್ಯೋನ್ಯತೆಯಿರಲು ಮತ್ತು ನೀನು ಆತನೊಂದಿಗೆ ನಿನಗೆ ನಿನ್ನ ಪಾಪಗಳು ಕ್ಷಮಿಸಲ್ಪಡುವದಕ್ಕೆ ಆತನಿಗೆ ಒಂದು ಮಾರ್ಗ ಒದಗಿಸಬೇಕೆಂಬ ಉದ್ದೇಶದಿಂದ ಅದೊಂದೇ ಮಾರ್ಗವನ್ನು ತಿಳಿದಿದ್ದನು. ನಿನ್ನ ಪಾಪಗಳ ಕ್ಷಮಾಪಣೆಯು ಅತ್ಯಗತ್ಯವಾಗಿದ್ದರೂ ಕ್ರಿಸ್ತನಲ್ಲಿ ನಿನ್ನ ನೂತನ ಜೀವವು ಮತ್ತು ದೇವರೊಂದಿಗೆ ನಿನ್ನ ಅನ್ಯೋನ್ಯತೆಯ ಸಾಮರ್ಥ್ಯವು ಆತನ ಅಂತಿಮ ಅಪೇಕ್ಷೆ ನಿನಗಾಗಿ ಇತ್ತು. ಬೇರೆ ಕಡಿಮೆಯಾದ ಯಾವುದರಿಂದಲಾದರೂ ನೀನು ತೃಪ್ತನಾಗಬಹುದೋ ? ಎಲ್ಲಕ್ಕಿಂತಲೂ ಹೆಚ್ಚಾಗಿ, ಕ್ರಿಸ್ತನೊಂದಿಗೆ ನಿನ್ನ ಈ ಸಂಬಂಧವು ನೀನು ಇದಕ್ಕಾಗಿಯೇ ಸೃಷ್ಟಿಸಲ್ಪಟ್ಟ ಉದ್ದೇಶವಾಗಿದೆ.

ಕ್ರಿಸ್ತನು ನಿನ್ನ ಹೃದಯದಲ್ಲಿ ಜೀವಿಸುವನು ಎಂದು ತಿಳಿಯುವುದು ಇಲ್ಲಿ ಮತ್ತು ಈಗ ನಿತ್ಯ ಜೀವವು ಆಗಲೇ ಪ್ರಾರಂಭವಾಗಿದೆ ಎಂಬುದನ್ನು ತಿಳಿಯುವುದಾಗಿದೆ : ಕ್ರಿಸ್ತನ ಆಂತರ್ಯದಲ್ಲಿ ವಾಸಿಸುವದರ ಪ್ರಸನ್ನತೆಯು ಆತನ ಜೀವಿತವನ್ನು ನಿನ್ನ ಜೀವಿತಕ್ಕೆ ತರುತ್ತದೆ.

> ''ಆ ಸಾಕ್ಷಿಯು ಯಾವುದೆಂದರೆ ದೇವರು ನಮಗೆ ನಿತ್ಯ ಜೀವವನ್ನು ಅನುಗ್ರಹಿಸಿದನು, ಆ ಜೀವವು ಆತನ ಮಗನಲ್ಲಿ ಅದೆ ಎಂಬುದೇ. ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವವುಂಟು ; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ'' (1 ಯೋಹಾನ 5:11-12).

ಹೀಗೆ, ನನ್ನ ಸ್ನೇಹಿತ ಡೇವಿಡ್‌ನು ತನ್ನ ಪಾಪಗಳನ್ನು ಕ್ಷಮಿಸಲು ಮತ್ತು

ತನ್ನ ಜೀವಿತದಲ್ಲಿ ಪ್ರವೇಶಿಸಲು ಕರ್ತನಾದ ಯೇಸುವನ್ನು ಕೇಳಿಕೊಂಡ ನಂತರ, ಅವನು ''ಅದು ಈ ರೀತಿಯಲ್ಲಿ ಅಷ್ಟು ಅದ್ಭುತಕರವಾದದ್ದಾಗಿತ್ತೆಂದು ನಾನೆಂದೂ ಯೋಚಿಸಿರಲಿಲ್ಲ'' ಎಂದು ಉದ್ಗರಿಸುದ್ದು ಆಶ್ಚರ್ಯಕರವಾದದಾಗಿತ್ತಲ್ಲವೇ !

## ಆದರೆ ಹೇಗೆ ?

ಪೇತ್ರನು ಯೇಸುವಿನ ಜೀವನ, ಮರಣ ಮತ್ತು ಪುನರುತ್ಥಾನದ ಬಗ್ಗೆ ಪ್ರಸಂಗಿಸಿದ್ದನ್ನು ಜನರು ಕೇಳಿದಾಗ, ದೇವರು ಅವರಿಗೆ ರಕ್ಷಕನನ್ನು ತಿಳಿಯಲು ಅಪೇಕ್ಷೆಯನ್ನು ಕೊಟ್ಟನು. ಪವಿತ್ರಾತ್ಮನು ನಿನಗಾಗಿ ಆತನು ಮಾಡುತ್ತಿರುವದನ್ನು ಅವರಿಗಾಗಿ ಮಾಡಿದನು. ಯೇಸುವು ಕರ್ತನು ('Kurios' - Yahweh) ಮತ್ತು ದೇವರ ಮೆಸ್ಸೀಯ ಆಗಿದ್ದಾನೆಂದು ಪೇತ್ರನು ಅವರಿಗೆ ಹೇಳುವದನ್ನು ಅವರು ಕೇಳಿಸಿ ಕೊಂಡರು. ಮತ್ತು ಯೇಸುವು ಯಾರಾಗಿದ್ದಾನೆ ಎಂಬುದರ ಈ ಹೊಸ ತಿಳುವಳಿಕೆಯು ಅವರಲ್ಲಿ ಅತ್ಯಾಶ್ಚರ್ಯಕರವಾದ ಭರವಸೆಯ ಭಾವನೆಯನ್ನು ಅವರಿಗೆ ಅವರ ರಕ್ಷಣೆಯ ಅಗತ್ಯತೆಯನ್ನು ಹುಟ್ಟಿಸಿತು. ಕ್ರೂಜಿತನಾದಾತನ ಕಡೆಗೆ- ರಕ್ಷಕನಾದಾತನ ಕಡೆಗೆ ಅವರು ತಾವು ತಿರಸ್ಕರಿಸಿದ್ದನ್ನು, ಇಲ್ಲವೇ ಗಮನಕೊಡದೇ ಇದ್ದದ್ದನ್ನು ಪ್ರತಿಬಿಂಬಿಸಿಕೊಂಡಾಗ, ಅವರು ಹೃದಯದಲ್ಲಿ ಅಲಗು ನೆಟ್ಟಂತವರಾದರು ಮತ್ತು ''ನಾವೇನು ಮಾಡತಕ್ಕದ್ದು ?'' ಎಂದು ಆಸಕ್ತಿಯಿಂದ ಕೇಳಿದರು. (ಅ.ಕೃ. 2:37).

ಅವರಿಗೆ ಪೇತ್ರನ ಮೊದಲನೆಯ ಉತ್ತರವು ಮಾನಸಾಂತರ ಪಡಿರಿ ಎಂಬ ಬೋಧನೆಯಾಗಿತ್ತು. ಮಾನಸಾಂತರವಿಲ್ಲದೇ, ನಂಬಿಕೆಯು ನಿಜವಾದ ನಂಬಿಕೆ ಯಾಗಿರುವದಿಲ್ಲ ; ಅದು ಕೇವಲ ''ಕಪಟವಾಗಿರುತ್ತದೆ'' ಇಲ್ಲವೇ ''ಕಲ್ಪನೆ'' ಆಗಿರುತ್ತದೆ. ರಕ್ಷಿಸುವ ವಿಶ್ವಾಸವು ವಿಶ್ವಾಸದ ಮನೋಭಾವನೆ ಮತ್ತು ಮನೋಭಾವನೆಯ ಎರಡರ ಬದಲಾವಣೆಯನ್ನು ಒಳಗೊಂಡಿರುತ್ತದೆ.

ಸರಳವಾದ ನಂಬಿಕೆಯಲ್ಲಿ ಆತನು ಶಿಲುಬೆಯ ಮೇಲೆ ನಿನಗಾಗಿ ಆತನು ಮರಣ ಪಟ್ಟಾಗ ಏನು ಮಾಡಿದನು ಎಂಬುದನ್ನು ನೀನು ಯೋಚಿಸುವಾಗ, ದೇವರ ಕಡೆಗೆ ಮತ್ತು ಪಾಪದ ಕಡೆಗೆ ನಿನ್ನ ಮನೋಭಾವನೆಯು ನಾಟಕೀಯ ಬದಲಾವಣೆ ಹೊಂದಿರುವುದು. ಆಗ ಮಾತ್ರವೇ ಪವಿತ್ರಾತ್ಮನು ತನ್ನ ಆತ್ಮಿಕ ಕಣ್ಣಿನ

ಶಸ್ತ್ರ ಚಿಕಿತ್ಸೆ ಮಾಡುವನು ಮತ್ತು ನಿನ್ನ ಮನಸ್ಸು ಭಿನ್ನವಾದ ದೃಷ್ಟಿಕೋನದಿಂದ ನೋಡಲು ಪ್ರಾರಂಭಿಸುವುದು. ಮಾನಸಾಂತರ ಪಡುವುದು ಎಂದು ಶಬ್ದದ ಅರ್ಥ ''ಮನಸ್ಸಿನ ಬದಲಾವಣೆ'' ಎಂದಾಗುತ್ತದೆ. ಹೀಗೆ ಯತಾರ್ಥವಾದ ನೂತನ ಜನನದ ಅನುಭವವು ದೇವರನ್ನು ಕುರಿತು ಮತ್ತು ಪಾಪವನ್ನು ಕುರಿತು ಮನಸ್ಸಿನ ಮೂಲವಾದ ಬದಲಾವಣೆಯನ್ನು ಒಳಗೊಂಡಿರುವುದು.

**ದೇವರನ್ನು ಕುರಿತು :** ಮಾನಸಾಂತರವು (ಮನಸ್ಸಿನ ಬದಲಾವಣೆಯು) ದೇವರ ಬಗೆಗಿನ ಪ್ರತಿಯೊಂದು ಸುಳ್ಳು ತತ್ವವನ್ನು ತಿರಸ್ಕರಿಸುತ್ತದೆ. ಆಫ್ರಿಕಾದಲ್ಲಿ ತಮ್ಮ ಹಳೇ ಮಾರ್ಗಗಳ ಎಳೆಯುವಿಕೆಯೊಂದಿಗೆ ಮತ್ತು ಅನ್ಯ ಆಚಾರ ಪದ್ಧತಿಯೊಂದಿಗೆ ಬಲವಾಗಿ ಹೋರಾಡಿ, ಯೇಸುವಿನ ಕಡೆಗೆ ತಿರುಗಿಕೊಂಡ ನಂತರ ತಮ್ಮ ಪುರಾತನವಾದವುಗಳನ್ನು ಸುಟ್ಟು ಹಾಕಿದ ಜನರನ್ನು ನಾನು ನೋಡಿದ್ದೇನೆ. ಬೈಬಲಿನ ದೇವರಿಗೆ ನಿಜವಾಗಿ ಸತ್ಯವಲ್ಲದ ಧಾರ್ಮಿಕ ಮತ್ತು ಸಾಮಾಜಿಕ ಪದ್ಧತಿಗಳಿಂದ ಅವರು ತಿರುಗಿಕೊಂಡಾಗ, ಮಹಾ ಸಾಮಾಜಿಕ ಒತ್ತಡಗಳನ್ನು, ಗಂಡಾಂತರಗಳನ್ನು ಎದುರಿಸಿದ ಸ್ನೇಹಿತರು ನನಗಿದ್ದಾರೆ. ರಕ್ಷಿಸುವ ವಿಶ್ವಾಸವು ಯೇಸುವು ಯಾಹ್ವೆಯಾಗಿದ್ದಾನೆ - ಒಬ್ಬನೇ ರಕ್ಷಕ ದೇವರಾಗಿದ್ದಾನೆ ಎಂಬ ದೃಢ ನಂಬಿಕೆಯಲ್ಲಿ ಬೇರೂರಿರತಕ್ಕದ್ದು.

**ಪಾಪವನ್ನು ಕುರಿತು :** ನಂಬಿಕೆಯಿಂದ, ನೀನು ನಿನ್ನ ರಕ್ಷಣೆಯ ಅನುಭವದಲ್ಲಿ ಪ್ರವೇಶಿಸುವಾಗ, ನೀನು ನಿನ್ನ ಪಾಪಭರಿತತೆಯನ್ನು ದುಃಖ ಮತ್ತು ನಾಚಿಕೆಯಲ್ಲಿ ಗುರುತಿಸಿಕೊಳ್ಳುವಿ. ಪಾಪವನ್ನು ಕುರಿತು ನಿನ್ನ ಮನಸ್ಸಿನ ಬದಲಾವಣೆಯು (ಮಾನಸಾಂತರ), ನೀನು ನಿನ್ನ ಪಾಪವನ್ನು ಇನ್ನು ಮುಂದೆ ಅಲಕ್ಷಿಸುವದಿಲ್ಲ ಎಂದರ್ಥ ಕೊಡುವುದು ; ನೀನು ಇನ್ನೆಂದು ನಿನ್ನ ಪಾಪವನ್ನು ಕ್ಷಮಿಸುವದಿಲ್ಲ ; ನಿನ್ನ ನೀತಿಯು ನಿನ್ನನ್ನು ರಕ್ಷಿಸುವುದು ಎಂದು ಇನ್ನು ಮುಂದೆ ನಿರೀಕ್ಷಿಸುವದಿಲ್ಲ. ಮನುಷ್ಯನ ನೀತಿಯ ಕಾರ್ಯಗಳು ಪವಿತ್ರ ದೇವರ ಮುಂದೆ ಕೊಳೆಯ ಬಟ್ಟೆಯಂತಿರುವವು. (ಯೆಶಾಯ 64:6). ಆದರೆ ಯೇಸುವಿನ ಕಡೆಗೆ ನೀನು ತಿರುಗಿಕೊಳ್ಳುವಾಗ, ಆತನಿಗೆ ಮೆಚ್ಚಿಕೆ ತರದ ನಿನ್ನ ಜೀವನದಲ್ಲಿಯ ಆ ಸಂಗತಿಗಳ ಕಡೆಯಿಂದ ದೂರ ತಿರುಗಿಕೊಳ್ಳಲು ನಿನಗೆ ಅಪೇಕ್ಷೆಯಿರುವುದು.

ಒಬ್ಬ ಅಧಿಕಾರಿಯು ತನ್ನ ಸೈನ್ಯದಿಂದ ರಜೆಯಲ್ಲಿ ಇರುವನೆಂದು ಕಲ್ಪಿಸಿಕೊಳ್ಳಿರಿ. ಒಂದು ದಿನ ಅವನು ಎರಡು ಪತ್ರಗಳನ್ನು ಸ್ವೀಕರಿಸುವನು.

ಒಂದು ಒಬ್ಬ ಸ್ನೇಹಿತನಿಂದ ಮತ್ತು ಇನ್ನೊಂದು ತನ್ನ ಮೇಲಾಧಿಕಾರಿಯಿಂದ. ಮೊದಲನೆಯ ಪತ್ರದಲ್ಲಿ ಅವನ ಸ್ನೇಹಿತನ ಮದುವೆಗೆ ಆಮಂತ್ರಣ ; ಆದರೆ ಇನ್ನೊಂದರಲ್ಲಿ ಕೆಲಸಕ್ಕೆ ಹಾಜರಾಗಲು ತನ್ನ ಮೇಲಾಧಿಕಾರಿಯಿಂದ ಆಜ್ಞಾಪತ್ರ. ಒಂದು ಆಮಂತ್ರಣ ಮತ್ತು ಒಂದು ಆಜ್ಞೆಯ ಮಧ್ಯದಲ್ಲಿ ನಿಶ್ಚಯವಾಗಿ ಭಿನ್ನತೆಯಿದೆ. ಆಮಂತ್ರಣವನ್ನು ದೀನತೆಯಿಂದ ನಿರಾಕರಿಸ ಬಹುದು, ಆದರೆ ಆಜ್ಞೆಗೆ ವಿಧೇಯತೆಯಿಂದ ಇಲ್ಲವೇ ದಂಗೆಯಿಲ್ಲದೆ ಉತ್ತರ ಕೊಡಬಹುದು.

ದೇವರು ನಿನ್ನನ್ನು ಪ್ರೀತಿಸುವದರಿಂದ ಮತ್ತು ಪಾಪವು ನಿನ್ನ ಜೀವಿತವನ್ನು ನಾಶಪಡಿಸುವುದೆಂದು ತಿಳಿದಿರುವದರಿಂದ, ಮಾನಸಾಂತರ ಪಡಲಿಕ್ಕೆ ಆತನು ನಿನ್ನನ್ನು ಆಮಂತ್ರಿಸುವದಿಲ್ಲ ; ನೀನು ಮಾನಸಾಂತರ ಪಡಬೇಕೆಂದು ಆಜ್ಞಾಪಿಸುತ್ತಾನೆ. ಗ್ರೀಸದ ವಿಶ್ವವಿದ್ಯಾಲಯದ ರಾಜ್ಯದಲ್ಲಿ ತತ್ವಜ್ಞಾನಿಗಳಿಗೆ ಮತ್ತು ಅಲ್ಲಿ ಕೇಳುತ್ತಿದ್ದವರಿಗೆ ಪೌಲನು ಸುವಾರ್ತೆ ಹೇಳುವದನ್ನು ಮುಕ್ತಾಯಗೊಳಿಸಿದಾಗ, ''ಈಗಲಾದರೋ ಆತನು ಎಲ್ಲಾ ಕಡೆಗಳಲ್ಲಿರುವ ಜನರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆ ಕೊಡುತ್ತಾನೆ.'' (ಅ.ಕೃ. 17:30) ಎಂದು ಹೇಳಿದನು ಮತ್ತು ''ಎಲ್ಲಾ ಜನರು'' ಎಂಬುದು ನಿನ್ನನ್ನು ಒಳಗೊಂಡಿರುತ್ತದೆ.

ದೇವರ ಬಗ್ಗೆ ನಿಮ್ಮ ತಪ್ಪು ತಿಳುವಳಿಕೆಗಳಿಂದ ನೀವು ಹಿಂದಿರುಗುವಾಗ ಮತ್ತು ಅದರಂತೆಯೇ ನಿಮ್ಮ ವೈಯಕ್ತಿಕ ಪಾಪದಿಂದ ತಿರುಗಿಕೊಳ್ಳುವಾಗ ಮತ್ತು ಹಾಗೆ ಮಾಡುವದರಿಂದ ನಂಬಿಕೆಯಿಂದ ಯೇಸುವಿನ ಕಡೆಗೆ ಆತನನ್ನು ನಿನ್ನ ರಕ್ಷಕ ದೇವರಂತೆ ತಿರುಗಿಕೊಳ್ಳುವಾಗ ಅದ್ಭುತವಾಗುವುದು, ಪವಿತ್ರಾತ್ಮನು ನಿನ್ನ ಹೃದಯದಲ್ಲಿ, ದೇವರ ದೃಷ್ಟಿಯಲ್ಲಿ ಸರಿಯಾದದ್ದನ್ನು ಉದ್ದೇಶಿಸುವದನ್ನು ಕಾರ್ಯ ನಡಿಸುವದನ್ನು ಮಾಡುವನು. (ಫಿಲಿಪ್ಪಿ 2:13). ಹೀಗೆ, ನಿಜವಾಗಿ ಮಾನಸಾಂತರ ಪಡುವವರಿಗೆ ದೇವರ ಚಿತ್ತವನ್ನು ಮಾಡುವದಕ್ಕೆ ಅಪೇಕ್ಷೆಯನ್ನು, ಬಲವನ್ನು ವಾಗ್ದಾನ ಮಾಡುತ್ತಾನೆ. ಆಗ ಮಾತ್ರವೇ ನಿನ್ನ ಜೀವಿತವು ಮಾರ್ಪಾಟವಾಗುವದು ಮತ್ತು ದೇವರು ನೇಮಿಸಿದ ಸಾಮರ್ಥ್ಯವನ್ನು ತಲುಪುವುದು.

ಒಬ್ಬ ಸ್ನೇಹಿತನಂತೆ, ತಡಮಾಡದೇ ಕರ್ತನಾದ ಯೇಸು ಕ್ರಿಸ್ತನನ್ನು ಸ್ವೀಕರಿಸ ಬೇಕೆಂದು ನಿಮ್ಮನ್ನು ಒತ್ತಾಯ ಪಡಿಸುತ್ತೇನೆ. ಪ್ರಾರ್ಥನೆಯಲ್ಲಿ ದೇವರ

ಮುಂದೆ ತಲೆ ಬಾಗಿಸುವ ಮೌನ ಸ್ಥಳವನ್ನು ಕಂಡುಕೋ. ಒಂದು ವೇಳೆ ನೀನು ಗಿಣಿಪಾಠದಂತೆ ಶಬ್ದ ಗಳನ್ನು ಪುನಃ ಪುನಃ ಹೇಳಿದರೆ, ಅವು ನಿನಗಾಗಿ ಏನನ್ನೂ ಮಾಡುವದಿಲ್ಲ. ''ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ ;ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ'' (ಯೋಹಾನ 16:6) ಎಂದು ಹೇಳಿದ ಯೇಸುವಿಗೆ ನೀನು ಉತ್ತರ ಕೊಡುವುದು ಮಹತ್ವದ ಸಂಗತಿಯಾಗಿದೆ.

ಈಗ ನೀನು ನಿನ್ನ ಕಣ್ಣುಗಳನ್ನು ಮುಚ್ಚಿಕೊಂಡು ನಿನ್ನ ಹೃದಯದಿಂದ ಸ್ವಯಂಪ್ರೇರಿತ ಉತ್ತರವನ್ನು ಪ್ರಾರ್ಥಿಸಬಹುದು ಇಲ್ಲವೇ ಈ ಕೆಳಗಿನ ಸೂಚಿತ ಪ್ರಾರ್ಥನೆಯು ಸಹಾಯಕವಾದದ್ದನ್ನಾಗಿ ನೀನು ಕಂಡುಕೊಳ್ಳಬಹುದು.

**ನನ್ನ ಪ್ರಾರ್ಥನಾ ಪೂರಕವಾದ ಉತ್ತರ.**

**ದೇವರೇ, ನಾನು ನಿನ್ನನ್ನು ತಿಳಿದಿರುವದಿಲ್ಲ ಮತ್ತು ನಿನ್ನನ್ನು ಪ್ರೀತಿಸಿರುವದಿಲ್ಲ. ಆದರೆ ನೀನು ನನ್ನನ್ನು ತಿಳಿದಿರುವದಕ್ಕಾಗಿಯೂ ನನ್ನನ್ನು ಪ್ರೀತಿಸಿದ್ದಕ್ಕಾಗಿಯೂ ನಿನಗೆ ಉಪಕಾರ ಹೇಳುತ್ತೇನೆ.**

**ನಾನು ಪಾಪಿಯು, ಮತ್ತು ನನ್ನಷ್ಟಕ್ಕೆ ನಾನೇ ನನ್ನ ರಕ್ಷಣೆಯನ್ನು ಸಂಪಾದಿಸಲು ಏನೂ ಮಾಡಲಾರೆನು. ಕರ್ತನಾದ ಯೇಸುವೇ, ಈಗ ನಾನು ನಂಬಿಕೆಯಿಂದ ನಿನ್ನ ಕಡೆಗೆ ತಿರುಗುವೆನು ಮತ್ತು ನನ್ನನ್ನು ಕ್ಷಮಿಸು ಎಂದು ಕೇಳಿಕೊಳ್ಳುವೆನು. ನಾನು ಪಾಪಿ ಎಂದು ಅರಿಕೆ ಮಾಡುವೆನು. ನನ್ನ ಪಾಪಗಳಿಗಾಗಿ ಮಾನಸಾಂತರ ಪಡುವೆನು. ಕರ್ತನಾದ ಯೇಸುವೇ, ನನಗಾಗಿ ಮರಣ ಹೊಂದಿದ್ದಕ್ಕಾಗಿಯೂ, ನನಗೆ ಶುದ್ಧೀಕರಣವನ್ನೂ ನಿನ್ನ ಅಮೂಲ್ಯ ರಕ್ತದ ಜೀವಕೊಡುವ ಬಲವನ್ನು ಕೊಟ್ಟದ್ದಕ್ಕಾಗಿ ನಿನಗೆ ಉಪಕಾರ ಹೇಳುತ್ತೇನೆ. ಈಗ ನಂಬಿಕೆಯಿಂದ ಆ ಅಮೂಲ್ಯ ರಕ್ತದ ಕಾಪಾಡುವಿಕೆಯಲ್ಲಿ ನನ್ನ ಜೀವವನ್ನು ಇಡುತ್ತೇನೆ.**

**ಕರ್ತನಾದ ಯೇಸುವೇ, ದಯವಿಟ್ಟು ನನ್ನ ಹೃದಯದೊಳಗೆ ಬಾ ಮತ್ತು ನನ್ನ ಜೀವಿತವನ್ನು ನಿನ್ನ ನಿಯಂತ್ರಣದಲ್ಲಿ ಇಟ್ಟುಕೋ.**

**ಕರ್ತನಾದ ಯೇಸುವೇ, ನಿನ್ನ ಪವಿತ್ರಾತ್ಮನಿಂದ ನಾನು ಹೊಸದಾಗಿ ಹುಟ್ಟಿದ್ದಕ್ಕಾಗಿ ನಿನಗೆ ಉಪಕಾರ. ನಿನ್ನ ಉತ್ಥಾನವಾದ ಬಲದಿಂದ ನಾನು ದೇವರ**

**ಮಗುವಾಗಿದ್ದೇನೆ ಮತ್ತು ನಿನ್ನೊಂದಿಗೆ ಸದಾಕಾಲ ಜೀವಿಸುತ್ತೇನೆ ಎಂಬುದನ್ನು ತಿಳಿಯುವುದು ನನಗೆ ಅದ್ಭುತಕರವಾದದ್ದಾಗಿದೆ.**

> ''ಆತನಲ್ಲಿ ನಂಬಿಕೆಯಿಡುವವನು..... (ಆತನಲ್ಲಿ ವಿಶ್ವಾಸವಿಡುವವನು ಮತ್ತು ಆತನ ಮೇಲೆ ಅವಲಂಭಿಸುವವನು) ಎಂದಿಗೂ ನಿರಾಸೆ ಹೊಂದುವದಿಲ್ಲ ಇಲ್ಲವೇ ನಾಚಿಕೆಗೆ ಒಳಪಡಿಸಲ್ಪಡುವದಿಲ್ಲ''. (1 ಪೇತ್ರ 2:6).

ಈಗ, ಈಗಾಗಲೇ ನೀನು ಮಾಡಿದ್ದನ್ನು ಯಾರಿಗಾದರೂ ಹೇಳು. ಕ್ರಿಸ್ತನು ನಿನ್ನಲ್ಲಿ ಜೀವಿಸುತ್ತಾನೆ, ಮತ್ತು ಆತನಿಗಾಗಿ ಮಾತಾಡಲು ಮತ್ತು ಜೀವಿಸಲು ಶಕ್ತನಾಗುವಂತೆ ನಿನಗೆ ಅಗತ್ಯವಾಗಿರುವ ಎಲ್ಲಾ ಬಲವು ಆತನೇ ಆಗಿದ್ದಾನೆ ಎಂಬುದನ್ನು ಜ್ಞಾಪಿಸಿಕೋ:

> ''....... ನೀನು ಯೇಸುವನ್ನೇ ಕರ್ತನೆಂದು ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವುದು ಎಂಬುದೇ. ಹೃದಯದಿಂದ ನಂಬುವದರ ಮೂಲಕ ನೀತಿಯು ದೊರಕುತ್ತದೆ. ಬಾಯಿಂದ ಅರಿಕೆ ಮಾಡುವದರ ಮೂಲಕ ರಕ್ಷಣೆಯಾಗುತ್ತದೆ'' (ರೋಮಾಪುರ 10:9-10).



## ಸ್ಲೊವಾಕಿಯಾದಿಂದ ಒಂದು ಪತ್ರ

''ಪ್ರಿಯ ಸ್ನೇಹಿತರೇ, ನನ್ನ ಜೀವನದಲ್ಲಿ ಅತ್ಯಂತ ಮನೋಹರವಾದ ಪುಸ್ತಕವನ್ನು, 'ದೇವರಿಗಾಗಿ ನಿನ್ನ ಅನ್ವೇಷಣೆ' ಯನ್ನು ಈಗ ಓದಿ ಮುಗಿಸಿದೆನು. ನಾನು ಎಂದೆಂದಿಗೂ ಹಾಗೆಯೇ ಇರುವದಿಲ್ಲವೆಂದು ತಿಳಿದಿದ್ದೇನೆ. ಕರ್ತನಾದ ಯೇಸುವು ನನ್ನನ್ನು ಸ್ವೀಕರಿಸಿದನು ಮತ್ತು ಆತನಿಗೆ ನನ್ನ ಜೀವವನ್ನು ಕೊಟ್ಟೆನು. ನನ್ನ ಸ್ನೇಹಿತರಲ್ಲಿ ಪ್ರತಿಯೊಬ್ಬನಿಗೂ ಈ ಆನಂದವು ಇರಬೇಕೆಂದು ನಾನು ಬಯಸುತ್ತೇನೆ. ಇತರರಿಗಾಗಿ ಕೊಡುವದಕ್ಕಾಗಿ ಇನ್ನೆರಡು ಪ್ರತಿಗಳಿಗೆ ನಾನು ಕೇಳಿಕೊಳ್ಳಬಹುದೋ.....

''ನನ್ನ ಜೀವನದಲ್ಲಿ ಸುವಾರ್ತೆಯನ್ನು ಕ್ರಿಸ್ತನಲ್ಲಿ ರಕ್ಷಣೆಯ ವರವನ್ನು ತಂದಿರುವದಕ್ಕಾಗಿ ನಿಮಗೆ ಉಪಕಾರ...... ಅಂಥ ಅತ್ಯುತ್ತಮ ಪುಸ್ತಕ ಲಭ್ಯವಿದೆಯೆಂದು ನಾವೆಂದೂ ತಿಳಿದಿರಲಿಲ್ಲ.''

-Report translated and submitted by J.A.

## ಆಲೋಚಿಸಲು ವಿರಾಮ

1. ಒಂದು ಉದಾರವಾದ ಕಾಣಿಕೆಯನ್ನು ಪಡೆದುಕೊಳ್ಳುವಾಗ ಅದಕ್ಕಾಗಿ ಹೇಗೆ ನಿನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುವಿರಿ ?

   ''ದಯವಿಟ್ಟು ಅದನ್ನು ನನಗೆ ಕೊಡಿರಿ'' ಎಂದು ಹೇಳುವದರಿಂದಲೋ ?

   ''ನಿಮಗೆ ಉಪಕಾರ'' ಎಂದು ಹೇಳುವದರಿಂದಲೋ ?

2. ನೀನು ದೇವರ ಮಗುವಾಗಿರುವಿ ಎಂಬ ಭರವಸೆಯನ್ನು ಕೊಡುವಂಥದ್ದು ನಿಮ್ಮ ಭಾವನೆಯೋ ಇಲ್ಲವೇ ನಿಮ್ಮ ನಂಬಿಕೆಯೋ?

   ''ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ''. (ಎಫೆಸ 2:8).

3. ಕರ್ತನಾದ ಯೇಸುವಿನಲ್ಲಿಯ ನಿಮ್ಮ ನಂಬಿಕೆಯು ಮಾನಸಾಂತರದ ಅಂಶವನ್ನು ಒಳಗೊಂಡಿರುವದೋ? ಉಪಕಾರ ಸ್ಮರಣೆಯ ಅಂಶವನ್ನು ಒಳಗೊಂಡಿರುವುದೋ ?

   ಆತನ ಮೇಲೆ ಸಂಪೂರ್ಣವಾಗಿ ಅವಲಂಭಿಸಿರುವ ಮನೋಭಾವನೆಯನ್ನು ಒಳಕೊಂಡಿರುವುದೋ ?

4. ನಿನ್ನನ್ನು ರಕ್ಷಿಸಿದ್ದಕ್ಕಾಗಿ ಈಗ ನೀನು ದೇವರಿಗೆ ಉಪಕಾರ ಹೇಳುವಿಯೋ ಮತ್ತು ಈತನು ನಿನಗಾಗಿ ಮಾಡಿದ್ದಕ್ಕಾಗಿ ಮಾತ್ರವಲ್ಲದೇ, ಆತನು ಯಾರು ಆಗಿರುವನೋ ಅದಕ್ಕಾಗಿ ಕರ್ತನಾದ ಯೇಸುವನ್ನು ಕೊಂಡಾಡುವಿಯೋ ?

ಯಾವುದೂ - ಯಾವುದೇ ಪರಿಸ್ಥಿತಿಯು, ಯಾವುದೇ ತೊಂದರೆಯು, ಯಾವುದೇ ಪರೀಕ್ಷೆಯು - ನನ್ನ ಮುಖಾಂತರವಾಗಿ ದೇವರನ್ನು ದಾಟಿ ಮತ್ತು ಕ್ರಿಸ್ತನನ್ನು ದಾಟಿ ಹೋಗುವವರೆಗೆ ಮೊದಲು ಎಂದೂ ನನ್ನನ್ನು ಸ್ಪರ್ಶಿಸಲಾರದು. ಅದು ಅಷ್ಟು ದೂರ ಬಂದಿದ್ದರೆ, ಅದು ಒಂದು ದೊಡ್ಡ ಉದ್ದೇಶಕ್ಕಾಗಿ ಬಂದಿರಬಹುದು, ಈಗ ಅದನ್ನು ನಾನು ಅರ್ಥಮಾಡಿಕೊಳ್ಳದೇ ಇರಬಹುದು. ಆದರೆ ನಾನು ದಿಗಿಲುಗೊಳ್ಳುವದನ್ನು ನಿರಾಕರಿಸಿದಾಗ, ಆತನ ಕಡೆಗೆ ನನ್ನ ಕಣ್ಣುಗಳನ್ನೆತ್ತಿ, ನನ್ನ ಸ್ವಂತ ಹೃದಯಕ್ಕೆ ಆಶೀರ್ವಾದದ ಮಹಾ ಉದ್ದೇಶಕ್ಕಾಗಿ ದೇವರ ಸಿಂಹಾಸನದಿಂದ ಬಂದಿರುವಂತೆ ಅದನ್ನು ಸ್ವೀಕರಿಸುವಾಗ, ಯಾವುದೇ ಕಷ್ಟ ನನ್ನನ್ನು ನಿರಾಯುಧನಾಗಿ ಮಾಡುವದಿಲ್ಲ, ಯಾವುದೇ ಸನ್ನಿವೇಶವು ನನ್ನನ್ನು ಭಯಗೊಳಿಸುವದಿಲ್ಲ - ಯಾಕಂದರೆ ನನ್ನ ಕರ್ತನು ನನಗಾಗಿ ಏನಾಗಿರುವನೋ ಅದರ ಆನಂದದಲ್ಲಿ ವಿಶ್ರಾಂತಿ ಪಡೆಯುವೆನು. ಅದು ವಿಶ್ವಾಸದ ಜಯವಾಗಿರುವುದು.

**ಅಲಾನ ರೆಡ್‌ಪಾತ.**

# ಅಧ್ಯಾಯ 10

# ಮುಂದೇನು ?

ರಕ್ಷಣೆಯು ಸಂಪೂರ್ಣವಾಗಿ ಉಚಿತವಾದದ್ದಾಗಿರುತ್ತದೆ ! ಅದನ್ನು ಸಂಪಾದಿಸಿಕೊಳ್ಳಲು ಯಾರೂ ಏನೂ ಮಾಡಲಾರರು. ಕರ್ತನಾದ ಯೇಸುವೇ ಎಲ್ಲವನ್ನು ಮಾಡುತ್ತಾನೆ.

ಸೂಚಿಸಲ್ಪಟ್ಟ ಪ್ರಾರ್ಥನೆಯನ್ನು (ಇಲ್ಲವೇ ಅಂಥದೇ ಪ್ರಾರ್ಥನೆಯನ್ನು) ನೀನು ಯಥಾರ್ಥವಾಗಿ ಪ್ರಾರ್ಥಿಸಿದಂತೆ, ಕ್ರಿಸ್ತನಲ್ಲಿ ನಿನ್ನ ವಿಶ್ವಾಸವು ನಿನ್ನನ್ನು ದೇವರ ನಿಜವಾದ ಮಗುವನ್ನಾಗಿ ಮಾಡಿದೆ.

> ''ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು'' (ಯೋಹಾನ 1:12).

ಬಹುಶಃ ಈಗ ನೀವು ''ಮುಂದೆ ಏನು ?'' ಎಂಬ ಪ್ರಶ್ನೆಯನ್ನು ಕೇಳುತ್ತಿರಬಹುದು.

ಮರಣವನ್ನು ಜಯಿಸಲು ಮತ್ತು ಆಮೇಲೆ ಪರಲೋಕಕ್ಕೆ ಹೋಗುವದಕ್ಕೆ ಯೇಸು ತನ್ನ ನಿಯೋಗದ ಮೇಲೆ ತನ್ನ ಶಿಷ್ಯರನ್ನು ಬಿಟ್ಟು ಹೋಗುವ ಮೊದಲು, ಆತನು, ''ನೀವು ನನ್ನಲ್ಲಿ ನೆಲೆಗೊಂಡಿರಿ. ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು''. (ಯೋಹಾನ 15:4) ಎಂದು ಹೇಳಿದನು. ಆ ಮಾತುಗಳಲ್ಲಿ, ಕರ್ತನಾದ ಯೇಸುವು ಕ್ರೈಸ್ತ ಜೀವಿತದ ತಿರುಳನ್ನು ವಿವರಿಸಿದನು. ದೇವರ ದೃಷ್ಟಿಕೋನದಿಂದ, ವಿಶ್ವಾಸಿಯು ಆತನ ಕುಮಾರನಲ್ಲಿ ನೆಲೆಗೊಳ್ಳುತ್ತಾನೆ - ಅಲ್ಲಿ ಅವನು ಇಡಲ್ಪಡುತ್ತಾನೆ ಮತ್ತು ಪರಲೋಕದಲ್ಲಿ ಸುರಕ್ಷಿತವಾಗಿ

ತಲುಪುವವರೆಗೆ ಕಾಪಾಡಲ್ಪಡುತ್ತಾನೆ. ಹೀಗಿದ್ದರೂ, ಮಾನವ ದೃಷ್ಟಿಕೋನದಿಂದ, ಉತ್ಥಾನವಾದ ಕರ್ತನು ನಿಜವಾದ ವಿಶ್ವಾಸಿಗಳಲ್ಲಿ, ಅವರ ಕುಟುಂಬದಲ್ಲಿ, ಸ್ನೇಹಿತರಲ್ಲಿ ಮತ್ತು ಜೊತೆ ಕೆಲಸದವರಲ್ಲಿಯೂ ಸಹ ನೆಲೆಗೊಳ್ಳುವದ ರಿಂದ, ಅಂತರಂಗದಲ್ಲಿ ವಾಸಿಸುವ ಕ್ರಿಸ್ತನ ಮಾತುಗಳಲ್ಲಿ ಮಾತ್ರವೇ ವಿವರಿಸಲ್ಪಡುವ ಜೀವದ ಗುಣಕ್ಕೆ ಪರಿಚಯಿಸಲ್ಪಡುವುದು.

ನಿಮಗೆ ಸಾಧ್ಯವಾದರೆ, ಲೋಹದ ಸಲಾಕೆಯು ಬೆಂಕಿಯಲ್ಲಿ ಇರುವದನ್ನು ಕಲ್ಪಿಸಿರಿ. ನೀವು ಅದನ್ನು ನೋಡುವಾಗ, ''ಸಲಾಕೆಯು ಬೆಂಕಿಯಲ್ಲಿ ಇರುವುದು'' ಎಂದು ನೀವು ಹೇಳಬಹುದು. ಆದರೆ ಹೆಚ್ಚು ಸಮೀಪದಿಂದ ನೋಡಿದರೆ, ಸಲಾಕೆಯು ತಾನೇ ಕೆಂಪಾಗಿ ಬಿಸಿಯಾಗಿ ಇರುವದನ್ನು ಗಮನಿಸುವಿರಿ. ಆಗ ''ಬೆಂಕಿಯು ಸಲಾಕೆಯಲ್ಲಿ ಇರುವುದು'' ಎಂದು ಹೇಳುವಲ್ಲಿ ಸರಿಯಾಗಿರುವಿರಿ. ಇಲ್ಲವೇ ಅದೇ ರೀತಿಯಲ್ಲಿ ಬಕೆಟ್ ನೀರಿನಲ್ಲಿ ಒಂದು ಲೋಟವು ಹಾಕಲ್ಪಡುವದನ್ನು ಕಲ್ಪಿಸಿಕೊಳ್ಳಿರಿ. ಲೋಟವು ನೀರಿನಲ್ಲಿ ಇದೆ, ಆದರೆ ನೀರೂ ಸಹ ಲೋಟದಲ್ಲಿದೆ!

ನೀನು ಹೊಸದಾಗಿ ಹುಟ್ಟಿದಾಗ, ಪವಿತ್ರಾತ್ಮನು ನಿಜವಾಗಿಯೂ ನಿಮ್ಮನ್ನು ಕ್ರಿಸ್ತನ ದೇಹದಲ್ಲಿ ದೀಕ್ಷಾಸ್ನಾನ ಮಾಡಿಸಿರುತ್ತಾನೆ.

''ನಿನ್ನ ಜೀವವು ದೇವರಲ್ಲಿ ಕ್ರಿಸ್ತನೊಂದಿಗೆ ಮರೆಯಾಗಿ ಇಡಲ್ಪಟ್ಟಿದೆ'' (ಕೊಲೊಸ್ಸೆ 3:3) ಎಂದು ಬೈಬಲ್ ನಿನಗೆ ಭರವಸೆಕೊಡುತ್ತದೆ. ಹೌದು, ಯಾಕಂದರೆ ನೀನು ಹೊಸದಾಗಿ ಹುಟ್ಟಿದ್ದೀ, ಈಗ ನೀನು ಕ್ರಿಸ್ತನಲ್ಲಿದ್ದೀ... ಆಶ್ಚರ್ಯಕರವಾದದ್ದು! ನೀನು ಹೊಸದಾಗಿ ಹುಟ್ಟಿದಾಗ, ಉತ್ಥಾನವಾದ ಕ್ರಿಸ್ತನ ಅಂತರ್ಯದಲ್ಲಿ ವಾಸಿಸುವ ಜೀವವು ಪವಿತ್ರಾತ್ಮನ ಬಲದಿಂದ ವೈಯಕ್ತಿಕವಾದದ್ದಾಗಿಯೂ ಮಹಿಮೆಯುಳ್ಳ ವಾಸ್ತವಿಕತೆಯಾಗಿಯೂ ಮಾಡಲ್ಪಟ್ಟಿರುತ್ತದೆ. ಈಗ ಅದು ಕ್ರಿಸ್ತನು ನಿನ್ನಲ್ಲಿ, ಮಹಿಮೆಯ ನಿರೀಕ್ಷೆಯು ಆಗಿರುವುದೆಂದು ಉಲ್ಲಾಸಿಸು.... (ಕೊಲೊಸ್ಸೆ 1:27) ಮತ್ತು ಹೌದು, ಯಾಕಂದರೆ ನೀನು ಹೊಸದಾಗಿ ಹುಟ್ಟಿರುವಿ, ಉತ್ಥಾನವಾದ ಕ್ರಿಸ್ತನು ನಿನ್ನಲ್ಲಿ ಜೀವಿಸುವನು. ಅದ್ಭುತಕರವಾದದ್ದು !

ಈಗ ನಾನು ಕ್ರಿಸ್ತನಲ್ಲಿದ್ದೇನೆ ಮತ್ತು ಕ್ರಿಸ್ತನು ನನ್ನಲ್ಲಿದ್ದಾನೆ - ಎಂಬ ಎರಡು ಸತ್ಯಗಳ ವಿಮೋಚನಾ ಪರಿಣಾಮದ ಬಗ್ಗೆ ನಿಜವಾಗಿಯೂ ಬೈಬಲ್ ಏನು ಹೇಳುತ್ತದೆ ಎಂಬುದನ್ನು ಯೋಚಿಸೋಣ.

## ನಾನು ಕ್ರಿಸ್ತನಲ್ಲಿ ಇದ್ದೇನೆ.

> ''ನಾವೆಲ್ಲರೂ ಒಂದೇ ದೇಹವಾಗುವದಕ್ಕಾಗಿ ಒಂದೇ ಆತ್ಮನಲ್ಲಿ ದೀಕ್ಷಾ ಸ್ನಾನ ಮಾಡಿಸಿಕೊಂಡೆವು..'' (1 ಕೊರಿಂಥ 12:13).
>
> ''ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರನಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದುದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡೆದುಕೊಳ್ಳಬೇಕು''. (ರೋಮಾಪುರ 6:3,4).
>
> ''ಯಾಕಂದರೆ ನೀವು ಸತ್ತಿರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಟ್ಟಿದೆ'' (ಕೊಲೊಸ್ಸೆ 3:3).

ಹಲವಾರು ವರ್ಷಗಳ ಹಿಂದೆ ರಕ್ತಕ್ಷಯ ರೋಗವಿದ್ದ ಒಬ್ಬ ಚಿಕ್ಕ ಬಾಲಕನನ್ನು ನಾನು ತಿಳದಿದ್ದೆನು. ಆ ಸಮಯದಲ್ಲಿ ಅವನು ಏಳು ವರ್ಷ ಪ್ರಾಯದವನಾಗಿದ್ದನು. ಅವನು ಪ್ರತೀ ಮೂರು ತಿಂಗಳಿಗೊಂದು ಸಲ ಬೆನ್ನು ಹುರಿ ಇಂಜಕ್ಶನ್ನಿಗಾಗಿ ವೈದ್ಯರ ಬಳಿಗೆ ಹೋಗಬೇಕಾಗುತ್ತಿತ್ತು. ಒಂದು ಸಂದರ್ಶನದಲ್ಲಿ ವೈದ್ಯರು ಡೆರಿಲ್ಲನಿಗೆ ಅವನ ಬೆನ್ನು ಹುರಿಯಲ್ಲಿ ಸೂಜಿಯು ಆಳವಾಗಿ ಚುಚ್ಚಲ್ಪಡುವಾಗ ಇತರ ಬಾಲಕ, ಬಾಲಕಿಯರಂತೆ ಯಾಕೆ

ಅಳುವದಿಲ್ಲ ಎಂದು ಪ್ರಶ್ನಿಸಿದರು. ''ಅದು ನಿನಗೆ ನೋವಾಗುವದಿಲ್ಲವೋ?'' ಎಂದು ವೈದ್ಯರು ಕೇಳಿದರು. ''ಹೌದು, ನೋವಾಗುತ್ತದೆ, ಆದರೆ, ಡಾಕ್ಟರರೇ, ಸೂಜಿಯು ನನ್ನನ್ನು ಸ್ಪರ್ಶಿಸುವ ಮೊದಲು ಅದು ಯೇಸುವಿನ ಹಸ್ತದ ಮುಖಾಂತರ ಹೋಗಬೇಕು, ಇದನ್ನು ನೀವು ಅರ್ಥ ಮಾಡಿಕೊಳ್ಳಲಾರಿರಿ'' ಎಂದು ಡೆರ್ರಿಲ್ ಉತ್ತರ ಕೊಟ್ಟನು. ಈಗ ನೀನು ಕ್ರಿಸ್ತನಲ್ಲಿ ಇರುವದರಿಂದ, ನಿನ್ನ ಜೀವಿತವನ್ನು ಪರೀಕ್ಷಿಸುವ ಮತ್ತು ಸ್ಪರ್ಶಿಸುವ ಪ್ರತಿಯೊಂದನ್ನು ನಿರ್ವಹಿಸಲು ಆತನು ಶಕ್ತನಾಗಿದ್ದಾನೆಂಬುದನ್ನು ತಿಳಿಯುವುದು ಆಶ್ಚರ್ಯಕರವಾದದ್ದಾಗಿದೆ. ಅದು ನಂಬಿಕೆ!

ಕರ್ತನಾದ ಯೇಸುವನ್ನು ನಂಬಿಕೆಯಿಂದ ಸ್ವೀಕರಿಸಿದಂತೆಯೇ, ವಿಶ್ವಾಸದ ಅದೇ ತತ್ವವು ಜೀವನದ ಪ್ರತಿಯೊಂದು ಬೇಡಿಕೆಯನ್ನು ಪೂರೈಸಲು ಕರ್ತನಾದ ಯೇಸು ಕ್ರಿಸ್ತನ ಸಂತೃಪ್ತಿಯನ್ನು ಹೊಂದಿಕೊಳ್ಳಲು ಶಕ್ತರನ್ನಾಗಿ ಮಾಡುವುದು. ನಿಮ್ಮ ಪ್ರಾರಂಭದ ವಿಶ್ವಾಸದ ಕೃತ್ಯವು ವಿಶ್ವಾಸದ ಸತತವಾದ ಮನೋಭಾವನೆಯನ್ನು ಅನ್ವಯಿಸಿಕೊಳ್ಳಲು ಬಾಗಿಲನ್ನು ತೆರೆದಿರುವುದು. ಆದುದರಿಂದ ಕರ್ತನಾದ ಕ್ರಿಸ್ತ ಯೇಸುವನ್ನು ನೀವು ಸ್ವೀಕರಿಸಿದಂತೆಯೇ, ಆತನಲ್ಲಿ ನಡೆಯಿರಿ. (ಕೊಲೊಸ್ಸೆ 2:6).

ನೀನು ಹೊಸದಾಗಿ ಹುಟ್ಟಿದ್ದರೂ. ಯೇಸುವಿನ ಜೀವಿತವನ್ನು ಕೇವಲ ಅನುಕರಣೆ ಮಾಡಬೇಕೆಂದು ದೇವರು ನಿರೀಕ್ಷಿಸುವದಿಲ್ಲ. ಮಿಲಿಯಗಟ್ಟಲೆ ಕ್ರೈಸ್ತರು ಇದನ್ನು ಮಾಡಲು ಪ್ರಯತ್ನಿಸಿ, ಯಾವಾಗಲೂ ಯಶಸ್ಸು ಹೊಂದದೇ ಸಂಪೂರ್ಣವಾಗಿ ನಿರಾಶೆಹೊಂದಿದ್ದಾರೆ. ಆದರೆ ದೇವರು ನಮ್ಮ ಕ್ರೈಸ್ತ ಜೀವಿತದೊಳಗೆ ತನ್ನ ಅದ್ಭುತಕರವಾದ ಸಂಗತಿಗಳ ಬಗ್ಗೆ ನಮಗೆ ಹೇಳುತ್ತಾನೆ. ನಾವು ಆಗಲೇ ಕ್ರಿಸ್ತನಲ್ಲಿ ಮರಣ ಹೊಂದಿದ್ದೇವೆ ಮತ್ತು ಕ್ರಿಸ್ತನಲ್ಲಿ ಸತ್ತವರಾಗಿ, ಧರ್ಮಶಾಸ್ತ್ರದ ಎಲ್ಲಾ ಬೇಡಿಕೆಗಳಿಗೂ ಖಂಡನೆಗಳಿಗೂ ಸತ್ತವರಾಗಿದ್ದೇವೆ. ಆದುದರಿಂದ, ಹಿಂದಿನಂತೆಯೇ ಈಗ ಮತ್ತು ಭವಿಷ್ಯದಲ್ಲಿ ಸ್ವಯಂಪ್ರಯತ್ನವು ಧರ್ಮಶಾಸ್ತ್ರದ ಬೇಡಿಕೆಗಳನ್ನು ಪೂರೈಸುವೆವು ಎಂಬ ನಿರೀಕ್ಷೆಗೆ ಸತ್ತವರಾಗಿದ್ದೇವೆ. ಹೌದು, ಆತ್ಮಿಕ ಜೀವಿತ ಜೀವಿಸುವದಕ್ಕೆ ನಮ್ಮಲ್ಲಿ ಭರವಸೆಯ ಪ್ರತಿಯೊಂದು ಗುರುತಿಗೂ ಸತ್ತವರಾಗಿದ್ದೇವೆ. ಆದರೆ, ದೇವರನ್ನು

ಕೊಂಡಾಡಿರಿ, ಉತ್ಥಾನವಾದ ಕರ್ತನಾದ ಯೇಸು ಕ್ರಿಸ್ತನ ಕಾಪಾಡುವ ಬಲಪಡಿಸುವಿಕೆಯಲ್ಲಿ ನಾವು ಮಹಿಮೆಯುಳ್ಳವರಾಗಿ ಜೀವಿತರಾಗಿದ್ದೇವೆ.

ಜೀವನದ ಶೋಧನೆಗಳನ್ನೂ ಒತ್ತಡಗಳನ್ನೂ ನಮ್ಮಷ್ಟಕ್ಕೆ ನಾವೇ ಪರಿಹರಿಸಿಕೊಳ್ಳಲು ಪ್ರಯತ್ನಿಸುವಾಗ ಸಮಸ್ಯೆಯು ಉದ್ಭವವಾಗುತ್ತದೆ. ಹೊಸ ವಿಶ್ವಾಸಿಯು ತನ್ನಷ್ಟಕ್ಕೆ ತಾನೇ ಇರುವುದಾದರೆ, ಮೊದಲಿನ ಹಾಗೆಯೇ ತನ್ನ ನೂತನ ಜನನದ ನಂತರವೂ ಕ್ರಿಸ್ತಿಯ ಜೀವಿತ ಜೀವಿಸಲು ಶಕ್ತಿಯಿಲ್ಲದಿರುವದನ್ನು ಕಂಡುಕೊಳ್ಳುತ್ತಾನೆ. ಈ ಪ್ರವೃತ್ತಿಯ ಬಗ್ಗೆ ನಮ್ಮನ್ನು ಎಚ್ಚರಿಸಿ ಕರ್ತನಾದ ಯೇಸು ಕ್ರಿಸ್ತನು, ''.....ನೀವು ನನ್ನನ್ನು ಬಿಟ್ಟು ಏನು ಮಾಡಲಾರಿರಿ'' (ಯೋಹಾನ 15:5). ಎಂದು ಸ್ಪಷ್ಟವಾಗಿ ಹೇಳಿದ್ದಾನೆ.

ಸ್ವಪ್ರಯತ್ನದ ಹುಚ್ಚುತನವನ್ನು ಉದ್ದೇಶಿಸಿ ಅಪೊಸ್ತಲ ಪೌಲನು ಗಲಾತ್ಯ ಸೀಮೆಯಲ್ಲಿಯ ವಿಶ್ವಾಸಿಗಳಿಗೆ ಕಠಿಣವಾದ ಮಾತುಗಳನ್ನು ಹೇಳಿದನು. ನಂಬಿಕೆ ಯಿಂದ, ಕೇವಲ ನಂಬಿಕೆಯಿಂದ ಜೀವಿಸುವ, ದೇವರ ತತ್ವದಿಂದ ದೂರ ಹೋಗಿರುವ ಅವರನ್ನು ಸರಿಪಡಿಸಲು ಪೌಲನು ಸ್ವಯಂ ಪುರಾವೆಯಾದ ಅರ್ಥಕ್ಕೆ ನಡಿಸುವಂತೆ ರೂಪಿಸಿದ ಪ್ರಶ್ನೆಯನ್ನು ಕೇಳಿದನು :

> ''ಒಂದು ಸಂಗತಿಯನ್ನು ಮಾತ್ರ ನಿಮ್ಮಿಂದ ತಿಳಿದುಕೊಳ್ಳ ಬೇಕೆಂದಿದ್ದೇನೆ. ನೀವು ದೇವರಾತ್ಮನನ್ನು ಹೊಂದಿದ್ದು ನೇಮನಿಷ್ಠೆ ಗಳನ್ನು ಅನುಸರಿಸಿದ್ದರಿಂದಲೋ ? ಕೇಳಿನಂಬಿದ್ದರಿಂದಲೋ ? ಇಷ್ಟು ಬುದ್ಧಿಯಿಲ್ಲದವರಾಗಿದ್ದೀರಾ ? ದೇವರಾತ್ಮಾನುಸಾರವಾಗಿ ಪ್ರಾರಂಭಿಸಿ ಈಗ ಬಹಿರಾಚಾರಗಳಿಂದ ಸಿದ್ಧಿಗೆ ಬರಬೇಕೆಂದಿದ್ದಿರಾ ?'' (ಗಲಾತ್ಯ 3:2-3).

ನೀನು ಮಾಡಿದ ಹಾಗೆಯೇ ನಂಬಿಕೆಯ ಕಾರ್ಯದಿಂದ ಅವರು ಕ್ರಿಸ್ತನಲ್ಲಿ ತಮ್ಮ ನೂತನ ಜೀವಿತ ಪ್ರಾರಂಭಿಸಿದ್ದರು. ಒಬ್ಬಾತನ ಅಂದರೆ ಯೇಸು ಕ್ರಿಸ್ತನ ಮುಖಾಂತರ ಜೀವದಲ್ಲಿ ಆಳಲು, ಅವರು ನಿರೀಕ್ಷಿಸುವಂತೆ ಅದೇ ನಂಬಿಕೆಯಲ್ಲಿ ಅವಲಂಭಿಸ ಬೇಕಾಗಿತ್ತು (ರೋಮಾಪುರ 5:17).

ಗಲಾತ್ಯದಲ್ಲಿ, ಅವಲಂಭಿತ ವಿಶ್ವಾಸದ ಬಲವು ಕಾನೂನಿಗೆ ಸಂಭವಿಸಿದ ಸ್ವಪ್ರಯತ್ನದ ಬರಿದಾಗಿರುವಿಕೆಯಿಂದ ಬದಲಾಯಿಸಲ್ಪಟ್ಟಿತು. ಆದರೆ ದೇವರಿಗೆ ಉಪಕಾರ ಹೇಳಿರಿ, ನೀವು ಹೊಸದಾಗಿ ಕಂಡುಕೊಂಡ ಕರ್ತನ ಮೇಲೆ ಅವಲಂಭಿಸಿ ಜೀವಿಸುವದನ್ನು ಮುಂದುವರಿಸಿದರೆ, ಗಲಾತ್ಯದಲ್ಲಿ ಅಸ್ತಿತ್ವದಲ್ಲಿದ್ದ ದುಃಖದ ಪರಿಸ್ಥಿತಿಯು ಎಂದಿಗೂ ನಿಮ್ಮ ಅನುಭವವಾಗಿರುವದಿಲ್ಲ.

**ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ.**

> ''ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ...... (ಗಲಾತ್ಯ 2:20).
>
> ''ಆದರೆ **ಕ್ರಿಸ್ತನು ನಿಮ್ಮಲ್ಲಿದ್ದರೆ** ದೇಹವು ಪಾಪದ ದೆಸೆಯಿಂದ ಸತ್ತದ್ದಾಗಿದ್ದರೂ ಆತ್ಮವು ನೀತಿಯ ದೆಸೆಯಿಂದ ಜೀವಸ್ವರೂಪವಾಗಿದೆ. ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ ವಾಸವಾಗಿದ್ದರೆ ಕ್ರಿಸ್ತ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನು ನಿಮ್ಮಲ್ಲಿ ವಾಸವಾಗಿರುವ ತನ್ನ ಆತ್ಮನ ಮೂಲಕ ನಿಮ್ಮ ಮರ್ತ್ಯ ದೇಹಗಳನ್ನು ಸಹ ಬದುಕಿಸುವನು'' (ರೋಮಾಪುರ 8:10-11).
>
> ''ಈ ಮರ್ಮದ ಮಹಿಮಾತಿಶಯವು ಎಷ್ಟೆಂಬುದನ್ನು ದೇವರು ತನ್ನ ಜನರಿಗೆ ತಿಳಿಸಲಿಕ್ಕೆ ಮನಸ್ಸು ಮಾಡಿಕೊಂಡನು. ಈ ಮರ್ಮವು ಏನಂದರೆ ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವುದೇ'' (ಕೊಲೊಸ್ಸೆ 1:27).
>
> ''ಕ್ರಿಸ್ತನು ನಿಮ್ಮ ನಂಬಿಕೆಯ ಮೂಲಕ ನಿಮ್ಮ ಹೃದಯಗಳಲ್ಲಿ ವಾಸ ಮಾಡುವ ಹಾಗೆಯೂ....'' (ಎಫೆಸ 3:17).

ಹೀಗೆ ಹೇಳುತ್ತ, ನೀನು ಕ್ರಿಸ್ತನು ಆಂತರ್ಯದಲ್ಲಿ ಜೀವಿಸುವದರ ಮೇಲೆ ನಿನ್ನ ಅವಲಂಭಿತ ವಿಶ್ವಾಸವನ್ನು ನೀನು ವ್ಯಕ್ತಪಡಿಸಬಹುದು : ''ಕರ್ತನಾದ

ಯೇಸುವೇ, ನಿನಗೆ ಉಪಕಾರ; ನಾನು ಆಗಿರದ ಪ್ರತಿಯೊಂದು ನೀನಾಗಿರುವಿ. ನನ್ನಲ್ಲಿ ಮತ್ತು ನಿನ್ನ ಮುಖಾಂತರ ನೀನು ಏನಾಗಿರವಿಯೋ ಅದಾಗಲು ಬಿಡುತ್ತೇನೆ.'' ನಿನ್ನ ಕ್ರೈಸ್ತ ಜೀವಿತದ ಆಶ್ಚರ್ಯಕರವಾದ ವಾಸ್ತವಿಕತೆಯು ನಿನ್ನ ಯಶಸ್ಸಿಗಾಗಿ ಜವಾಬ್ದಾರಿಕೆಯನ್ನು ಬೇರೊಬ್ಬರ ಮೇಲೆ ಅಂದರೆ ಕರ್ತನಾದ ಯೇಸುಕ್ರಿಸ್ತನಿಗೆ ದೇವರು ವರ್ಗಾಯಿಸಿದ್ದಾನೆ. ನೀನು ನಿಶ್ಚಯವಾಗಿ ಎದುರಿಸುವ ಜೀವನದ ಶೋಧನೆಗಳನ್ನು ಅವಕಾಶಗಳನ್ನು ಪರಿಹರಿಸಿ ಸಹಾಯ ಮಾಡಲು ಯೇಸು ಮಾತ್ರವೇ ಶಕ್ತನಾಗಿದ್ದಾನೆ. ಕ್ರಿಸ್ತನಿಲ್ಲದೇ ನೀನು ಒಬ್ಬ ''ದೈವಜ್ಞಾನ ಶಾಸ್ತ್ರಿ'' ಆಗಲು ಸಾಧ್ಯವಿದೆ, ಕ್ರಿಸ್ತನಿಲ್ಲದೇ ನೀನು ಒಬ್ಬ ''ಮಿಶನರಿ'' ಆಗಲು ಸಾಧ್ಯವಿದೆ ; ಆದರೆ ಕ್ರಿಸ್ತನು ನಿನ್ನ ಹೃದಯದಲ್ಲಿ ಜೀವಿಸದಿದ್ದರೆ ನೀನು ಕ್ರೈಸ್ತನಾಗಿರುವುದು ಅಸಾಧ್ಯವಾದದ್ದಾಗಿರುತ್ತದೆ.

ಯೇಸುವು ಕ್ರೈಸ್ತ ಜೀವಿತವನ್ನು ನಿಜವಾಗಿಯೂ ಜೀವಿಸುವ ಏಕೈಕ ವ್ಯಕ್ತಿಯಾಗಿದ್ದಾನೆ. ಈಗ, ತನ್ನ ಆತ್ಮನಿಂದ ಆತನು ಅದ್ಭುತಕರವಾಗಿ ನಿನ್ನ ಹೃದಯದಲ್ಲಿ ತನ್ನ ವಾಸಸ್ಥಾನವನ್ನು ತೆಗೆದುಕೊಂಡಿದ್ದಾನೆ. ನಿನ್ನಷ್ಟಕ್ಕೆ ನೀನೇ ಎಂದೂ ಮಾಡದಿರು ವಂಥದ್ದನ್ನು ಈಗ ಆತನು ನಿನ್ನ ಮುಖಾಂತರ ಮತ್ತು ನಿನಗಾಗಿ ಮಾಡಬಲ್ಲನು. ಶುದ್ಧನಾಗಿರುವ ಆತನು ಅನೈತಿಕತೆಯ ಜಗತ್ತಿನಲ್ಲಿ ನಿನ್ನ ಶುದ್ಧತೆಯಾಗಿದ್ದಾನೆ; ಜಯಶಾಲಿಯಾದ ಆತನು ಶೋಧನೆಯ ಜಗತ್ತಿನಲ್ಲಿ ನಿನ್ನ ಜಯವಾಗಿದ್ದಾನೆ; ಪ್ರೀತಿ ಆಗಿರುವಾತನು ಸ್ವಾರ್ಥ ಸಾಧನೆಯ ಜಗತ್ತಿನಲ್ಲಿ ನಿನ್ನ ಪ್ರೀತಿಯಾಗಿದ್ದಾನೆ. ಪುನರುತ್ಥಾನವು ಜೀವವೂ ಆದಾತನು ಈಗ ನಿನ್ನ ಸ್ವಂತ ಕ್ರೈಸ್ತ ಜೀವನವಾಗಿದ್ದಾನೆ.

ನೀನು ದೀನತೆಯಿಂದ ನಿನ್ನ ಜೀವಿತವನ್ನು ಕರ್ತನಾದ ಯೇಸುವಿಗೆ ಲಭ್ಯವಿರು ವಂತೆ ಮಾಡಿದರೆ, ತಪ್ಪಿ ಹೋದವರನ್ನು ಹುಡುಕಿ ರಕ್ಷಿಸಲು ಬಂದ ಆತನಿಗೆ (ಲೂಕ 19:10), ಸಮರ್ಪಿಸಿಕೊಂಡರೆ, ಈಗ ನೀನು ಸಹ ನಿನ್ನ ಮುಖಾಂತರವಾಗಿ ತಪ್ಪಿ ಹೋದವರನ್ನು ಹುಡುಕಿ ರಕ್ಷಿಸಲು ಆತನನ್ನು ನಂಬಬಹುದು ! ವಿಶ್ವಾಸಿಗಳು ಇತರ ಜನರಿಗೆ ಆತನ ಜೀವನದ ಸಾಧನಗಳಾಗಿರುವರೆಂಬುದನ್ನು ಕಂಡುಕೊಳ್ಳುವಾಗ ಜೀವನವು ನಿಜವಾಗಿಯೂ ಉತ್ತೇಜಿತಗೊಳ್ಳುವುದು.

ಜ್ಞಾಪಕದಲ್ಲಿಟ್ಟುಕೋ - ಯೇಸುವು ಪರಲೋಕಕ್ಕೆ ಹಿಂದಿರುಗಿ ಹೋಗಿದ್ದರೂ ಆತನು ತನ್ನನ್ನು ನಿನ್ನಂದ ಬೇರೆಯಾಗಿ ಮಾಡಿಕೊಂಡಿರುವದಿಲ್ಲ. ಭೂಲೋಕದಲ್ಲಿ ಆತನು ತನ್ನ ಶಿಷ್ಯರನ್ನು ಬಿಟ್ಟು ಹೋಗುವಾಗ, ಆತನು ಅವರಿಗೆ ಹೀಗೆ ಹೇಳಿದನು :

> ''ಇನ್ನು ಸ್ವಲ್ಪ ಕಾಲವಾದ ಮೇಲೆ ಲೋಕವು ನನ್ನನ್ನು ನೋಡುವದಿಲ್ಲ, ಆದರೆ ನೀವು ನನ್ನನ್ನು ನೋಡುವಿರಿ; ನಾನು ಬದುಕುವದರಿಂದ ನೀವೂ ಬದುಕುವಿರಿ. **ನಾನು ನನ್ನ ತಂದೆಯಲ್ಲಿಯೂ ನೀವು ನನ್ನಲ್ಲಿಯೂ ನಾನು ನಿಮ್ಮಲ್ಲಿಯೂ ಇರುವದನ್ನು** ನೀವು ಆ ದಿನದಲ್ಲಿ ತಿಳಿದುಕೊಳ್ಳುವಿರಿ'' (ಯೋಹಾನ 14:19-20).

''ಕ್ರಿಸ್ತನಲ್ಲಿ ದೇವರು ನನಗೆ ಕೊಟ್ಟ ಎಲ್ಲಾ ಮೂಲಗಳು ನನ್ನ ಜೀವನದಲ್ಲಿ ಹೇಗೆ ನಿಜವಾದವುಗಳೂ ಕಾರ್ಯಗತವಾದವುಗಳೂ ಆಗಬಹುದು ?'' ಎಂದು ನೀನು ಈಗ ಕೇಳಬಹುದು. ಅದು ಒಂದು ಉತ್ತಮವಾದ ಪ್ರಶ್ನೆ. ಅದು ಮಾನಸಿಕವಾದ ನಂಬಿಕೆಯ ಮತ್ತು ಅನುಭವಿಸುವ ನಂಬಿಕೆಯ ಮಧ್ಯದಲ್ಲಿ ದೊಡ್ಡ ಬಿರುಕನ್ನು ಗುರುತಿಸುತ್ತದೆ. ಕಾರ್ಯ ಮಾಡುವ ವಿಶ್ವಾಸಕ್ಕಾಗಿ ನಿಮ್ಮ ಆಳವಾದ ಅಪೇಕ್ಷೆಯನ್ನು ಆ ಪ್ರಶ್ನೆಯು ಅನ್ವಯಿಸುತ್ತದೆ. ಕ್ರಿಸ್ತನ ಜಯಭರಿತ ಜೀವವು ವಿಶ್ವಾಸಿಯ ಮುಖಾಂತರ ಕೃತಜ್ಞತಾ ಸ್ತುತಿಗೆ ಉತ್ತರವಾಗಿ ಬಿಡುಗಡೆಯಾಗುವುದು ಎಂಬುದು ಸರಳವಾದ ಉತ್ತರವಾಗಿದೆ. ನಿಜವಾದ ವಿಶ್ವಾಸವು, ''ನಿನಗೆ ಉಪಕಾರ'' ಎಂದು ಯಾವಾಗಲೂ ಹೇಳುತ್ತದೆ.

ಉದಾಹರಣೆಯಾಗಿ, ಕ್ರಿಸ್ತನಲ್ಲಿ ನಿನ್ನನ್ನು ರಕ್ಷಿಸುವ ನಂಬಿಕೆಯನ್ನು ನೀವು ವ್ಯಕ್ತಪಡಿಸಬಹುದಾದ ಬಹಳ ಉತ್ತಮವಾದ ಮಾರ್ಗವು ನಿನ್ನ ಪಾಪಗಳು ಕ್ಷಮಿಸಲ್ಪಟ್ಟದ್ದಕ್ಕಾಗಿ ಆತನಿಗೆ ಉಪಕಾರ ಹೇಳುವುದು. ಈಗ, ನಿನಗೆ ಅಗತ್ಯವಾದಾಗ, ನಿನಗೆ ಅಗತ್ಯವು ಏನಾಗಿರುವುದೋ ಅದೇ ಆತನು ಆಗುವ ಸಂಗತಿಗಾಗಿ ಆತನಿಗೆ ಉಪಕಾರ ಹೇಳು. ನಂಬಿಕೆಯಿಲ್ಲದೇ ದೇವರನ್ನು ಮೆಚ್ಚಿಸುವುದು ಅಸಾಧ್ಯವಾಗಿದೆ (ಇಬ್ರಿಯ 11:6). ಆತನನ್ನು ಮೆಚ್ಚಿಸಲು ನೀನು

ಅಪೇಕ್ಷಿಸುವಂತೆ, ಎಲ್ಲಾ ಸಂಗತಿಗಳಲ್ಲಿ ಆತನ ಸಂಪೂರ್ಣತೆಗಾಗಿ ಕರ್ತನಾದ ಯೇಸುವಿಗೆ ಸತತವಾದ ಕೃತಜ್ಞತೆಯೊಂದಿಗೆ ನಿಮ್ಮ ನಂಬಿಕೆಯ ಜೀವ ಜೀವಿಸಿರಿ.

ಕರ್ತನಾದ ಯೇಸು ಕ್ರಿಸ್ತನಿಗೆ ತಮ್ಮ ನಿಷ್ಠೆಯ ಕಾರಣದಿಂದ ಹಿಂಸೆಯನ್ನು ಅನುಭವಿಸುತ್ತಿದ್ದ ಕ್ರೈಸ್ತರಿಗೆ ಪೇತ್ರನು ಬರೆದಾಗ, ಹೀಗೆ ಆದರಿಸಿದನು : ''ಕ್ರಿಸ್ತನನ್ನು ಕರ್ತನೆಂದು ನಿಮ್ಮ ಹೃದಯಗಳಲ್ಲಿ ಪ್ರತಿಷ್ಠೆ ಪಡಿಸಿರಿ (ಪ್ರತ್ಯೇಕವಾಗಿ ಇರ್ರಿ ; ಮಹಿಮೆ ಪಡಿಸಿರಿ ; ಆತನಿಗೆ ಪೂರ್ಣ ಆಳಿಕೆ ಕೊಡು) (1 ಪೇತ್ರ 3:15). ನಿಮ್ಮ ವಿಶ್ವಾಸಕ್ಕಾಗಿ ಹಿಂಸೆಯನ್ನು ಎದುರಿಸುತ್ತಿರುವಾಗ ಹೇಗೆ ಸಹಿಸಿಕೊಳ್ಳುವ ದೇವರ ಬಹಿರಂಗ ರಹಸ್ಯವು ಅಲ್ಲಿರುವದು. ಯೇಸುವು ನಿನ್ನ ಜೀವದ ಕರ್ತನಾಗಿರುವನು ಎಂಬುದನ್ನು ನಿಶ್ಚಿತಪಡಿಸಿಕೊಳ್ಳಿ.

ಹಳೇ ಒಡಂಬಡಿಕೆಯಲ್ಲಿ ದೇವರ ಹೆಸರುಗಳಲ್ಲಿ ಒಂದು ಅದೊನಾಯ್ ಎಂಬುದನ್ನು ನೆನಪು ಮಾಡಿಕೋ. ಅದೊನಾಯ್ ಅಂದರೆ ಆತನು ನನ್ನ ಯಜಮಾನ ನಾಗಿರುವನೆಂಬ ಅರ್ಥದಲ್ಲಿ ಕರ್ತನು ಎಂದು ಅರ್ಥವಾಗುತ್ತದೆ. ನನ್ನ ಯಜಮಾನ ನಂತೆ ಕರ್ತನಾದ ದೇವರ ಈ ತತ್ವವನ್ನು, ''ಕ್ರಿಸ್ತನನ್ನು ಕರ್ತನೆಂದು ನಿಮ್ಮ ಹೃದಯ ಗಳಲ್ಲಿ ಪ್ರತಿಷ್ಠೆ ಪಡಿಸಿರಿ'' ಎಂದು ಹೇಳುವದರಿಂದ ವಿಶ್ವಾಸಿಗಳನ್ನು ಆದರಿಸಿದಾಗ ಪೇತ್ರನು ಉಪಯೋಗಿಸಿದನು.

ಕರ್ತನಾದ ಯೇಸುವು ನಿನ್ನ ಜೀವನದ ಯಜಮಾನನಾಗಿರುವಂತೆ ನೀವು ಆತನ ಸತತವಾದ ಅನ್ಯೋನ್ಯತೆಯನ್ನು ಅನುಭವಿಸುವಿರಿ. ಆಗ ಮಾತ್ರವೇ ನೀನು ಜೀವನದ ಅನುದಿನದ ಬೇಡಿಕೆಗಳೊಂದಿಗೆ ಮತ್ತು ಅವಕಾಶಗಳೊಂದಿಗೆ ಆತನನ್ನು ನಂಬಲು ನೀನು ನಿಜವಾಗಿಯೂ ಸ್ವತಂತ್ರನಾಗಿರುವಿ. ಸಂಗೀತ ಬರಹಗಾರ, ಜಾರ್ಜ ಮಾತೆಸನ್ ಹೀಗೆ ಬರೆದಿದ್ದಾನೆ :

ಕರ್ತನೇ, ನನ್ನನ್ನು ಸೆರೆಯಾಳಾಗಿ ಮಾಡು,
ಮತ್ತು ಆಗ ನಾನು ಸ್ವತಂತ್ರನಾಗಿರುವೆನು ;
ನನ್ನ ಖಡ್ಗವನ್ನು ಹಿಂದಿರುಗಿ ಒಪ್ಪಿಸಲು ಒತ್ತಾಯ ಮಾಡು
ಮತ್ತು, ನಾನು ಜಯಶಾಲಿಯಾಗಿರುವೆನು.

ಸ್ವಾತಂತ್ರ್ಯದ ಪ್ರಸಿದ್ಧ ವಿಚಾರಕ್ಕೆ ವಿರುದ್ಧವಾಗಿ, ನಿಜವಾದ ಸ್ವಾತಂತ್ರ್ಯವು ನಾನು ಬಯಸುವದನ್ನು ನಾನು ಮಾಡುವ ನನ್ನ ಹಕ್ಕಿನಲ್ಲಿ ಕಂಡುಬರುವದಿಲ್ಲ. ನಾನು ಮಾಡಬೇಕಾದದ್ದನ್ನು ಮಾಡಲು ನನಗಿರುವ ಬಲದಲ್ಲಿ ಅದು ಕಂಡು ಬರುತ್ತದೆ. ''ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ'' (ಫಿಲಿಪ್ಪಿ 4:13) ಎಂದು ಹೇಳಿದ ಅಪೊಸ್ತಲ ಪೌಲನ ಮಾತುಗಳನ್ನು ಜ್ಞಾಪಿಸಿಕೊಳ್ಳಿರಿ.

1859ರಲ್ಲಿ ನೊರ್ದರ್ನ್ ಐರ್ಲ್ಯಾಂಡಿನಲ್ಲಿ ನಡೆದ ಭಕ್ತಿ ಸಂಜೀವನದಲ್ಲಿ ಸಾವಿರಾರು ಜನರು ಕ್ರಿಸ್ತನ ಬಳಿಗೆ ಬಂದರು. ಹಾಗೆ ಮಾರ್ಪಾಟ ಹೊಂದಿದವರು. ''ವಿಶ್ವಾಸದ ಒಪ್ಪಿಸಿಕೊಡುವಿಕೆ'' ಗೆ ರುಜು ಹಾಕುವದರಿಂದ ಕ್ರಿಸ್ತನಿಗೆ ತಮ್ಮ ವೈಯಕ್ತಿಕ ಹಾಗೂ ಗಂಭೀರವಾದ ಸಮರ್ಪಣೆಯನ್ನು ವ್ಯಕ್ತಪಡಿಸಿದರು. ದೇಶದ ನೈತಿಕ ವಾತಾವರಣವು ಅಕ್ಷರಶಃವಾಗಿ ಬದಲಾವಣೆಯಾಗುವಷ್ಟು ಆ ಸಮಯದಲ್ಲಿ ಅನೇಕ ಜನರಿಗೆ ಉತ್ಥಾನವಾದ ಕರ್ತನ ಜೀವನ ಬದಲಾಯಿಸುವ ಅನುಭವವಾಯಿತು. ಅಂಥ ಪತ್ರಕ್ಕೆ ರುಜು ಹಾಕುವದರಲ್ಲಿ ಪ್ರಶಂಸಾರ್ಹವಾದದ್ದು ಯಾವುದೂ ಇರದಿದ್ದರೂ, ಈ ಸಮಯದಲ್ಲಿ, ಮುಂದಿನ ಪುಟಗಳಲ್ಲಿರುವ ಪತ್ರಕ್ಕೆ ರುಜು ಹಾಕುವದರಿಂದ ದೇವರಿಗೆ ನಿಮ್ಮ ಸ್ವಂತ ಉತ್ತರವನ್ನು ದೃಢಪಡಿಸುವದಕ್ಕೆ ಅದು ನಿಮಗೆ ಸಹಾಯಕವಾದದ್ದಾಗಿರುವುದು.

> ''ಶಾಶ್ವತವಾದ ಒಡಂಬಡಿಕೆಯನ್ನು ನಿಶ್ಚಯಪಡಿಸುವದಕ್ಕಾಗಿ ತನ್ನ ರಕ್ತವನ್ನು ಸುರಿಸಿಕೊಂಡು ಸಭೆಯೆಂಬ ಹಿಂಡಿಗೆ ಮಹಾಪಾಲಕನಾಗಿರುವ ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಬರಮಾಡಿದ ಶಾಂತಿದಾಯಕನಾದ ದೇವರು, ನೀವು ತನ್ನ ಚಿತ್ತವನ್ನು ನೆರವೇರಿಸುವ ಹಾಗೆ ಸಕಲಸತ್ಕಾರ್ಯಗಳಿಗೆ ಬೇಕಾದ ಅನುಕೂಲತೆಯನ್ನು ನಿಮಗೆ ಅನುಗ್ರಹಿಸಲಿ. ಆತನು ಯೇಸು ಕ್ರಿಸ್ತನ ಮೂಲಕ ತನಗೆ ಸಮರ್ಕವಾದದ್ದನ್ನು ನಮ್ಮಲ್ಲಿ ನಡಿಸಲಿ.

ಯುಗಯುಗಾಂತರಗಳಲ್ಲಿಯೂ ಆತನಿಗೆ ಸ್ತೋತ್ರ.
ಆಮೆನ್'' (ಇಬ್ರಿಯ 13:20-21).

## ಹಂಗೇರಿಯಿಂದ ಒಂದು ಪತ್ರ

''ರಿಚರ್ಡ್ ಎ. ಬೆನೆಟ್ ಅವರ, ''ದೇವರಿಗಾಗಿ ನಿನ್ನ ಅನ್ವೇಷಣೆ'' ಎಂಬ ಪುಸ್ತಕದೊಂದಿಗೆ ಹೋಲಿ ಬೈಬಲನ್ನು ನನಗೆ ಕಳುಹಿಸಿದ್ದಕ್ಕಾಗಿ ನಿಮಗೆ ಬಹಳ ಉಪಕಾರ.

''ಪುಸ್ತಕವನ್ನು ಓದಿ ಮುಗಿಸಿದೆನು ಮತ್ತು ಬೈಬಲಿನೊಂದಿಗೆ ಪ್ರತಿಯೊಂದು ಉಲ್ಲೇಖವನ್ನು ಪರೀಕ್ಷಿಸಿದೆನು.

''ದೇವರಿಗಾಗಿ ನಿನ್ನ ಅನ್ವೇಷಣೆ''ಯು ನಾನು ಏನನ್ನು ನಂಬಬೇಕು ಮತ್ತು ನಾನು ಯಾಕೆ ನಂಬಬೇಕು ಎಂಬುದನ್ನು ಸ್ಪಷ್ಟಪಡಿಸಲು ನನಗೆ ಬಹಳ ಸಹಾಯ ಮಾಡಿತು. ನಾನು ನನ್ನ ಜೀವನಾವಧಿಯ ವಿಶ್ವಾಸದ ಒಪ್ಪಿಸಿಕೊಡುವಿಕೆಯನ್ನು ಮಾಡಿರುವೆನು.''

-Report translated and Submitted
by Trans World Radio

## ನಿಮ್ಮ ಸ್ವಂತ
## ವಿಶ್ವಾಸದ ಒಪ್ಪಿಸಿಕೊಡವಿಕೆಯನ್ನು

ಮಾಡಲು ನಿಮಗೆ ಸಹಾಯ ಮಾಡುವಕ್ಕಾಗಿ

ಪರಿಶುದ್ಧ ಬರಹಗಳು

ಮುಂದಿನ ಪುಟಗಳಲ್ಲಿ ದಾಖಲೆ ಮಾಡಲ್ಪಟ್ಟಿವೆ.

# ವಿಶ್ವಾಸದ ನನ್ನ ಒಪ್ಪಿಸಿಕೊಡುವಿಕೆ

**ತಂದೆಯಾದ ದೇವರನ್ನು ನನ್ನ ದೇವರಾಗಿ ತೆಗೆದುಕೊಳ್ಳುತ್ತೇನೆ.**

''ನೀವು ವಿಗ್ರಹಗಳನ್ನು ಬಿಟ್ಟುಬಿಟ್ಟು ದೇವರ ಕಡೆಗೆ ತಿರುಗಿಕೊಂಡು ಜೀವವುಳ್ಳ ಸತ್ಯದೇವರನ್ನು ಸೇವಿಸುವವರಾದಿರಿ'' (1 ಥೆಸಲೋನಿಕ 1:9).

**ಯೇಸುಕ್ರಿಸ್ತನನ್ನು ನನ್ನ ಕರ್ತನೂ ಒಡೆಯನೂ ಎಂದು ತೆಗೆದುಕೊಳ್ಳುತ್ತೇನೆ.**

''ದೇವರು ಆತನನ್ನೇ (ಯೇಸುವನ್ನೇ).... ಜನರಿಗೆ ಮಾನಸಾಂತರವನ್ನು ಪಾಪ ಪರಿಹಾರವನ್ನೂ ದಯಪಾಲಿಸುವದಕ್ಕಾಗಿ ನಾಯಕನೆಂತಲೂ ರಕ್ಷಕನೆಂತಲೂ ತನ್ನ ಬಲಗೈಯಿಂದ ಉನ್ನತ ಸ್ಥಾನಕ್ಕೆ ಏರಿಸಿದನು'' (ಅಪೊಸ್ತಲರ ಕೃತ್ಯ 5:31).

**ಪವಿತ್ರಾತ್ಮನನ್ನು ದೇವರ ಪ್ರೀತಿಯಿಂದ ನನ್ನನ್ನು ತುಂಬಿಸುವದಕ್ಕಾಗಿ ತೆಗೆದು ಕೊಳ್ಳುತ್ತೇನೆ.**

''ನಮಗೆ ಕೊಡಲ್ಪಟ್ಟಿರುವ ಪವಿತ್ರಾತ್ಮನ ಮುಖಾಂತರವಾಗಿ ದೇವರ ಪ್ರೀತಿಯು ನಮ್ಮ ಹೃದಯಗಳೊಳಗೆ ಸುರಿಸಲ್ಪಟ್ಟಿರುತ್ತದೆ''
(ರೋಮಾಪುರ 5:5).

**ದೇವರ ವಾಕ್ಯವನ್ನು ನನ್ನ ನಿಯಮವಾಗಿ ತೆಗೆದುಕೊಳ್ಳುತ್ತೇನೆ.**

''ದೇವರಿಂದ ಪ್ರೇರಿತವಾದ ಎಲ್ಲಾ ಪರಿಶುದ್ಧ ಬರಹವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ. ಆದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ಧನಾಗುವನು'' (2 ತಿಮೊಥೆ 3:16,17).

**ದೇವರ ಜನರನ್ನು ನನ್ನ ಜನರನ್ನಾಗಿ ತೆಗೆದುಕೊಳ್ಳುವೆನು.**

''ನಿನ್ನ ಜನರೇ ನನ್ನ ಜನರು ; ನಿನ್ನ ದೇವರೇ ನನ್ನ ದೇವರು''
(ರೂತ 1;16).

**ನನ್ನನ್ನು ಕರ್ತನಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವೆನು.**

''ನಮ್ಮಲ್ಲಿ ಒಬ್ಬನಾದರೂ ತನಗಾಗಿ ಬದುಕುವುದೂ ಇಲ್ಲ, ತನಗಾಗಿ ಸಾಯುವುದೂ ಇಲ್ಲ. ನಾವು ಬದುಕಿದರೆ ಕರ್ತನಿಗಾಗಿ ಬದುಕುತ್ತೇವೆ ; ಸತ್ತರೆ ಕರ್ತನಿಗಾಗಿ ಸಾಯುತ್ತೇವೆ ; ಬದುಕಿದರೂ ಸತ್ತರೂ ನಾವು ಕರ್ತನವರೇ''. (ರೋಮಾಪುರ 14:7,8).

**ಮತ್ತು ನಾನು ಇದನ್ನು ಬುದ್ಧಿಪೂರ್ವಕವಾಗಿ ಮಾಡುತ್ತೇನೆ.**

''ನೀವು ಸೇವಿಸುವಾತನನ್ನು ಈ ಹೊತ್ತೇ ಆರಿಸಿಕೊಳ್ಳಿರಿ.... ಆದರೆ ನಾನೂ ನನ್ನ ಮನೆಯವರೂ ಕರ್ತನನ್ನೇ ಸೇವಿಸುವೆವು''. (ಯೆಹೋಶುವ 24:15).

**ಮತ್ತು ಯತಾರ್ಥತೆಯಿಂದ**

''ನಾವು ಕೇವಲ ಮಾನುಷ ಜ್ಞಾನವನ್ನು ಬಳಸದೆ ದೇವರ ಕೃಪೆಯನ್ನು ಆಶ್ರಯಿಸಿ ಆತನಿಂದಾಗುವ ಪವಿತ್ರತ್ವವೂ ನಿಷ್ಕಪಟತ್ವವೂ ಉಳ್ಳವರಾಗಿ ಈ ಲೋಕದಲ್ಲಿ ಮುಖ್ಯವಾಗಿ ನಿಮ್ಮ ವಿಷಯದಲ್ಲಿ ನಡಕೊಂಡೆವೆಂದು ನಮ್ಮ ಮನಸ್ಸು ನಮಗೆ ಸಾಕ್ಷಿ ಹೇಳುತ್ತದೆ''. (2 ಕೊರಿಂಥ 1:12).

**ಮತ್ತು ಸಂತೋಷದಿಂದ**

''ನಿನ್ನ ಪ್ರಜೆಗಳು ಸಂತೋಷದಿಂದ ತಾವಾಗಿಯೇ ಸೇರಿಕೊಳ್ಳುವರು'' (ಕೀರ್ತನೆ 110:3)

**ಮತ್ತು ಸದಾಕಾಲಕ್ಕೂ**

''ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು ? ಕಷ್ಟವೋ, ಸಂಕಟವೋ, ಹಿಂಸೆಯೋ ಅನ್ನವಿಲ್ಲದಿರವುದೋ ವಸ್ತ್ರವಿಲ್ಲದಿರುವುದೋ ಗಂಡಾಂತರವೋ ಖಡ್ಗವೋ ? (ರೋಮಾಪುರ 8:35).

ಸಹಿ : ______________________________

ದಿನಾಂಕ : ______________________________